॥ ಶ್ರೀ ॥

ಧರ್ಮಪರೀಕ್ಷೆ

(ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷೆಯ ಅನುವಾದ)

ಅನುವಾದಕರು :

ಆಸ್ಥಾನ ವಿದ್ವಾನ್ ನ್ಯಾಯತೀರ್ಥ

ಶ್ರೀಮಾನ್ ಎ. ಶಾಂತಿರಾಜ ಶಾಸ್ತ್ರಿಗಳವರು.

ಮೈಸೂರು

ಪ್ರಕಾಶಕರು :

ಶ್ರೀಮತಿ ಅಮ್ಮಬಾಯಿ ಭ್ರ. ಜಿನಗೌಡ ಪಾಟೀಲ

ಬೋರಗಾಂವ (ಜಿ ಬೆಳಗಾಂವ)

ಬೆಲೆ : ಸ್ವಾಧ್ಯಾಯ

ಶ್ರೀ ೧೦೦೮ ಭಗವಾನ್ ಮಹಾವೀರ ೨೫೦೦ ನೆಯ (೨೬೩೭)
ನಿರ್ವಾಣಮಹೋತ್ಸವದ ಅಂಗವಾಗಿ ಈ ಗ್ರಂಥವನ್ನು
ಪ್ರಕಟಿಸಲಾಗಿದೆ.

೧೯೭೪

ಶ್ರೀ. ಭ. ಚಂದ್ರಪ್ರಭ ಜೈನ ಕಮಿಟಿ

ಶಮನೇವಾಡಿ ಜಿ. ಬೆಳಗಾವಿ.

॥ ಶ್ರೀ ॥

ಧರ್ಮಪರೀಕ್ಷೆ

(ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷೆಯ ಅನುವಾದ)

ಅನುವಾದಕರು :
ಆಸ್ಥಾನ ವಿದ್ವಾನ್-ನ್ಯಾಯತೀರ್ಥ
ಶ್ರೀಮಾನ್ ಎ. ಶಾಂತಿರಾಜ ಶಾಸ್ತ್ರಿಗಳವರು
ಮೈಸೂರು

ಪ್ರಕಾಶಕರು :
ಶ್ರೀಮತಿ ಅವ್ವುಬಾಯಿ ಭ್ರ. ಜಿನಗೌಡ ಪಾಟೀಲ
ಬೋರಗಾಂವ (ಜಿ. ಬೆಳಗಾಂವ)

ಬೆಲೆ : ಸ್ವಾಧ್ಯಾಯ

ಶ್ರೀ ೧೦೦೮ ಭಗವಾನ್ ಮಹಾವೀರ ೨೫೦೦ ನೆಯ (೨೬೩೭)
ನಿರ್ವಾಣಮಹೋತ್ಸವದ ಅಂಗವಾಗಿ ಈ ಗ್ರಂಥವನ್ನು
ಪ್ರಕಟಿಸಲಾಗಿದೆ.

೧೯೭೪

ಶ್ರೀ. ಭ. ಚಂದ್ರಪ್ರಭ ಜೈನ ಕಮಿಟಿ
ಶಮನೇವಾಡಿ ಜಿ. ಬೆಳಗಾವಿ.

ಪ್ರಕಾಶಕರು :

ಶ್ರೀಮತಿ ಅವ್ವಬಾಯಿ ಭ್ರ. ಜಿನಗೌಡ ಪಾಟೀಲ
ಬೋರಗಾಂವ (ಜಿ. ಬೆಳಗಾವ)

ಮಾರ್ಚ ೧೯೭೪


ಮುದ್ರಕರು :

ಟಿ. ಎ. ಕುಲಕರ್ಣಿ, ಬಿ. ಎಸ್‌ಸಿ. (ಆ.)., ಬಿ. ಇಡಿ.
ನೂತನ ಪ್ರಿಂಟಿಂಗ ಪ್ರೆಸ್, ಬೆಳಗಾವಿ.

ಗ್ರಂಥಗಳು ದೊರೆಯುವ ಸ್ಥಳ :—


ಶ್ರೀ ೧೦೦೮ ಭ. ಚಂದ್ರಪ್ರಭ ಜೈನ ಕಮೀಟಿ

ಮು. ಪೊ:- ಶಮನೇವಾಡಿ, ಜಿ:- ಬೆಳಗಾಂವ.



ಆಚಾರ್ಯರತ್ನ ಶ್ರೀ ೧೦೮ ದೇಶಭೂಷಣ ಮಹಾರಾಜರು


ಆಶೀರ್ವಾದ




ಚಿ॥ ಕೈ. ಆದಗೌಡಾ ಜಿನಗೌಡಾ ಪಾಟೀಲ ಮುಕ್ಕಾಮ ಬೋರಗಾಂವ ಇವರ ಸ್ಮರಣಾರ್ಥವಾಗಿ ಶ್ರೀಮತಿ ಅವ್ವುಬಾಯಿ ಭ್ರ. ಜಿನಗೌಡಾ ಪಾಟೀಲ ಇವರು ಧರ್ಮಪರೀಕ್ಷೆ ಎಂಬ ಗ್ರಂಥವನ್ನು ಮುದ್ರಿಸಲು ಮುಂದೆ ಬಂದರು. ಇದರಂತೆ ಅವರ ಎಲ್ಲ ಸುಪುತ್ರರು ಮತ್ತು ಪರಿವಾರದವರು ಧರ್ಮ ಕಾರ್ಯದಲ್ಲಿ ಕಾಲಕಳೆದು ಇಹಪರ ಸುಖವನ್ನು ಅನುಭವಿಸಲೆಂದು ಆಶೀರ್ವದಿಸುವೆನು,

ಇತಿ ಶುಭಾಶೀರ್ವಾದಗಳು,

ಶ್ರೀ ೧೦೮ ಸುಬಲಸಾಗರ ಮಹಾರಾಜರು



ಚಿ. ಕೈ. ಶ್ರೀ. ಆದಗೌಡಾ ಜಿನಗೌಡಾ ಪಾಟೀಲ,
ಬೋರಗಾಂವ,
ಇವರ ಸ್ಮರಣಾರ್ಥವಾಗಿ



ಮಾತೋಶ್ರೀ. ಅವುಬಾಯಿ ಭ್ರ. ಜಿನಗೌಡಾ ಪಾಟೀಲ,
ಬೋರಗಾಂವ,
ಇವರು ಈ ಗ್ರಂಥವನ್ನು ಪ್ರಕಟಿಸಿದರು.

ಶ್ರೀ ವೀತರಾಗಾಯನಮಃ

ಪ್ರಕಾಶಕರ ಪರಿಚಯ

ಶ್ರೀ. ಸ್ವ. ಆದಗೌಡಾ ಜಿನಗೌಡಾ ಪಾಟೀಲ ಮು. ಬೋರಗಾಂವ ಇವರ ಸ್ಮರಣಾರ್ಥವಾಗಿ ಮಾತೋಶ್ರೀಯಾದ- ಶ್ರೀಮತಿ ಅವುಬಾಯಿ ಭ್ರ. ಜಿನಗೌಡಾ ಪಾಟೀಲ ಇವರು ತಮ್ಮ ಜೇಷ್ಠ ಸುಪುತ್ರರ ಸ್ಮರಣಾರ್ಥವಾಗಿ ಮತ್ತು ಎಷ್ಟೋ ಭವ್ಯ ಜೀವಗಳ ಆತ್ಮ ಕಲ್ಯಾಣಕ್ಕಾಗಿ ಶ್ರೀ "ಧರ್ಮಪರೀಕ್ಷೆ" ಎಂಬ ಈ ಗ್ರಂಥವನ್ನು ಪ್ರಕಾಶಕ್ಕೆ ತಂದಿರುವರು.

ಶ್ರೀ ಅವುಬಾಯಿಯವರು ಧರ್ಮದ ತವರಊರಾದ ಮಾಂಗೂರಲ್ಲಿ ಜನಿಸಿದರು. ಇವರ ತಂದೆ ದಾದಾಗೌಡಾ ಪಾಟೀಲ ಮತ್ತು ತಾಯಿ ಶಿವದೇವಿ ಇವರು ಧರ್ಮದಲ್ಲಿಯೇ ಸದಾ ಪ್ರವರ್ತರಾಗಿರುವರಲ್ಲದೆ ಕರುಣಾನಿಧಿಗಳಾಗಿರುವರು. ಬೋರಗಾಂವದ ಶ್ರೀ. ಜಿನಗೌಡಾ ಪಾಟೀಲರ ಧರ್ಮಪತ್ನಿಯಾಗಿ ಮತ್ತು ಶೀಲವತಿಯಾಗಿ ಸದಾ ಧರ್ಮ ಮತ್ತು ಪತಿಯ ಸೇವೆಯಲ್ಲಿಯೇ ಕಾಲ ಕಳೆಯುಹತ್ತಿದರು. ಇವರಿಗೆ ಐದು ಜನ ಸುಪುತ್ರರು, ಇಬ್ಬರು ಸುಪುತ್ರಿಯರು ಜನಿಸಿದರು. ಧರ್ಮದಿಂದ ಈ ಸಿರಿ ಸಂಪತ್ತಿ, ಧರ್ಮದಿಂದ ಇಹಪರ ಸುಖಗಳು ಲಭಿಸುತ್ತವೆಂಬ ಜಿನವಾಣಿಯನ್ನು ನಂಬಿ ಅವರ ಸುಪುತ್ರರಾದ ಶ್ರೀ. ನೇಮಗೌಡಾ, ಶ್ರೀ. ಶಿವಗೌಡಾ, ಶ್ರೀ. ಅಪ್ಪಾಸಾಹೇಬ, ಶ್ರೀ. ದೇವಗೌಡಾ ಇವರೂ ತಾಯಿಯವರಂತೆ ಧರ್ಮದಲ್ಲಿಯೇ ಲೀನರಾಗಿದ್ದು ಶ್ರೀ. ಜಿನವಾಣಿಯ ಪ್ರಚಾರಕ್ಕಾಗಿ ಅಂದರೆ ‘‘ಭ. ಮಹಾವೀರರ ೨೫೦೦ ನೆಯ (೧೯೭೪) ನಿರ್ವಾಣ ಮಹೋತ್ಸವದ ನಿಮಿತ್ತವಾಗಿ, ಸತ್ಯ ಧರ್ಮದ ಪ್ರಚಾರಕ್ಕಾಗಿ ‘‘ಧರ್ಮಪರೀಕ್ಷೆ’’ ಎಂಬ ಗ್ರಂಥವನ್ನು ಮುದ್ರಿಸಲು ಶಮನೇವಾಡಿಯ ವರ್ಷಾಯೋಗದಲ್ಲಿ

ಶ್ರೀ ತಪೋನಿಧಿ ೧೦೮ ಸುಬಲಸಾಗರ ಮಹಾರಾಜರ ಅಮೃತ ವಚನಗಳಿಂದ ಮತ್ತು ಅವರ ಶುಭಾಶೀರ್ವಾದದಿಂದ ಸ್ವಯಂಸ್ಫೂರ್ತಿಗೊಂಡು ೧,೫೦೧ ರೂಪಾಯಿಗಳನ್ನು ಉದಾರ ಮನಸ್ಸಿನಿಂದ ದಾನಮಾಡಿ ಕೃತಕೃತ್ಯರಾಗಿರುತ್ತಾರೆ. ತಾಯಿಯವರು ಈಗ ಸಹಕುಟುಂಬ ಪರಿವಾರ ಸಮೇತವಾಗಿ ಮೂರು ಸಾರೆ ಶ್ರೀ, ತೀರ್ಥರಾಜ ಸಮ್ಮೇದ ಶಿಖರ್ಜಿಯ ದರ್ಶನಮಾಡಿ ಪುಣ್ಯ ಭಾಗಿಗಳಾಗಿರುತ್ತಾರೆ. ಶ್ರೀ ನಂದೀಶ್ವರ, ಷೋಡಶಕಾರಣ, ದಶಲಕ್ಷಣನೋಂಪಿಗಳನ್ನು ಬೆಳಗಿ ಪುಣ್ಯ ಸಂಪಾದಿಸಿರುವರು, ಅದೇ ಪ್ರಕಾರ ಮನೆಯಲ್ಲಿಯ ಸಮಸ್ತರನ್ನೂ ನೋಡಿ, ದೇವಪೂಜಾದಿ, ಧರ್ಮಕಾರ್ಯದಲ್ಲಿ ತತ್ಪರರನ್ನಾಗಿ ಮಾಡಿರುವರು. ಏಳನೆಯ ಪ್ರತಿಮಾಧಾರಿಯಾದ ಶ್ರೀ ಶೇಪಪ್ಪಣ್ಣ ಗುಂಡಪ್ಪಾ ಲಗಾರೆ ಬೋರಗಾಂವ ಇವರ ಧರ್ಮಪತ್ನಿ ಸೌ. ಲಕ್ಷ್ಮೀಬಾಯಿ ಶೇಪಪ್ಪಾ ಲಗಾರೆಯವರು ಇವರನ್ನು ಧರ್ಮಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಿರುವರು. ಇದೇ ಪ್ರಕಾರ ಇಂಥವರ ಸದುಪದೇಶವು ಮೇಲಿಂದ ಮೇಲೆ ದೊರೆಯಲೆಂದು ಹಾರೈಸುತ್ತೇವೆ. ಇಂಥ ಧರ್ಮಾತ್ಮರು ಸದಾ ಧರ್ಮದಲ್ಲಿ ಮತ್ತು ಧರ್ಮ ಪ್ರಚಾರದಲ್ಲಿ ನಿರತನಾಗಿ ''ಧರ್ಮಪರೀಕ್ಷೆ" ಯಂಥ ಆಚಾರ್ಯ ಪ್ರಣೀತ ಗ್ರಂಥಗಳು ಪ್ರಕಟವಾಗಲೆಂದು ಜಿನೇಂದ್ರರಲ್ಲಿ ಬಯಸುತ್ತೇನೆ.

ಸಹಧರ್ಮಿ

ಓಂ ನಮಃ ಸಿದ್ಧೇಭ್ಯಃ

ಶ್ರೀ ಅಮಿತಗತ್ಯಾಚಾರ್ಯ ವಿರಚಿತ

ಧರ್ಮಪರೀಕ್ಷಾನುವಾದ

ಆವ ತೀರ್ಥಂಕರಪರಮದೇವರ ಕೇವಲಜ್ಞಾನರೂಪವಾದ ಪ್ರದೀಪವು ಘನೋದಧಿ ಘನವಾತ ತನುವಾತಗಳೆಂಬ ಉನ್ನತವಾದ ಕೋಟೆಯುಳ್ಳ ಜಗತ್ತೆಂಬ ಮನೆಯನ್ನು ಸುತ್ತಲೂ ಪ್ರಕಾಶಪಡಿಸುತ್ತದೋ ಅಂತಹ ತೀರ್ಥಂಕರಪರಮದೇವರು ನಮಗೆ ಸಂಪತ್ತಿಗೆ ಕಾರಣರಾಗಲಿ ॥೧॥ ಯಾವ ಆತ್ಮರು ಕರ್ಮಕ್ಷಯವಾದ ಮೇಲೆ ಪೂಜಿಸುವುದಕ್ಕೆ ಯೋಗ್ಯನೂ ಏಕಾಕಿಯೂ ಪವಿತ್ರನೂ ಆದ ಆತ್ಮನನ್ನು ಹೊಂದಿ ಮೂರು ಲೋಕಗಳಿಗೆ ಕಿರೀಟರತ್ನಗಳಾಗುತ್ತಾರೋ ಅಂತಹ ಮುಕ್ತಾತ್ಮರು ನನಗೆ ಮುಕ್ತಿಗೆ ಕಾರಣರಾಗಲಿ ॥ ೨ ॥ ಯಾರ ವಚನಗಳೆಂಬ ಕಿರಣಗಳಿಂದ ಭವ್ಯಾತ್ಮರ ಮನವೆಂಬ ತಾವರೆಯು ಅರಳಿ ಮತ್ತೆ ಮುಚ್ಚಿಕೊಳ್ಳುವುದಿಲ್ಲವೋ ದೋಷವೆಂಬ ರಾತ್ರಿಯನ್ನು ದೂರಮಾಡುವ ಅಂತಹ ಆಚಾರ್ಯರೆಂಬ ಸೂರ್ಯರು ನನ್ನ ಚಾರಿತ್ರ-ಆಚರಣವನ್ನು ನಿರ್ದುಷ್ಟವನ್ನಾಗಿ ಮಾಡಲಿ ॥ ೩ ॥ ತಂದೆತಾಯಿಗಳು ಮಕ್ಕಳಿಗೆ ಧನವನ್ನು ಅನುಗ್ರಹಿಸುವಂತೆ ಭಕ್ತರಿಗೆ ಯಾರು ಶಾಸ್ತ್ರಗಳನ್ನು ಅನುಗ್ರಹಿಸುತ್ತಾರೋ ಅಂತಹ ಉಪಾಧ್ಯಾಯರು ನನ್ನ ದುಃಖವನ್ನು ನಾಶಮಾಡಲಿ ॥ ೪ ॥ ಮೂರು ಲೋಕಗಳನ್ನೆಲ್ಲ ಪೀಡಿಸುತ್ತಿರುವ ಕ್ರೋಧಾದಿ ಕಷಾಯವೆಂಬ ಶತ್ರುವನ್ನು ಸಮತಾಭಾವಶೀಲಗಳೆಂಬ ಶಸ್ತ್ರಗಳಿಂದ ಯಾರು ಸೀಳುತ್ತಾರೋ ಅಂತಹ ಕ್ಷಮಾಗುಣಧಾರಿಗಳಾದ ಸಾಧುಗಳೆಂಬ ಯೋಧರು ನನ್ನನ್ನು ಮುಕ್ತಿ

ಯೆಂಬ ವಧುವಿಗೆ ವರನನ್ನಾಗಿ ಮಾಡಲಿ ॥ ೫ ॥ ವಿನಯಗುಣವುಳ್ಳ ಮನುಷ್ಯನು ದಾಂಟಲು ಕಷ್ಟಕರವಾದ ಶಾಸ್ತ್ರವೆಂಬ ಸಮುದ್ರದ ಪಾರವನ್ನು ಯಾರ ಪ್ರಸಾದದಿಂದ ಹೊಂದುತ್ತಾನೋ ಅಂತಹ ಸರಸ್ವತಿಯು, ಕಾಮಧೇನುವಿನಂತೆ, ನನಗೆ ಇಷ್ಟಾರ್ಥಸಿದ್ಧಿಯನ್ನುಂಟುಮಾಡಲಿ ॥ ೬ ॥ ಜನಸಮುದಾಯಕ್ಕೆ ಬಾಧೆಯನ್ನುಂಟುಮಾಡುವ ದೂಳಿನ ರಾಶಿಗಳನ್ನು ಪ್ರಬಲವಾದ ಗಾಳಿಗಳು ದೂರಮಾಡುವಂತೆ, ಜನಸಮುದಾಯಕ್ಕೆ ಬಾಧೆಯನ್ನುಂಟುಮಾಡುವ ನನ್ನ ಎಲ್ಲ ವಿಘ್ನಗಳು ಈ ಸ್ತೋತ್ರಗಳಿಂದ ಕ್ಷಣಕಾಲದಲ್ಲಿ ನಾಶವನ್ನು ಹೊಂದಲಿ ॥ ೭ ॥ ತನ್ನ ಗುಣಗಳಿಂದ ಮೂರು ಲೋಕವನ್ನು ಆನಂದಗೊಳಿಸುವ ಸುಜನನನ್ನು ನೋಡಿ ದುರ್ಜನನು ಕೋಪಗೊಳ್ಳುತ್ತಾನೆ. ತನ್ನ ಕಿರಣಗಳಿಂದ ರಾತ್ರಿಯನ್ನು ಶೋಭೆಗೊಳಿಸುವ ಚಂದ್ರನನ್ನು ನೋಡಿ ರಾಹುವು ನುಂಗುವುದಿಲ್ಲವೇ ? ॥ ೮ ॥ ಶಿಷ್ಟನನ್ನು ದುಷ್ಟನೂ ವ್ರತಿಯನ್ನು ಕಾಮುಕನೂ ಎಚ್ಚರವಾಗಿರುವವನನ್ನು ಕಳ್ಳನೂ ಧಾರ್ಮಿಕನನ್ನು ಪಾಪಿಯೂ ಶೂರನನ್ನು ಹೇಡಿಯೂ ಕವಿಯನ್ನು ಕವಿಯಲ್ಲದವನೂ ದ್ವೇಷಿಸುವುದು ಸ್ವಭಾವವಾಗಿದೆ ॥ ೯ ॥ ಬೇರೆಯವರಿಗೆ ಅಪಕಾರವನ್ನು ಮಾಡುವುದಕ್ಕೋಸ್ಕರ ಸರ್ಪಗಳನ್ನೂ ದುಷ್ಟರನ್ನೂ ಯಮನನ್ನೂ ಬ್ರಹ್ಮನು ಸೃಷ್ಟಿಸಿದನೆಂದು ಸಂದೇಹಪಡುತ್ತೇನೆ. ಹಾಗಲ್ಲದಿದ್ದರೆ ಇವರು ಸುಖವಾಗಿರುವ ಜನಸಮೂಹವನ್ನು ನೋಡಿ ಏತಕ್ಕೆ ಬಾಧೆಪಡಿಸುತ್ತಾರೆ ? ॥ ೧೦ ॥ ಕವಿಶ್ರೇಷ್ಠರು ದುಷ್ಟನನ್ನು ಪೂಜಿಸಿದರೂ ಅವನು ತನ್ನ ವಕ್ರತೆಯನ್ನು ಬಿಡುವುದಿಲ್ಲ. ಬೇರೆಯವರಿಗೆ ತಾಪವನ್ನುಂಟುಮಾಡುವುದರಲ್ಲಿ ಸಮರ್ಥವಾದ ಬೆಂಕಿಯನ್ನು ಉಪಾಸನೆಮಾಡಿದರೆ ಅದು ತನ್ನ ಉಷ್ಣತೆಯನ್ನು ಬಿಡುವುದೇ ? ॥ ೧೧ ॥ ವಿಧಾತನು ಮೇಘವನ್ನೂ ಚಂದನವನ್ನೂ ಚಂದ್ರನನ್ನೂ ಸತ್ಪುರುಷನನ್ನೂ ಒಂದೇ ವಸ್ತುವಿನಿಂದ ನಿರ್ಮಿಸಿದನೆಂದು ತಿಳಿಯುತ್ತೇನೆ. ಹಾಗಲ್ಲದಿದ್ದರೆ ಇವರು ಯಾವಾಗಲೂ ಜನರಿಗೆ ಕಾಲಣವಿಲ್ಲದೆಯೇ ಪರೋಪಕಾರವನ್ನೇಕೆ ಮಾಡುತ್ತಾರೆ ? ॥ ೧೨ ॥ ದುರ್ಜನನು

ಸಾಧು–ಸಜ್ಜನನ್ನು ತಿರಸ್ಕರಿಸಿದರೂ ಅವನು ಯಾವಾಗಲೂ ತನ್ನ ಗುಣಗಳಿಂದ ಉಪಕಾರವನ್ನು ಮಾಡುತ್ತಾನೆ. ರಾಹುವು ಚಂದ್ರನನ್ನು ಪೀಡಿಸಿದರೂ ಅವನು ಅಮೃತ–ಕಿರಣಗಳಿಂದ ರಾಹುವನ್ನು ಸಂತೋಷಪಡಿಸುವುದಿಲ್ಲವೇ ? ॥ ೧೩ ॥ ಸತ್ಪುರುಷರು ಸ್ವಭಾವದಿಂದ ಸೂರ್ಯನಲ್ಲಿರುವ ಉಷ್ಣತೆಯನ್ನೂ ಚಂದ್ರನಲ್ಲಿರುವ ಶೀತತ್ವವನ್ನೂ ನೋಡಿ ಹೇಗೆ ಸಂತೋಷವನ್ನೂ ಮೋಹವನ್ನೂ ಹೊಂದುವುದಿಲ್ಲವೋ ಹಾಗೆ ಸಾಧು–ಸಜ್ಜನರಲ್ಲಿರುವ ಗುಣವನ್ನೂ ದುರ್ಜನರಲ್ಲಿರುವ ದೋಷವನ್ನೂ ನೋಡಿ ಸಂತೋಷವನ್ನೂ ರೋಷವನ್ನೂ ಹೊಂದುವುದಿಲ್ಲ ॥ ೧೪ ॥ ಗಣಧರಪರಮೇಷ್ಠಿಗಳು ಪರೀಕ್ಷಿಸಿರುವ ಧರ್ಮವನ್ನು ಜಡಾತ್ಮನಾದ ನಾನು ಹೇಗೆ ಪರೀಕ್ಷಿಸಬಲ್ಲೆನು ? ದೊಡ್ಡ ಆನೆಯು ಮುರಿಯಬಲ್ಲ ಮರವನ್ನು ಚಿಕ್ಕ ಮೊಲವು ಮುರಿಯಬಲ್ಲುದೇ ? ॥ ೧೫ ॥ ಪ್ರಾಜ್ಞರಾದ ಮುನೀಶ್ವರರು ಪ್ರವೇಶಿಸಿರುವ ಧರ್ಮದಲ್ಲಿ ಜಡನಾದ ನಾನೂ ಪ್ರವೇಶಿಸುವುದಕ್ಕೆಡೆಯಿದೆ. ವಜ್ರವು ಮುತ್ತನ್ನು ತೂತು ಕೊರೆದ ಮೇಲೆ ಅದರೊಳಕ್ಕೆ ಹಳೆಯ ದಾರವು ಪ್ರವೇಶಿಸುವುದಿಲ್ಲವೇ ? ॥ ೧೬ ॥

ಜಂಬೂವೃಕ್ಷದ ಮನೋಹರ ಚಿಹ್ನೆಯುಳ್ಳುದೂ ಪ್ರಕಾಶಮಾನವಾದ ರತ್ನಗಳಿಂದ ಶೋಭಿಸುತ್ತಿರುವ ದಿಕ್ಕುಗಳುಳ್ಳುದೂ ಆದ ಜಂಬೂದ್ವೀಪವು, ರಾಜರುಗಳಿಂದ ಸೇವಿಸಲ್ಪಡುತ್ತಿರುವ ಚಕ್ರವರ್ತಿಯಂತೆ, ಸುತ್ತಲೂ ಇತರ ದ್ವೀಪಗಳಿಂದ ಆವರಿಸಲ್ಪಟ್ಟಿದೆ ॥ ೧೭ ॥ ಈ ಜಂಬೂದ್ವೀಪದಲ್ಲಿ ಹಿಮವತ್ಪರ್ವತದ ಮತ್ತು ಮೂರು (ಕಡೆ) ಸಮುದ್ರದ ಮಧ್ಯದಲ್ಲಿ ಮನೋಹರವಾದ ಭರತಕ್ಷೇತ್ರವಿದೆ. ಅದು ತನ್ನ ಶೋಭೆಯಿಂದ ಮನ್ಮಥನ ಧನುಸ್ಸನ್ನು ಜಯಿಸಿ ಬಗ್ಗಿಸಿದಂತೆ ಪ್ರಕಾಶಿಸುತ್ತಿದೆ ॥ ೧೮ ॥ ಆ ಭರತಕ್ಷೇತ್ರವು ಬಹು ರಮಣೀಯವಾದ ಆರು ಖಂಡಗಳಿಂದ ಜನರು ಯಾಚಿಸುವುದಕ್ಕೆ ಯೋಗ್ಯವಾದ ಚಕ್ರವರ್ತಿಸಂಪತ್ತಿಯನ್ನು, ಮುನಿಗಳ ಆರು ಆವಶ್ಯಕಕ್ರಿಯೆಗಳಿಂದ ನಿರ್ದುಷ್ಟವಾದ ಚಾರಿತ್ರವನ್ನೋಪಾದಿಯಲ್ಲಿ, ಕೊಡುತ್ತದೆ. ಭರತಕ್ಷೇ

ತ್ರವು ಚಕ್ರವರ್ತಿಯ ಸಂಪತ್ತಿಗೂ ಮುನಿಗಳ ಚಾರಿತ್ರಕ್ಕೂ ನೆಲವೀಡಾಗಿದೆ ಯೆಂದು ಭಾವವು ‖ ೧೯ ‖ ಅನೇಕ ವಿಶೇಷಗಳುಳ್ಳ ಮನೋವಾಕ್ಕಾಯತ್ರಯದಿಂದ ಶುಭಾಶುಭ ಕರ್ಮಸಮೂಹವು ಆರು ಭಾಗವಾಗುವಂತೆ, ಭರತಕ್ಷೇತ್ರವು ಗಂಗಾಸಿಂಧುನದಿಗಳಿಂದಲೂ ವಿಜಯಾರ್ಧಪರ್ವತದಿಂದಲೂ ಆರು ಭಾಗವಾಗಿರುತ್ತದೆ ‖ ೨೦ ‖ ಆ ಭರತಕ್ಷೇತ್ರದಲ್ಲಿ ಮನೋಹರವಾದ ಸ್ಥಾನಗಳುಳ್ಳುದೂ ಪೂರ್ವಪಶ್ಚಿಮದಿಕ್ಕುಗಳಲ್ಲಿ ಸಮುದ್ರತೀರವನ್ನು ಪ್ರವೇಶಿಸಿರುವುದೂ "ವಿಜಯಾರ್ಧ" ಎಂಬ ಯಥಾರ್ಥವಾದ ಹೆಸರುಳ್ಳುದೂ ಆದ ವಿಜಯಾರ್ಧಪರ್ವತವು, ಮೈಯನ್ನು ಪಸರಿಸಿ–ಬಿದ್ದುಕೊಂಡಿರುವ ಆದಿಶೇಷನಂತೆ, ಶೋಭಿಸುತ್ತಿದೆ ‖ ೨೧ ‖ ಮಹಾಂಧಕಾರವನ್ನು ನಾಶಮಾಡಿರುವುದೂ ವೃದ್ಧಿಯನ್ನು ಹೊಂದುತ್ತಿರುವ ಕಿರಣಪರಂಪರೆಗಳಿಂದ ಭೂಮಿಯನ್ನು ಭೇದಿಸಿ ಹೊರಟಿರುವುದೂ ಆದ ಆ ವಿಜಯಾರ್ಧಪರ್ವತವು, ಅಂತಹ ಎರಡನೆಯ ಸೂರ್ಯನೋ ಎಂಬಂತೆ, ಶೋಭಿಸುತ್ತಿದೆ ‖ ೨೨ ‖ ಆ ವಿಜಯಾರ್ಧಪರ್ವತದಲ್ಲಿ ವಿದ್ಯಾಧರರಿಂದ ಸೇವಿಸಲ್ಪಡುತ್ತಿರುವ ದಕ್ಷಿಣೋತ್ತರಶ್ರೇಣಿಗಳೆರಡು, ಹಲವು ದುಂಬಿಗಳಿಂದ ಕೇಳುವುದಕ್ಕೆ ಯೋಗ್ಯವಾದ ಗಾನವುಳ್ಳ ದೊಡ್ಡ ಆನೆಯ ಎರಡು ಮದರೇಖೆಗಳೋ ಎಂಬಂತೆ, ಇರುತ್ತವೆ ‖ ೨೩ ‖ ನಿರ್ದುಷ್ಟವಾದ ಕಾಂತಿಯುಳ್ಳ ವಿದ್ಯಾಧರರ ಅರುವತ್ತು ಪಟ್ಟಣಗಳು ಉತ್ತರಶ್ರೇಣಿಯಲ್ಲಿಯೂ ಐವತ್ತು ಪಟ್ಟಣಗಳು ದಕ್ಷಿಣಶ್ರೇಣಿಯಲ್ಲಿಯೂ ಇರುತ್ತವೆಂದು ಶ್ರುತಜ್ಞಾನಿಗಳು—ಮಹರ್ಷಿಗಳು ತಿಳಿಯುತ್ತಾರೆ ‖ ೨೪ ‖ ವಿಚಿತ್ರವಾದ ಪಾತ್ರ–ಮನುಷ್ಯರುಗಳಿಂದಲೂ ತಪ್ಪಲುಗಳಿಂದಲೂ ಕೂಡಿರುವುದೂ ರತ್ನಗಳಿಂದಲೂ ನಿಕ್ಷೇಪಗಳಿಂದಲೂ ಪ್ರಕಾಶಮಾನವೂ ಉನ್ನತವೂ ಆದ ಆ ವಿಜಯಾರ್ಧಪರ್ವತವು, ದೇವತೆಗಳಿಂದಲೂ ವಿದ್ಯಾಧರರಿಂದಲೂ ಸೇವಿಸಲ್ಪಡತಕ್ಕ ಪಾದಗಳುಳ್ಳ ಚಕ್ರವರ್ತಿಯಂತೆ, ಶೋಭಿಸುತ್ತಿದೆ ‖ ೨೫ ‖ ಅಗ್ನಿಯ ಶಿಖೆಗಳು ಶೀತವನ್ನು ನಾಶಮಾಡುವಂತೆ, ಆ ವಿಜಯಾರ್ಧಪರ್ವತದ ಸಿದ್ಧಕೂಟದ ಅಕೃತ್ರಿಮಜಿನಾಲಯಗ

ಳಲ್ಲಿರುವುವೂ ಭಜಿಸಲ್ಪಡುವುವೂ ಆದ ಜಿನಬಿಂಬಗಳು ದುಃಖವನ್ನು ನಾಶ ಮಾಡುತ್ತವೆ ‖ ೨೬ ‖ ಗಂಭೀರಧ್ವನಿಯುಳ್ಳವೂ ಜಲವರ್ಷಣಗಳಿಂದ ದೂಳನ್ನು ದೂರಮಾಡುವುವೂ ಆದ ಮೇಘಗಳಂತೆ, ಆ ಜಿನಾಲಯಗಳಲ್ಲಿ ಇರುವವರೂ ತಮ್ಮ ವಚನಗಳಿಂದ ಪಾಪಧೂಳಿಯನ್ನು ದೂರಮಾಡುವ ವರೂ ಆದ ಚಾರಣಮುನೀಶ್ವರರು ಜನಸಮೂಹವನ್ನು ಸುಖಪಡಿಸುತ್ತಾರೆ. ತಮ್ಮ ವಚನಗಳಿಂದ ಸಂತೋಷಪಡಿಸುತ್ತಾರೆಂದು ಭಾವವು ‖ ೨೭ ‖ ಈ ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯಲ್ಲಿ ಪ್ರಸಿದ್ಧವಾದ ವೈಜಯಂತಿ ಯೆಂಬ ನಗರವಿದೆ. ಅದು ಪ್ರಕಾಶಮಾನವಾದ ತನ್ನ ವಿವಿಧವಿಮಾನಗಳಿಂದ ದೇವತೆಗಳ ನಗರಿಯನ್ನು ಜಯಿಸುವುದಾಗಿದ್ದಿತು ‖ ೨೮ ‖ ಅಲ್ಲಿ ಜನರು ಇಚ್ಛಿಸಿದ ಭೋಗಗಳನ್ನೆಲ್ಲ ಹೊಂದುವವರೂ ಪರಸ್ಪರಪ್ರೇಮಯುಕ್ತವಾದ ಮನಸ್ಸುಳ್ಳವರೂ ವ್ಯಾಕುಲವಿಲ್ಲದವರೂ ಆಗಿ ಭೋಗಭೂಮಿಯಲ್ಲಿ ಹೇಗೋ ಹಾಗೆ, ಸುಖದಿಂದ ಕಾಲವನ್ನು ಕಳೆಯುತ್ತಾರೆ ‖ ೨೯ ‖ ಬ್ರಹ್ಮನು ಪ್ರಜೆಗಳಿಗೆ ಸಕಲ ಸೌಂದರ್ಯವನ್ನು ಒಂದು ಕಡೆಯಲ್ಲಿ ತೋರಿಸುವುದ ಕ್ಕೋಸ್ಕರ ಸಾರವಾದ ಮತ್ತು ರಮಣೀಯವಾದ ಮನೆಗಳನ್ನೆಲ್ಲ ತಂದು ಆ ವೈಜಯಂತೀನಗರಿಯಲ್ಲಿರಿಸಿದನೋ ಎಂಬಂತೆ ತೋರುತ್ತಿವೆ ‖ ೩೦ ‖ ಆ ವೈಜಯಂತೀನಗರದ ಸ್ತ್ರೀಯರು ದೇವಸ್ತ್ರೀಯರನ್ನೂ ವಿದ್ಯಾಧರರು ದೇವತೆಗಳನ್ನೂ ವಿದ್ಯಾಧರರಾಜರು ದೇವೇಂದ್ರರನ್ನೂ ಮನೆಗಳು ವಿಮಾ ನಗಳನ್ನೂ ತಮ್ಮ ಕಾಂತಿಗಳಿಂದ ಜಯಿಸಿದುವು. ಅಂತಹ ನಗರವನ್ನು ವರ್ಣಿಸುವುದಕ್ಕೆ ಹೇಗೆ ಶಕ್ಯವಾಗುವುದು ? ‖ ೩೧ ‖ ದೇವತೆಗಳ ನಗರದಲ್ಲಿ ದೇವೇಂದ್ರನಂತೆ, ಆ ವೈಜಯಂತೀನಗರದಲ್ಲಿ ತನ್ನ ತೇಜಸ್ಸಿನಿಂದ ಶತ್ರು ಗಳ ತೇಜಸ್ಸನ್ನು ತಿರಸ್ಕರಿಸಿರುವವನೂ ವಜ್ರಾಯುಧದಿಂದ ಶೋಭಿಸುತ್ತಿ ರುವ ಕೈಯುಳ್ಳವನೂ ಆದ ಜಿತಶತ್ರುವೆಂಬ ವಿದ್ಯಾಧರರಾಜನಿದ್ದನು ‖೩೨‖ ಅವನು ಪರದೂಷಣೆಯಲ್ಲಿ ಮೌನವುಳ್ಳವನಾಗಿದ್ದನಲ್ಲದೆ ನ್ಯಾಯಶಾಸ್ತ್ರದ ಅರ್ಥವಿಚಾರಕಾರ್ಯದಲ್ಲಿ ಮೌನವುಳ್ಳವನಾಗಿರಲಿಲ್ಲ. ಪರದ್ರವ್ಯಾಪಹಾ

ರದಲ್ಲಿ ಕೈಯಿಲ್ಲದವನಾಗಿದ್ದನಲ್ಲದೆ ಮದಿಸಿದ ಶತ್ರುಗಳ ಮದವನ್ನು ಮರ್ದಿಸುವುದರಲ್ಲಿ ಕೈಯಿಲ್ಲದವನಾಗಿರಲಿಲ್ಲ ‖ ೩೩ ‖ ಅವನು ಪರಸ್ತ್ರೀಯರನ್ನು ನೋಡುವುದಕ್ಕೆ ಕುರುಡನಾಗಿದ್ದನಲ್ಲದೆ ಮನೋಹರವಾದ ಜಿನೇಶ್ವರಮೂರ್ತಿಗಳನ್ನು ನೋಡುವುದಕ್ಕೆ ಕುರುಡನಾಗಿರಲಿಲ್ಲ. ದುಷ್ಕಾರ್ಯವನ್ನು ಮಾಡುವುದಕ್ಕೆ ಶಕ್ತಿಹೀನನಾಗಿದ್ದನಲ್ಲದೆ ಮುಕ್ತಿಸುಖವನ್ನುಂಟುಮಾಡುವ ಧರ್ಮಕಾರ್ಯವುವನ್ನು ಮಾಡುವುದಕ್ಕೆ ಶಕ್ತಿಹೀನನಾಗಿರಲಿಲ್ಲ ‖ ೩೪ ‖ ಚಂದ್ರನು ಕಲಂಕವುಳ್ಳವನಾಗಿದ್ದಾನೆ. ಸೂರ್ಯನು ವಿಶೇಷವಾದ ತಾಪವುಳ್ಳವನಾಗಿದ್ದಾನೆ. ಸಮುದ್ರವು ಜಡವಾಗಿದೆ. ಮೇರುಪರ್ವತವು ಒರಟಾಗಿದೆ. ದೇವೇಂದ್ರನು ಗೋತ್ರಭೇದಿಯಾಗಿದ್ದಾನೆ. ಆದುದರಿಂದ ಆ ಚಂದ್ರ ಸೂರ್ಯ ಸಮುದ್ರ ಮೇರು ದೇವೇಂದ್ರರು ಜಿತಶತ್ರುಮಹಾರಾಜನಿಗೆ ಸಮಾನರಾಗಿರಲಿಲ್ಲ ‖ ೩೫ ‖ ಅವನು ಪೃಥಿವಿಯ ವಿಕಾರ (ಜಡತ್ವ) ವುಳ್ಳವನಾಗಿದ್ದರೂ ರಾಜನಾಗಿದ್ದರೂ ಉತ್ತಮ ಜ್ಞಾನಧಾರಿಯಾಗಿದ್ದನು. ಅವನು ಪವನದ ವಿಕಾರ (ಚಂಚಲತ್ವ) ವುಳ್ಳವನಾಗಿದ್ದರೂ ಪವಿತ್ರನಾಗಿದ್ದರೂ ಸ್ಥಿರಸ್ವಭಾವವುಳ್ಳವನಾಗಿದ್ದನು. ಅವನು ಚಂದ್ರನಾಗಿದ್ದರೂ ರಾತ್ರಿಯನ್ನು ದೂರಮಾಡಿದ್ದನು—ವಿದ್ಯೆಗಳಿಗೆ ಆಶ್ರಯನಾಗಿದ್ದರೂ ದೋಷರಹಿತನಾಗಿದ್ದನು. ಈಶ್ವರ—ಮಹಾದೇವನಾಗಿದ್ದರೂ ಧರ್ಮವನ್ನು ಹೆಚ್ಚಿಸುವವನಾಗಿದ್ದರೂ ಸತ್ಯದಲ್ಲಿ ಅನುರಾಗವುಳ್ಳವನಾಗಿದ್ದನು ‖ ೩೬ ‖ ಈ ಜಿತಶತ್ರುಮಹಾರಾಜನಿಗೆ ಮನ್ಮಥನೆಂಬ ವಾಯುವಿನ ವೇಗವನ್ನು ಹೆಚ್ಚಿಸುವವಳೂ ಜಿನೇಶ್ವರೋಕ್ತವಾದ ಧರ್ಮವಿದ್ಯೆಯುಳ್ಳವಳೂ ಸಕಲವಿದ್ಯೆಗಳನ್ನೂ ಸಾಧಿಸಿರುವವಳೂ ಆದ ವಾಯುವೇಗೆಯೆಂಬ ವಿದ್ಯಾಧರಿಯು ಬಹು ಪ್ರಿಯಳಾದ ಪತ್ನಿಯಾಗಿದ್ದಳು ‖ ೩೭ ‖ ಕೆಲವು ಸ್ತ್ರೀಯರಲ್ಲಿ ನೋಟಕ್ಕೆ ರಮ್ಯವಾದ ರೂಪವಿರುತ್ತದೆ — ಶೀಲವಿರುವುದಿಲ್ಲ. ಇನ್ನು ಕೆಲವು ಸ್ತ್ರೀಯರಲ್ಲಿ ಶೀಲವಿರುತ್ತದೆ, ರೂಪವಿರುವುದಿಲ್ಲ. ಆ ವಾಯುವೇಗೆಯಲ್ಲಾದರೋ ಉತ್ತಮವಾದ ಕಾಂತಿಯೊಡಗೆ ವಿದ್ವತ್ತ್ವ

ಶಂಸನೀಯವಾದ ಶೀಲವೂ ಬೇರೆ ಸ್ತ್ರೀಯರಿಗೆ ದೊರೆಯದ ಸ್ವರೂಪ-ಸೌಂದರ್ಯವೂ ಇದ್ದುವು ‖ ೩೮ ‖ ಈಶ್ವರನಲ್ಲಿ ಪಾರ್ವತಿಯೂ ವಿಷ್ಣುವಿನಲ್ಲಿ ಲಕ್ಷ್ಮಿಯೂ ದೀಪದಲ್ಲಿ ಜ್ವಾಲೆಯೂ ಸಾಧುವಿನಲ್ಲಿ ದಯೆಯೂ ಚಂದ್ರನಲ್ಲಿ ಬೆಳದಿಂಗಳೂ ಸೂರ್ಯನಲ್ಲಿ ಪ್ರಕಾಶವೂ ಸೇರಿಕೊಂಡಿರುವಂತೆ, ಆ ಮೃಗನೇತ್ರೆಯಾದ ವಾಯುವೇಗೆಯು ಜಿತಶತ್ರುವಿನಲ್ಲಿ ಎಡೆಬಿಡದೆ ಸೇರಿಕೊಂಡಿದ್ದಳು ‖ ೩೯ ‖ ಬ್ರಹ್ಮನು ಅಧಿಕಕಾಂತಿಯುಳ್ಳವಳಾದ ಆ ವಾಯುವೇಗೆಯನ್ನು ನಿರ್ಮಿಸಿ ನಿಜವಾಗಿ ಮನ್ಮಥನನ್ನು ಆಕೆಯ ರಕ್ಷಕನನ್ನಾಗಿ ನೇಮಿಸಿದನು. ಹಾಗಲ್ಲದಿದ್ದರೆ ಆಕೆಯನ್ನು ನೋಡುವ ಜನವನ್ನು ಮನ್ಮಥನು ಬಾಣಗಳಿಂದೇಕೆ ಹೊಡೆಯುತ್ತಿದ್ದನು ? ‖ ೪೦ ‖ ಆ ವಾಯುವೇಗೆಯು ಕಾರುಣ್ಯವೆಂಬ ಲತೆಯೂ ಅಂಗೈಗಳೆಂಬ ತಳಿರೂ ದೃಷ್ಟಿಗಳೆಂಬ ಪುಷ್ಪವೂ ಸ್ತನಗಳೆಂಬ ಫಲವೂ ಯುವಕರ ನೇತ್ರಗಳೆಂಬ ದುಂಬಿಗಳಿಂದ ಪ್ರವೇಶಿಸಲ್ಪಟ್ಟಿರುವುದೂ ಆಗಿ ಬಹು ರಮಣೀಯವಾಗಿದ್ದಿತು ‖ ೪೧ ‖ ಶಚಿಯೊಡನೆ ದೇವೇಂದ್ರನೂ ರತಿಯೊಡನೆ ಮನ್ಮಥನೂ ಕ್ರೀಡಿಸುತ್ತಿದ್ದಂತೆ ಚಿಂತಿಸಿದೊಡನೆಯೇ ದೊರೆಯುತ್ತಿದ್ದ ಭೋಗಗಳುಳ್ಳ ಆ ಜಿತಶತ್ರುಮಹಾರಾಜನು ವಾಯುವೇಗೆಯೊಡನೆ ಕ್ರೀಡಿಸುತ್ತ ಕಾಲಕಳೆಯುತ್ತಿದ್ದನು ‖ ೪೨ ‖ ಆ ಜಿತಶತ್ರುಮಹಾರಾಜನಿಂದ ಸೇವಿಸಲ್ಪಡುತ್ತಿದ್ದ ಆ ಸುಂದರಿಯಾದ ವಾಯುವೇಗೆಯು ಪ್ರಶಸ್ತವಾದ ವೇಗವುಳ್ಳವನೂ ಶೋಕವನ್ನು ಹೋಗಲಾಡಿಸುವವನೂ ಅಭ್ಯುದಯವುಳ್ಳವನೂ ಪ್ರಾರ್ಥಿಸಲ್ಪಡತಕ್ಕ ನೀತಿಯುಳ್ಳಂತಿರುವವನೂ ಆದ ಮನೋವೇಗನೆಂಬ ಪುತ್ರನನ್ನು ಪಡೆದಳು ‖ ೪೩ ‖ ಅಂಧಕಾರವನ್ನು ದೂರಮಾಡುವವನೂ ದುಂಡಾಗಿರುವವನೂ ಆದ ಚಂದ್ರನು ಕಲಾಸಮೂಹದಿಂದ ದಿನದಿನದಲ್ಲಿ ವೃದ್ಧಿಯಾಗುವಂತೆ ವಿಶುದ್ಧವಾದ ಆಚರಣೆಯುಳ್ಳವನಾದ ಆ ಮನೋವೇಗಕುಮಾರನು ಬಹು ನಿರ್ಮಲವಾದ ಗುಣಸಮೂಹದಿಂದ ದಿನೇ ದಿನೇ ವೃದ್ಧಿಯಾದನು ‖ ೪೪ ‖ ಲಕ್ಷ್ಮಿಗೆ ವಾಸಸ್ಥಾನವೂ ಸ್ಥಿರವೂ ಆಳವೂ ಆದ ಸಮುದ್ರವು ದಡದಿಂದ ನದಿಗಳನ್ನು ಗ್ರಹಣ

ಮಾಡುವಂತೆ, ಸಂಪತ್ತಿಗೆ ಆಶ್ರಯನೂ ಸ್ಥಿರಚಿತ್ತನೂ ಗಂಭೀರನೂ ಆದ ಆ ಮನೋವೇಗನು ವಿರುದ್ಧಬುದ್ಧಿಯಿಂದ ರಾಜರುಗಳ ನಾಲ್ಕು ಪ್ರಕಾರವಾದ ವಿದ್ಯೆಗಳನ್ನೂ ಗ್ರಹಣಮಾಡಿದನು ॥ ೪೫ ॥ ಅವನು ಬಾಲ್ಯದಲ್ಲಿಯೂ ಮಹಾನುಭಾವನೂ ಸದ್ಧರ್ಮದಲ್ಲಿ ಪ್ರೀತಿಯುಳ್ಳವನೂ ಪೂಜ್ಯವಾದ ಬುದ್ಧಿಯುಳ್ಳವನೂ ಮುನೀಶ್ವರರ ಚರಣಕಮಲಗಳಲ್ಲಿ ಭ್ರಮರದಂತಿರುವವನೂ ಜಿನೇಶ್ವರವಾಕ್ಯಾಮೃತಪಾನದಿಂದ ಪುಷ್ಟಿಯುಳ್ಳವನೂ ಆಗಿದ್ದನು ॥ ೪೬ ॥ ಅವನು ಅನಂತಸುಖವುಳ್ಳವಳೂ ಕಲ್ಮಷವಿಲ್ಲದವಳೂ ಆದ ಸಿದ್ಧಿಯೆಂಬ ವಧುವನ್ನು ಶೀಘ್ರವಾಗಿ ವಶಮಾಡಿಕೊಳ್ಳುವುದಕ್ಕೋಸ್ಕರ ಸಮರ್ಥವೂ ಪೂಜ್ಯವೂ ಭವವೆಂಬ ದಾವಾನಲಕ್ಕೆ ಜಲವೂ ಆದ ಕ್ಷಾಯಿಕಸಮ್ಯಕ್ತ್ವವೆಂಬ ರತ್ನವನ್ನು ಧರಿಸಿದನು ॥ ೪೭ ॥ ಬೆಂಕಿಗೆ ವೇಗಶಾಲಿಯಾದ ಗಾಳಿಯಂತೆ ಬಹು ನಿಪುಣನಾದ ಆ ಮನೋವೇಗನಿಗೆ ಪ್ರಯೋಜನಕಾರಿಯೂ ಪ್ರಿಯಾಪುರಿಯ ದೊರೆಯಾದ ವಿದ್ಯಾಧರರಾಜನ ಪುತ್ರನೂ ಆದ ಪವನವೇಗನು ಮಿತ್ರನಾದನು ॥ ೪೮ ॥ ಮಹಾಪ್ರತಾಪಶಾಲಿಗಳಾದ ಅವರಿಬ್ಬರೂ ಒಬ್ಬನನ್ನು ಬಿಟ್ಟು ಒಬ್ಬನು ಒಂದು ಕ್ಷಣವೂ ಇರಲಾರದಿದ್ದರು. ಅವರು ಹಗಲೂ ಸೂರ್ಯನೂ ಇರುವಂತೆ ಸಜ್ಜನರಿಗೆ ಮಾರ್ಗಪ್ರಕಾಶರಾಗಿದ್ದರು ॥ ೪೯ ॥ ಪ್ರಿಯಾಪುರಾಧಿಪತಿಯ ಪುತ್ರನಾದ ಆ ಪವನವೇಗನು ದುರಂತವಾದ ಮಿಥ್ಯಾತ್ವವೆಂಬ ವಿಷದಿಂದ ವ್ಯಾಪ್ತನೂ ಜಿನೇಶ್ವರಮುಖೋಕ್ತವಾದ ತತ್ತ್ವಬಹಿರ್ಭೂತನೂ ವಿಶೇಷವಾದ ಕುಹೇತು ಕುದೃಷ್ಟಾಂತಗಳಿಂದ ವಾದಿಸುವವನೂ ಆಗಿದ್ದನು ॥ ೫೦ ॥ ಜಿನೇಶ್ವರನ ಧರ್ಮವೆಂಬ ಅಮೃತದಲ್ಲಿ ಮುಳುಗಿರುವವನೂ ಭವ್ಯನೂ ಆದ ಮನೋವೇಗನು ಮಿಥ್ಯಾತ್ವಯುಕ್ತನಾಗಿರುವ ಆ ಪವನವೇಗನನ್ನು ನೋಡಿ ಮನದೊಳಗೆ ದುಸ್ಸಹವಾದ ಶೋಕದಿಂದ ಸಂತಾಪಗೊಂಡನು ॥ ೫೧ ॥ "ದುರಂತವಾದ ದುಃಖದಲ್ಲಿ ಬೀಳುವ ಮಿತ್ರನ ಈ ಮಿಥ್ಯಾತ್ವಭಾವವನ್ನು ನಿವಾರಣೆಮಾಡುವೆನು. ಯಾವನು ತನ್ನ ಮಿತ್ರನನ್ನು ಪವಿತ್ರವಾದ ಸದ್ಧರ್ಮದಲ್ಲಿ ಸೇರಿಸುತ್ತಾನೋ

ಆವನು ಈ ಲೋಕದಲ್ಲಿ ಹಿತಕಾರಿಯಾದ ಮಿತ್ರನೆಂದು ಪ್ರಾಜ್ಞರು ಹೇಳುತ್ತಾರೆ ॥ ೫೨ ॥ ಮಿಥ್ಯಾತ್ವವನ್ನು ಬಿಡಿಸಿ ನನ್ನ ಈ ಮಿತ್ರನನ್ನು ಜಿನೇಶ್ವರಧರ್ಮದಲ್ಲಿ ಹೇಗೆ ಸೇರಿಸಲಿ ?" ಈ ರೀತಿಯಾಗಿ ಆ ಮನೋವೇಗನು ಬಹಳವಾಗಿ ಚಿಂತಿಸುವವನಾಗಿ ದಿವಾರಾತ್ರಿ ನಿದ್ರಿಸುತ್ತಿರಲಿಲ್ಲ ॥ ೫೩ ॥ ಆ ಮನೋವೇಗನು ಜಿನೇಶ್ವರಮಂದಿರಗಳನ್ನು ವಂದಿಸುವವನಾಗಿ ಲೋಕದಲ್ಲಿ ನಿತ್ಯ ತಿರುಗುತ್ತಿದ್ದನು. ಸತ್ಪುರುಷರು ಧರ್ಮಕಾರ್ಯದಲ್ಲಿ ಅನರ್ಥಕಾರಿಯಾದ ಆಲಸ್ಯವನ್ನೆಂದೂ ಮಾಡುವುದಿಲ್ಲ ॥ ೫೪ ॥ ಒಂದಾನೊಂದು ದಿವಸ ಎಲ್ಲಾ ಕೃತ್ರಿಮಾಕೃತ್ರಿಮ ಜಿನೇಶ್ವರಬಿಂಬಗಳನ್ನು ವಂದಿಸಿ ಹಿಂದಿರುಗುತ್ತಿದ್ದ ಆ ಮನೋವೇಗನ ವಿಮಾನವು ಆಕಾಶ-ಮಾರ್ಗದಲ್ಲಿ ಕೀಲಿಸಿ ನಿಂತಿತು ॥ ೫೫ ॥ ಬಳಿಕ ಇವನು ವಿಮಾನವು ಚಲಿಸದಿರುವುದನ್ನು ನೋಡಿ "ನನ್ನ ಈ ವಿಮಾನವು ವೈರಿಯಿಂದ ಕೀಲಿತವಾಯಿತೋ ? ಮಹದ್ಧಿಯನ್ನು ಹೊಂದಿರುವ ತಪಸ್ವಿಯಿಂದ ಕೀಲಿತವಾಯಿತೋ ?" ಎಂದು ವ್ಯಾಕುಲವಾದ ಮನೋವ್ಯಾಪಾರವುಳ್ಳವನಾಗಿ ಯೋಚಿಸಿದನು ॥ ೫೬ ॥ ಪ್ರತಿಬಂಧದ ಕಾರಣವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವನೂ ಭೂಮಿಯನ್ನೆಲ್ಲ ನೋಡುವವನೂ ಆದ ಮನೋವೇಗನು ಪಟ್ಟಣಗಣ ಗ್ರಾಮಗಳಿಂದ ರಮಣೀಯವಾದ ಮಾಲವದೇಶವನ್ನು ನೋಡಿದನು ॥ ೫೭ ॥ ಆ ಮಾಲವದೇಶದ ಮಧ್ಯದಲ್ಲಿ ಉಜ್ಜಯಿನಿಯೆಂದು ಪ್ರಸಿದ್ಧವಾದ ದೊಡ್ಡ ಪಟ್ಟಣವನ್ನು ನೋಡಿದನು. ಅದು ಉತ್ತಮಸಂಪತ್ತಿಯುಳ್ಳ ಭೂಮಿಯನ್ನು ನೋಡುವುದಕ್ಕೋಸ್ಕರ ಬಂದಿರುವ ದೇವೇಂದ್ರನ ಪಟ್ಟಣವೋ ಎಂಬಂತಿದ್ದಿತು ॥ ೫೮ ॥ ದಾಂಟಲಶಕ್ಯವೂ ಚಂದ್ರನ ಕಿರಣಗಳಿಂದ ಶುಭ್ರವೂ ಆದ ಆ ಪಟ್ಟಣದ ಕೋಟೆಯು, ಪ್ರಕಾಶಮಾನವಾದ ರತ್ನಗಳುಳ್ಳ ಮಸ್ತಕದಿಂದ ಭೂಮಿಯನ್ನು ಭೇದಿಸಿ ಸ್ವರ್ಗವನ್ನು ನೋಡುವುದಕ್ಕೋಸ್ಕರ ಉದ್ಯುಕ್ತನಾದ ಆದಿಶೇಷನೋ ಎಂಬಂತೆ, ಶೋಭಿಸುತ್ತದೆ ॥ ೫೯ ॥ ಆ ಪಟ್ಟಣದ ಸುತ್ತಲೂ ಉದ್ಧತವಾದ ಜಲಚರಪ್ರಾಣಿಗ

2

ಳುಳ್ಳದೂ ಪಣ್ಯಸ್ತ್ರೀಯರ ಚಂಚಲಮನೋವ್ಯಾಪಾರಕ್ಕೆ ಸಮಾನವೂ ಹೊಂದಲಾಗದ ಮಧ್ಯಭಾಗವುಳ್ಳದೂ ಪ್ರವೇಶಕ್ಕೆ ಕಷ್ಟಸಾಧ್ಯವೂ ಆದ ಕಂದಕವು ಶೋಭಿಸುತ್ತಿದ್ದಿತು ॥ ೬೦ ॥ ಆ ಪಟ್ಟಣದಲ್ಲಿ ಆಕಾಶವನ್ನು ಸ್ಪರ್ಶಿಸುತ್ತಿರುವ ವಿಶಾಲವಾದ ಅನೇಕಶಿಖರಗಳುಳ್ಳವೂ ನಾನಾವಿಧವಾದ ಮೃದಂಗಶಬ್ದಗಳುಳ್ಳವೂ ಆದ ಒಳ್ಳೆಯ ಮನೆಗಳು ಧ್ವಜಗಳೆಂಬ ಚಂಚಲವಾದ ಕೈಗಳಿಂದ ಕಲಿಯ ಪ್ರವೇಶವನ್ನು ತಡೆಯುತ್ತವೋ ಎಂಬಂತಿದ್ದುವು ॥ ೬೧ ॥ ಆ ಪಟ್ಟಣದಲ್ಲಿ ವಿದುಷಿಯರೂ ರಮಣೀಯವಾದ ರೂಪವುಳ್ಳವರೂ ಹುಬ್ಬುಗಳೆಂಬ ಸುಂದರವಾದ ಧನುಸ್ಸುಗಳುಳ್ಳವರೂ ಆದ ಸ್ತ್ರೀಯರು ಕಡೆಗಣ್ಣೋಟಗಳೆಂಬ ಬಾಣಗಳಿಂದ ಯುವಕಜನಸಮುದಾಯವನ್ನು ನೋಯಿಸುವವರಾಗಿ ಸ್ವರ್ಗದ-ದೇವಸ್ತ್ರೀಯರನ್ನು ಜಯಿಸುತ್ತಾರೆ ॥ ೬೨ ॥ ತಾವು ದೊಡ್ಡ ನಿಧಿ-ನಿಧಾನಕ್ಕೆ ಅಧಿಪತಿಗಳಾಗಿದ್ದೇವೆಂಬ ಗರ್ವವುಳ್ಳವರಾದ ಯಕ್ಷರು ಆ ಉಜ್ಜಯಿನೀನಗರದ ಸಂಪತ್ತಿಯನ್ನು ನೋಡಿ ಹೃದಯಲ್ಲಿ ದುರ್ನಿವಾರವಾದ ಲಜ್ಜೆಯನ್ನು ಹೊಂದುತ್ತಾರೆ. ಅಂತಹ ನಗರವನ್ನು ವರ್ಣಿಸಲು ಹೇಗೆ ಶಕ್ಯವಾಗುವುದು ? ॥ ೬೩ ॥ ಆ ನಗರದ ಉತ್ತರದಿಕ್ಕಿನಲ್ಲಿ ಸತ್ಪುರುಷರಂತೆ ಮಹಾಫಲವುಳ್ಳವೂ ಸಕಲಪ್ರಾಣಿಸಮೂಹವನ್ನು ಸಂತೋಷಪಡಿಸುವುವೂ ಸಮಸ್ತ ಋತುಗಳಿಂದ ವಿಚಿತ್ರವ್ಯಾಪಾರವನ್ನು ತೋರಿಸುವುವೂ ಆದ ತರುಲತೆಗಳಿಂದ ಸಕಲ ದಿಕ್ಕುಗಳನ್ನು ಪ್ರಕಾಶಪಡಿಸುವುದೂ ಪರಸ್ಪರ ವಿರೋಧವುಳ್ಳ ಪ್ರಾಣಿಗಳಿಂದ ಪ್ರವೇಶವುಳ್ಳದೂ ಸಕಲೇಂದ್ರಿಯಗಳಿಗೆ ಸಂತೋಷವನ್ನುಂಟುಮಾಡುವ ಮನೋಹರಗಳಾದ ಅನೇಕ ಪ್ರಾಣಿಗಳಿಂದ ಕೂಡಿರುವುದೂ ಆದ ಉದ್ಯಾನವು ಶೋಭಿಸುತ್ತಿದ್ದಿತು ॥ ೬೪-೬೫ ॥ ಆ ಉದ್ಯಾನದಲ್ಲಿ ಮನುಷ್ಯರಿಂದಲೂ ದೇವತೆಗಳಿಂದಲೂ ಖೇಚರರಿಂದಲೂ ಭಜಿಸಲ್ಪಡುತ್ತಿದ್ದವನೂ ಕೇವಲಜ್ಞಾನವೆಂಬ ನೇತ್ರವುಳ್ಳವನೂ ಚೆನ್ನಾಗಿ ಬೆಳೆದಿರುವ ಘಾತಿಕರ್ಮವೆಂಬ ಮರವನ್ನು ಸುಡುವ ಅಗ್ನಿಯೂ ಭವಸಮುದ್ರವನ್ನು ದಾಂಟುವುದಕ್ಕೆ

ಹಡಗೂ ಬಹಳ ಉನ್ನತವಾದ ಸ್ಫಟಿಕಸಿಂಹಪೀಠವನ್ನಾಶ್ರಯಿಸಿರುವವನೂ, ಕಿರಣಸಮೂಹಗಳಿಂದ ಚಂದ್ರನನ್ನೋಪಾದಿಯಲ್ಲಿ, ದೇದೀಪ್ಯಮಾನರಾದ ಮುನಿಗಳಿಂದ ಸೇವಿಸಲ್ಪಡುವವನೂ ಆದ ಮುನಿಯನ್ನು, ತನ್ನ ಯಶೋರಾಶಿಯನ್ನು ನೋಡುವಂತೆ, ಮನೋವೇಗನು ನೋಡಿದನು ॥ ೬೬–೬೭ ॥ ನವಿಲು ದೂಳನ್ನು ನಾಶಮಾಡುವ ಮೇಘವನ್ನು ನೋಡಿ ಸಂತೋಷಪಡುವಂತೆಯೂ ಬಹುಕಾಲ ಪ್ರವಾಸಮಾಡಿರುವವನು ಪ್ರಿಯಸಹೋದರನನ್ನು ನೋಡಿ ಸಂತೋಷಪಡುವಂತೆಯೂ ವಿದ್ಯಾಧರರಾಜಪುತ್ರನಾದ ಮನೋವೇಗನು ಲೋಕದ ಇಂದ್ರರಿಂದ ವಂದಿಸಲ್ಪಟ್ಟ ಆ ಮುನೀಶ್ವರನನ್ನು ನೋಡಿ ಸಂತೋಷಪಟ್ಟನು ॥ ೬೮ ॥ ಪಸರಿಸುತ್ತಿರುವ ರತ್ನಕಾಂತಿಯುಳ್ಳ ಕಿರೀಟದಿಂದ ಅಲಂಕೃತನೂ ದೊಡ್ಡ ಮನಸ್ಸುಳ್ಳವನೂ ಪುಣ್ಯಶಾಲಿಯೂ ಆದ ಈ ಮನೋವೇಗನು ಬಳಿಕ ಆಕಾಶದಿಂದಿಳಿದು, ದೇವೇಂದ್ರನಂತೆ, ವನವನ್ನು ಪ್ರವೇಶಿಸಿದನು ॥ ೬೯ ॥ ಆ ಮನೋವೇಗನು ಅಪರಿಮಿತವಾದ ಗಮನಭೇದಗಳುಳ್ಳವರೂ ಮಸ್ತಕದಲ್ಲಿ ಕೈಗಳನ್ನಿರಿಸುವವರೂ ಆದ ಮನುಷ್ಯರಿಂದಲೂ ದಿವಿಜರಿಂದಲೂ ಭಜಿಸಲ್ಪಡುವವನೂ ಯತಿಗಳ ಸಮೂಹದಿಂದ ಕೂಡಿರುವವನೂ ಆದ ಜಿನೇಶ್ವರನನ್ನು ಪುನಃಪುನಃ ನಮಸ್ಕರಿಸಿ ಸಂತುಷ್ಟಚಿತ್ತನಾಗಿ ಅಲ್ಲಿ ಮುನಿಸಭೆಯಲ್ಲಿ ಕುಳಿತುಕೊಂಡನು ॥ ೭೦ ॥

ಇಂತು ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷಾ ಪ್ರಥಮಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

—o—

ಅನಂತರದಲ್ಲಿ ಆ ಸಭೆಯಲ್ಲಿ ಓರ್ವ ಭವನು ಅವಧಿಜ್ಞಾನವೆಂಬ ನೇತ್ರವುಳ್ಳ ಜಿನಮತಿಯೆಂಬ ಸಾಧುವನ್ನು ಆದರಪೂರ್ವಕವಾಗಿ ನಮಸ್ಕರಿಸಿ ಈ ರೀತಿಯಾಗಿ ಪ್ರಶ್ನೆಮಾಡಿದನು ॥ ೧ ॥ " ಭಗವನ್ ! ಸಾರವಿಲ್ಲದ ಈ ಸಂಸಾರದಲ್ಲಿ ಸಂಚರಿಸುವ ಜೀವಗಳಿಗೆ ಸುಖವೆಷ್ಟು ? ದುಃಖವೆಷ್ಟು ? ಎಂದು ಅನುಗ್ರಹದಿಂದ ನನಗೆ ಹೇಳಲ್ಪಡಲಿ" ॥ 2 ॥ ಬಳಿಕ ಯತಿಯು ಮುಂದೆ

ಹೇಳುವ ಪ್ರಕಾರವಾಗಿ ಉತ್ತರವಿತ್ತನು– " ಎಲೈ ಭವ್ಯನೆ ! ನಿನಗೆ ಹೇಳು ತ್ತೇನೆ, ಕೇಳು. ಸಂಸಾರದಲ್ಲಿ ಸುಖದುಃಖಗಳ ವಿಭಾಗವನ್ನು ಮಾಡು ವುದು ಕಷ್ಟ ॥ ೩ ॥ ಆದರೂ ನಾನು ಉದಾಹರಣೆಯನ್ನು ಕೊಟ್ಟು ಹೇಳು ತ್ತೇನೆ. ಉದಾಹರಣೆಯಿಲ್ಲದೆ ಮಂದಬುದ್ಧಿಯುಳ್ಳವರಿಗೆ ಬೋಧಿಸುವುದಕ್ಕಾ ಗುವುದಿಲ್ಲ ॥ ೪ ॥ ಅನಂತಜೀವಗಳಿಂದ ತುಂಬಿರುವ ಸಂಸಾರದಂತೆ ದೀರ್ಘ ವಾದ ಅರಣ್ಯದಲ್ಲಿ ದೈವಯೋಗದಿಂದ ಓರ್ವ ಪಥಿಕನು ಪ್ರವೇಶಿಸಿದನು ॥ ೫ ॥ ಅಲ್ಲಿ ಯಮನಂತೆ ಭಯಂಕರವೂ ಕೋಪಗೊಂಡಿರುವುದೂ ಸೊಂಡಿಲನ್ನು ಎತ್ತಿಕೊಂಡು ತನಗಿದಿರಾಗಿ ಬರುತ್ತಿರುವುದೂ ಆದ ಒಂದು ದೊಡ್ಡ ಆನೆ ಯನ್ನು ನೋಡಿದನು ॥ ೬ ॥ ಆ ಮೇಲೆ ಅದು ಭಯಭೀತನಾದ ಈ ಪಥಿಕ ನನ್ನು ಬೇಡರು ಸಂಚರಿಸುವ ದಾರಿಯಲ್ಲಿ ಮುಂದೆ ಮಾಡಿ ಓಡಿಸಿಕೊಂಡು ಹೋಯಿತು. ಅವನು ಓಡಿ ಹೋಗುತ್ತ ಮೊದಲು ನೋಡದಿರುವ ಬಾವಿ ಯಲ್ಲಿ ಬಿದ್ದನು ॥ ೭ ॥ ಭವ್ಯನು ದುರ್ಗಮವಾದ ನರಕಾಲಯದಲ್ಲಿ ಧರ್ಮ ವನ್ನವಲಂಬಿಸಿರುವಂತೆ, ಭೀತನಾದ ಆ ಪಥಿಕನು ಬಾವಿಗೆ ಬೀಳುತ್ತಿರುವಾಗ ಕೈಗೆ ಸಿಕ್ಕಿದ ಒಂದು ಮರದ ಬಿಳಲನ್ನು ಹಿಡಿದುಕೊಂಡು ಅಲ್ಲಿದ್ದನು ॥ ೮ ॥ ಆನೆಯ ದೆಸೆಯಿಂದ ಹೆದರಿದ ಈ ಪಥಿಕನು ಕೆಳಗೆ ನೋಡಿದಾಗ ಅಲ್ಲಿ ಯಮನ ದಂಡದಂತಿರುವ ಹೆಬ್ಬಾವನ್ನು ನೋಡಿದನು ॥ ೯ ॥ ಆಯುಷ್ಯ ವನ್ನು ಶುಕ್ಲ ಕೃಷ್ಣಪಕ್ಷಗಳು ಕತ್ತರಿಸುವಂತೆ, ಆ ಪಥಿಕನು ಅವಲಂಬಿ ಸಿರುವ ಬಿಳಲನ್ನು ಸುತ್ತಲೂ ಬಿಳಿಯಿಲಿಯೂ ಕಪ್ಪಿಲಿಯೂ ಕತ್ತರಿಸುತ್ತಿ ರುವುದನ್ನು ಕಂಡನು ॥ ೧೦ ॥ ಅವನು ಕ್ರೋಧ ಮಾನ ಮಾಯಾ ಲೋಭ ಕಷಾಯಗಳಂತೆ ನಾಲ್ಕು ದಿಕ್ಕುಗಳಲ್ಲಿ ಭಯಂಕರವೂ ತನ್ನ ಕಡೆಗೆ ಬರುತ್ತಿ ರುವವೂ ಆದ ಉದ್ಧವಾದ ನಾಲ್ಕು ಸರ್ಪಗಳನ್ನು ಆ ಬಾವಿಯ ಕೆಳಗಿನ ಭಾಗದಲ್ಲಿ ನೋಡಿದನು ॥ ೧೧ ॥ ಅವ್ರತಿಯು ವ್ರತಿಯನ್ನು ಪೀಡಿಸುವಂತೆ, ದುಷ್ಟವಾದ ಆ ದೊಡ್ಡ ಆನೆಯು ವೇಗದಿಂದ ಬಂದು ಬಾವಿಯ ದಡದಲ್ಲಿದ್ದ ಆ ಮರವನ್ನು ಅಲುಗಾಡಿಸಿತು ॥ ೧೨ ॥ ಆ ಮರವೆಲ್ಲ ಅಲುಗಾಡಿದಾಗ

ಅದರಲ್ಲಿ ಜೇನುಹೊಟ್ಟಿನಲ್ಲಿದ್ದ ನಾನಾಪ್ರಕಾರವಾದ ಜೇನುನೊಣಗಳು, ದುಸ್ಸಹವಾದ ವೇದನೆಗಳಂತೆ, ಸುತ್ತಲೂ ಚಲಿಸಿದುವು ॥ ೧೩ ॥ ಮರ್ಮವನ್ನು ಭೇದಿಸುವ ಆ ಜೇನುನೊಣಗಳಿಂದ ಎಲ್ಲಾ ಕಡೆಗಳಲ್ಲಿ ಕಚ್ಚಲ್ಪಟ್ಟ ಈ ಮನುಷ್ಯನು ಬಹು ದುಃಖವನ್ನು ಹೊಂದಿ ಮೇಲೆ ನೋಡಿದನು ॥ ೧೪ ॥ ಮುಖವನ್ನು ಮೇಲಕ್ಕೆ ಮಾಡಿ ಮರವನ್ನು ನೋಡುತ್ತಿರುವ ದೀನನಾದ ಈ ಮನುಷ್ಯನ ತುಟಿಯ ಮೇಲೆ ಜೇನುತುಪ್ಪದ ಸಣ್ಣದೊಂದು ತೊಟ್ಟು ಬಿದ್ದಿತು ॥ ೧೫ ॥ ದುಷ್ಟಮನಸ್ಸುಳ್ಳ ಆ ಮನುಷ್ಯನು ನರಕದ ಬಾಧೆಗಿಂತ ಹೆಚ್ಚಾದ ಆ ಬಾಧೆಯನ್ನೂ ಪರಿಗಣಿಸದೆ ಜೇನುತುಪ್ಪದ ಹನಿಯನ್ನು ರುಚಿ ನೋಡುವವನಾಗಿ ಅದು ಮಹಾಸೌಖ್ಯವೆಂದು ತಿಳಿಯುತ್ತಾನೆ ॥ ೧೬ ॥ ಆ ಅಧಮನು ಆ ಬಾಧೆಗಳನ್ನು ಲಕ್ಷಿಸದೆ ಸ್ತಬ್ಧವಾದ–ಚಲಿಸದಿರುವ ಮುಖವುಳ್ಳವನೂ ಬೀಳುತ್ತಿರುವ ಆ ಮಧುಬಿಂದುವನ್ನೇ ಆಸ್ವಾದಿಸುವುದರಲ್ಲಿ ತತ್ಪರನೂ ಆಗಿ ಅಭಿಲಾಷೆಪಡುತ್ತಾನೆ ॥ ೧೭ ॥ ಈ ಪಥಿಕನ ಪ್ರಸ್ತಾವದಲ್ಲಿ ಅವನಿಗೆ ಯಾವ ಪ್ರಕಾರವಾದ ಸುಖದುಃಖಗಳಿರುತ್ತವೋ ಅಂತಹ ಸುಖದುಃಖಗಳು ವ್ಯಸನಕ್ಕೆ ಸ್ಥಾನವಾಗಿರುವ ಸಂಸಾರದಲ್ಲಿ ಜೀವನಿಗಿರುತ್ತವೆಂದು ತಿಳಿಯಬೇಕು ॥ ೧೮ ॥ ಉದಾಹರಣೆಯಲ್ಲಿ ಹೇಳಿರುವ ಬೇಡರ ದಾರಿಯು ಪಾಪವೆಂದೂ ಪಥಿಕನು ಸಂಸಾರಿಜೀವನೆಂದೂ ಮೃತ್ಯುವು ಆನೆಯೆಂದೂ ಬಿಳಲು ಜೀವಿತವೆಂದೂ ಬಾವಿಯು ಭವವೆಂದೂ ಹೆಬ್ಬಾವು ನರಕವೆಂದೂ ಕಪ್ಪು ಬಿಳಿಯಿಲಿಗಳು ಕೃಷ್ಣಶುಕ್ಲ ಪಕ್ಷಗಳೆಂದೂ ನಾಲ್ಕು ಹಾವುಗಳು ಕ್ರೋಧ ಮಾನ ಮಾಯಾ ಲೋಭಗಳೆಂಬ ನಾಲ್ಕು ಕಷಾಯಭಾವಗಳೆಂದೂ ಜೇನುನೊಣಗಳು ವ್ಯಾಧಿಗಳೆಂದೂ ಜೇನುತುಪ್ಪದ ಸಣ್ಣ ಹನಿಯ ಆಸ್ವಾದವು ಭೋಗಸುಖವೆಂದೂ ತಿಳಿಯಬೇಕು. ಸಂಸಾರದಲ್ಲಿ ಸುಖದುಃಖಗಳ ವಿಭಾಗವನ್ನು ಈ ಉದಾಹರಣೆಯಲ್ಲಿ ಹೇಳಿರುವಂತೆ ತಿಳಿ ॥ ೧೯–೨೦ ॥ ಭವದಲ್ಲಿ ತಿರುಗುವ ಪ್ರಾಣಿಗಳ ಸುಖದುಃಖಗಳ ಭೇದ–ತಾರತಮ್ಯವು ಯಥಾರ್ಥವಾಗಿ ಮೇರುವಿನ ಮತ್ತು ಸಾಸಿವೆಯ ಭೇದದಂತಿರುವುದು ॥ ೨೨ ॥

ಸಂಸಾರದಲ್ಲಿ ಮೇರುವಿಗೆ ಸಮಾನವಾಗಿ ದುಃಖವೂ ಸಾಸಿವೆಗೆ ಸಮಾನ ವಾಗಿ ಸುಖವೂ ಇರುವುದರಿಂದ ಯಾವಾಗಲೂ ಸಂಸಾರವನ್ನು ತ್ಯಜಿಸಲು ಪ್ರಯತ್ನಿಸಬೇಕು ‖ ೨೩ ‖ ಅಣುಮಾತ್ರ ಸುಖಕ್ಕೋಸ್ಕರ ಯಾರು ಭೋಗ ವನ್ನನುಭವಿಸುತ್ತಾರೋ ಅವರು ಶೀತನಿವಾರಣೆಗೋಸ್ಕರ ವಜ್ರಾಯುಧದ ಬೆಂಕಿಯನ್ನು ಸೇವಿಸುತ್ತಾರೆಂದು ಊಹಿಸುತ್ತೇನೆ ‖ ೨೪ ‖ ಬೆಂಕಿಯ ಮಧ್ಯದಲ್ಲಿ ಹಿಮವನ್ನು ಹುಡುಕಿದರೆ ಎಂದಾದರೂ ಸಿಕ್ಕೀತು. ಆದರೆ ಸಂಸಾರದಲ್ಲಿ ಹೇಗೂ ಎಂದೂ ಸೌಖ್ಯವು ಸಿಕ್ಕಲಾರದು ‖ ೨೫ ‖ ಆರಿಹೋದ ದೀಪವನ್ನು ನೋಡಿ ಜನರು "ದೀಪವು ನಂದಿತು" ಎಂದು ಹೇಳುವಂತೆ ಮೂಢರು ವಿಷಯಜನ್ಯವಾದ ದುಃಖವನ್ನು ಸುಖವೆಂದು ಕರೆಯುತ್ತಾರೆ. ("ನಂದಿತು" ಎಂಬ ಶಬ್ದಕ್ಕೆ ವೃದ್ಧಿಯಾಯಿತೆಂದು ಅರ್ಥವಾಗು ವುದು) ‖ ೨೬ ‖ ಉಮ್ಮತ್ತವನ್ನು ಸೇವಿಸಿದವರಿಗೆ ಎಲ್ಲಾ ವಸ್ತುವು ಹಳದಿ- ಭಂಗಾರವಾಗಿ ಕಾಣುವಂತೆ ವಿಷಯಾಸಕ್ತಗಳಾದ ಜೀವಗಳು ದುಃಖದಾ ಯಕವಾದ ವಸ್ತುವು ಸುಖದಾಯಕವಾದ ವಸ್ತುವೆಂದು ತಿಳಿಯುತ್ತವೆ ‖ ೨೭ ‖ ವೃಕ್ಷದಿಂದುಂಟಾದ ಫಲವನ್ನು ವೃಕ್ಷದ ರಕ್ಷಣೆಯನ್ನು ಮಾಡಿ ಭಕ್ಷಿಸುವಂತೆ ಧರ್ಮದಿಂದುಂಟಾಗುವ ಸೌಖ್ಯವನ್ನು ಧರ್ಮರಕ್ಷಣೆಯಿಂದ ಅನುಭವಿಸ ಬೇಕು ‖ ೨೮ ‖ ಪಾಪದಿಂದುಂಟಾಗುವ ದುಃಖವನ್ನು ನೋಡಿ ಸಜ್ಜನರು ಪಾಪವನ್ನು ತ್ಯಜಿಸುತ್ತಾರೆ. ಬೆಂಕಿಯಿಂದುಂಟಾಗುವ ದಾಹ-ತಾಪವನ್ನು ನೋಡಿ ಬೆಂಕಿಯಲ್ಲಿ ಯಾರು ಪ್ರವೇಶಿಸುತ್ತಾರೆ? ‖ ೨೯ ‖ ಧರ್ಮದಿಂದ ಜೀವಿಗಳು ಸುಂದರರೂ ಸುಭಗರೂ ಸೌಮ್ಯರೂ ಕುಲೀನರೂ ಶೀಲವಂ ತರೂ ಸಮರ್ಥರೂ ಚಂದ್ರನಂತೆ ಶುಭ್ರವಾದ ಯಶಸ್ಸುಳ್ಳವರೂ ಸ್ಥೈರ್ಯ ವಂತರೂ ಆಗುತ್ತಾರೆ ‖ ೩೦ ‖ ಪಾಪದಿಂದ ಮೂರ್ಖರು ವಿಕಾರರೂಪವುಳ್ಳ ವರೂ ದುರ್ಭಗರೂ ದ್ವೇಷಿಸತಕ್ಕವರೂ ದುಷ್ಕುಲೀನರೂ ಶೀಲವರ್ಜಿತರೂ ದುರ್ಯಶಸ್ಸನ್ನು ಹೊಂದುವವರೂ ದುಷ್ಟರೂ ಆಗುತ್ತಾರೆ ‖ ೩೧ ‖ ಧರ್ಮ ದಿಂದ ಆನೆಯನ್ನೇರುವವರೂ ಜನರಿಂದ ಪೂಜಿತರೂ ಆಗುತ್ತಾರೆ. ಅಪರ

ಮುಂದೆ ಪಾಪಿಗಳು ಪಾಪದಿಂದ ಜನರಿಂದ ನಿಂದಿಸಲ್ಪಟ್ಟವರಾಗಿ ಓಡುತ್ತಾರೆ ॥ ೩೨ ॥ ಧರ್ಮದಿಂದ ಪುಣ್ಯಶಾಲಿಗಳು ಲಾವಣ್ಯೋತ್ಪತ್ತಿಗೆ ಸ್ಥಾನಭೂತರಾದ ಪ್ರಿಯಮಹಿಳೆಯರನ್ನು ಪಡೆಯುತ್ತಾರೆ. ಪಾಪದಿಂದ ದೀನ-ದರಿದ್ರರು ವಾಹನದಲ್ಲಿರುವ ಆ ಮಹಿಳೆಯರನ್ನು ಹೊರುತ್ತಾರೆ ॥ ೩೩ ॥ ಧರ್ಮದಿಂದ ಕೆಲವರು, ಕಲ್ಪವೃಕ್ಷಗಳಂತೆ, ದ್ರವ್ಯವನ್ನು ಕೊಡುತ್ತಾರೆ. ಪಾಪದಿಂದ ಬೇರೆ ಕೆಲವರು ಯಾವಾಗಲೂ ಕೈನೀಡಿ ಬೇಡುತ್ತಾರೆ ॥ ೩೪ ॥ ಧಾರ್ಮಿಕರು ಪತ್ನಿಯರನ್ನು ಆಲಂಗಿಸಿಕೊಂಡು ರತ್ನಖಚಿತವಾದ ಭವನದಲ್ಲಿ ಮಲಗಿ ನಿದ್ರಿಸುತ್ತಾರೆ. ಪಾಪಿಗಳು ಶಸ್ತ್ರಪಾಣಿಗಳಾಗಿ ಆ ಧಾರ್ಮಿಕರ ರಕ್ಷಣೆಯನ್ನು ಮಾಡುತ್ತಾರೆ ॥ ೩೫ ॥ ಧಾರ್ಮಿಕರು ಸುವರ್ಣಪಾತ್ರದಲ್ಲಿ ಇರುವ ಮಿಷ್ಟಾಹಾರವನ್ನು ಭುಂಜಿಸುತ್ತಾರೆ. ಪಾಪಿಗಳು, ಶ್ವಾನಗಳಂತೆ, ಆ ಧಾರ್ಮಿಕರ ಎಂಜಲನ್ನು ಭುಂಜಿಸುತ್ತಾರೆ ॥ ೩೬ ॥ ಧಾರ್ಮಿಕರು ಬಹುಮೂಲ್ಯವೂ ನುಣುಪೂ ದಟ್ಟವೂ ಆದ ವಸ್ತ್ರವನ್ನು ಧರಿಸುತ್ತಾರೆ. ಪಾಪಿಗಳು ನೂರಾರು ತೂತುಗಳುಳ್ಳ ಕಚ್ಚೆಯ ಪಾವುಡವನ್ನೂ ಹೊಂದುವುದಿಲ್ಲ ॥ ೩೭ ॥ ಪುಣ್ಯದಿಂದ ಧನ್ಯರಾಗಿರುವವರು ಲೋಕವಿಖ್ಯಾತವಾದ ಕೀರ್ತಿಯುಳ್ಳವರಾಗಿ ಗುಣಗಾನಮಾಡಲ್ಪಡುತ್ತಾರೆ. ಪಾಪದಿಂದ ಪಾಪಿಗಳು ಅವರ ಮುಂದೆ ಪ್ರಿಯವಚನಗಳುಳ್ಳವರಾಗಿ ಗುಣಗಾನಮಾಡುತ್ತಾರೆ ॥ ೩೮ ॥ ಮೂರು ಲೋಕಗಳಲ್ಲಿ ಪ್ರಖ್ಯಾತವಾದ ಕೀರ್ತಿಯುಳ್ಳ ಚಕ್ರವರ್ತಿಗಳೂ ತೀರ್ಥಂಕರರೂ ಕೇಶವರೂ ಪ್ರತಿಕೇಶವರೂ ಧರ್ಮದಿಂದ ಪ್ರಾದುರ್ಭವಿಸುತ್ತಾರೆ ॥ ೩೯ ॥ ಸಮಸ್ತಲೋಕಗಳಲ್ಲಿ ನಿಂದಿಸಲ್ಪಡುವವರೂ ನೀಚರೂ ಆದ ಕುಳ್ಳರೂ ತುರಿಗಜ್ಜಿಯುಳ್ಳವರೂ ಕುಂಟರೂ ಹೆಚ್ಚು ರೋಮವುಳ್ಳವರೂ ಭೃತ್ಯರೂ ದುರ್ಜನರೂ ಪಾಪದಿಂದ ಹುಟ್ಟುತ್ತಾರೆ ॥ ೪೦ ॥ ಧರ್ಮವು ಕಾಮ ಅರ್ಥ ಮೋಕ್ಷ ಪುರುಷಾರ್ಥಗಳನ್ನು ಇಚ್ಛಿಸುವವರಿಗೆ ಅವುಗಳನ್ನು ಕೊಡುವುದು. ಎಲ್ಲಾ ಅನರ್ಥಗಳಿಗೆ ಉತ್ಪತ್ತಿಸ್ಥಾನವಾದ ಅಧರ್ಮವು ಆ ಕಾಮ ಅರ್ಥ ಮೋಕ್ಷಪುರುಷಾರ್ಥಗಳನ್ನು ನಾಶಮಾಡುವುದು ॥ ೪೧ ॥

ಒಳ್ಳೆಯದೆಲ್ಲವೂ ಧರ್ಮದಿಂದಾಗುವುದು. ಕೆಟ್ಟುದೆಲ್ಲವೂ ಅಧರ್ಮದಿಂದಾಗುವುದು ಎಂದು ಲೋಕದಲ್ಲೆಲ್ಲ ಪ್ರಸಿದ್ಧವಾಗಿದೆ. ಅಜ್ಞರೂ ಇದನ್ನು ಹೇಳುತ್ತಾರೆ ॥ ೪೨ ॥ ಹೀಗೆ ಧರ್ಮದ ಫಲವನ್ನೂ ಅಧರ್ಮದ ಫಲವನ್ನೂ ಪ್ರತ್ಯಕ್ಷವಾಗಿ ತಿಳಿದು ಪ್ರಾಜ್ಞರು ಅಧರ್ಮವನ್ನು ಸಂಪೂರ್ಣವಾಗಿ ತ್ಯಜಿಸಿ ಯಾವಾಗಲೂ ಧರ್ಮವನ್ನು ಮಾಡುತ್ತಾರೆ ॥ ೪೩ ॥ ನೀಚರು ಒಂದು ಭವಕ್ಕೋಸ್ಕರ ಸ್ವಲ್ಪಕಾರ್ಯವನ್ನು ಮಾಡುತ್ತಾರೆ. ಅದರಿಂದ ಲಕ್ಷಭವಗಳಲ್ಲಿ ಅನೇಕಪ್ರಕಾರವಾದ ದುಃಖವನ್ನು ಹೊಂದುತ್ತಾರೆ ॥ ೪೪ ॥ ದುಃಖವನ್ನು ಹೆಚ್ಚಿಸುವ ವಿಷಯವೆಂಬ ಮದ್ಯದಿಂದ ಮೋಹಿತರೂ ದುಸ್ಸಹರೂ ಆದ ಕುಟಿಲಜನರು ಇಂದಿನ-ಸ್ವಲ್ಪಕಾಲದ ಜೀವಿತದಲ್ಲಿಯೂ ಪಾಪವನ್ನು ಮಾಡುತ್ತಾರೆ ॥ ೪೫ ॥ ಕ್ಷಣಭಂಗುರವಾದ ಸಂಸಾರದಲ್ಲಿ ಸುಖವನ್ನು ಕೊಡುವುದೂ ಜೊತೆಯಲ್ಲಿ ಬರುವುದೂ ಪವಿತ್ರವೂ ಆತ್ಮಹಿತಕಾರಿಯೂ ನಿತ್ಯವೂ ಆದ ವಸ್ತುವಾವುದೂ ಇಲ್ಲ ॥ ೪೬ ॥ ತಾರುಣ್ಯವು ವಾರ್ಧಕ್ಯದಿಂದ ನುಂಗಲ್ಪಡುವುದು. ಜೀವಿತವು ಯಮನಿಂದ ನುಂಗಲ್ಪಡುವುದು. ಸಂಪತ್ತುಗಳು ವಿಪತ್ತಿನಿಂದ ನುಂಗಲ್ಪಡುವುವು. ಮನುಷ್ಯರ ಆಶೆಯೊಂದು ನಿರಾತಂಕವಾಗಿರುವುದು ॥ ೪೭ ॥ ಪ್ರಾಣಿಯು ಪರ್ವತವನ್ನೇರಿದರೂ ಭೂಮಿಯನ್ನು ಸುತ್ತಿದರೂ ಪಾತಾಳವನ್ನು ಪ್ರವೇಶಿಸಿದರೂ ಯಮನು ನುಂಗುತ್ತಾನೆ ॥ ೪೮ ॥ ಬರುತ್ತಿರುವ ಯಮನೆಂಬ ಆನೆಯನ್ನು ತಡೆಯುವುದಕ್ಕೆ ಸಜ್ಜನರೂ ತಂದೆತಾಯಿಗಳೂ ಹೆಂಡತಿಯೂ ಸಹೋದರಿಯರೂ ಸಹೋದರರೂ ಮಕ್ಕಳೂ ಸಮರ್ಥರಾಗುವುದಿಲ್ಲ ॥ ೪೯ ॥ ಆನೆ ಕುದುರೆ ರಥ ಕಾಲಾಳುಗಳೆಂಬ ನಾಲ್ಕು ಪ್ರಕಾರವಾದ ತುಂಬಿದ ಸೇನೆಯೂ ಮೃತ್ಯುವೆಂಬ ರಾಕ್ಷಸನಿಂದ ಭಕ್ಷಿಸಲ್ಪಡುವ ಪ್ರಾಣಿಯನ್ನು ರಕ್ಷಿಸುವುದಕ್ಕೆ ಸಮರ್ಥವಾಗುವುದಿಲ್ಲ ॥ ೫೦ ॥ ಕುಪಿತನಾದ ಯಮನೆಂಬ ಸರ್ಪವನ್ನು ದಾನ ಪೂಜಾ ಮಿತಾಹಾರ ಮಂತ್ರ ತಂತ್ರ ರಸಾಯನ ಇವುಗಳಿಂದ ನಿರಾಕರಿಸುವುದಕ್ಕಾಗುವುದಿಲ್ಲ ॥ ೫೧ ॥ ಉರಿಯುತ್ತಿರುವ ಮೃತ್ಯುವೆಂಬ

ಬೆಂಕಿಯು ಶಿಶುವನ್ನೂ ಯುವಕನನ್ನೂ ವೃದ್ಧನನ್ನೂ ದರಿದ್ರನನ್ನೂ ಧನಿಕನನ್ನೂ ಧನಹೀನನನ್ನೂ ಮೂರ್ಖನನ್ನೂ ವಿದ್ವಾಂಸನನ್ನೂ ಶೂರನನ್ನೂ ಹೇಡಿಯನ್ನೂ ದೊರೆಯನ್ನೂ ದೊರೆಯಲ್ಲದವನನ್ನೂ ದಾನಿಯನ್ನೂ ಕೃಪಣನನ್ನೂ ಪಾಪಿಯನ್ನೂ ಧಾರ್ಮಿಕನನ್ನೂ ಸಜ್ಜನನನ್ನೂ ದುರ್ಜನನನ್ನೂ ಯಾವ ಜೀವನವನ್ನೂ ಸುಡದೆ ಬಿಡುವುದಿಲ್ಲ ॥೫೨-೫೩॥ ಯಾವನು ಬಲಿಷ್ಠರಾದ ದೇವೇಂದ್ರ ಮೊದಲಾದ ದೇವತೆಗಳನ್ನು ಕೊಲ್ಲುತ್ತಾನೋ ಅಂತಹ ಮೃತ್ಯುವಿಗೆ ಮನುಷ್ಯರನ್ನು ಕೊಲ್ಲುವಾಗ ಯಾವ ಖೇದವೂ ಇರುವುದಿಲ್ಲ ॥ ೫೪ ॥ ದೃಢವಾದ ಕಲ್ಲಿನ ಬಂಧನವುಳ್ಳ ಬೆಟ್ಟಗಳನ್ನು ಸುಡುವ ಬೆಂಕಿಯು ಹುಲ್ಲಿನ ರಾಶಿಗಳನ್ನು ಹೇಗೆ ಬಿಡುವುದು ? ॥ ೫೫ ॥ ಪ್ರಾಣಿಗಳ ಭಕ್ಷಣದಲ್ಲಿ ತೊಡಗಿರುವ ಯಮನನ್ನು ತಡೆಯುವುದಕ್ಕೆ ಭೂತ ವರ್ತಮಾನ ಭವಿಷ್ಯತ್ಕಾಲಗಳಲ್ಲಿ ಯಾವ ಉಪಾಯವೂ ಇಲ್ಲ ॥ ೫೬ ॥ ಸರ್ವಜ್ಞರಿಂದ ಹೇಳಲ್ಪಟ್ಟಿರುವುದೂ ರತ್ನತ್ರಯಲಕ್ಷಣವುಳ್ಳದೂ ಆದ ಧರ್ಮವನ್ನು ಬಿಟ್ಟು ಬೇರೆಯವನು ಜರಾಮರಣಗಳನ್ನು ಮರ್ದನಮಾಡುವುದಕ್ಕೆ ಸಮರ್ಥನಾಗಿಲ್ಲ ॥ ೫೭ ॥ ಬದುಕಿನಲ್ಲಿಯೂ ಸಾವಿನಲ್ಲಿಯೂ ದುಃಖದಲ್ಲಿಯೂ ಸುಖದಲ್ಲಿಯೂ ವಿಪತ್ತಿನಲ್ಲಿಯೂ ಸಂಪತ್ತಿನಲ್ಲಿಯೂ ಜೀವನು ಏಕಾಕಿಯಾಗಿರುತ್ತಾನೆ. ಯಾವನೂ ಸಹಾಯಕನಿಲ್ಲ ॥ ೫೮ ॥ ಪ್ರಾಣಿಯು ಬೇರೆ ಬೇರೆ ಸ್ವಭಾವದವರಾದ ಬಂಧುಗಳು ಇಲ್ಲೇ ಬೇರೆಯಾಗಿರುತ್ತಾರೆ, ಅಂದ ಮೇಲೆ ತಮ್ಮ ಕರ್ಮಕ್ಕೆ ಅಧೀನರಾಗಿರುವ ಆ ಬಂಧುಗಳು ಉತ್ತರಭವದಲ್ಲಿ ಹೇಗೆ ಸಹಾಯಕರಾಗಿರುವರು ? ॥ ೫೯ ॥ ಆತ್ಮನಿಗೆ ನಿಜವಾಗಿಯೂ ತನ್ನನ್ನು ಬಿಟ್ಟು ಬೇರೆ ಯಾವುದೂ ತನ್ನದೆಂಬುದಿಲ್ಲ, ಇವನು ನನ್ನವನು, ಇವನು ಬೇರೆಯವನು ಎಂಬ ಕಲ್ಪನೆಯು ಮೋಹ-ಅಜ್ಞಾನ ಮೂಲಕವಾದುದು ॥ ೬೦ ॥ ಆತ್ಮನಿಗೆ ತನ್ನ ದೇಹದೊಡನೆಯೂ ಐಕ್ಯವಿಲ್ಲವೆಂದ ಮೇಲೆ ಬಹಿರ್ಭೂತರಾದ ಪುತ್ರ ಕಳತ್ರ ಮಿತ್ರಾದಿಗಳೊಡನೆ ಹೇಗೆ ಐಕ್ಯವಿದ್ದೀತು ? ॥ ೬೦ ॥ ಎಲ್ಲಾ ಜನರೂ ಕಾರ್ಯನಿಮಿತ್ತವಾಗಿ ಯಾರನ್ನಾದರೂ ಆಶ್ರಯಿಸುತ್ತಾರೆ.

ತಮ್ಮ ಕಾರ್ಯವಾದ ಮೇಲೆ ಮಾತನಾಡಿಸುವುದೂ ಇಲ್ಲ ॥ ೬೨ ॥ ನಿಶ್ಚಯವಾಗಿಯೂ ಸ್ವಾರ್ಥದಿಂದಲ್ಲದೆ ಯಾರೂ ಸ್ನೇಹವನ್ನು ಮಾಡುವುದಿಲ್ಲ. ಹಾಲು ಮುಗಿದ ಮೇಲೆ ಶಿಶುಗಳು ತಾಯಿಯನ್ನು ಬಿಡುವುದಿಲ್ಲವೇ ? ॥ ೬೩ ॥ ಜನರು ದುಃಖವನ್ನುಂಟು ಮಾಡುವ ವಸ್ತುವನ್ನು ಸುಖವನ್ನುಂಟು ಮಾಡುವ ವಸ್ತುವನ್ನಾಗಿಯೂ ಅಚರವಸ್ತುವನ್ನು ಚರವಸ್ತುವನ್ನಾಗಿಯೂ ಪರಕೀಯ ವಸ್ತುವನ್ನು ಸ್ವಕೀಯವಸ್ತುವನ್ನಾಗಿಯೂ ತಿಳಿದು ಪಾಪಸಂಗ್ರಹವನ್ನು ಮಾಡಿಕೊಳ್ಳುತ್ತಾರೆ. ಕಷ್ಟ ! ॥ ೬೪ ॥ ಜನರು ಪುತ್ರ ಮಿತ್ರ ಶರೀರಗಳಿಗೋಸ್ಕರ ಪಾಪವನ್ನು ಮಾಡುತ್ತಾರೆ. ಬಳಿಕ ತಾವೊಬ್ಬರೇ ನರಕಾದಿ ಘೋರದುಃಖವನ್ನು ಸಹಿಸುತ್ತಾರೆ. ॥ ೬೫ ॥ ಭವಸಾಗರದಲ್ಲಿ ಎಲ್ಲಿ ಹುಡುಕಿದರೂ ಸೌಖ್ಯವೂ ಕಾಣುವುದಿಲ್ಲ. ಬಾಳೆಯ ಕಂಬವು ಮೇಲೆ ಪಟ್ಟೆಗಳಿಂದ ಸುತ್ತಲ್ಪಟ್ಟಿದ್ದರೂ ಅದರಲ್ಲಿ ಸಾರವು ಕಾಣಿಸುವುದೇ ? ॥ ೬೬ ॥ ಯಾವನೂ ತಮ್ಮ ಜೊತೆಯಲ್ಲಿ ಬರುವುದಿಲ್ಲವೆಂದು ತಿಳಿಯುವವರು ಕೂಡ ಅಂಥವನಿಗೋಸ್ಕರ ಮಹಾಪಾಪಕಾರ್ಯವನ್ನು ಮಾಡುತ್ತಾರೆ. ಇದಕ್ಕಿಂತ ಬೇರೆ ಮೂರ್ಖತ್ವವಾವುದಿದೆ ? ॥ ೬೭ ॥ ಇಂದ್ರಿಯ ವಿಷಯ ಸುಖದಿಂದ ದುಃಖವೂ ತಪಸ್ಸಿನ ಕ್ಲೇಶದಿಂದ ಸುಖವೂ ಉಂಟಾಗುವುದರಿಂದ ಆ ತಪಃಕ್ಲೇಶಜನ್ಯವಾದ ಸುಖದ ರಕ್ಷಣೆಗೋಸ್ಕರ ಪ್ರಾಜ್ಞರು ಇಂದ್ರಿಯ ವಿಷಯ ಸುಖವನ್ನು ಬಿಟ್ಟು ತಪಸ್ಸನ್ನು ಮಾಡುತ್ತಾರೆ ॥ ೬೮ ॥ ತನ್ನಿಂದ ಪೋಷಣೆಯನ್ನು ಹೊಂದಿರುವ ವಿಷಯಗಳೇ ಎಡಬಿಡದೆ ಮಹಾದುಃಖವನ್ನು ಕೊಡುತ್ತವೆಂದ ಮೇಲೆ ಅವುಗಳಿಂದ ಬೇರೆ ಯಾವನೂ ಬಿಡಲಾಗದ ವೈರಿಯಿಲ್ಲ ॥ ೬೯ ॥ ಪ್ರಾರ್ಥಿಸಿಕೊಂಡರೂ ಯಾವುವು ಹತ್ತಿರಕ್ಕೆ ಬರುವುದಿಲ್ಲವೋ ಮತ್ತು ಕಳುಹಿಸದಿದ್ದರೂ ತಾವೇ ಹೊರಟು ಹೋಗುತ್ತವೋ ಅಂತಹ ಧನ ಬಂಧು ಗೃಹ ಮೊದಲಾದುವು ತನ್ನವಾಗಿ ಹೇಗಿರುವುವು ? ॥ ೭೦ ॥ ಸಂಸಾರದಲ್ಲಿ ಯಾವ ವಸ್ತುವಿನಲ್ಲಿ ವಿಶ್ವಾಸವಿದೆಯೋ ಅದರಲ್ಲಿ ಭಯವಿದೆ. ಯಾವ ವಸ್ತುವಿನಲ್ಲಿ ಅವಿಶ್ವಾಸವಿದೆಯೋ ಅದರಲ್ಲಿ ಯಾವಾ

ಗಲೂ ಉತ್ತಮಸುಖವಿದೆ ॥ ೭೧ ॥ ಆತ್ಮಕಾರ್ಯವನ್ನು ಬಿಟ್ಟು ಯಾರು ದೇಹಕಾರ್ಯದಲ್ಲಿ ಆಸಕ್ತರಾಗಿರುತ್ತಾರೋ ಅವರಿಗಿಂತ ಪರಕಾರ್ಯವನ್ನೇ ಮಾಡುವ ನಿಂದ್ಯರು ಬೇರೆಯಿಲ್ಲ. ॥ ೭೨ ॥ ಅನೇಕಭವಗಳ ಪವಿತ್ರಸುಖ ಗಳನ್ನು ಅಪಹರಿಸುವ ಮಕ್ಕಳು ಮೊದಲಾದವರು ಕಳ್ಳರಿಗಿಂತ ಹೇಗೆ ಹೆಚ್ಚಿನವರಲ್ಲ ? ॥ ೭೩ ॥ ಸಾಂಸಾರಿಕಸುಖವೆಲ್ಲವೂ ಆತ್ಮಹಿತಕರವಲ್ಲ ವೆಂದು ಆಲೋಚಿಸಿ ಪ್ರಾಜ್ಞರು ಜಿನೋಕ್ತವೂ ಆತ್ಮಹಿತಕಾರಿಯೂ ಆದ ಧರ್ಮವನ್ನು ಯಾವಾಗಲೂ ಆಚರಿಸಬೇಕು ॥ ೭೪ ॥ ಕ್ಷಮೆಯಿಂದ ಕೋಪ ವನ್ನೂ ಮೃದುಸ್ವಭಾವದಿಂದ ಅಹಂಕಾರವನ್ನೂ ಸರಳಸ್ವಭಾವದಿಂದ ಮಾಯೆಯನ್ನು ಸಂತೋಷದಿಂದ ಲೋಭವನ್ನೂ ದೂರ ಮಾಡುವವನಲ್ಲಿ ಧರ್ಮವಿರುತ್ತದೆ ॥ ೭೫ ॥ ನಿರ್ಮಲವಾದ ಶೀಲ-ಬ್ರಹ್ಮಚರ್ಯವನ್ನು ಧರಿ ಸುವವನಲ್ಲಿಯೂ ಜಿನೇಶ್ವರನನ್ನು ಪೂಜಿಸುವವನಲ್ಲಿಯೂ ಪಾತ್ರಗಳಿಗೆ ದಾನಮಾಡುವವನಲ್ಲಿಯೂ ಪರ್ವತಿಥಿಯಲ್ಲಿ ಯಾವಾಗಲೂ ಉಪವಾಸ ವನ್ನು ಮಾಡುವವನಲ್ಲಿಯೂ ಪ್ರಾಣಿಗಳನ್ನು ರಕ್ಷಿಸುವವನಲ್ಲಿಯೂ ಸತ್ಯವ ಚನವನ್ನು ನುಡಿಯುವವನಲ್ಲಿಯೂ ಚೌರ್ಯವನ್ನು ವರ್ಜಿಸುವವನಲ್ಲಿಯೂ ಸ್ತ್ರೀಯನ್ನು ರಾಕ್ಷಸಿಯನ್ನೋಪಾದಿಯಲ್ಲಿ ಬಿಡುವವನಲ್ಲಿಯೂ ಧರ್ಮವಿರು ತ್ತದೆ ॥ ೭೬-೭೭ ॥ ಧರ್ಮವಾತ್ಸಲ್ಯವುಳ್ಳವನೂ ವಿನಯವುಳ್ಳವನೂ ಸಂ ತೋಷಾಮೃತಪಾನದಿಂದ ಪರಿಗ್ರಹವನ್ನು ತ್ಯಜಿಸುವವನೂ ಆದ ಧೀರನಲ್ಲಿ ಪವಿತ್ರವಾದ ಧರ್ಮವಿರುತ್ತದೆ. ॥ ೭೮ ॥ ಈ ರೀತಿಯಾದ ಭಾವನೆಯಿಂದ ಜಿನವಚನವನ್ನು ಭಾವಿಸುವವನು ಬಹುದುಃಖವನ್ನು ಮಾಡುವ ಸಂಸಾರ ವೆಂಬ ವಜ್ರದ ಬೆಂಕಿಯನ್ನು ಆರಿಸುತ್ತಾನೆ'' ॥ ೭೯ ॥

ತಾಪವನ್ನು ಹೋಗಲಾಡಿಸುವ ಮೇಘದ ಜಲದಿಂದ ಭೂಮಿಯಂತೆ ಯೋಗಿಯ ಆ ವಚನದಿಂದ ಸಭೆಯೆಲ್ಲ ಪ್ರೀತಿ-ಸಂತೋಷವನ್ನು ಹೊಂದಿತು ॥ ೮೦ ॥ ಧರ್ಮೋಪದೇಶದಲ್ಲಿ ತತ್ಪರನೂ ಅವಧಿಜ್ಞಾನವೆಂಬ ನೇತ್ರ ವುಳ್ಳವನೂ ವಾತ್ಸಲ್ಯಕಾರ್ಯದಲ್ಲಿ ನಿಪುಣನೂ ಆದ ಆ ಚಿನ್ಮುನಿಯೋ

ಗಿಯು ಮನೋವೇಗನನ್ನು ಜಿತಶತ್ರುಮಹಾರಾಜನ ಪುತ್ರನನ್ನಾಗಿ ತಿಳಿದು "ಎಲೈ ಮಂಗಳಾಂಗನೇ! ಧರ್ಮದಲ್ಲಿ ಉದ್ಯಮಶೀಲನೂ ಭವ್ಯನೂ ಆದ ನಿನ್ನ ತಂದೆಯು ತನ್ನ ಪರಿಜನರೊಡನೆ ಕ್ಷೇಮದಿಂದಿರುತ್ತಾನೋ ?" ಎಂದನು. ಧರ್ಮದಲ್ಲಿ ಮನಸ್ಸುಳ್ಳ ಯೋಗಿಗಳಿಗೂ ಭವ್ಯರಲ್ಲಿ ಪಕ್ಷಪಾತ ವಿರುತ್ತದೆ. ಈ ಮುನಿವಚನವನ್ನು ಕೇಳಿ ಖೇಚರರಾಜಪುತ್ರನಾದ ಮನೋವೇಗನು ಸಂತುಷ್ಟವಾದ ಮನಸ್ಸುಳ್ಳವನಾಗಿ ನಮಸ್ಕರಿಸಿ ಈ ಮಾತನ್ನು ಕೇಳಿದನು ॥ ೮೧ ॥ "ಸಾಧುವೆ! ನಿನ್ನ ಪಾದಗಳು ಯಾವಾಗಲೂ ಯಾವನ ರಕ್ಷಣೆಯನ್ನು ಮಾಡುತ್ತವೋ ಅಂತಹ ಖೇಚರಾಧಿಪತಿಯಾದ ಈ ಜಿತಶತ್ರುವಿಗೆ ವಿಘ್ನಗಳು ಹೇಗಾಗುತ್ತವೆ? ಗರುಡರು ಯಾವನನ್ನು ರಕ್ಷಿಸುತ್ತಾರೋ ಅವನನ್ನು ಎಂದಾದರೂ ಸರ್ಪಗಳು ಪೀಡಿಸುತ್ತವೋ?" ॥ ೮೩ ॥ ಈ ಪ್ರಕಾರವಾಗಿ ಹೇಳಿ ಕರಕಮಲವನ್ನು ಮಸ್ತಕದಲ್ಲಿರಿಸಿದ ಈ ಮನೋವೇಗನು ಎದ್ದು ಕೇವಲಜ್ಞಾನವೆಂಬ ಕಿರಣದಿಂದ ಪದಾರ್ಥಗಳನ್ನು ಪ್ರಕಾಶಪಡಿಸುವ ಕೇವಲಿಯೆಂಬ ಸೂರ್ಯನನ್ನು ನಮಸ್ಕರಿಸಿ ವಿನಯದಿಂದ ಪ್ರಶ್ನೆ ಮಾಡಿದನು. ಸಮಸ್ತವಾದ ಸಂಶಯವೆಂಬ ಕತ್ತಲೆಯನ್ನು ಬೇರೆಯವನು ನಾಶಮಾಡುವುದಿಲ್ಲ ॥ ೮೩ ॥

"ಸ್ವಾಮಿಯೇ! ನನ್ನ ಪ್ರಾಣಪ್ರಿಯನಾದ ಮಿತ್ರನು ವಿಪರೀತಬುದ್ಧಿಯುಳ್ಳವನೂ ಮಿಥ್ಯಾತ್ವವೆಂಬ ಮಹಾವಿಷವ್ಯಾಪ್ತನೂ ಕುತ್ಸಿತನೂ ಆಗಿರುತ್ತಾನೆ. ಇವನು ಈ ಜಿನಧರ್ಮದಲ್ಲಿರುವನೋ? ಇಲ್ಲವೋ? ಇದನ್ನು ನನಗೆ ಹೇಳು ॥ ೮೩ ॥ ಸ್ವಾಮಿಯೇ! ದುರ್ಮಾರ್ಗದಲ್ಲಿರುವ ▪ ನನ್ನ ಮಿತ್ರನು ನನ್ನ ಮನಸ್ಸಿನಲ್ಲಿ ವಜ್ರದ ಬೆಂಕಿಯ ಶಿಖೆಯಂತೆ ತಡೆಯುವುದಕ್ಕೆ ಕಷ್ಟವಾದ ತಾಪವನ್ನುಂಟು ಮಾಡುವ ಚಿಂತೆಯನ್ನು ಕೊಡುತ್ತಾನೆ, ಸಮಾನವಾದ ಶೀಲವೂ ಗುಣವೂ ಉಳ್ಳವನೊಡನೆ ಕಾಣುವ ಸಖ್ಯವು ಸುಖಕ್ಕೆ ಕಾರಣವಾಗುವುದು ॥ ೮೬ ॥ ನಾನಾವಿಧವಾದ ದುಃಖಗಳಿಗೆ ಸ್ಥಾನವಾದ ಮಿಥ್ಯಾಮಾರ್ಗದಲ್ಲಿ ಆಸಕ್ತಚಿತ್ತನಾಗಿರುವ ಮಿತ್ರನನ್ನು ಆದರಿಂದ ನಿವಾರಣೆ ಮಾಡದಿರುವವನು

ಮಧ್ಯದಲ್ಲಿ ಭಯಂಕರವಾದ ಸರ್ಪವುಳ್ಳದೂ ತಳವು ಸಿಕ್ಕದಿರುವುದೂ ಆದ ಬಾವಿಯಲ್ಲಿ ನಿಜವಾಗಿ ಅವನನ್ನು ತಳ್ಳುತ್ತಾರೆ ‖ ೮೩ ‖ ಮಿಥಾತ್ವಕ್ಕಿಂತ ದುಃಖಕರವಾದ ಕತ್ತಲೆಯು ಬೇರೊಂದಿಲ್ಲ. ಸಮ್ಯಕ್ತ್ವಕ್ಕಿಂತ ವಿವೇಕಕಾರಿಯಾದ ವಸ್ತುವು ಮತ್ತೊಂದಿಲ್ಲ. ಸಂಸಾರಕ್ಕಿಂತ ನಿಷೇಧಯೋಗ್ಯವಾದ ಪದಾರ್ಥವು ಬೇರೊಂದಿಲ್ಲ ಮುಕ್ತಿಗಿಂತ ಜನರು ಅಪೇಕ್ಷಿಸತಕ್ಕ ವಸ್ತುವು ಮತ್ತೊಂದಿಲ್ಲ. ‖ ೮೮ ‖ ಜಿನೇಶ್ವರನೇ ! ನನ್ನ ಆ ಮಿತ್ರನಲ್ಲಿ ಪವಿತ್ರವಾದ ಭವ್ಯತ್ವವಿದೆಯೇ ? ಇಲ್ಲವೋ ? ಅದಿಲ್ಲದಿದ್ದರೆ ಅವನಿಗೆ ತತ್ತ್ವಸಮೂಹದ ರಚನೆಗಳು ನಿರರ್ಥಕವಾಗುತ್ತವೆ. ಕಲ್ಲಿನಂತಿರುವ ಹೆಸರು ಕಾಳಿನಲ್ಲಿ ಪ್ರಯೋಗಿಸುವ ಪಾಕವಿಧಿಗಳೆಲ್ಲ ನಿಜವಾಗಿ ವ್ಯರ್ಥವಾಗುತ್ತವೆ.'' ‖ ೮೯ ‖

ಈ ಪ್ರಕಾರವಾಗಿ ಪ್ರಶ್ನೆಮಾಡಿ ವಿದ್ಯಾಧರ ರಾಜಪುತ್ರನಾದ ಮನೋವೇಗನು ವಿಶ್ರಮಿಸಿದನು. ಆಗ ಜಿನೇಶ್ವರನ ನಿರ್ದುಷ್ಟವೂ ಹೃದಯಂಗಮವೂ ಆದ ವಚನವು ಹೊರಟಿತು. ''ಎಲೈ ಮಂಗಳಾಂಗನೆ ! ಅವನನ್ನು ಪುಷ್ಪನಗರಿಕ್ಕೆ (ಪಾಟಲಿಪುತ್ರಕ್ಕೆ) ಕರೆದುಕೊಂಡು ಹೋಗಿ ಬೋಧಿಸಿದರೆ ಅವನು ಕೂಡಲೆ ಮಿಥ್ಯಾತ್ವದೋಷವನ್ನು ಬಿಡುತ್ತಾನೆ ‖ ೯೦ ‖ ಎಲೈ ಸುಬುದ್ಧಿಯೇ ! ಶರೀರವನ್ನು ಪ್ರವೇಶಿಸಿ ಯಾವಾಗಲೂ ಅಸಹ್ಯ ದುಃಖವನ್ನುಂಟು ಮಾಡುವ ಸರಳು ಮೊದಲಾದುದನ್ನು ಇಕ್ಕಳಗಳಿಂದ ತೆಗೆಯುವಂತೆ ಇವನ ಮನಸ್ಸನ್ನು ಪ್ರವೇಶಿಸಿರುವ ಮಿಥ್ಯಾತ್ವವೆಂಬ ಮೊಳೆಯನ್ನು ದೃಷ್ಟಾಂತಗಳಿಂದಲೂ ಹೇತುಗಳಿಂದಲೂ ಕಿತ್ತುಬಿಡು ‖ ೯೨ ‖ ಲೋಕದಲ್ಲಿ ಎಷ್ಟರ ವರೆಗೆ ಜಿನೇಶ್ವರವಚನಗಳಿರುವುದಿಲ್ಲವೋ ಅಷ್ಟರ ವರೆಗೆ ವಿಪರೀತ ಶ್ರದ್ಧೆಯುಳ್ಳವರ ವಚನಗಳು ಪ್ರಕಾಶಿಸುತ್ತವೆ. ಲೋಕವನ್ನು ಪ್ರಕಾಶಪಡಿಸುವುದರಲ್ಲಿ ಚತುರನಾದ ಸೂರ್ಯನಿರುವಾಗ ಗ್ರಹಗಳ ಸಮೂಹದ ತೇಜಸ್ಸುಗಳ ಪ್ರಕಾಶಿಸುತ್ತವೋ ? ‖ ೯೩ ‖ ವಿರುದ್ಧಶ್ರದ್ಧೆಯುಳ್ಳ ಅಭವ್ಯವನ್ನು ಬಿಟ್ಟು ಯಾವನು ತಾನೆ ಜಿನೇಶ್ವರೋಕ್ತವಾದ ಶುದ್ಧವಾಕ್ಯ

ಗಳಿಂದ ಎಚ್ಚತ್ತು ಕೊಳ್ಳುವುಳ್ಳುದಿಲ್ಲ ? ಗೂಬೆಯನ್ನು ಬಿಟ್ಟು ಬೇರೆಯೆಲ್ಲರೂ ಕತ್ತಲೆಯನ್ನು ದೂರಮಾಡುವುದರಲ್ಲಿ ಸಮರ್ಥವಾದ ಸೂರ್ಯಕಿರಣ ಸಮೂಹಗಳಿಂದ ಪದಾರ್ಥವನ್ನು ನೋಡುತ್ತಾರೆ" ॥ ೯೪ ॥ ಮಹಾನಂದ ಕರವಾದ ಈ ಜಿನವಚನವನ್ನು ಕೇಳಿ ಪಾಪವನ್ನು ನಾಶ ಮಾಡುವ ಜಿನೇಶ್ವರ ಚರಣಾರವಿಂದವನ್ನು ನಮಸ್ಕರಿಸಿ ಆ ವಿದ್ಯಾಧರ ರಾಜಪುತ್ರನಾದ ಅಪರಿ ಮಿತಮನವುಳ್ಳ ಮನೋವೇಗನು ವಿದ್ಯಾಪ್ರಭಾವದಿಂದಾದ ದಿವ್ಯ ವಿಮಾನ ದಲ್ಲಿದ್ದು ಮನೆಗೆ ಹೋದನು ॥ ೯೫ ॥

ಇಂತು ಅಮಿತಗತ್ಯಾಚಾರ್ಯವಿರಚಿತ ಧರ್ಮಪರೀಕ್ಷಾ ದ್ವಿತೀಯಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು

— ೦ —

ಅನಂತರದಲ್ಲಿ ದೇವನಂತೆ ಪ್ರಕಾಶ ಮಾನವಾದ ಪ್ರಭೆಯುಳ್ಳ ಮನೋ ವೇಗನು ದಿವ್ಯವಿಮಾನವನ್ನೇರಿ ತನ್ನ ಪಟ್ಟಣಕ್ಕೆ ಹೋದಾಗ, ವಿಮಾನ ದಲ್ಲಿರುವ ದೇವನು ಇದಿರಾಗಿ ಬಂದು ದೇವೇಂದ್ರನನ್ನು ನೋಡುವಂತೆ, ಪವನವೇಗನು ಇದಿರಾಗಿ ಬಂದು ಮನೋವೇಗನನ್ನು ನೋಡಿದನು ॥ ೧-೨ ॥ ಪವನವೇಗನು ಮನೋವೇಗನನ್ನು ನೋಡಿ “ಕಾಮಾತುರನಾದ ಮನು ಷ್ಯನು ನ್ಯಾಯರಹಿತನಾಗಿರುವಂತೆ, ನೀನು ನನ್ನನ್ನು ಬಿಟ್ಟು ಇಷ್ಟು ಕಾಲದ ವರೆಗೆ ಎಲ್ಲಿದ್ದೆ ? ಹೇಳು ॥ ೩ ॥ ಸೂರ್ಯನನ್ನು ಬಿಟ್ಟು ದಿವಸವು ಹೇಗಿರು ವುದಿಲ್ಲವೋ ಹಾಗೆ ಯಾವನು ನಿನ್ನನ್ನು ಬಿಟ್ಟು ಒಂದು ಕ್ಷಣಕಾಲದವ ರೆಗೂ ಇರಲಾರನೋ ಅಂಥವನು-ನಾನು ಬಹು ಕಾಲದ ವರೆಗೆ ಹೇಗಿರು ವೆನು ? ॥ ೪ ॥ ಮಿತ್ರನೆ ! ಶುದ್ಧಸಮ್ಯಕ್ತ್ವಶಾಲಿಯಾದ ಮನುಷ್ಯನು ಮುಕ್ತಿದಾಯಕವಾದ ಧರ್ಮವನ್ನು ಹುಡುಕುವಂತೆ ನಾನು ನಿನ್ನನ್ನು ಪ್ರಯ ತ್ನದಿಂದ ಎಲ್ಲಾ ಕಡೆಗಳಲ್ಲಿಯೂ ಹುಡುಕಿದೆನು ॥ ೫ ॥ ತೋಟದಲ್ಲಿಯೂ

ನಗರದಲ್ಲಿಯೂ ಮೇಲ್ಮನೆಯಲ್ಲಿಯೂ ಅರಮನೆಯ ಅಂಗಣದಲ್ಲಿಯೂ ಎಲ್ಲಾ ಜಿನಮಂದಿರಗಳಲ್ಲಿಯೂ ನಿನ್ನನ್ನು ಕಾಣಲಿಲ್ಲ ॥ ೬ ॥ ಆಗ ಖಿನ್ನಮನಸ್ಕನಾಗಿ ತಾತನನ್ನು ಕೇಳಿದನು. ಇಷ್ಟವಸ್ತುವಿನ ಸಮಾಗಮವನ್ನಿಚ್ಛಿಸುವ ಮನುಷ್ಯನು ಎಲ್ಲವನ್ನೂ ಮಾಡುತ್ತಾನೆ ॥ ೭ ॥ ನಿನ್ನ ಸಮಾಚಾರವನ್ನು ಎಲ್ಲಿಯೂ ಪಡೆಯದವನಾಗಿ ಇಲ್ಲಿಗೆ ಬಂದು ದೈವಯೋಗದಿಂದ ನಿನ್ನನ್ನು ಕಂಡೆನು ॥ ೮ ॥ ಸಂಯಮಿ.ಯತಿಯು ಸಂತೋಷವನ್ನು ಬಿಟ್ಟು ತಿರುಗುವಂತೆ, ನಿನ್ನ ವಿಯೋಗವನ್ನು ಸಹಿಸದಿರುವವನೂ ಮಿತ್ರನೂ ಸಂತೋಷವನ್ನುಂಟು ಮಾಡುವುದರಲ್ಲಿ ಸಮರ್ಥನೂ ಆದ ನನ್ನನ್ನು ಬಿಟ್ಟು ಸ್ವೇಚ್ಛೆಯಾಗಿ ತಿರುಗುತ್ತಿಯೋ ? ॥ ೯ ॥ ಅಡ್ಡಲಾಗಿ ಮತ್ತು ಮೇಲೆ ಸಂಚರಿಸುವ ಗಾಳಿ ಬೆಂಕಿಗಳಂತಿರುವ ನಮಗೆ ವಿಯೋಗವಾದರೂ ಪ್ರಸಿದ್ಧಿಮಾತ್ರದಿಂದ ಸ್ನೇಹವಿರುವುದು. ಬೇರೆ ಬೇರೆಯಿದ್ದರೂ ಸ್ನೇಹಿತರೆಂಬ ಪ್ರಸಿದ್ಧಿಯಿದೆಯೆಂದು ಭಾವವು ॥ ೧೦ ॥ ಶರೀರಕ್ಕೂ ಆತ್ಮನಿಗೂ ಸಂಬಂಧವಿರುವಂತೆ ಹುಟ್ಟಿದಂದಿನಿಂದ ಸಾಯುವವರೆಗೂ ಎಲ್ಲಿಯೂ ವಿಯೋಗವಿಲ್ಲದವರ ಸಂಬಂಧವು ಉತ್ತಮವಾದುದು ॥ ೧೧ ॥ ಉಷ್ಣ ಕಿರಣನಾದ ಸೂರ್ಯನಿಗೂ ಶೀತಕಿರಣನಾದ ಚಂದ್ರನಿಗೂ ದರ್ಶ-ಸೂರ್ಯೇಂದು ಸಂಗಮವಾಗುವಂತೆ ತಿಂಗಳಿಗೊಂದು ಸಲ ಸೇರುವವರ ಸಂಬಂಧ—ಪ್ರೀತಿಯು ಎಂತಹದು ? ॥ ೧೨ ॥ ಆದುದರಿಂದ ಪ್ರಾಜ್ಞರು, ಚಿತ್ರದಲ್ಲಿರುವಂತೆ, ಎಂದೂ ಪರಾಧೀನನಾಗದಿರುವ ಮಿತ್ರನನ್ನೂ ಮನೋಹರಳಾದ ಪತ್ನಿಯನ್ನೂ ಪಡೆಯಬೇಕು ॥ ೧೩ ॥ ಹಗಲೂ ಸೂರ್ಯನೂ ಎಡೆಬಿಡದಿರುವಂತೆ ಯಾವಾಗಲೂ ಯಾರು ಎಡೆಬಿಡದಿರುತ್ತಾರೋ ಅವರ ಮೈತ್ರಿಯು ಪ್ರಶಂಸನೀಯವಾದದು ॥ ೧೪ ॥ ಚಂದ್ರನು ಕ್ಷಯಿಸಿದಾಗ ಸಮುದ್ರವು ಕುಗ್ಗುತ್ತದೆ ಚಂದ್ರನು ವೃದ್ಧಿಯಾದಾಗ ಸಮುದ್ರವು ಉಕ್ಕುತ್ತದೆ. ಅದರಂತೆ ಮಿತ್ರನ ಕ್ಷೀಣತೆಯಲ್ಲಿ ಕ್ಷೀಣತೆಯನ್ನೂ ವೃದ್ಧಿಯಲ್ಲಿ ವೃದ್ಧಿಯನ್ನೂ ಹೊಂದುವವರ ಮಿತ್ರತೆಯೇ ನಿಜವಾದ " ಮಿತ್ರತೆ ॥ ೧೫ ॥ ಪವನವೇಗನ ಮಾತುಗಳನ್ನು

ಕೇಳಿ ಬಳಿಕ ಮನೋವೇಗನು ಹೇಳುತ್ತಾನೆ " ಬಹುಬುದ್ಧಿಶಾಲಿಯಾದ ಪವನವೇಗನೆ ! ಕೋಪಿಸಿಕೊಳ್ಳಬೇಡ ನಾನು ಜಿನಪ್ರತಿಮೆಗಳನ್ನು ವಂದಿಸುವವನಾಗಿ ಮನುಷ್ಯಕ್ಷೇತ್ರದಲ್ಲಿ ತಿರುಗಿದೆನು ॥ ೧೬ ॥ ಎರಡುವರೆ ದ್ವೀಪಗಳಲ್ಲಿರುವುವೂ ಮನುಷ್ಯರಿಂದಲೂ ದೇವತೆಗಳಿಂದಲೂ ನಮಸ್ಕರಿಸಲ್ಪಟ್ಟಿರುವುವೂ ಆದ ಎಲ್ಲಾ ಕೃತ್ರಿಮಚೈತ್ಯಾಲಯಗಳನ್ನೂ ಅಕೃತ್ರಿಮಚೈತ್ಯಾಲಯಗಳನ್ನೂ ನಾನು ಭಕ್ತಿಯಿಂದ ಪೂಜಿಸಿ ವಂದಿಸಿ ಮತ್ತು ಸ್ತುತಿಸಿ ದು:ಖವನ್ನು ದೂರಮಾಡುವ ನಿರ್ಮಲವಾದ ಪುಣ್ಯವನ್ನು ಗಳಿಸಿದೆನು ॥ ೧೭-೧೮ ॥ ಸಾಧುವಿನ ಸಂಯಮವು ಅವನ ಹೃದಯವನ್ನು ಸಂತೋಷಪಡಿಸುವ ಪ್ರಶಮ (ಶಾಂತ) ಭಾವದೊಡನೆ ಎಡೆಬಿಡದಿರುವಂತೆ, ನಾನು ಒಂದು ಕಣಕಾಲವೂ ನಿನ್ನನ್ನು ಬಿಟ್ಟು ಎಂದೂ ಇರುವುದಿಲ್ಲ ॥ ೧೯ ॥ ಭರತಕ್ಷೇತ್ರದಲ್ಲಿ ತಿರುಗುತ್ತಿರುವ ನಾನು ಸ್ತ್ರೀಗೆ ತಿಲಕದಂತಿರುವುದೂ ಅನೇಕ ವರ್ಣಗಳುಳ್ಳದೂ ಬ್ರಾಹ್ಮಣಾದಿವರ್ಣಗಳುಳ್ಳುದೂ ಆದ ಪಾಟಲೀಪುತ್ರನಗರವನ್ನು ನೋಡಿದೆನು ॥ ೨೦ ॥ ಆ ನಗರದಲ್ಲಿ, ಭ್ರಮರಗಳ ಸಮೂಹದಂತೆ ಕಪ್ಪಾದ ಸ್ತ್ರೀಯ ಕೇಶಪಾಶದಂತೆ, ಆಕಾಶದಲ್ಲಿ ಪಸರಿಸುವ ಯಜ್ಞಧೂಮವು ಯಾವಾಗಲೂ ಕಾಣುತ್ತದೆ ॥ ೨೧ ॥ ಅಲ್ಲಿ ಆಕಾಶವನ್ನು ಕಿವುಡು ಮಾಡುತ್ತಿರುವ ನಾಲ್ಕು ವೇದಗಳ ಧ್ವನಿಯನ್ನು ಕೇಳಿ ಮೇಘಧ್ವನಿಯೆಂದು ಸಂದೇಹಪಡುತ್ತಿರುವ ನವಿಲುಗಳು ಕುಣಿಯುತ್ತವೆ ॥ ೨೨ ॥ ವೇದಗಳ ಅರ್ಥವನ್ನು ಪ್ರತಿಪಾದಿಸುವ ಸ್ಮೃತಿಗಳನ್ನು ವಸಿಷ್ಠ ವ್ಯಾಸ ವಾಲ್ಮೀಕಿ ಮನು ಬ್ರಹ್ಮ ಮೊದಲಾದವರು ರಚಿಸಿದರೆಂದು ಅಲ್ಲಿ ಹೇಳುತ್ತಾರೆ ॥ ೨೩ ॥ ಅಲ್ಲಿ ಶಾರದೆಯ ಪುತ್ರರೋ ಎಂಬಂತೆ ಕೈಯಲ್ಲಿ ಪುಸ್ತಕಗಳನ್ನು ಹಿಡಿದುಕೊಂಡು ಸುತ್ತಲೂ ಸಂಚರಿಸುವ ನಿಪುಣರಾದ ವಿದ್ಯಾರ್ಥಿಗಳು ದೃಷ್ಟಿಗೋಚರವಾಗುತ್ತಾರೆ ॥ ೨೪ ॥ ಅಲ್ಲಿ ಭಟರು ಕ್ಷೋಭೆಯಿಲ್ಲದವರಾಗಿ ಬಾಣಗಳಿಂದ ಯುದ್ಧವನ್ನು ಮಾಡುವಂತೆ, ವಾದಿಗಳು ಮರ್ಮವನ್ನು ಭೇದಿಸುವ ವಚನಗಳಿಂದ ಪರಸ್ಪರವಾಗಿ ವಾದವನ್ನು ಮಾಡುತ್ತಾರೆ ॥ ೨೫ ॥ ಮನೋಹರಗಳಾದ ಪದ್ಮಸರೋವರ

ಗಳು ಭ್ರಮರಗಳಿಂದ ಮುತ್ತಲ್ಪಡುವಂತೆ, ಅಲ್ಲಿ ಮಧುರಭಾಷಿಗಳಾದ ಶಿಷ್ಯರು ಎಲ್ಲಾ ಕಡೆಯಲ್ಲಿಯೂ ವಿದ್ವಾಂಸರುಗಳನ್ನು ಆವರಿಸಿಕೊಂಡಿರುತ್ತಾರೆ ॥ ೨೬ ॥ ಅಲ್ಲಿ ಗಂಗಾನದೀತೀರದಲ್ಲಿ ತಲೆಬೋಳಿಸಿಕೊಂಡು ಧ್ಯಾನಾಧ್ಯಯನನಿಷ್ಠರಾದ ಸನ್ಯಾಸಿಗಳು ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತಿದ್ದಾರೆ ॥ ೨೭ ॥ ವಾದವನ್ನು ಮಾಡಬೇಕೆಂಬ ಕೆಚ್ಚಿನಿಂದ ಬರುವ ಬೇರೆ ವಾದಿಗಳು ಅಲ್ಲಿ ಶಾಸ್ತ್ರನಿಶ್ಚಯವನ್ನು ಮಾಡುವ ವಾದವೆಂಬ ನದಿಯನ್ನು ನೋಡಿ ಶೀಘ್ರವಾಗಿ ಓಡಿಹೋಗುತ್ತಾರೆ ॥ ೨೮ ॥ ಅಲ್ಲಿ ದೇಹಧಾರಿಗಳಾದ ವೇದಗಳೋ ಎಂಬಂತೆ ಅಗ್ನಿಹೋತ್ರಾದಿ ಕರ್ಮಗಳನ್ನು ಮಾಡುವವರೂ ಸಮರ್ಥರೂ ಆದ ಅನೇಕ ಬ್ರಾಹ್ಮಣರು ವಾಸಮಾಡುತ್ತಾರೆ ॥ ೨೯ ॥ ಅಲ್ಲಿ ಶಾರದೆಯ ವಿಭ್ರಮ-ವಿಲಾಸಗಳೋ ಎಂಬಂತೆ ಬ್ರಾಹ್ಮಣರು ಎಲ್ಲಾ ಕಡೆಗಳಲ್ಲಿಯೂ ಯಾವಾಗಲೂ ಮೀಮಾಂಸಾಶಾಸ್ತ್ರಗಳನ್ನು ವಿಚಾರಮಾಡುತ್ತಾರೆ ॥ ೩೦ ॥ ದುಃಖವೆಂಬ ಸೌದೆಗೆ ಬೆಂಕಿಯಂತಿರುವ ಧರ್ಮವನ್ನು ಪ್ರಚಾರಮಾಡುವುದಕ್ಕೋಸ್ಕರ ಅಲ್ಲಿ ಸಾವಿರಾರು ಬ್ರಾಹ್ಮಣರು ಅಷ್ಟಾದಶ ಪುರಾಣಗಳನ್ನೂ ವ್ಯಾಖ್ಯಾನಮಾಡುತ್ತಾರೆ ॥ ೩೧ ॥ ತರ್ಕವನ್ನೂ ವ್ಯಾಕರಣವನ್ನೂ ಕಾವ್ಯವನ್ನೂ ನೀತಿಶಾಸ್ತ್ರವನ್ನೂ ಆಗಾಗ್ಗೆ ಉಪನ್ಯಾಸ ಮಾಡುವವರಿಂದ ಆ ನಗರವು, ಸರಸ್ವತೀದೇವಿಯ ಮಂದಿರವೋ ಎಂಬಂತೆ, ವ್ಯಾಪ್ತವಾಗಿದೆ ॥ ೩೨ ॥ ಎಲೈ ಮಂಗಳಾಂಗನೆ ! ಆ ನಗರವನ್ನು ಸುತ್ತಲೂ ನೋಡುತ್ತಿದ್ದ ನನಗೆ ಬಹಳ ಸಮಯವು ಕಳೆಯಿತು. ತಲ್ಲೀನವಾದ ಮನಸ್ಸಿಗೆ ಕಾಲವು ಕಳೆದುಹೋದುದು ಗೊತ್ತಾಗುವುದಿಲ್ಲ ॥ ೩೩ ॥ ಆಶ್ಚರ್ಯಕ್ಕೆ ಸ್ಥಾನವಾಗಿರುವ ಆ ನಗರದಲ್ಲಿ ನಾನು ನೋಡಿದ ಆಶ್ಚರ್ಯವನ್ನು ಏನು ಹೇಳಲಿ ? ಮುಖ್ಯವಾಗಿ ಮಾತುಗಳಿಂದ ಅದನ್ನು ಹೇಳುವುದಕ್ಕಾಗುವುದಿಲ್ಲ ॥ ೩೪ ॥ ಶರೀರಧಾರಿಗಳು ಇಂದ್ರಿಯಗಳಿಂದ ಅನುಭವಿಸುವ ವಿಷಯಗಳನ್ನು ಸರಸ್ವತಿಯೂ ವಚನಗಳಿಂದ ಹೇಳಲಾರಳು ॥ ೩೫ ॥ ಎಲೈ ಮಂಗಳಾಂಗನೆ ! ಧರ್ಮವನ್ನು ಬಿಟ್ಟಿರುವಂತೆ ನಿನ್ನನ್ನು ಬಿಟ್ಟು ನಾನು ಆ ನಗರದಲ್ಲಿ ಬಹಳ ಸಮಯದವ

ರೆಗೆ ಇದ್ದೆನು. ಅವಿನೀತನಾದ ನನ್ನ ಆ ತಪ್ಪನ್ನೆಲ್ಲ ನೀನು ಕ್ಷಮಿಸ ಬೇಕು" ॥ ೩೬ ॥ ಮನೋವೇಗನ ಈ ಮಾತುಗಳನ್ನು ಕೇಳಿ ಪವನವೇಗನು ನಕ್ಕು ಶುದ್ಧ ಮನಸ್ಸಿನಿಂದ "ಲೋಕದಲ್ಲಿ ವಶವರ್ತಿಗಳಾದ ಧೂರ್ತರಿಂದ ಯಾವ ಧೂರ್ತನು ವಂಚಿಸಲ್ಪಡುವುದಿಲ್ಲ ? ಮಿತ್ರನೆ ! ನೀನು ನೋಡಿದ ಕೌತುಕವನ್ನು ನನಗೂ ತೋರಿಸು. ಸಜ್ಜನರು ಸುಖವನ್ನು ಇತರರಿಗೆ ವಿಭಾಗಿಸಿಕೊಡದೆ ತಾವು ಅನುಭವಿಸುವುದಿಲ್ಲ ॥ ೩೭-೩೮ ॥ ಮಿತ್ರನೇ ! ಮತ್ತೊಂದುಸಲ ಹೋಗೋಣ, ಬಾ. ಆ ಸೌಖ್ಯವನ್ನು ಹೊಂದಲು ನನಗೆ ಕುತೂಹಲವುಂಟಾಗಿರುವುದು. ಸ್ನೇಹಿತರು ಸ್ನೇಹಿತರ ಪ್ರಾರ್ಥನೆಯನ್ನು ನಿರರ್ಥಕವಾಗಿ ಮಾಡುವುದಿಲ್ಲವಷ್ಟೆ" ಎಂದನು ॥ ೩೯ ॥ ಪವನವೇಗನ ಈ ಮಾತುಗಳನ್ನು ಕೇಳಿ ಮನೋವೇಗನು "ಮಿತ್ರನೆ! ಹೋಗೋಣ. ಸ್ಥೈರ್ಯವನ್ನು ಹೊಂದು. ಅತ್ತಿಯ ಕಾಯಿಯು ಅವಸರಕ್ಕೆ ಹಣ್ಣಾಗುವುದಿಲ್ಲ ॥ ೪೦ ॥ ಭೋಜನವನ್ನು ತೀರಿಸಿಕೊಂಡು ನಿರಾಕುಲರಾಗಿ ಬೆಳಿಗ್ಗೆ ಹೋಗೋಣ. ಹಸಿವಿನಿಂದ ಬಳಲಿದವರ ಕುತೂಹಲವು ಓಡಿ ಹೋಗುವುದು" ಎಂದು ಹೇಳಿದನು ॥ ೪೧ ॥ ಬಳಿಕ ಅವರೀರ್ವರೂ ಸೇರಿ ಸಂತುಷ್ಟರಾಗಿ, ಸುಂದರವೂ ಪ್ರಕಾಶಮಾನವೂ ಆದ ಶೋಭೆಯುಳ್ಳ ನಯು ಮತ್ತು ಉತ್ಸಾಹಗಳೋ ಎಂಬಂತೆ, ಜೊತೆಯಾಗಿ ತಮ್ಮ ಮನೆಗೆ ಹೊರಟುಹೋದರು ॥ ೪೨ ॥ ಅಲ್ಲಿ ಮಲಗುವಾಗಲೂ ಭೋಜನಮಾಡುವಾಗಲೂ ಜೊತೆಯಾಗಿದ್ದರು. ಮಿತ್ರತೆಯಿಂದ ವ್ಯಾಪ್ತವಾದ ಮನಸ್ಸುಳ್ಳವರು ವಿಯೋಗವನ್ನು ಸಹಿಸುವುದೇ ಇಲ್ಲ ॥ ೪೩ ॥

ಮರುದಿವಸ ಬೆಳಿಗ್ಗೆ, ಸುಂದರವಾದ ಆಕಾರವುಳ್ಳವರೂ ದಿವ್ಯಾಭರಣಗಳಿಂದ ಶೋಭಿತರೂ ಆದ ಇಬ್ಬರು ದೇವತೆಗಳಂತೆ, ಆ ಮನೋವೇಗ ಪವನವೇಗರು ಇಚ್ಛಿತಸ್ಥಳವನ್ನು ಕುರಿತು ಹೋಗುವ ವಿಮಾನವನ್ನೇರಿ ಹೊರಟರು ॥ ೪೪ ॥ ತರುವಾಯ ಅವರು ವಿವಿಧಾಶ್ಚರ್ಯಗಳಿಂದ ವ್ಯಾಪ್ತವೂ ಪವಿತ್ರವೂ ಆದ ಪುಷ್ಪ (ಪಾಟಲೀಪುತ್ರ) ನಗರವನ್ನು, ಇಷ್ಟಾರ್ಥವನ್ನು

ಮನಸ್ಸಿನಿಂದ ಹೊಂದುವಂತೆ, ಶೀಘ್ರವಾಗಿ ಹೊಂದಿದರು ॥ ೪೫ ॥ ನಂದನ ವನಕ್ಕೆ ಈರ್ವರು ದೇವತೆಗಳು ಇಳಿಯುವಂತೆ, ಆ ಮನೋವೇಗ ಪವ ನವೇಗರು ಅನೇಕ ವೃಕ್ಷಗಳಿಂದ ವ್ಯಾಪ್ತವೂ ಇಚ್ಛಿಸಿದ ಫಲಗಳನ್ನು ಕೊಡು ವುದೂ ಆದ ಆ ಪುಷ್ಪನಗರೋದ್ಯಾನಕ್ಕೆ ಇಳಿದರು ॥ ೪೬ ॥ ಅಲ್ಲಿ ಗೊಂಚ ಲುಗಳೆಂಬ ಕುಚಗಳಿಂದ ಬಗ್ಗಿದ ಬಳ್ಳಿಗಳಿಂದ ಸುತ್ತಲ್ಪಟ್ಟ ಮರಗಳು, ಮನೋಹರಸ್ತ್ರೀಯರಿಂದ ಸುತ್ತಲ್ಪಟ್ಟ ಕಾಮುಕರಂತೆ, ಎಲ್ಲಾ ಕಡೆಗಳ ಲ್ಲಿಯೂ ಶೋಭಿಸುತ್ತವೆ ॥ ೪೭ ॥ ಅಲ್ಲಿ ಮನೋವೇಗನು ಪವನವೇಗನನ್ನು ಕುರಿತು " ಮಿತ್ರನೆ ! ನೀನು ನನ್ನ ಮಾತನ್ನು ನಡೆಸಿದರೆ ಆಗ ನಾನು ನಿನ್ನ ಕುತೂಹಲವನ್ನು ಪೂರ್ತಿಮಾಡುವೆನು " ಎಂದನು ॥ ೪೮ ॥ ಅವನ ಮಾತನ್ನು ಕೇಳಿ ಬಳಿಕ ಪವನವೇಗನೂ " ಮಹಾಮತಿಯೇ ! ನಿನ್ನ ಮಾತನ್ನು ನಡೆಸುವೆನು. ಆ ವಿಷಯದಲ್ಲಿ ಸಂದೇಹಪಡಬೇಡ. ಮಿತ್ರ ನಾದ ನಿನ್ನ ಮಾತನ್ನೆಲ್ಲ ನಾನು ನಡೆಸುವೆನೆಂಬುದು ನಿಶ್ಚಯ. ಸ್ನೇಹಿ ತನೆ ! ಒಬ್ಬರಿಗೊಬ್ಬರು ವಂಚನೆಯನ್ನು ಮಾಡಿದರೆ ಅದೆಂತಹ ಮಿತ್ರತೆ ? " ॥ ೪೯-೫೦ ॥ ಸ್ನೇಹಿತನ ಈ ಮಾತನ್ನು ಕೇಳಿ ಆ ಮನೊವೇ ಗನು " ಜಿನರು ಹೇಳಿದಂತೆ ಈ ಮನುಷ್ಯನು ಸಮ್ಯಗ್ದೃಷ್ಟಿಯಾಗುವನು " ಎಂದು ಯೋಚಿಸಿದನು ॥ ೫೧ ॥ ಆ ಮೇಲೆ ಅವನು ಸಂತುಷ್ಟವಾದ ಮನ ಸ್ಸುಳ್ಳವನಾಗಿ ಪವನವೇಗನನ್ನು ಕುರಿತು " ಮಿತ್ರನೆ ! ಹಾಗಾದರೆ ಪಟ್ಟ ಣಕ್ಕೆ ಪ್ರವೇಶಮಾಡೋಣ " ಎಂದನು ॥ ೫೨ ॥ ಅನಂತರದಲ್ಲಿ ನಾನಾವಿಧ ವಾದ ಅಲಂಕಾರಗಳನ್ನು ಧರಿಸಿರುವ ಆ ಮನೋವೇಗ ಪವನವೇಗರು ಹುಲ್ಲು ಸೌದೆಗಳನ್ನು ಹೊತ್ತುಕೊಂಡು ವಿನೋದವಾಗಿ ಪಟ್ಟಣದ ಮಧ್ಯದಲ್ಲಿ ಹೊಕ್ಕರು ॥ ೫೩ ॥ ಅಂತಹ ವೇಷದಲ್ಲಿರುವ ಅವರೀರ್ವರನ್ನು ನೋಡಿ ಜನ ಗಳು ಆಶ್ಚರ್ಯವನ್ನು ಹೊಂದಿದರು. ಪೃಥ್ವಿಯಲ್ಲಿ ಮೊದಲು ನೋಡದಿರು ವುದನ್ನು ನೋಡಿದರೆ ಯಾರು ತಾನೆ ಆಶ್ಚರ್ಯಪಡುವುದಿಲ್ಲ ? ॥ ೫೪ ॥ ಪಟ್ಟಣದಲ್ಲೆಲ್ಲ ತಿರುಗುವ ಆ ಮನೋವೇಗ ಪವನವೇಗರನ್ನು, ಶಬ್ದಮಾಡು

ತ್ತಿರುವ ನೊಣಗಳ ಸಮೂಹಗಳು ಬೆಲ್ಲದ ರಾಶಿಗಳನ್ನು ಮುತ್ತುವಂತೆ, ಪ್ರೇಕ್ಷಕಜನರು ಮುತ್ತಿದರು || ೫೫ || ಅಲ್ಲಿ ಕೆಲವು ಮನುಷ್ಯರು " ಅಹಾ ! ನೋಡಿರಿ, ಆಭರಣಗಳನ್ನು ಧರಿಸಿರುವವರೂ ಸುಂದರವಾದ ಆಕಾರವುಳ್ಳವರೂ ಆದ ಇವರು ಹುಲ್ಲು ಸೌದೆಗಳನ್ನು ಹೇಗೆ ಹೊತ್ತುಕೊಂಡಿದ್ದಾರೆ ? " ಎಂದರು || ೫೬ || ಬೇರೆ ಕೆಲವರು " ಈ ಮನುಷ್ಯರು ಹೆಚ್ಚು ಬೆಲೆ ಬಾಳುವ ತಮ್ಮ ಆಭರಣಗಳನ್ನು ಮಾರಿ ಸುಖದಿಂದೇಕಿರುವುದಿಲ್ಲ ? " ಎಂದು ಮಾತನಾಡಿಕೊಂಡರು || ೫೭ || ಮತ್ತೆ ಕೆಲವರು " ಅಹಾ ! ಇವರು ಹುಲ್ಲು ಸೌದೆಯವರಲ್ಲ ಇವರು ನಿಜವಾಗಿ ದೇವತೆಗಳು ಅಥವಾ ವಿದ್ಯಾಧರರು ಎಲ್ಲಿಯೋ ಸುತ್ತಾಡುತ್ತಿದ್ದಾರೆ " ಎಂದರು || ೫೮ || ಇನ್ನು ಕೆವಲರು ಉತ್ತಮರು " ಬೇರೆಯವರ ಚಿಂತೆಯಿಂದೇನು ಕೆಲಸ ? ಬೇರೆಯವರ ಚಿಂತೆಯಲ್ಲಿ ಆಸಕ್ತರಾಗಿರುವವರಿಗೆ ಪಾಪಕ್ಕಿಂತ ಬೇರೇನೂ ಪ್ರಯೋಜನವಿಲ್ಲ " ಎಂದು ಮಾತಾಡಿಕೊಂಡರು || ೫೯ || ಪ್ರಕಾಶಮಾನವಾದ ಕಾಂತಿಯುಳ್ಳ ಆ ಮನೋವೇಗ ಪವನವೇಗರನ್ನು ನೋಡಿ ಕಾಮಪರವಶರಾದ ಪರಸ್ತ್ರೀಯರು ಬೇರೆ ಕೆಲಸಗಳನ್ನು ಬಿಟ್ಟು ಕಳವಳವನ್ನು ಹೊಂದಿದರು || ೬೦ || " ಮನಸಿಜನೊಬ್ಬನೆಂಬ ಪ್ರಸಿದ್ಧಿಯನ್ನು ಎರಡಾಗಿರುವ ಕಾಮನು ನಿಜವಾಗಿಯೂ ಹೋಗಲಾಡಿಸುತ್ತಾನೆ " ಹೀಗೆಂದು ಕೆಲವು ಸ್ತ್ರೀಯರು ಮಾತನಾಡುತ್ತಾರೆ || ೬೧ || " ಅಸಾಧಾರಣವಾದ ಸಂಪತ್ತಿಯುಳ್ಳವರೂ ಸುಂದರರೂ ಆದ ಇಂತಹವರು ಬೇರೆಯವರಾರೂ ಹುಲ್ಲುಸೌದೆ ಮಾರುವುದನ್ನು ನಾನು ನೋಡಿಲ್ಲ " ಎಂದು ಬೇರೋರ್ವಳು ಹೇಳಿದಳು || ೬೨ || ಕಾಮಪೀಡಿತಳಾದ ಮತ್ತೋರ್ವಳು ಅವರೊಡನೆ ಮಾತನಾಡಬೇಕೆಂಬ ಇಚ್ಛೆಯುಳ್ಳವಳಾಗಿ ತನ್ನ ಗೆಳತಿಯನ್ನು ಕುರಿತು " ಸಖಿಯೇ ! ಆ ಸೌದೆ ಮಾರುವವರನ್ನು ಶೀಘ್ರವಾಗಿ ಇಲ್ಲಿಗೆ ಕರೆ. ನಿಜವಾಗಿಯೂ ಎಷ್ಟಕ್ಕೆ ಕೊಡುತ್ತಾರೋ ಅಷ್ಟಕ್ಕೆ ಹುಲ್ಲನ್ನೂ ಸೌದೆಯನ್ನೂ ಕೊಂಡುಕೊಳ್ಳುತ್ತೇನೆ " ಎಂದಳು. ಇಷ್ಟಜನರಿಂದ ಪದಾರ್ಥವು ಪ್ರಾಪ್ತವಾದರೆ ದುಡ್ಡಿನ ಲೆಕ್ಕವಿಲ್ಲವಷ್ಟೆ || ೬೩-೬೪ ||

ಇವೇ ಮೊದಲಾದ ಜನರ ಮಾತುಗಳನ್ನು ಕೇಳುವವರೂ ಮನೋಹರವಾದ ದೇಹವುಳ್ಳವರೂ ಆದ ಈ ಮನೋವೇಗ ಪವನವೇಗರು ಸುವರ್ಣಪೀಠವುಳ್ಳ ಬ್ರಹ್ಮ-ವೇದಶಾಲೆಯನ್ನು ಹೊಂದಿದರು ‖ ೬೫ ‖ ಅಲ್ಲಿ ಹುಲ್ಲು ಸೌದೆಗಳನ್ನು ಬಿಟ್ಟು ಶೀಘ್ರವಾಗಿ ಭೇರಿಯನ್ನು ಹೊಡೆದು ಇವರು, ಸಿಂಹಗಳಂತೆ, ನಿರ್ಭಯರಾಗಿ ಸುವರ್ಣಪೀಠವನ್ನೇರಿದರು ‖ ೬೬ ‖ ಆ ಭೇರಿಯ ಶಬ್ದವನ್ನು ಕೇಳಿ ವಾದೇಚ್ಛೆಯುಳ್ಳ ದ್ವಿಜರೆಲ್ಲರೂ "ಎಲ್ಲಿಂದ? ಇಲ್ಲಿ ವಾದಿ ಯಾರು ಬಂದಿದ್ದಾನೆ?" ಎಂದು ಹೇಳುವವರಾಗಿ ಕಳವಳಗೊಂಡರು ‖ ೬೭ ‖ ಯಾವಾಗಲೂ ವಿದ್ಯಾಗರ್ವವೆಂಬ ಬೆಂಕಿಯಿಂದ ದಹಿಸಿರುವ ಬ್ರಾಹ್ಮಣರು ಶೀಘ್ರವಾಗಿ ಪರವಾದಿಯನ್ನು ಜಯಿಸಬೇಕೆಂಬ ಇಚ್ಛೆಯಿಂದ ಹೊರಟರು ‖ ೬೮ ‖ ಅಲ್ಲಿ ಕೆಲವರು "ನನ್ನನ್ನೂ ತರ್ಕಶಾಸ್ತ್ರದಲ್ಲಿ ವಾದಗಳಿಂದ ಜಯಿಸಿ ಯಾವನಾದರೂ ಹೋಗುತ್ತಾನೋ? ಬೇರೆಯವರು ಜಯಿಸುವುದಕ್ಕೆ ಕಷ್ಟವಾದ ಅನೇಕ ವಾದಗಳನ್ನು ನೀವು ಜಯಿಸಿದ್ದೀರಿ. ನೀವು ಮೌನದಿಂದಿರಿ. ನಾವು ವಾದ ಮಾಡುತ್ತೇವೆ ‖ ೬೯-೭೦ ‖ ಪಠನಶ್ರಮವನ್ನು ಮಾಡುತ್ತಿರುವ ನಮ್ಮ ಕಾಲವು ಹೀಗೆಯೇ ಕಳೆಯಿತು" ಎಂದು ಅಲ್ಲಿ ಜ್ಞಾನಮದೋದ್ಧತರಾದ ಬೇರೆ ವಿಪ್ರರು ಹೇಳಿದರು ‖ ೭೧ ‖ ಅಲ್ಲಿ ಮತ್ತೆ ಕೆಲವರು "ನಾವು ವಾದವೆಂಬ ವೃಕ್ಷದಿಂದ ಯಶಸ್ಸೆಂಬ ಫಲವನ್ನು ಪರಾಪಜಯವೆಂಬ ಕೋಲಿನಿಂದ ಕೆಡವಿ ಸ್ವೀಕರಿಸುತ್ತೇವೆ" ಎಂದು ಹೇಳಿದರು ‖ ೭೨ ‖ ಇವೇ ಮೊದಲಾದ ವಾಕ್ಯಗಳನ್ನು ನುಡಿಯುವ ಬ್ರಾಹ್ಮಣೋತ್ತಮರು ವಾದವೆಂಬ ನವೆಯಿಂದ ಕೂಡಿದವರಾಗಿ ಬ್ರಹ್ಮಶಾಲೆಯನ್ನು ಹೊಂದಿದರು ‖ ೭೩ ‖ ಹಾರ ಕಂಕಣ ಬಾಹುಪುರಿ ಶ್ರೀವತ್ಸ ಕಿರೀಟ ಮೊದಲಾದ ಆಭರಣಗಳಿಂದ ಅಲಂಕೃತನಾದ ಮನೋವೇಗನನ್ನು ನೋಡಿ ಅವರು ಆಶ್ಚರ್ಯವನ್ನು ಹೊಂದಿದರು ‖ ೭೪ ‖ "ನಿಜವಾಗಿಯೂ ಈ ವಿಷ್ಣುವು ಬ್ರಾಹ್ಮಣರನ್ನು ಅನುಗ್ರಹಿಸಬೇಕೆಂಬ ಇಚ್ಛೆಯಿಂದ ಬಂದಿದ್ದಾನೆ. ಶರೀರದಲ್ಲಿರುವ ಇಂತಹ

ಮನೋಹರವಾದ ಶೋಭೆಯು ಬೇರೆಯವನಿಗಿಲ್ಲ" ॥ ೭೫ ॥ ಈ ರೀತಿ ಯಾಗಿ ಹೇಳಿ ಭಕ್ತಿಭಾವದಿಂದ ಪರವಶರಾಗಿ ನಮಸ್ಕರಿಸಿದರು. ಬುದ್ಧಿ ಭ್ರಮೆಯುಳ್ಳವರು ಒಳ್ಳೆಯ ಕೆಲಸವನ್ನು ಯಾವಾಗ ಮಾಡುತ್ತಾರೆ? ॥ ೭೬ ॥ ಅಲ್ಲಿ ಕೆಲವರು "ನಿಜವಾಗಿಯೂ ಇವನು ರುದ್ರನು. ಬೇರೆಯವ ನಿಗೆ ಜಗದಾನಂದಕರವಾದ ಇಂತಹ ಕಾಂತಿಯಿರುವುದಿಲ್ಲ" ಎಂದು ಮಾತ ನಾಡಿದರು ॥ ೭೭ ॥ "ಈ ಶಂಭುವು ತನ್ನ ಮೂರನೆಯ ನೇತ್ರವನ್ನು ಸಂಕೋಚಮಾಡಿಕೊಂಡು ಭೂಮಿಯನ್ನು ನೋಡುವುದಕ್ಕೋಸ್ಕರ ಬಂದಿ ದ್ದಾನೆ. ಬೇರೆಯವನಿಗೆ ಇಂತಹ ರೂಪವಿರುವುದಿಲ್ಲ" ಎಂದು ಬೇರೆಯ ವರು ಹೇಳಿದರು ॥ ೭೮ ॥ 'ಇವನು ಬಹಳ ಉದ್ಧತನಾದ ಯಾವನೋ ವಿದ್ಯಾಧರನು ಭೂತಲವನ್ನು ನೋಡಿ ನಾನಾಕ್ರೀಡೆಯನ್ನು ಮಾಡು ತ್ತಾನೆ" ಎಂದು ಇತರರು ಹೇಳಿದರು ॥ ೭೯ ॥ ಅವರು ಈ ರೀತಿಯಾಗಿ ಆಲೋಚಿಸುವವರಾದರೂ, ಅಣುವಿನ ನಾನಾರೂಪವನ್ನೋಪಾದಿಯಲ್ಲಿ, ಪ್ರಭೆಯಿಂದ ದಿಕ್ಕುಗಳನ್ನು ವ್ಯಾಪಿಸಿರುವ ಆ ಮನೋವೇಗನ ನಿಶ್ಚಯವನ್ನು ಮಾಡಲಿಲ್ಲ. ಮನೋವೇಗನು ಇಂಥವನೆಂದು ನಿಶ್ಚಯಿಸಲಾರದೆ ಹೋದ ರೆಂದು ಭಾವವು ॥ ೮೦ ॥ ಆಗ ಒಬ್ಬಾನೊಬ್ಬ ವಿದ್ವಾಂಸನು "ನಿಶ್ಚಯ ವಾದ ಅರ್ಥವನ್ನು ಇವನನ್ನೇ ಕೇಳಿ. ಕೈಯಲ್ಲಿರುವ ಕನ್ನಡಿಯಲ್ಲಿ ಕಂಕಣ ವಿದ್ದರೂ ಪ್ರಾಜ್ಞರು ಅದನ್ನು ಪ್ರೀತಿಸುವುದಿಲ್ಲ ॥ ೮೧ ॥ ಇವನು ವಾದಿ ಯನ್ನು ಜಯಿಸಬೇಕೆಂಬ ಮನಸ್ಸುಳ್ಳವನಾಗಿ ಬಂದಿದ್ದರೆ ಆಗ ಸರ್ವಶಾಸ್ತ್ರ ಗಳ ನಿಜವಾದ ಅರ್ಥವನ್ನು ತಿಳಿದಿರುವ ನಾವುಗಳು ಇವನೊಡನೆ ವಾದ ವನ್ನು ಮಾಡೋಣ ॥ ೮೨ ॥ ವಿದ್ವಾಂಸರಿಂದ ತುಂಬಿರುವ ಈ ನಗರದಲ್ಲಿ ಷಡ್ದರ್ಶನಗಳಲ್ಲಿ ನಿಜವಾಗಿ ನಾವು ತಿಳಿಯದಿರುವ ದರ್ಶನವಾವುದಿದೆ? ಕುತ್ಸಿತಬುದ್ಧಿಯುಳ್ಳ ಇವನೇನು ಹೇಳುವನು?" ಎಂದು ಹೇಳಿದನು ॥ ೮೩ ॥ ಈ ರೀತಿಯಾಗಿ ಆ ವಿದ್ವಾಂಸನ ಮಾತನ್ನು ಕೇಳಿ ಒಬ್ಬಾನೊಬ್ಬ ಬ್ರಾಹ್ಮ ಣನು ಬಂದು ಮನೋವೇಗನನ್ನು ಕುರಿತು "ನೀನು ಯಾರು? ವಿರುದ್ಧ

ಹೇತುವುಳ್ಳ ನೀನು ಇಲ್ಲಿಗೇತಕ್ಕೋಸ್ಕರ ಬಂದೆ? ಹೇಳು" ಎಂದನು. ॥ ೮೪ ॥ ವಿದ್ಯಾಧರರಾಜಪುತ್ರನಾದ ಮನೋವೇಗನು ಬಳಿಕ ಆ ಬ್ರಾಹ್ಮಣನನ್ನು ಕುರಿತು "ಎಲೈ ಮಂಗಳಾಂಗನೆ! ಬಡವನ ಮಗನಾದ ನಾನು ಈ ದೊಡ್ಡ ಪಟ್ಟಣದಲ್ಲಿ ಹುಲ್ಲುಸೌದೆಯನ್ನು ಮಾರುವುದಕ್ಕೋಸ್ಕರ ಬಂದೆನು" ಎಂದನು ॥ ೮೫ ॥ ಅನಂತರದಲ್ಲಿ ಈ ಬ್ರಾಹ್ಮಣನು ಮನೋವೇಗನನ್ನು ಕುರಿತು "ಎಲೈ ಮಂಗಳಾಂಗನೆ! ನೀನು ವಾದವನ್ನು ಜಯಿಸದೆ ವಾದವನ್ನು ಸೂಚಿಸುವ ಭೇರಿಯನ್ನು ಶೀಘ್ರವಾಗಿ ಬಾರಿಸಿ ಪವಿತ್ರವಾದ ಪೀಠದಲ್ಲೇಕೆ ಕುಳಿತೆ? ॥ ೮೬ ॥ ವಾದಜಯದಲ್ಲಿ ಶಕ್ತಿಯಿದ್ದರೆ ಆಗ ನೀನು ನಿರ್ದುಷ್ಟವಾದ ಬುದ್ಧಿಯುಳ್ಳವರೂ ವಾದಿಗಳ ಅಹಂಕಾರವನ್ನು ಮುರಿಯುವವರೂ ದ್ವಿಜೋತ್ತಮರೂ ಆದ ಈ ವಿದ್ವಾಂಸರೊಡನೆ ವಾದವನ್ನು ಮಾಡು ॥ ೮೭ ॥ ಯಾವ ವಿದ್ವಾಂಸನೂ ವಾದಜಯದಿಂದುಂಟಾದ ಯಶಸ್ಸಿನಿಂದ ಭೂಷಿತನಾಗಿ ಈ ಪಟ್ಟಣದಿಂದ ಹೋಗುವುದಿಲ್ಲ. ಮೂರ್ಖನೆ! ಯಾವನು ಆದಿಶೇಷನ ಮಸ್ತಕದಲ್ಲಿರುವ ರತ್ನಕಾಂತಿಯಿಂದ ವ್ಯಾಪ್ತನಾಗಿ ನಾಗಭವನದಿಂದ ಬರುತ್ತಾನೆ? ॥ ೮೮ ॥ ದಿವ್ಯವಾದ ರತ್ನಾಭರಣಗಳುಳ್ಳ ನೀನು ಹುಲ್ಲು ಸೌದೆಯನ್ನು ಮಾರುತ್ತಿರುವುದರಿಂದ ವಾತರೋಗವುಳ್ಳವನಾಗಿರುತ್ತೀಯೋ? ಪಿಶಾಚಗ್ರಸ್ತನಾಗಿರುತ್ತೀಯೋ? ಯೌವನದಿಂದ ಮದೋನ್ಮತ್ತನಾಗಿರುತ್ತೀಯೋ? ॥ ೮೯ ॥ ಮೂರು ಲೋಕಗಳಲ್ಲಿ ಜನರ ಮನಸ್ಸನ್ನು ಮೋಹಗೊಳಿಸುವ ಉದ್ದಂಡಮನಸ್ಸಿನವರು ಬಹಳವಾಗಿದ್ದಾರೆ. ಆದರೆ ಇಲ್ಲಿ ವಿದ್ವಾಂಸರನ್ನು ಮೋಹಗೊಳಿಸುವ ನಿನ್ನಂತಹವನು ಕಾಣುವುದಿಲ್ಲ" ಎಂದು ಮಾತನಾಡಿದನು ॥ ೯೦ ॥ ತರುವಾಯ ಆ ವಿದ್ಯಾಧರನು "ವಿಪ್ರನೇ! ನಿಷ್ಫಲವಾಗಿ ಏತಕ್ಕೆ ಕೋಪಿಸಿಕೊಳ್ಳುವೆ? ಕಾರಣವಿಲ್ಲದೆ ಸರ್ಪವು ಕೋಪಗೊಳ್ಳುತ್ತದೆ. ವಿದ್ವಾಂಸನಾದರೋ ಕೋಪಗೊಳ್ಳುವುದಿಲ್ಲ ॥ ೯೧ ॥ ಎಲೈ ವಿಪ್ರನೆ! ಮನೋಹರವಾದ ಭಂಗಾರದ ಪೀಠವನು ನೋಡಿ ಕುತೂಹಲದಿಂದ ನಾನು ಕುಳಿತುಕೊಂಡೆನು. ಆಕಾಶದಲ್ಲಿ ಭೇರಿಯ

ಧ್ವನಿಯು ಎಷ್ಟುಂಟಾಗುತ್ತದೆಂದು ಮನಸ್ಸಿನಲ್ಲಿ ವಿಚಾರಮಾಡಿ ಭೇರಿಯನ್ನು ಬಾರಿಸಿದೆನು || ೯೨ || ಭಟ್ಟನೆ! ನಾವು ಹುಲ್ಲುಸೌದೆಗಳನ್ನು ಮಾರುವವರ ಮಕ್ಕಳು. ಶಾಸ್ತ್ರಮಾರ್ಗವನ್ನು ಸ್ವಲ್ಪವೂ ತಿಳಿಯುವುದಿಲ್ಲ. ವಾದವೆಂಬ ಹೆಸರನ್ನು ಬುದ್ಧಿಹೀನನಾದ ನಾನು ಈಗ ನಿನ್ನ ವಾಕ್ಯದಿಂದ ತಿಳಿದೆನು || ೯೩ || ನಿನ್ನ ಭಾರತಾದಿ ಕಥೆಗಳಲ್ಲಿ ಇಂತಹ ಪುರುಷರು ಅನೇಕರಿಲ್ಲವೇನು ? ಜಗತ್ತಿನಲ್ಲಿ ಜನವು ಬೇರೆಯವರ ದೂಷಣವನ್ನು ಮಾತ್ರ ನೋಡುವುದಲ್ಲದೆ ತನ್ನ ದೂಷಣವನ್ನು ನೋಡುವುದಿಲ್ಲ || ೯೪ || ನಾನು ಭಂಗಾರದ ಪೀಠದಲ್ಲಿರುವುದು ನಿನ್ನ ಮನಸ್ಸಿಗೆ ಸಮಾಧಾನವಿಲ್ಲದಿದ್ದರೆ ಶೀಘ್ರವಾಗಿ ಇಳಿಯುವೆನು" ಎಂದು ಹೇಳಿ ಅಪರಿಮಿತವಾದ ಗಮನ-ಜ್ಞಾನವುಳ್ಳವನೂ ಪ್ರಾಜ್ಞನೂ ಆದ ಆ ಖೇಚರನು ಆ ಪೀಠದಿಂದ ಇಳಿದನು || ೯೫ ||

ಇಂತು ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷಾಪ್ರಥಮಪರಿಚ್ಛೇದದ ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

—o—

ಅನಂತರದಲ್ಲಿ ಪೀಠದಿಂದಿಳಿದ ಮನೋವೇಗನನ್ನು ನೋಡಿ ದ್ವಿಜರಲ್ಲಿ ಮುಖ್ಯನಾದವನು "ನಾನು ರತ್ನಾಲಂಕೃತವಾದ ಹುಲ್ಲು ಮಾರುವವರನ್ನೂ ಸೌದೆಮಾರುವವರನ್ನೂ || ೧ || ಹುಲ್ಲು ಸೌದೆಗಳನ್ನು ಹೊತ್ತಿರುವವರೂ ರತ್ನಾಭರಣಗಳಿಂದ ಶೋಭಿಸುವವರೂ ಆದ ಸೇವಕರನ್ನೂ ಎಂದೂ ನೋಡಿಲ್ಲ" ಎಂದನು || ೧-೨ || ಆ ಮಾತನ್ನು ಕೇಳಿ ಮನೋವೇಗನು "ಭಾರತಾದಿಪುರಾಣಗಳಲ್ಲಿ ಇಂತಹ ಸಾವಿರಾರು ಮಂದಿಗಳಿದ್ದರೆಂದು ತಿಳಿದು ಬರುತ್ತದೆ. ಆದರೆ ನೀವುಗಳು ಆ ವಿಷಯಗಳನ್ನು ತಿಳಿದಿಲ್ಲ" ಎಂದನು || ೩ || ಆಗ ಆ ಬ್ರಾಹ್ಮಣನು "ರಾಮಾಯಣದಲ್ಲಾಗಲಿ ಭಾರತ

ದಲ್ಲಾಗಲಿ ಇಂಥವರನ್ನು ನೀನು ನೋಡಿದ್ದರೆ ಹೇಳು, ನಂಬುವೆವು" ಎಂದನು ‖ ೪ ‖ ಆ ಮಾತನ್ನು ಕೇಳಿ ಮನೋವೇಗನು "ವಿಪ್ರನೆ! ಹೇಳುವುದೇನೋ ಆಗುತ್ತೆ. ಆದರೆ ನಿಮ್ಮಗಳ ಮಧ್ಯದಲ್ಲಿ ವಿಚಾರಪರನಾರೂ ಕಾಣದಿರುವುದರಿಂದ ಇಲ್ಲಿ ಹೇಳುವುದಕ್ಕೆ ಹೆದರುತ್ತೇನೆ ‖ ೫ ‖ ಸತ್ಯವನ್ನು ಹೇಳಿದರೂ ಅದನ್ನು ವಿಚಾರವಿಲ್ಲದ ದುಷ್ಟರು ಕೇಳಿ ತಮ್ಮ ಮಿಥ್ಯಾಬುದ್ಧಿಯಿಂದ "ಷೋಡಶಮುಷ್ಟಿನ್ಯಾಯ" ವನ್ನು ರಚಿಸುತ್ತಾರೆ." ಎಂದನು ‖ ೬ ‖ ಆಗ ಬ್ರಾಹ್ಮಣರು "ಮಹಾಬುದ್ಧಿಶಾಲಿಯೇ! ಈ ಷೋಡಶಮುಷ್ಟಿನ್ಯಾಯವೆಂತಹದು? ಹೇಳು" ಎಂದರು. ಆ ಮಾತನ್ನು ಕೇಳಿ ಮನೋವೇಗನು "ಹೇಳುತ್ತೇನೆ, ಕೇಳಿ" ಎಂದು ಈ ರೀತಿಯಾಗಿ ಹೇಳುತ್ತಾನೆ ‖ ೭ ‖

ಮಲಯದೇಶದಲ್ಲಿ ದುಃಖದೂರವಾದ ಸಂಗಾಲವೆಂಬ ಗ್ರಾಮವಿದೆ. ಅಲ್ಲೊಬ್ಬ ಗೃಹಸ್ಥನಿಗೆ ಮಧುಕರನೆಂಬ ಮಗನಿದ್ದನು ‖ ೮ ‖ ಒಂದಾನೊಂದು ದಿವಸ ಇವನು ಕೋಪದಿಂದ ತಂದೆಯ ಮನೆಯಿಂದ ಹೊರಟು ಭೂತಲದಲ್ಲಿ ಚೆನ್ನಾಗಿ ಸುತ್ತಿದನು. ಮನುಷ್ಯನು ಕೋಪದಿಂದ ಏನನ್ನು ತಾನೆ ಮಾಡುವುದಿಲ್ಲ? ‖ ೯ ‖ ಹಾಗೆ ಹೋದ ಈ ಮಧುಕರನು ಆಭೀರದೇಶದಲ್ಲಿ ವಿಭಾಗಿಸಲ್ಪಟ್ಟಿರುವ ಕಡಲೆಗಳ ಎತ್ತರವಾದ ಅನೇಕ ರಾಶಿಗಳನ್ನು ನೋಡಿದನು ‖ ೧೦ ‖ ಅವುಗಳನ್ನು ನೋಡಿ ಆ ಮೂರ್ಖನು ಆಶ್ಚರ್ಯಗೊಂಡ ಮನಸ್ಸುಳ್ಳವನಾಗಿ "ಅಹಾ! ನಾನು ಆಶ್ಚರ್ಯವನ್ನು ನೋಡಿದೆನು. ಅಹಾ! ನಾನು ಆಶ್ಚರ್ಯವನ್ನು ನೋಡಿದೆನು" ಎಂದನು ‖ ೧೧ ‖ "ಯಾವ ಆಶ್ಚರ್ಯವನ್ನು ನೀನು ನೋಡಿದೆ? ಎಂದು ಗ್ರಾಮಾಧಿಪತಿಯು ಪ್ರಶ್ನೆಮಾಡಿದನು. ಅದಕ್ಕೆ ಈ ಮೂಢನು ಮುಂದೆ ಹೇಳುವ ಪ್ರಕಾರವಾಗಿ ಉತ್ತರವನ್ನಿತ್ತನು. ಮೂರ್ಖನು ತನಗೆ ಬರುವ ಆಪತ್ತನ್ನು ತಿಳಿಯುವುದೇ ಇಲ್ಲ ‖ ೧೨ ‖ "ಈ ದೇಶದಲ್ಲಿ ಎತ್ತರವಾದ ಕಡಲೆಯ ರಾಶಿಗಳಿರುವಂತೆ ನನ್ನ ದೇಶದಲ್ಲಿ ಕಾಳುಮೆಣಸಿನ ರಾಶಿಗಳಿರುತ್ತವೆ" ‖ ೧೩ ‖ ಆ ಮಾತನ್ನು ಕೇಳಿ ಗ್ರಾಮಾಧಿಪತಿಯು ಬಹು ಕೋಪ

ಗೊಂಡು “ ನೀನು ವಾತರೋಗದಿಂದ ಪೀಡಿತನಾಗಿರುತ್ತಿ. ಆದುದರಿಂದ ಸುಳ್ಳು ಹೇಳುತ್ತಿರುವೆ. ದುಷ್ಟಬುದ್ಧಿಯೇ ! ಕಡಲೆಯ ರಾಶಿಗಳಿಗೆ ಸಮಾನವಾದ ಕಾಳುಮೆಣಸಿನ ರಾಶಿಗಳನ್ನು ನಾವು ಯಾವ ದೇಶದಲ್ಲಿಯೂ ನೋಡಿಲ್ಲ ” ಎಂದು ಆ ಮಧುಕರನನ್ನು ಕುರಿತು ಹೇಳಿ “ ನಿಜವಾಗಿಯೂ ಈ ದೇಶದಲ್ಲಿ ಕಡಲೆಗಳಿರುತ್ತವೆ. ಕಾಳುಮೆಣಸುಗಳು ಬಹು ದುರ್ಲಭಗಳಾಗಿವೆ. ತನಗೆ ಮೆಣಸುಗಳಲ್ಲಿ ಲಕ್ಷ್ಯವೇ ಇಲ್ಲ ” ಎಂದು ತಿಳಿದು ಹೆಮ್ಮೆಯಿಂದ ಈ ದುಷ್ಟಮಧುಕರನು ನಮ್ಮನ್ನು ಪರಿಹಾಸಮಾಡುತ್ತಾನೆ. ಶೀಘ್ರವಾಗಿ ಇವನನ್ನು ಶಿಕ್ಷಿಸಿರಿ ” ಎಂದು ಹೇಳಿದನು. ಗ್ರಾಮಪತಿ–ಪಟೇಲನ ಆ ಮಾತನ್ನು ಕೇಳಿ ಅವನ ಕುಟುಂಬದವರು ಮಧುಕರನನ್ನು ಕಟ್ಟಿಹಾಕಿದರು. ನಂಬತಕ್ಕುದಲ್ಲದ ಮಾತನ್ನು ಹೇಳುವ ಯಾವನು ತಾನೆ ಬಂಧನವನ್ನು ಹೊಂದುವುದಿಲ್ಲ ? ॥ ೧೪–೧೮ ॥ ಅಲ್ಲೊಬ್ಬ ದಯಾರ್ದ್ರಹೃದಯವುಳ್ಳ ಬಂಧುವು “ ಮಂಗಳಾಂಗನೆ ! ಇವನಿಗೆ ತಪ್ಪಿಗೆ ಸರಿಯಾದ ಶಿಕ್ಷೆಯು ವಿಧಿಸಲ್ಪಡಲಿ ” ಎಂದನು ॥ ೧೯ ॥ ಆಗ ಆ ಗ್ರಾಮಪತಿಯು “ ಇವನು ಮತ್ತೆ ಯಾರಿಗೂ ಪರಿಹಾಸವನ್ನು ಮಾಡಬಾರದು. ಆ ರೀತಿಯಾಗಿ ಇವನ ಹಳ್ಳ ದಿಣ್ಣೆಯಾಗಿರುವ ತಲೆಯ ಮೇಲೆ ಮುಷ್ಟಿಯಿಂದ ಎಂಟು ಗುದ್ದುಗಳನ್ನು ಕೊಡಿರಿ ” ಎಂದು ಆಜ್ಞೆಮಾಡಿದನು ॥ ೨೦ ॥ ಅವನ ಈ ಮಾತನ್ನು ಕೇಳಿ ನಿರ್ದಯರಾದ ಬಂಧುಗಳು ಮಧುಕರನ ತಲೆಯ ಮೇಲೆ ಬಲವಾಗಿ ಎಂಟು ಗುದ್ದುಗಳನ್ನು ಕೊಟ್ಟು ಬಿಟ್ಟು ಬಿಟ್ಟರು ॥ ೨೧ ॥ “ ಇವರು ಎಂಟುಗುದ್ದುಗಳನ್ನು ಕೊಟ್ಟು ಬಿಟ್ಟಿರುವುದೇ ನನಗೆ ಪರಮ ಲಾಭ. ದುಷ್ಟರ ಮಧ್ಯದಲ್ಲಿ ವಾಸಮಾಡುವವರಿಗೆ ಬದುಕುವಿಕೆಯಲ್ಲಿಯೂ ಸಂದೇಹವಿರುತ್ತದೆ ” ॥ ೨೨ ॥ ಈ ರೀತಿಯಾಗಿ ಇವನು ಯೋಚಿಸಿ ಹೆದರಿ ಹಿಂದಿರುಗಿ ತನ್ನ ದೇಶಕ್ಕೆ ಹೋದನು. ಮೂರ್ಖರು ಕಷ್ಟವನ್ನು ಅನುಭವಿಸಿದ ಹೊರತು ಹಿಂದಿರುಗುವುದಿಲ್ಲ ॥ ೨೩ ॥ ಆ ಸಂಗಾಲಗ್ರಾಮದಲ್ಲಿ ಕಾಳುಮೆಣಸುಗಳ ರಾಶಿಗಳನ್ನು ನೋಡಿ “ ಹೀಗೆ

ಆಭೀರದೇಶದಲ್ಲಿ ಕಡಲೆಗಳ ರಾಶಿಗಳಿರುತ್ತವೆ " ಎಂದನು. ಅಲ್ಲಿಯೂ ಸುಳ್ಳು ಹೇಳಿದನೆಂದು ಗ್ರಾಮಸ್ಥರು ಅವನ ತಲೆಯ ಮೇಲೆ ಎಂಟು ಗುದ್ದುಗಳನ್ನು ಕೊಟ್ಟರು. ಪ್ರಾಯಿಕವಾಗಿ ಮೂರ್ಖನನ್ನು ದಂಡಿಸಿದರೂ ಅವನು ಪಂಡಿತನಾಗುವುದಿಲ್ಲ ॥ ೨೪-೨೫ ॥ ಮಧುಕರನು ಸತ್ಯವನ್ನು ಹೇಳಿದರೂ ಹದಿನಾರು ಗುದ್ದುಗಳನ್ನು ಹೊಂದಿದುದರಿಂದ ಅಂದಿನಿಂದ " ಮುಷ್ಟಿಷೋಡಶಕನ್ಯಾಯ '' ವು ಪ್ರಸಿದ್ಧವಾಯಿತು ॥ ೨೬ ॥ ಮನುಷ್ಯನು ಸಾಕ್ಷಿಯಿಲ್ಲದೆ ಸತ್ಯವನ್ನೂ ನುಡಿಯಬಾರದು. ಹಾಗೆ ನುಡಿದರೆ ಜನರು, ಸುಳ್ಳು ಹೇಳಿದವರನ್ನು ಪೀಡಿಸುವಂತೆ, ಪೀಡಿಸುವರು ॥ ೨೭ ॥ ಸಾಕ್ಷಿಯು ಅಸತ್ಯವನ್ನೂ ಸತ್ಯವೆಂದು ಹೇಳಿದರೆ ಜನರು ನಂಬುತ್ತಾರೆ. ಹಾಗಲ್ಲದಿದ್ದರೆ ವಂಚಕರು ಲೋಕವನ್ನೆಲ್ಲ ವಂಚಿಸುವುದು ಹೇಗೆ ? ॥ ೨೮ ॥ ಮನುಷ್ಯನು ಸತ್ಯವನ್ನಾಗಲಿ ಅಸತ್ಯವನ್ನಾಗಲಿ ಲೋಕದಲ್ಲಿ ಹೇಗೆ ವಾಡಿಕೆಯಿದೆಯೋ ಹಾಗೆ ಹೇಳಬೇಕು. ಹಾಗಿಲ್ಲದಿದ್ದರೆ ಬಹಳ ಬಾಧೆಯುಂಟಾಗುವುದು. ಅದನ್ನು ತಡೆಯುವರಾರು ? ॥ ೨೯ ॥ ಮನುಷ್ಯನು ಸತ್ಯವನ್ನು ಹೇಳಿದರೂ ಮೂರ್ಖರು ನಂಬುವುದಿಲ್ಲ. ಆದುದರಿಂದ ತನಗೆ ಹಿತವನ್ನು ಬಯಸುವವನು ಅಂತಹ ಮೂರ್ಖರ ಮಧ್ಯದಲ್ಲಿ ಮಾತನಾಡಬಾರದು ॥ ೩೦ ॥ ಜನರು ದೃಷ್ಟ ಶ್ರುತ ಅನುಭೂತ ಮತ್ತು ಪ್ರಸಿದ್ಧ ವಿಷಯಗಳನ್ನು ನಂಬುತ್ತಾರೆ. ಇತರ ವಿಷಯವನ್ನು ನಂಬುವುದಿಲ್ಲ. ಆದುದರಿಂದ ಚತುರಮನುಷ್ಯನು ಮೂರ್ಖರ ಮಧ್ಯದಲ್ಲಿ ಮಾತನಾಡಬಾರದು. ॥ ೩೧ ॥ ಇಲ್ಲಿ ವಿಚಾರವಿಲ್ಲದವರ ಮಧ್ಯದಲ್ಲಿ ನಾನು ಮಾತನಾಡಿದರೆ ನನಗೂ ಇಂತಹ ದೋಷ—ಕಷ್ಟವು ಬರುವುದರಿಂದ ಮಾತನಾಡುವುದೇ ಇಲ್ಲ ॥ ೩೨ ॥ ಯಾವನು ಪೂರ್ವಾಪರವನ್ನು ವಿಚಾರಮಾಡುತ್ತಾನೋ ಅವನ ಮುಂದೆ ವಿವೇಕಿಯಾದವನು ಮಾತನಾಡಬೇಕು. ಬೇರೆಯವನ ಮುಂದೆ ಮಾತನಾಡಬಾರದು " ॥ ೩೩ ॥

ಈ ರೀತಿಯಾಗಿ ಹೇಳಿ ಖೇಚರ-ಮನೋವೇಗನು ಸುಮ್ಮನಾದನು. ಆಗ ಒಬ್ಬ ದ್ವಿಜಶ್ರೇಷ್ಠನು "ಸತ್ಪುರುಷನೆ! ಹೀಗೆ ಹೇಳಬೇಡ. ಇಲ್ಲಿ ವಿಚಾರಶೂನ್ಯನಾರೂ ಇಲ್ಲ ॥ ೩೪ ॥ ವಿಚಾರವಿಲ್ಲದವರಲ್ಲಿರುವ ದೋಷವನ್ನು ವಿಚಾರವಂತರಲ್ಲಿ ತಿಳಿಯಬೇಡ. ಪಶುಗಳ ಧರ್ಮವು ಮನುಷ್ಯರಿಂದಲೂ ಉಂಟಾಗುವುದಿಲ್ಲ ॥ ೩೫ ॥ ನಾವು ಬುದ್ಧಿಹೀನರಾದ ಆಭೀರ ದೇಶದವರಿಗೆ ಸಮಾನರೆಂದು ತಿಳಿಯಬೇಡ. ಹಂಸ-ಪಕ್ಷಿಗಳು ಕಾಗೆಗಳಿಗೆ ಸಮಾನಗಳಾಗಿರುವುದೇ ಇಲ್ಲ ॥ ೩೬ ॥ ಇಲ್ಲಿರುವ ಬ್ರಾಹ್ಮಣರೆಲ್ಲರೂ ನ್ಯಾಯನಿಪುಣರೂ ಯುಕ್ತಾಯುಕ್ತವಿಚಾರವುಳ್ಳವರೂ ಆಗಿರುತ್ತಾರೆ. ಮಂಗಳಾಂಗನೆ ! ಸಂದೇಹಪಡಬೇಡ. ನಿನ್ನ ಇಷ್ಟಾರ್ಥವನ್ನು ತಿಳಿಸು ॥ ೩೭ ॥ ವಾಕ್ಯವು ಯುಕ್ತಿಸಂಗತವಾಗಿದ್ದರೆ ಮತ್ತು ಸಾಧುಪುರುಷರು ತಿಳಿಯುವಂತಿದ್ದರೆ ಅಂತಹ ವಾಕ್ಯವನ್ನು ನಿಃಸಂದೇಹವಾಗಿ ಹೇಳು. ವಿಚಾರಮಾಡಿ ಪರಿಗ್ರಹಿಸುವೆವು ॥ ೩೮ ॥ ಮಧುರಭಾಷಿಯೂ ಜಿನೇಶ್ವರಚರಣಕಮಲಗಳಲ್ಲಿ ದುಂಬಿಯಂತಿರುವವನೂ ಆದ ಮನೋವೇಗನು ವಿಪ್ರನ ಈ ಮಾತನ್ನು ಕೇಳಿ ಇಂತೆಂದನು ॥ ೩೯ ॥ "ಲೋಕದಲ್ಲಿ ರಕ್ತ, ದ್ವಿಷ್ಟ, ಮನೋಮೂಢ, ವ್ಯುದ್ಗ್ರಾಹಿ, ಪಿತ್ತದೂಷಿತ, ಆಮ್ರ, ಕ್ಷೀರ, ಅಗುರು, ಚಂದನ, ಬಾಲಿಶರೆಂದು ಹತ್ತು ವಿಧವಾದ ಮೂರ್ಖರಿರುತ್ತಾರೆ ॥ ೪೦ ॥ ಇವರು ತಿರ್ಯಕ್ಪ್ರಾಣಿಗಳಂತೆ ಪೂರ್ವಾಪರವಿಚಾರಶೂನ್ಯರಾಗಿರುತ್ತಾರೆ. ಇಂಥವರು ನಿಮ್ಮಲ್ಲಿದ್ದರೆ ಮಾತನಾಡುವುದಕ್ಕೆ ಹೆದರುತ್ತೇನೆ ॥ ೪೧ ॥ ಮನುಷ್ಯರು ಎಲ್ಲವನ್ನೂ ವಿಚಾರಮಾಡುತ್ತಾರೆ. ತಿರ್ಯಕ್ಪ್ರಾಣಿಗಳು ವಿಚಾರಮಾಡುವುದಿಲ್ಲ. ಮನುಷ್ಯರಿಗೂ ತಿರ್ಯಕ್ಪ್ರಾಣಿಗಳಿಗೂ ಇಷ್ಟೇ ಭೇದ ॥ ೪೨ ॥ ಪೂರ್ವಾಪರವಿಚಾರವನ್ನು ತಿಳಿದವರೂ ಮಧ್ಯಸ್ಥರೂ ಧಾರ್ಮಿಕರೂ ಪಕ್ಷಪಾತರಹಿತರೂ ಭವ್ಯರೂ ಆಗಿರುವವರು ಸಭ್ಯರೆಂದು ಹೇಳಲ್ಪಡುತ್ತಾರೆ ॥ ೪೩ ॥ ಸುಖಕರವಾದ ಒಳ್ಳೆಯ ಮಾತನ್ನು ಮೂರ್ಖರಿಗೆ ಹೇಳಿದರೆ ಅದು, ಹಾವಿಗೆ ಹಾಲೆರೆದಂತೆ, ಬಹಳ ಕಷ್ಟವನ್ನುಂಟುಮಾಡು

ವುದು ॥ ೪೪ ॥ ಎಂದಾದರೂ ಪರ್ವತದಲ್ಲಿ ತಾವರೆಯು ಹುಟ್ಟಬಹುದು, ಕಾಲಕೂಟ-ವಿಷದಲ್ಲಿ ಅಮೃತವು ಹುಟ್ಟಬಹುದು, ಆದರೆ ಮೂರ್ಖನಲ್ಲಿ ವಿಚಾರವು ಹುಟ್ಟಲಾರದು" ॥ ೪೫ ॥ "ಎಲೈ ಸತ್ಪುರುಷನೆ! ಆ ಮೂರ್ಖರು ಎಂಥವರಾಗಿರುತ್ತಾರೆ?" ಎಂದು ಆ ದ್ವಿಜರು ಪ್ರಶ್ನೆಮಾಡಿದರು. ಆಗ ಮನೋವೇಗ-ಖೇಚರನು ರಕ್ತ ದ್ವಿಷ್ಟ ಮೊದಲಾದ ಸ್ವಭಾವದ ಮೂರ್ಖ ಮನುಷ್ಯರ ವ್ಯಾಪಾರವನ್ನು ಹೇಳಲಾರಂಭಿಸಿದನು. ॥ ೪೬ ॥

ರಕ್ತಮೂರ್ಖಪುರುಷನ ಕಥೆ

"ಸಾಮಂತನಗರದ ಬಳಿಯಲ್ಲಿರುವ ರೇವಾನದಿಯ ದಕ್ಷಿಣತೀರದಲ್ಲಿ ಬಹಳ ಧನಾಢ್ಯನಾದ ಬಹುಧಾನ್ಯಕನೆಂಬ ಹಳ್ಳಿಯ-ಪಟೇಲನಿದ್ದನು ॥ ೪೭ ॥ ಅವನಿಗೆ ಸುಂದರಿಯೆಂದೂ ಕುರಂಗಿಯೆಂದೂ ಇಬ್ಬರು ಹೆಂಡತಿಯರು, ಈಶ್ವರನಿಗೆ ಸುಂದರಿಯರಾದ ಗಂಗೆಯಂತೆಯೂ ಪಾರ್ವತಿಯಂತೆಯೂ, ಇದ್ದರು ॥ ೪೮ ॥ ಬಹುಧಾನ್ಯಕನು ಆ ಇಬ್ಬರು ಹೆಂಡತಿಯರಲ್ಲಿ ಮುದುಕಿಯಾಗಿದ್ದ ಸುಂದರಿಯನ್ನು ತ್ಯಜಿಸಿ ತರುಣಿಯಾಗಿದ್ದ ಕುರಂಗಿಯಲ್ಲಿ ಆಸಕ್ತನಾದನು. ಸರಸಳನ್ನು ಹೊಂದಿ ವಿರಸಳನ್ನು ಯಾವನು ಸೇವಿಸುವನು? ॥ ೪೯ ॥ ಬಹುಧಾನ್ಯಕನು ಸುಂದರಿಯನ್ನು ಕುರಿತು "ಎಲೈ ಮಂಗಳಾಂಗಿಯೆ! ನಿನ್ನ ಭಾಗವನ್ನು ತೆಗೆದುಕೊಂಡು ಮಗನೊಡನೆ ಬೇರೆ ಮನೆಯಲ್ಲಿರು" ಎಂದನು ॥ ೫೦ ॥ ಪತಿವ್ರತೆಯಾದ ಆ ಸುಂದರಿಯು ಪತಿಯ ಮಾತಿನಂತೆ ತನ್ನ ಭಾಗವನ್ನು ತೆಗೆದುಕೊಂಡು ಬೇರೆ ಮನೆಯಲ್ಲಿದ್ದಳು. ಶೀಲವತಿಯರಾದ ಹೆಂಗುಸರು ಪತಿಯ ಮಾತನ್ನು ಮೀರುವುದಿಲ್ಲವಷ್ಟೆ ॥ ೫೧ ॥ ಬಹುಧಾನ್ಯಕನು ಸುಂದರಿಗೆ ಎಂಟು ಎತ್ತುಗಳನ್ನೂ ಹತ್ತು ದನಗಳನ್ನೂ ಇಬ್ಬರು ದಾಸಿಯರನ್ನೂ ಇಬ್ಬರು ಸೇವಕರನ್ನೂ ಸರ್ವಸಾಮಗ್ರಿಯುಳ್ಳ ಒಂದು ಮನೆಯನ್ನೂ ಕೊಟ್ಟನು ॥ ೫೨ ॥ ವ್ಯಾಮೋಹಿತನಾದ ಆ ಬಹುಧಾನ್ಯಕನು ಕುರಂಗಿಯೂ

ಡನೆ ಇಷ್ಟಭೋಗವನ್ನನುಭವಿಸುತ್ತ, ಹೆಂಡದಿಂದ ಅಮಲುಳ್ಳವನಂತೆ,
ಕಾಲವು ಕಳೆದುದನ್ನು ತಿಳಿಯಲಿಲ್ಲ ॥ ೫೩ ॥ ಸುಂದರವಾದ ಆಕಾರವುಳ್ಳ
ವಳೂ ನವಯೌವನೆಯೂ ಪ್ರಿಯೆಯೂ ಆದ ಆ ಕುರಂಗಿಯನ್ನು ಹೊಂದಿ
ಆ ಬಹುಧಾನ್ಯಕನು, ಶಚಿಯನ್ನು ಆಲಿಂಗಿಸಿರುವ ದೇವೇಂದ್ರನನ್ನು ತನ
ಗಿಂತ ಹೆಚ್ಚಿನವನೆಂದು ತಿಳಿಯಲಿಲ್ಲ ॥ ೫೪ ॥ ಯುವತಿಯಾದ ಹೆಂಗುಸು
ವೃದ್ಧಪುರುಷನಲ್ಲಿ ಅನುರಾಗವುಳ್ಳವಳಾಗಿ ಶೋಭಿಸುವುದಿಲ್ಲ. ಹಳೆಯದಾದ
ಕಂಬಳಿಯಲ್ಲಿ ಜೋಡಿಸಿದ ಸ್ಯಾಲು ಶೋಭಿಸುತ್ತದೆಯೇ ? ॥ ೫೫ ॥ ಮುದು
ಕಿಯಾದ ಸ್ತ್ರೀಯನ್ನು ತಿರಸ್ಕರಿಸಿ ಯುವತಿಯಾದ ಸ್ತ್ರೀಯನ್ನು ಸೇವಿಸುವ
ವನು ಕೂಡಲೆ ವಿಪತ್ತಿನಿಂದ ಬಾಧೆಪಡುತ್ತಾನೆ. ಆಕೆಯು ಯಾವಾಗಲೂ
ಅವನಿಗೆ ವ್ಯಥೆಯನ್ನುಂಟುಮಾಡುವಳು ॥ ೫೬ ॥ ಮುದುಕನಿಗೆ ಯುವತಿ
ಯಾದ ಹೆಂಡತಿಗಿಂತ ದುಃಖವನ್ನು ಹೆಚ್ಚಿಸುವ ವಸ್ತುವಿಲ್ಲ. ಬೆಂಕಿಯ
ಜ್ವಾಲೆಯನ್ನು ಬಿಟ್ಟರೆ ಅದಕ್ಕಿಂತ ಹೆಚ್ಚು ತಾಪಕರವಾದ ವಸ್ತುವಿದೆಯೇ ?
॥ ೫೭ ॥ ಮುದುಕರ ಬಾಳಿನ ಅವಧಿಯು ಯುವತಿಯ ಸಂಗವಾಗುವವರೆಗಿ
ರುವುದು. ವಜ್ರದ ಬೆಂಕಿಯ ಜ್ವಾಲೆಯ ಸಹವಾಸದಲ್ಲಿ ಒಣಮರವು
ಹೇಗಿದ್ದೀತು ? ॥ ೫೮ ॥ ಪ್ರೇಮವೆಂಬ ಸೂರ್ಯನಿಂದ ವಿಕಸಿತವಾದ
ಕುರಂಗಿಯ ಮುಖವೆಂಬ ಕಮಲವನ್ನು ನೋಡುತ್ತಿದ್ಧ ಆ ಬಹುಧಾನ್ಯಕ
ನಿಗೆ ದೊರೆಯ ಸೈನ್ಯದ ವ್ಯವಸ್ಥಾಪಕನಾಗುವ ಸಂದರ್ಭವೊದಗಿತು ॥ ೫೯ ॥
ಆ ದೇಶದ ರಾಜನು ಬಹುಧಾನ್ಯಕನನ್ನು ಕರೆಯಿಸಿ “ ನೀನು ಶೀಘ್ರವಾಗಿ
ದಂಡಿನ ಸ್ಥಳಕ್ಕೆ ಉಚಿತವಾದ ಸಾಮಗ್ರಿಯನ್ನು ಒದಗಿಸು ” ಎಂದನು ॥ ೬೦ ॥
ಆಗ ಬಹುಧಾನ್ಯಕನು “ ಹಾಗೆ ಮಾಡುವುದಿಲ್ಲ ” ಎಂದು ಹೇಳಿದನಾದರೂ
ತನ್ನ ಮನೆಗೆ ಬಂದು ಹೆಂಡತಿಯನ್ನು ಬಲವಾಗಿ ತಬ್ಬಿಕೊಂಡು “ ಎಲೈ ಕುರಂ
ಗಿಯೇ ! ನೀನು ಮನೆಯಲ್ಲಿರು. ನಾನು ದಂಡಿನ ಸ್ಥಳಕ್ಕೆ ಹೋಗುತ್ತೇನೆ.
ಸುಖವನ್ನು ಬಯಸುವವರು ತಮ್ಮ ದೊರೆಯ ಅಪ್ಪಣೆಯನ್ನು ಮೀರಲೇ
ಬಾರದು. ಎಲೈ ಸುಂದರಿಯೆ ! ಅಲ್ಲಿ ನನ್ನ ದೊರೆಯ ಸೈನ್ಯವು ಸಿದ್ಧ

ವಾಗಿದೆ. ನಾನು ಹೋ ಗ ಲೇ ಬೇ ಕಾ ಗಿ ದೆ. ಇಲ್ಲದಿದ್ದರೆ ದೊರೆಯು ಕೋಪಿಸುವನು ” ಎಂದನು ॥ ೬೧-೬೨ ॥ ಈ ಮಾತನ್ನು ಕೇಳಿ ಆ ಸುಂದರಿಯು ಖಿನ್ನಮನಸ್ಕಳಾಗಿ “ ಪತಿದೇವನೆ ! ನಾನೂ ನಿನ್ನ ಜೊತೆಯಲ್ಲಿ ನಿಶ್ಚಯವಾಗಿ ಬರುವೆನು. ಉರಿಯುವ ಬೆಂಕಿಯನ್ನಾದರೂ ಸಹಿಸಬಹುದು, ಆದರೆ ದೇಹವನ್ನೆಲ್ಲ ಸುಡುವ ವಿಯೋಗವನ್ನು ಸಹಿಸಲಾಗುವುದಿಲ್ಲ. ಸ್ವಾಮಿಯೆ ! ನಿನ್ನ ಮುಂದೆ ಬೆಂಕಿಯಲ್ಲಿ ಪ್ರವೇಶಿಸಿ ನಾನು ಸಾಯುವುದೊಳ್ಳೆಯದು. ಆದರೆ ನಿನ್ನ ಪರೋಕ್ಷದಲ್ಲಿ ವಿರಹವೆಂಬ ವೈರಿಯಿಂದ ಶೀಘ್ರವಾಗಿ ಕೊಲ್ಲಲ್ಪಡಲಾರೆನು. ಕಾಡಿನಲ್ಲಿ ರಕ್ಷಕರಿಲ್ಲದೆ ಹೆಣ್ಣುಜಿಂಕೆಯನ್ನು ಸಿಂಹವು ಕೊಲ್ಲುವಂತೆ, ಇಲ್ಲಿ ಏಕಾಕಿನಿಯಾಗಿರುವ ನನ್ನನ್ನು ಕಾಮನು ಕೊಲ್ಲುವನು. ನೀನು ಹೋಗುವುದಾದರೆ ಹೋಗು. ನಿನಗೆ ದಾರಿಗಳು ಮಂಗಳಕರಗಳಾಗಿರಲಿ. ಯಮನ ಮನೆಗೆ ಹೋಗುವ ನನ್ನ ಜೀವಿತದ ದಾರಿಗಳೂ ಮಂಗಲಕರಗಳಾಗಿರಲಿ.” ಎಂದು ಮಾತನಾಡಿದಳು ॥ ೬೪-೬೮ ॥ ಬಳಿಕ ಆ ಪಟೇಲ—ಬಹುಧಾನ್ಯಕನು ಕುರಂಗಿಯನ್ನು ಕುರಿತು “ ಮೃಗನೇತ್ರೆಯೇ ! ಹೀಗೆ ಹೇಳಬೇಡ. ಮನೆಯಲ್ಲಿ ಸ್ಥಿರವಾಗಿರು. ಗಮನದಲ್ಲಿ ಮನಸ್ಸು ಮಾಡಬೇಡ. ಪರಸ್ತ್ರೀಲೋಲುಪನಾದ ದೊರೆಯು ನಿನ್ನನ್ನು ಕಂಡರೆ ಪರಿಗ್ರಹಿಸುವನಾದುದರಿಂದ ಪ್ರಿಯಳೆ ! ನಿನ್ನನ್ನು ಮನೆಯಲ್ಲಿರಿಸಿ ಹೋಗುತ್ತೇನೆ. ರಾಜನು ನಿನ್ನಂತಹ ಮನೋಹರಸ್ತ್ರೀಯನ್ನು ನೋಡಿ ಪರಿಗ್ರಹಿಸಿಬಿಡುವನು. ಅಸದೃಶವಾದ ಆಕಾರವುಳ್ಳ ಸ್ತ್ರೀರತ್ನವನ್ನು ಯಾವನು ತಾನೆ ಬಿಡುತ್ತಾನೆ ? ” ಈ ರೀತಿಯಾಗಿ ಸಮಾಧಾನವನ್ನು ಕೇಳಿ ಹೆಂಡತಿಯನ್ನು ಬಿಟ್ಟು ಐಶ್ವರ್ಯವು ತುಂಬಿರುವ ಮನೆಯನ್ನು ಆಕೆಯ ಸ್ವಾಧೀನಕ್ಕೆ ಕೊಟ್ಟು ಈ ಪಟೇಲನು ದಂಡಿನ ಸ್ಥಳಕ್ಕೆ ಹೋದನು ॥ ೬೯-೭೦ ॥ ಇಷ್ಟವಸ್ತುವನ್ನು ಹೊಂದಿ ಬೇರೆಯಾರನ್ನೂ ನಂಬದಿರುವುದು ಅನುರಾಗವುಳ್ಳವನ ಧರ್ಮವಾಗಿದೆ. ಅಂಥವನು ಇಷ್ಟವಸ್ತುವಿನ ವಿಯೋಗವಾದರೆ ಸಾಯಲಿಚ್ಛಿಸುತ್ತಾನೆ. ॥ ೭೩ ॥

ಗಂಡುನಾಯಿಯು ಹೆಣ್ಣುನಾಯಿಯನ್ನು ಹೊಂದಿ ಅದು ಲೋಕಾಧಿಕವಾದು ದೆಂದು ತಿಳಿಯುತ್ತದೆ. ದೀನವಾದ ಆ ನಾಯಿಯು ತನ್ನ ಆ ಹೆಂಡತಿಯನ್ನು ಒಡಿದುಬಿಡುವನೆಂಬ ಹದರಿಕೆಯಿಂದ ಸ್ವರ್ಗಪತಿ-ದೇವೇಂದ್ರನಿಗೂ ಬೊಗಳುವುದು ॥ ೭೪ ॥ ನೀಚವೂ ದರಿದ್ರವೂ ಆದ ನಾಯಿಯು ಕ್ರಿಮಿಸಮೂಹದಿಂದಲೂ ಮಲದಿಂದಲೂ ವ್ಯಾಪ್ತವಾದ ಶರೀರ-ಶವವನ್ನು ಹೊಂದಿ ಅಮೃತವನ್ನೂ ಕೆಟ್ಟುದಾದ ರಸವುಳ್ಳುದನ್ನಾಗಿ ತಿಳಿಯುವುದು ॥ ೭೫ ॥ ಯಾವನು ಯಾವ ವಸ್ತುವಿನಲ್ಲಿ ಅನುರಕ್ತನಾಗಿರುತ್ತಾನೋ ಅವನು ಆ ವಸ್ತುವನ್ನು ಕಾಪಾಡುತ್ತಾನೆ. ಕಾಗೆಯು ಮಲವನ್ನು ಕೂಡಿಟ್ಟು ಸತ್ತಲೂ ಆದನ್ನು ಕಾಯುವುದಿಲ್ಲವೇ ? ॥ ೭೬ ॥ ಅನುರಕ್ತನಾಗಿರುವವನು ಮೂಢ ಬುದ್ಧಿಯುಳ್ಳವನಾಗಿ ರೂಪವಿಲ್ಲದಿರುವ ವಸ್ತುವನ್ನೂ ಸುಂದರವನ್ನಾಗಿ ತಿಳಿಯುತ್ತಾನೆ. ನಾಯಿಯು ಗೋವಿನ ಮೂಳೆಯನ್ನು ರಸಾಯನವೆಂದು ತಿಳಿದು ತಿನ್ನುವುದಿಲ್ಲವೇ ? ॥ ೭೭ ॥

ಕಾಮಾತುರಳಾಗಿದ್ದ ಆ ಕುರಂಗಿಯು ಗಂಡನು ಹೋದ ಮೇಲೆ ವಿಟ ಪುರುಷರಿಗೆ ನಾನಾವಿಧವಾದ ಭೋಜನಗಳನ್ನೂ ಧನಗಳನ್ನೂ ವಸ್ತ್ರಗಳನ್ನೂ ಕೊಟ್ಟಳು ॥ ೭೯ ॥ ಬಹುಕಾಲದಿಂದ ಪೋಷಿಸಲ್ಪಟ್ಟಿರುವ ತನ್ನ ದೇಹವನ್ನು ಅನುರಕ್ತಳಾಗಿ ಕೊಡುವವಳಿಗೆ ದ್ರವ್ಯವನ್ನು ಕೊಡುವುದಕ್ಕೇನೂ ಶ್ರಮ ವಿಲ್ಲ ॥ ೮೦ ॥ ಕುರಂಗಿಯು ದ್ರವ್ಯರಾಶಿಯನ್ನೆಲ್ಲ ಜಾರಪುರುಷರಿಗೆ ಕೊಟ್ಟು ಒಂಬತ್ತು ಹತ್ತು ದಿನಗಳಲ್ಲೇ ತಿಂದು ಮುಗಿಸಿದಳು. ಮನೆಯಲ್ಲಿ ಏನನ್ನೂ ಉಳಿಸಲಿಲ್ಲ ॥ ೮೧ ॥ ಕಾಮಬಾಣಗಳಿಂದ ಪರಿಪೂರ್ಣವಾದ ದೇಹವುಳ್ಳವಳೂ ಬುದ್ಧಿಹೀನಳೂ ಆದ ಆ ಕುರಂಗಿಯು ಮನೆಯನ್ನು ವಸ್ತ್ರ ಪಾತ್ರ ಧನ ಧಾನ್ಯಗಳಿಲ್ಲದುದನ್ನಾಗಿಯೂ ಇಲಿಗಳ ಸಮೂಹದ ವಿಹಾರಭೂಮಿಯನ್ನಾಗಿಯೂ ಮಾಡಿದಳು ॥ ೮೨ ॥ ಋತುಮತಿಯಾದ ದನವು ಕಾಮಪೀಡಿತಗಳಾದ ಹೋರಿಗಳೊಡನೆ ಪಶುಕರ್ಮದಲ್ಲಿ ಆಸಕ್ತ ವಾಗಿ ಅಲ್ಲಲ್ಲಿ ಓಡಾಡುವಂತೆ, ಕಾಮಪೀಡಿತಳಾದ ಆ ಕುರಂಗಿಯು ವಿಟ

ಪುರುಷಸಮೂಹಗಳೊಡನೆ ಸೇರಿಕೊಂಡು ಸಂಕೋಚವಿಲ್ಲದೆ ಎಲ್ಲಾ ಕಡೆ ಗಳಲ್ಲೂ ವಿಹರಿಸಿದಳು ॥ ೮೩ ॥ ಕಳ್ಳರು ದಾರಿಯಲ್ಲಿರುವ ಬದರಿಯ ಮರದ ಹಣ್ಣುಗಳನ್ನು ಕಿತ್ತುಕೊಂಡು ಅದನ್ನು ಬಿಟ್ಟು ಬಿಡುವಂತೆ, ಕುರಂಗಿಯ ಗಂಡನು ಬರುವ ವಿಷಯವನ್ನು ತಿಳಿದು ವಿಟಪುರುಷರು ದ್ರವ್ಯವನ್ನೆಲ್ಲ ದೋಚಿಕೊಂಡು ಆಕೆಯನ್ನು ಬಿಟ್ಟುಬಿಟ್ಟರು ॥ ೮೪ ॥ ಗಂಡನು ಬರುವ ಸಮಯವನ್ನು ತಿಳಿದು ಆ ಕುರಂಗಿಯು ಉತ್ತಮಪತಿ ವ್ರತೆಯ ವೇಷವನ್ನು ಮಾಡಿಕೊಂಡು ನಾಚುವವಳಾಗಿ ಮನೆಯಲ್ಲಿ ದ್ದಳು. ಸ್ತ್ರೀಯರಿಗೆ ವಂಚನೆಯು ಸಹಜವಾಗಿಯೇ ಇದೆ ॥ ೮೫ ॥ ಆ ಕುರಂಗಿಯು ವ್ಯಭಿಚಾರಿಣಿಯೆಂದು ಯಾವನೂ ತಿಳಿಯದ ಹಾಗೆ ಶುಭ ವೇಷವನ್ನು ಧರಿಸಿದವಳಾಗಿದ್ದಳು ಯಾವ ಸ್ತ್ರೀಯು ಇಂದ್ರನನ್ನೂ ಮೋಹಗೊಳಿಸುವಳೋ ಅಂತಹ ಸ್ತ್ರೀಗೆ ಮನುಷ್ಯರನ್ನು ಮೋಹಗೊಳಿಸು ವುದು ಲೆಕ್ಕವಲ್ಲ ॥ ೮೬ ॥ ತನ್ನ ಪ್ರಭುವಿನ ಕಾರ್ಯವನ್ನೆಲ್ಲ ಸಾಧಿಸಿದ ಈ ಬಹುಧಾನ್ಯಕನು ಬಂದು ತನ್ನ ಊರಿನ ಹೊರಗೆ ಮರದ ಬುಡದಲ್ಲಿ ಕುಳಿತು ತನ್ನ ಹೆಂಡತಿಯ ಬಳಿಗೆ ಒಬ್ಬ ಮನುಷ್ಯನನ್ನು ಕಳುಹಿದನು ॥ ೮೭ ॥ ಆ ಮನು ಷ್ಯನು ಆಕೆಯ ಬಳಿಗೆ ಹೋಗಿ ನಮಸ್ಕರಿಸಿ "ಕುರಂಗಿಯೇ ! ನಿನ್ನ ಗಂಡನು ಬಂದಿದ್ದಾನೆ. ಶೀಘ್ರವಾಗಿ ವಿವಿಧಭೋಜನವನ್ನು ಸಿದ್ಧಮಾಡು. ಈ ಸಮಾಚಾರವನ್ನು ನಿನಗೆ ಹೇಳುವುದಕ್ಕೋಸ್ಕರ ನನ್ನನ್ನು ಕಳುಹಿಸಿದ್ದಾನೆ" ಎಂದನು ॥ ೮೮ ॥ ಬುದ್ಧಿಮತಿಯೂ ವಕ್ರಳೂ ಆದ ಆ ಕುರಂಗಿಯು ಅವನ ಮಾತನ್ನು ಕೇಳಿ "ನೀನು ಹೋಗಿ ದೊಡ್ಡವಳಿಗೆ ಹೇಳು. ಕ್ರಮವನ್ನು ಮೀರಿದರೆ ಅದನ್ನು ಆರ್ಯರು ನಿಂದಿಸುತ್ತಾರೆ" ಎಂದಳು ॥ ೮೯ ॥ ಕುರಂ ಗಿಯು ಆ ಮನುಷ್ಯನೊಡನೆ ಸುಂದರಿಯ ಬಳಿಗೆ ಹೋಗಿ "ಸುಂದರಿಯೆ ! ನಿನ್ನ ಗಂಡನು ಬಂದಿದ್ದಾನೆ. ಬಹು ರಸವುಳ್ಳ ಭೋಜ್ಯವನ್ನು ಮಾಡು. ಈ ದಿವಸ ಮೊದಲು ನಿನ್ನ ಮನೆಯಲ್ಲಿ ಊಟಮಾಡುವನು" ಎಂದಳು ॥ ೯೦ ॥ ಆ ಮಾತನ್ನು ಕೇಳಿ ಸುಂದರಿಯು ಕುರಂಗಿಯನ್ನು ಕುರಿತು

“ ಮಧುರಭಾಷಿಣಿಯೆ ! ಸುಂದರವಾದ ಯೌವನದಂತೆ ಪ್ರಕಾಶಮಾನವಾದ ವರ್ಣವುಳ್ಳ ಭೋಜ್ಯವನ್ನೇನೋ ಮಾಡುತ್ತೇನೆ. ಆದರೆ ನಿನ್ನ ಈ ಗಂಡನು ನನ್ನಲ್ಲಿ ಊಟಮಾಡುವುದಿಲ್ಲ ” ಎಂದಳು ॥ ೯೧ ॥ ಆ ಮಾತನ್ನು ಕೇಳಿ ಕುರಂಗಿಯು ನಕ್ಕು “ ನಿಜವಾಗಿಯೂ ಅವನು ನನ್ನನ್ನು ಪ್ರೀತಿಸುವವನಾದರೆ ಸುಂದರವಾದ ನಿನ್ನ ಮನೆಯಲ್ಲಿ ನನ್ನ ಮಾತಿನಿಂದ ಊಟಮಾಡುವನು. ಅಡುಗೆಯನ್ನು ಮಾಡು ” ಎಂದು ಪುನಃ ಹೇಳಿದಳು ॥ ೯೨ ॥ ಕುರಂಗಿಯು ಈ ಮಾತನ್ನು ಕೇಳಿ ಆ ಸುಂದರಿಯು ಶುಭಕರವಾದ ವಿವಿಧ ಭೋಜ್ಯವನ್ನು ಸಿದ್ಧಮಾಡಿದಳು. ಸಜ್ಜನರು ಎಲ್ಲಾ ಜನರೂ ತಮ್ಮಂತೆ ಸರಳರಾಗಿರುತ್ತಾರೆಂದು ತಿಳಿಯುತ್ತಾರೆ ॥ ೯೩ ॥ ಆ ಮಾಯಾಚಾರಿಣಿಯಾದ ಕುರಂಗಿಯು ಧನಶೂನ್ಯವಾದ ತನ್ನ ಮನೆಯನ್ನು ಕಪಟದಿಂದ ಮುಚ್ಚಿದಳು. ವಂಚಕರಾದ ಹೆಂಗುಸರು ದೂಷಣಗಳೆಂಬ ಧನಗಳನ್ನೆಲ್ಲ ಬಚ್ಚಿಡುತ್ತಾರೆ ॥ ೯೪ ॥ ಬಹುನೀಚಳೂ ಬಹಳ ದೋಷಗಳುಳ್ಳವಳೂ ಆದ ಆ ಕುರಂಗಿಯು ಧರ್ಮಮಾರ್ಗವನ್ನು ಬಿಟ್ಟು ಗಂಡನನ್ನು ವಂಚಿಸಿದಳು. ಪಾಪಿಜೀವಗಳು ಅಪರಿಮಿತವಾದ ಗತಿಯುಳ್ಳ ಸಂಸಾರದುಃಖವನ್ನು ಎಂದಾದರೂ ತಿಳಿಯುತ್ತಾರೆಯೇ ? ॥ ೯೫ ॥

ಇಂತು ಅಮಿತಗತ್ಯಾಚಾರ್ಯವಿರಚಿತ ಧರ್ಮಪರೀಕ್ಷಾ ಚತುರ್ಥಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

—o—

ಅನಂತರದಲ್ಲಿ ಕಾಮಪೀಡಿತವಾದ ಚಿತ್ತವುಳ್ಳ ಆ ಪಟೇಲನು ಬಹು ಕುತೂಹಲವುಳ್ಳವನಾಗಿ ಶೀಘ್ರವಾಗಿ ಬಂದು ಅದೃಷ್ಟವಶಾತ್ ಕುರಂಗಿಯ ಮನೆಗೇ ಹೋದನು ॥ ೧ ॥ ಮೇಘಗಳಿಲ್ಲದ ಆಕಾಶದಂತೆಯೂ ಪುರನಿವಾಸಿಗಳಿಲ್ಲದ ಉತ್ತಮನಗರದಂತೆಯೂ ಧನಧಾನ್ಯಗಳಿಲ್ಲದ ಆ ಮನೆಯನ್ನು ನೋಡಿದರೂ ಈ ಮೂಢಾತ್ಮನು ಕುರಂಗಿಯ ಮುಖಕಮಲವನ್ನು ನೋಡು

ವುದರಲ್ಲಿ ಆಸಕ್ತವಾದ ಮನಸ್ಸುಳ್ಳವನಾಗಿ ಅದನ್ನು ಚಕ್ರವರ್ತಿಯ ಮನೆಗಿಂತಲೂ ಅಧಿಕವನ್ನಾಗಿ ತಿಳಿದನು ॥ ೨-೩ ॥ ಆ ಬಹುಧಾನ್ಯಕನು " ಈ ನನ್ನ ಹೆಂಡತಿಯು ಯಾವುದನ್ನು ಮಾಡುತ್ತಾಳೋ ಅದು ನನಗೆ ಪ್ರಿಯವಾಗಿರುವುದು. ಈಕೆಯು ಯಾವುದನ್ನು ಮಾಡುವುದಿಲ್ಲವೋ ಅದೆಲ್ಲವು ಕೂಡ ನನಗೆ ಪ್ರಿಯವಾಗಿರುವುದು " ಎಂದು ತಿಳಿಯುತ್ತಾನೆ ॥ ೪ ॥ ಅನುರಾಗವುಳ್ಳ ಮನುಷ್ಯರು ಬೇರೆಯವರನ್ನು ನೋಡುವುದಿಲ್ಲವೆಂಬುದೇನೂ ಆಶ್ಚರ್ಯವಲ್ಲ. ರಾಗದಿಂದ ಕುರುಡಾದ ಕಣ್ಣುಗಳುಳ್ಳವರು ತಮ್ಮನ್ನು ಕೂಡ ನೋಡುವುದಿಲ್ಲ ॥ ೫ ॥ ರಕ್ತ (ರಾಗವುಳ್ಳ) ಮನುಷ್ಯನು ಧರ್ಮವನ್ನೂ ಮಾಡತಕ್ಕದನ್ನೂ ಗುಣವನ್ನೂ ಸುಖವನ್ನೂ ಹೇಯವಸ್ತುವನ್ನೂ ಉಪಾದೇಯವಸ್ತುವನ್ನೂ ಯಶಸ್ಸಿನ ನಾಶವನ್ನೂ ದ್ರವ್ಯಹಾನಿಯನ್ನೂ ಮನೆಯ ನಾಶವನ್ನೂ ತಿಳಿಯುವುದಿಲ್ಲ ॥ ೬ ॥ ರಾಗವುಳ್ಳ ಮನುಷ್ಯನು ಪರಾಧೀನತೆಯನ್ನು ಸ್ವೀಕರಿಸುತ್ತಾನೆ; ಸ್ವಾಧೀನತೆಯನ್ನು ತ್ಯಜಿಸುತ್ತಾನೆ. ಪಾಪಕಾರ್ಯದಲ್ಲಿ ಕ್ರೀಡಿಸುತ್ತಾನೆ. ಧರ್ಮಕಾರ್ಯವನ್ನು ಬಿಡುತ್ತಾನೆ ॥ ೭ ॥ ರಾಗಾಕ್ರಾಂತನಾದ ಮನುಷ್ಯನು ಶೀಘ್ರವಾಗಿ ಅಧಿಕವಿಪತ್ತನ್ನು ಹೊಂದುತ್ತಾನೆ. ಮಾಂಸಸಹಿತವಾಗಿರುವ ಗಾಳದಲ್ಲಿ ಸಿಕ್ಕಿರುವ ಮೀನು ಮರಣವನ್ನು ಹೊಂದುವುದಿಲ್ಲವೇ ? ॥ ೮ ॥ ಯುಕ್ತಾಯುಕ್ತವನ್ನು ತಿಳಿಯದಿರುವ ಜಿಂಕೆಯನ್ನು ವ್ಯಾಧನು ಬಾಣಗಳಿಂದ ಹೊಡೆಯುವಂತೆ, ರಕ್ತ-ವಿಷಯಾಸಕ್ತನಾದ ಮನುಷ್ಯನನ್ನು ಕಾಮನು ದುರ್ನಿವಾರವಾದ ಬಾಣಗಳಿಂದ ಹೊಡೆಯುತ್ತಾನೆ ॥ ೯ ॥ ವಿಷಯಾಸಕ್ತನಾದ ಮನುಷ್ಯನನ್ನು ನೋಡಿ ಸಜ್ಜನರು ಶೋಕಪಡುತ್ತಾರೆ. ದುರ್ಜನರು ಪರಿಹಾಸಮಾಡುತ್ತಾರೆ. ಮತ್ತು ಯಾವಾಗಲೂ ಜನರಿಂದ ತಿರಸ್ಕರಿಸಲ್ಪಡುತ್ತಾನೆ. ಅವನು ಯಾವ ಆಪತ್ತನ್ನು ತಾನೆ ಹೊಂದುವುದಿಲ್ಲ ? ॥ ೧೦ ॥ ರಾಗದಲ್ಲಿ ಈ ರೀತಿ ಯಾವ ದೂಷಣವಿರುವುದೆಂದು ತಿಳಿದು ಚತುರನಾದವನು ಅದನ್ನು ಪುನಃ ಪುನಃ ತ್ಯಜಿಸಬೇಕು. ಸರ್ಪವು ವಿಷಕ್ಕೆ ಸ್ಥಾನವೆಂದು ತಿಳಿದೂ

ಯಾವನು ತಾನೆ ಅದನ್ನು ತ್ಯಜಿಸುವುದಿಲ್ಲ ? ॥ ೧೧ ॥ ಬಹುಧಾನ್ಯ ಕನು ಸಂತೋಷದಿಂದ ಮನೆಯ ಬಾಗಿಲಿನಲ್ಲಿದ್ದು ಪ್ರಫುಲ್ಲಿತವಾದ ಕಾಂತಿಯುಳ್ಳ ಪ್ರಿಯೆಯ ಮುಖಕಮಲವನ್ನು ನೋಡುವವನಾಗಿ ಅಡಿಗೆಯ ಮನೆಯನ್ನು ನೋಡಿ ಒಂದು ಕ್ಷಣಕಾಲವಿದ್ದು ತನ್ನ ಮನಸ್ಸಿಗೆ ಪ್ರಿಯಳಾಗಿರುವ ಪತ್ನಿಯನ್ನು ಕುರಿತು "ಎಲೈ ಕುರಂಗಿಯೇ! ಶೀಘ್ರವಾಗಿ ನನಗೆ ಊಟಕ್ಕಿಡು. ಏತಕ್ಕೆ ಸಾವಕಾಶಮಾಡುವೆ ?" ಎಂದನು ॥ ೧೨–೧೩ ॥ ಕುಟಿಲವಾದ ಮನಸ್ಸುಳ್ಳವಳೂ ಪುರುಷಘಾತಿನಿಯೂ ಆದ ಆ ಕುರಂಗಿಯು ಯಮನ ಧನುಸ್ಸಿನಂತೆ ಭಯಂಕರವಾದ ಹುಬ್ಬುಗಳನ್ನು ಗಂಟಿಕ್ಕಿ "ಎಲೈ ದುಷ್ಟಬುದ್ಧಿಯೇ ! ಹೋಗು, ಪೂರ್ವಪದ್ಧತಿಯನ್ನು ಆಚರಿಸುವ ನೀನು ಯಾವಳಿಗೆ ಸಮಾಚಾರವನ್ನು ತಿಳಿಸಿದೆಯೋ ಅಂತಹ ತನ್ನ ತಾಯಿಯ ಮನೆಯಲ್ಲಿ ಊಟಮಾಡು" ಎಂದಳು ॥ ೧೪–೧೫ ॥ ಆ ಕುರಂಗಿಯು ತಾನೇ ಸುಂದರಿಗೆ ಸಮಾಚಾರವನ್ನು ಹೇಳಿದ್ದು ಈಗ ಗಂಡನಲ್ಲಿ ಕೋಪಗೊಂಡಳು. ಪತಿಯು ವಶದಲ್ಲಿದ್ದರೆ ಸ್ತ್ರೀಯರು ಯಾವ ತಪ್ಪನ್ನು ತಾನೆ ಮಾಡುವುದಿಲ್ಲ ? ॥ ೧೬ ॥ ದುಷ್ಟಳಾದ ಕುರಂಗಿಯು ಸ್ವಭಾವದಿಂದ ತಾನು ತಪ್ಪನ್ನು ಮಾಡಿ ಮೊದಲೇ ಅದನ್ನು ನಿವಾರಣೆ ಮಾಡುವುದಕ್ಕೋಸ್ಕರ ಗಂಡನನ್ನು ಕುರಿತು ಕೋಪಿಸಿಕೊಳ್ಳುತ್ತಾಳೆ ॥ ೧೭ ॥ ಕುಟಿಲಾಭಿಪ್ರಾಯವುಳ್ಳ ಸ್ತ್ರೀಯರು ಜ್ಞಾನಿಗಳ ಮನಸ್ಸೂ ಅಪಹೃತವಾಗುವಂತೆಯೂ ಭ್ರಮೆಗೊಳ್ಳುವಂತೆಯೂ ವಿಚಾರಮಾಡಿ ಮಾತನಾಡುತ್ತಾರೆ ॥ ೧೮ ॥ ಹೆಂಗುಸು ಗರ್ವದಿಂದ ಕೋಪವನ್ನೂ ಅಹಂಕಾರವನ್ನೂ ತಿರಸ್ಕಾರವನ್ನೂ ಬೇರೆಯವರಿಗೆ ದುಷ್ಕರವಾದ ಸ್ಥಿರತ್ವವನ್ನೂ ಚೆನ್ನಾಗಿ ಮಾಡಬಲ್ಲಳು. ಹಾಗೆ ಮಾಡಿ ಪುರುಷನನ್ನು ವಶಪಡಿಸಿಕೊಳ್ಳುವಳೆಂದು ಭಾವವು ॥ ೧೯ ॥ ಹೆಂಗುಸು ರಾಗಪರವಶನಾದ ನೀಚಮನುಷ್ಯನನ್ನು ಹೇಗೆಹೇಗೆ ದೂರಮಾಡುತ್ತಾಳೋ ಹಾಗೆಹಾಗೆ ಅವನು, ಕಪ್ಪೆಯಂತೆ, ಇದಿರಾಗಿ ಬರುತ್ತಾನೆ ॥ ೨೦ ॥ ವಿಚಿತ್ರವಾದ ಆಶ್ಚರ್ಯವನ್ನುಂಟು ಮಾಡುವ ಸ್ತ್ರೀಯು ತನ್ನಲ್ಲಿ ಅನುರಕ್ತನಾದ

ಪುರುಷನನ್ನು ರೇಗಿಸುವುದಕ್ಕೂ ಬಲ್ಲಳು. ಮತ್ತೆ ತಾನು ರೇಗಿ ಪುರುಷನ ಮನಸ್ಸನ್ನು ಆಗಲೇ ಸಂತೋಷಪಡಿಸುವುದಕ್ಕೂ ಬಲ್ಲಳು ॥ ೨೧ ॥ ಕಬ್ಬಿಣದ ಕೆಲಸದವನು ಅದನ್ನು ಕಾಯಿಸಿ ಮುರಿಯಲೂ ಬಲ್ಲ, ಸೇರಿಸಲೂ ಬಲ್ಲ. ಅದರಂತೆ ಹೆಂಗಸರು ಪ್ರೇಮವನ್ನು ತೊಲಗಿಸುವುದಕ್ಕೂ ಸಮರ್ಥರಾಗಿರುತ್ತಾರೆ. ಮತ್ತೆ ಅದನ್ನುಂಟುಮಾಡುವುದಕ್ಕೂ ಸಮರ್ಥರಾಗಿರುತ್ತಾರೆ ॥ ೨೨ ॥

ಕುರಂಗಿಯ ಮಾತನ್ನು ಕೇಳಿ ಬಹುಧಾನ್ಯಕನು ಮೂಕನಾಗಿ, ಬೆಕ್ಕಿನ ದೆಸೆಯಿಂದ ಇಲಿಯಂತೆ, ಶರೀರವನ್ನೆಲ್ಲ ಮುದುರಿಕೊಂಡವನಾಗಿ ಸುಮ್ಮನಿದ್ದನು ॥ ೨೩ ॥ ವಜ್ರದ ಬೆಂಕಿಯ ಜ್ವಾಲೆಯನ್ನಾದರೂ ಸುಖದಿಂದ ಸಹಿಸಲಾಗುವುದು. ಆದರೆ ಹೆಂಗಸಿನ ಗಂಟಿಕ್ಕಿದ ಹುಬ್ಬಿನಿಂದ ಭಯಂಕರವಾದ ಮತ್ತು ವಕ್ರವಾಗಿ ಮಾಡಲ್ಪಟ್ಟ ನೋಟವನ್ನು ಸಹಿಸಲಾಗುವುದಿಲ್ಲ ॥ ೨೪ ॥ ದುಷ್ಟಸ್ತ್ರೀಯನ್ನು ಪುರುಷನು ಮಾತನಾಡಿಸಿದರೆ ಆಕೆಯು ತನ್ನ ತೋಳುಗಳನ್ನು ಮುದುರಿಕೊಂಡು ಕೋಪದಿಂದ, ಮಹಾವಿಷವುಳ್ಳ ಹೆಣ್ಣುಹಾವಿನಂತೆ, ಮುಸುಗುಟ್ಟುತ್ತಾಳೆ ॥ ೨೫ ॥ ಇಂತಹ ದುರಾಚಾರಿಣಿಯಾದ ಹೆಂಗುಸರು ಪುರುಷರಿಗೆ, ಕಷ್ಟದಿಂದ ಹೋಗಲಾಡಿಸುವ ರೋಗಗಳಂತೆ, ಯಾವಾಗಲೂ ಪಾಪದಿಂದ ಬಾಧೆಯನ್ನುಂಟುಮಾಡುವವರಾಗಿರುತ್ತಾರೆ ॥ ೨೬ ॥ ಬಹುಧಾನ್ಯಕನ ಮಗನು ಬಂದು ಪ್ರೀತಿಯಿಂದ “ ತಂದೆಯೇ ! ಬಾ, ಊಟಮಾಡು ” ಎಂದು ಕರೆದರೂ ಇವನು, ಚಿಂತಾವಸ್ಥೆಯಲ್ಲಿರುವವನಂತೆ, ಮೂಕನಾಗಿದ್ದನು ॥ ೨೭ ॥ ಆಗ ಕುರಂಗಿಯು ಗಂಡನನ್ನು ಕುರಿತು “ ನೀನೇನು ಪಾಷಂಡತ್ವವನ್ನು ಆರಂಭಿಸಿದೆಯೋ ? ಪ್ರಿಯೆಯ ಮನೆಗೆ ಹೋಗಿ ತಿನ್ನು ” ಎಂದಳು. ಆಗ ಅವನು ಹೆದರಿ ಸುಂದರಿಯ ಮನೆಗೆ ಹೋದನು ॥ ೨೮ ॥ ಅವಳು ತನ್ನ ಮನಸ್ಸಿನಂತೆ ನಿರ್ಮಲವಾದ ಪರಮಪ್ರೀತಿಯಿಂದ ಅವನಿಗೆ ವಿಸ್ತಾರವೂ ಮೃದುವೂ ಆದ ಆಸನ

ವನ್ನು ಕೊಟ್ಟಳು ॥ ೨೯ ॥ ಆಕೆಯು ವಿಚಿತ್ರವಾದ ಪಾತ್ರಗಳನ್ನು ಅವನ ಮುಂದೆ ತುದಿಟ್ಟು, ಯೌವನದಂತೆ, ಮನೋಹರವಾದ ಭೋಜನವನ್ನು ಬಡಿಸಿದಳು ॥ ೩೦ ॥ ವಿಶುದ್ಧವಾದ ಜಿನವಚನದಿಂದ ಅಭವ್ಯನಿಗೆ ಸಮ್ಯಕ್ತ್ವವೂ ರುಚಿಸದಿರುವಂತೆ, ಸುಂದರಿಯಿಂದ ಬಡಿಸಲ್ಪಟ್ಟ ಆಹಾರವು ಅವನಿಗೆ ರುಚಿಸಲಿಲ್ಲ ॥ ೩೧ ॥ "ಇವಳು ಮಾಡುವುದೆಲ್ಲ ನನಗೆ ಪ್ರಿಯವಾಗಿಲ್ಲ, ಪ್ರಿಯವಾಗಿಲ್ಲದೆಯೂ ಇಲ್ಲ" ಎಂದು ಬಹುಧಾನ್ಯಕನು ವಿಚಾರ ಮಾಡುತ್ತಾನೆ ॥ ೩೨ ॥ ಮೋಹಪರವಶವಾದ ಯಾವ ಜೀವವು ಯಾವ ವಸ್ತುವಿನಲ್ಲಿ ವಿರಕ್ತಿಯನ್ನು ಹೊಂದುವುದೋ ಆ ವಸ್ತುವು ಒಳ್ಳೆಯದಾಗಿದ್ದರೂ ಆ ಜೀವಕ್ಕೆ ಅದು ರುಚಿಸುವುದಿಲ್ಲ ॥ ೩೩ ॥ ಪುಷ್ಟಿಯನ್ನು ಕೊಡುವುದೂ ಬಹುಪ್ರೀತಿಯುಳ್ಳುದೂ ಭಂಗಾರದಿಂದ ಪ್ರಕಾಶಮಾನವೂ ಆದ ಕಳತ್ರದಂತೆ, ಪುಷ್ಟಿಯನ್ನುಂಟುಮಾಡುವುದೂ ಹೆಚ್ಚು ಜಿಡ್ಡಾಗಿರುವುದೂ ಒಳ್ಳೆಯ ಬಣ್ಣದಿಂದ ಶೋಭಿಸುವುದೂ ಆದ ಆ ಉತ್ತಮಭೋಜನವು ಅವನಿಗೆ ಪ್ರೀತಿಕರವಾಗಲಿಲ್ಲ ॥ ೩೪ ॥ ಕಾಮವೆಂಬ ಕಗ್ಗತ್ತಲೆಯಿಂದ ವ್ಯಾಪ್ತನಾದ ಈ ಬಹುಧಾನ್ಯಕನು ತನ್ನ ಮುಂದೆ ಪಾತ್ರದಲ್ಲಿರುವ ಉತ್ತಮವಾದ ಭೋಜ್ಯವನ್ನು ನೋಡಿ ಶೀಘ್ರವಾಗಿ "ಚಂದ್ರಬಿಂಬವಂತೆ ಆನಂದದಾಯಕಳೂ ಒಳ್ಳೆಯ ಕುಚಗಳುಳ್ಳವಳೂ ಆದ ನನ್ನ ಕುರಂಗಿಯು ನೋಡುವುದೂ ಇಲ್ಲವೇಕೆ ? ನಿಜವಾಗಿಯೂ ನಾನು ವೇಶ್ಯೆಯೊಡನೆ ಮಲಗಿದ್ದೆನೆಂದು ತಿಳಿದು ನನ್ನಲ್ಲಿ ಕೋಪಮಾಡುತ್ತಾಳೆ, ಲೋಕದಲ್ಲಿ ಸಮರ್ಥಳಾದ ಸ್ತ್ರೀಯು ತಿಳಿಯದಿರುವ ವಸ್ತುವೇ ಇಲ್ಲ" ಎಂದು ಯೋಚಿಸಿದನು ॥ ೩೫–೩೭ ॥ ಮುಖವನ್ನೆತ್ತಿರುವ ಈ ಬಹುಧಾನ್ಯಕನನ್ನು ಕುರಿತು ಪರಿವಾರಜನರು "ನಿನಗೆ ಸೇರುವುದಿಲ್ಲವೋ ? ಇಲ್ಲಿ ಎಲ್ಲವೂ ಮನೋಹರವಾಗಿದೆ, ಊಟಮಾಡು" ಎಂದರು ॥ ೩೮ ॥ ಆಗ ಅವನು "ಏನು ಊಟ ಮಾಡಲಿ ? ನನಗೆ ಇಷ್ಟವಾದುದಾವುದೂ ಇಲ್ಲ. ನನಗೆ ಕುರಂಗಿಯ ಮನೆಯಿಂದ ಸ್ವಲ್ಪ ಭೋಜ್ಯವನ್ನು ತನ್ನಿರಿ" ಎಂದನು ॥ ೩೯ ॥ ಆ

ಮಾತನ್ನು ಕೇಳಿ ಸುಂದರಿಯು ಕುರಂಗಿಯ ಮನೆಗೆ ಹೋಗಿ "ಕುರಂಗಿಯೇ ! ಪತಿಯ ರುಚಿಗಾಗಿ ನೀನು ಸ್ವಲ್ಪ ಭೋಜ್ಯವನ್ನು ಕೊಡು" ಎಂದಳು ॥ ೪೦ ॥ ಅದಕ್ಕೆ ಕುರಂಗಿಯು "ನಿನ್ನ ಮನೆಯಲ್ಲಿ ಅವನಿಗೆ ಭೋಜನವೆಂದು ತಿಳಿದು ನಾನು ಈ ದಿವಸ ಏನೂ ಮಾಡಲಿಲ್ಲ." 'ಆ ಗಂಡನು ನಾನು ಕೊಟ್ಟ ಸಗಣಿಯನ್ನು ತಿಂದರೆ ಆಗ ನನ್ನಲ್ಲಿ ರಕ್ತ (ಅನುರಾಗವುಳ್ಳ) ಬುದ್ಧಿಯುಳ್ಳವನಾಗಿ ನನ್ನ ದೂಷಣವನ್ನೆಲ್ಲ ಸಹಿಸುವನು' ಎಂದು ತನ್ನ ಮನಸ್ಸಿನಲ್ಲಿ ಯೋಚಿಸಿ ಆಗ ಉಬ್ಬಿರುವ ಒಂದೊಂದು ಗೋದಿಯ ಕಾಳುಗಳುಳ್ಳದೂ ನಿಂದ್ಯವೂ ಬಹಳ ತೆಳುವಾಗಿರುವುದೂ ಸ್ವಲ್ಪ ಬಿಸಿಯೂ ಆಗಿರುವ ಹೊಸ ಸಗಣಿಯನ್ನು ತೆಗೆದುಕೊಂಡು ಪಾತ್ರೆಯಲ್ಲಿರಿಸಿ "ತೆಗೆದುಕೊ. ನೀನು ಈ ಆಹಾರವನ್ನು ತೆಗೆದುಕೊಂಡು ಹೋಗಿ ಗಂಡನಿಗೆ ಬಡಿಸು" ಎಂದು ಹೇಳಿ ಸುಂದರಿಗೆ ಕೊಟ್ಟಳು ॥ ೪೧–೪೪ ॥ ಅದನ್ನು ತೆಗೆದುಕೊಂಡು ಬಂದು ಸುಂದರಿಯು ಗಂಡನಿಗೆ ಕೊಟ್ಟಳು. ಕೊಳಕಾದ ಹಂದಿಯಂತೆ, ಆ ಬಹುಧಾನ್ಯಕನು ಒಳ್ಳೆಯ ಆಹಾರವನ್ನು ಬಿಟ್ಟು ಆ ಸಗಣಿಯನ್ನು ಹೊಗಳಿ ಹೊಗಳಿ ತಿಂದನು ॥ ೪೫ ॥ ಆ ಸ್ತ್ರೀವ್ಯಾಮೋಹಿತನು ಸಗಣಿಯನ್ನು ತಿಂದುದಿದೇನಾಶ್ಚರ್ಯ ? ಕಾಮುಕನು ತನ್ನ ಸ್ತ್ರೀಯ ಜಘನ ಮತ್ತು ಮುಖದಲ್ಲಿರುವ ಅಶುಚಿವಸ್ತು ಮೊದಲಾದುದನ್ನೂ ತಿನ್ನುತ್ತಾನೆ ॥ ೪೬ ॥ ವಿರಕ್ತನಿಗೆ ಪ್ರಶಸ್ತವಾದ ವಸ್ತುವೂ ಅಪ್ರಶಸ್ತವಾಗಿರುತ್ತದೆ. ಅನುರಾಗವುಳ್ಳವನಿಗೆ ಅಪ್ರಶಸ್ತವಾದ ವಸ್ತುವೂ ಚೆನ್ನಾಗಿ ಪ್ರಶಸ್ತವಾಗಿರುತ್ತದೆ ॥ ೪೭ ॥ ಹೆಂಡತಿಗೆ ಅಧೀನರಾಗಿರುವವರು ಲೋಕದಲ್ಲಿ ಮಾಡದಿರುವ ಕೆಲಸವೇ ಇಲ್ಲ. ಅಮೇಧ್ಯವನ್ನೂ ತಿನ್ನುತ್ತಾರೆ. ಸಗಣಿಯು ಪಾವನವಲ್ಲವೇ ? ॥ ೪೮ ॥

ಗ್ರಾಮಾಧಿಪತಿಯಾದ ಆ ಬಹುಧಾನ್ಯಕನು ಸಗಣಿಯನ್ನೇ ತಿಂದು ಚಾವಡಿಯಲ್ಲಿ ಹೋಗಿ ಕುಳಿತು ತನ್ನ ಹೆಂಡತಿಯ ಕೋಪದ ಕಾರಣವನ್ನು ಒಬ್ಬದ್ವಿಜನಲ್ಲಿ "ಮಂಗಳಾಂಗನೆ ! ನನ್ನ ಪ್ರಿಯೆಯು ಸಿಟ್ಟುಗೊಂಡಿದ್ದಾಳೆ.

ನಿನಗೇನಾದರೂ ತಿಳಿಯುವುದೇ? ಅಥವಾ ನನ್ನ ತಪ್ಪೇನಾದರೂ ಇದ್ದರೆ ನಿಜವಾಗಿ ಹೇಳು '' ಎಂದು ಕೇಳುವುದಕ್ಕೆ ತೊಡಗಿದನು. ತನ್ನಲ್ಲಿಯ ಜೋಯಿಸನಲ್ಲಿ ಪ್ರಶ್ನೆ ಕೇಳಲಾರಂಭಿಸಿದನೆಂದರ್ಥವು ॥ ೪೯–೫೦ ॥ ಆಗ ಜೋಯಿಸನು ಬಹುಧಾನ್ಯಕನನ್ನು ಕುರಿತು "ಅಯ್ಯಾ! ನಿನ್ನ ಪ್ರಿಯೆಯ ಸ್ಥಿತಿಯು ಹಾಗಿರಲಿ. ಸ್ತ್ರೀಯರ ವ್ಯಾಪಾರವನ್ನು ಸಾಮಾನ್ಯವಾಗಿ ಹೇಳುತ್ತೇನೆ, ಕೇಳು ॥ ೫೧ ॥ ಹೆಂಗುಸರಲ್ಲಿಲ್ಲದ ದೋಷವೇ ಲೋಕದಲ್ಲಿಲ್ಲ. ಕತ್ತಲೆಯು ರಾತ್ರಿಯಲ್ಲಲ್ಲದೆ ಮತ್ತೆಲ್ಲಿರುವುದು ? ॥ ೫೨ ॥ ಸಮುದ್ರದ ನೀರಿನ ಅಳತೆಯನ್ನಾದರೂ ಮಾಡಬಹುದು. ಆದರೆ ಸಮಸ್ತದೋಷಗಳಿಗೆ ದೊಡ್ಡ ಗಣಿಯಾಗಿರುವ ಹೆಂಗುಸಿನ ದೋಷಗಳ ಅಳತೆಯನ್ನು ಮಾಡಲಾಗುವುದಿಲ್ಲ ॥ ೫೩ ॥ ಗೆದ್ದಲುಗಳ ರಂಧ್ರ (ಹುತ್ತ) ಗಳಿಲ್ಲಿರುವುವೂ ಬಹುಕೋಪವುಳ್ಳುವೂ ಎರಡು ನಾಲಗೆಯುಳ್ಳುವೂ ಆದ ಹೆಣ್ಣುಹಾವುಗಳಂತೆ, ಬೇರೆಯವರ ದೋಷವನ್ನು ಮಾತನಾಡುವವರೂ ಬಹುಕೋಪವುಳ್ಳವರೂ ಆದ ಹೆಂಗುಸರ ಕೋಪವೆಂದೂ ಶಾಂತವಾಗುವುದಿಲ್ಲ ॥ ೫೪ ॥ ಬಹಳ ವೃದ್ಧಿಯನ್ನು ಹೊಂದಿರುವ ವೇದನೆಯನ್ನು ಸದಾ ಉಪಚರಿಸಿದರೂ ಅದು ಪ್ರಾಣಹಾನಿಯನ್ನು ಮಾಡುವಂತೆ, ಸ್ತ್ರೀಯು ಯಾವಾಗಲೂ ಉಪಚರಿಸಲ್ಪಟ್ಟರೂ ಪ್ರಾಣಹಾನಿಯನ್ನು ಮಾಡುತ್ತಾಳೆ ॥ ೫೫ ॥ ಬ್ರಹ್ಮನು ಲೋಕದಲ್ಲಿ ತಿರುಗುತ್ತಿರುವ ಮತ್ತು ಒಂದಕ್ಕೊಂದು ಕಾಣದಿರುವ ದೋಷಗಳ ರಾಶಿಯನ್ನು ಮಾಡಿ ಹೆಂಗುಸನ್ನು ಸೃಷ್ಟಿಸಿದ್ದಾನೆ. ನಿಶ್ಚಯ ॥ ೫೬ ॥ ನೀರುಗಳಿಗೆ ಹೊಳೆಯಂತೆ, ಕೆಡುಕುಗಳಿಗೆ ಹೆಂಗುಸು ನಿಧಿಯಾಗಿದ್ದಾಳೆ. ವಿಷಗಳಿಗೆ ಹೆಣ್ಣುಹಾವು ವಾಸಸ್ಥಾನವಾಗಿರುವಂತೆ, ದುರಾಚಾರಗಳಿಗೆ ಹೆಂಗುಸು ವಾಸಸ್ಥಾನಳಾಗಿದ್ದಾಳೆ ॥ ೫೭ ॥ ಲತೆಗಳಿಗೆ ಭೂಮಿಯು ಕಾರಣವಾಗಿರುವಂತೆ, ಅಕೀರ್ತಿಗಳಿಗೆ ಹೆಂಗುಸು ಕಾರಣಳಾಗಿದ್ದಾಳೆ. ಕತ್ತಲೆಗಳಿಗೆ ರಾತ್ರಿಯು ಉತ್ಪತ್ತಿಸ್ಥಾನವಾಗಿರುವಂತೆ, ದುರ್ನೀತಿಗಳಿಗೆ ಹೆಂಗುಸು ಉತ್ಪತ್ತಿಸ್ಥಾನಳಾಗಿದ್ದಾಳೆ ॥ ೫೮ ॥ ಹೆಂಗುಸು, ಕಳ್ಳ ಹೆಂಗುಸಿನಂತೆ, ಸ್ವಾರ್ಥಪ

ರಳೂ, ಬೆಂಕಿಯು ಉರಿಯಂತೆ, ತಾಪವನ್ನುಂಟುಮಾಡುವವಳೂ, ನೆರಳಿನಂತೆ, ಹಿಡಿಯುವುದಕ್ಕೆ ಕಷ್ಟಸಾಧ್ಯಳೂ, ಸಂಧ್ಯಾಕಾಲದಂತೆ, ಕ್ಷಣಕಾಲದವರೆಗೆ ರಾಗ-ಪ್ರೀತಿಯುಳ್ಳವಳೂ ಆಗಿರುತ್ತಾಳೆ ॥ ೫೯ ॥ ಹೆಂಗುಸು, ಹೆಣ್ಣುನಾಯಿಯಂತೆ, ಅಸ್ಪೃಶ್ಯಳೂ ನೀಚಳೂ ಪ್ರಿಯವಚನವನ್ನಾಡುವವಳೂ ಪಾಪಕರ್ಮದಿಂದ ಜನಿಸಿದವಳೂ ಕೊಳಕಿಯೂ ಬಿಟ್ಟಿರುವುದನ್ನು ತಿನ್ನುವವಳೂ ಆಗಿರುತ್ತಾಳೆ ॥ ೬೦ ॥ ದುರ್ಲಭವಾದ ವಸ್ತುವಿನಲ್ಲಿ ಶೀಘ್ರವಾಗಿ ಪ್ರೀತಿಯನ್ನು ಮಾಡುತ್ತಾಳೆ. ತನ್ನ ವಸ್ತುವನ್ನು ಬಿಟ್ಟು ಬಿಡುತ್ತಾಳೆ. ಭಯಂಕರವಾದ ಸಾಹಸವನ್ನು ಮಾಡುತ್ತಾಳೆ. ಹೆದರುವುದಿಲ್ಲ, ನಾಚುವುದಿಲ್ಲ ॥ ೬೧ ॥ ಸ್ತ್ರೀಯು ಮಿಂಚಿನಂತೆ ಅಸ್ಥಿರಳೂ ಹೆಣ್ಣುಹುಲಿಯಂತೆ ಕ್ರೂರಿಯೂ ಹೆಣ್ಣುಮೀನಿನಂತೆ ಚಂಚಲಳೂ ದುರ್ನೀತಿಯಂತೆ ದುಃಖವನ್ನು ಕೊಡುವವಳೂ ಆಗಿರುತ್ತಾಳೆ ॥ ೬೨ ॥ ಮಹಾಶಯನೆ ! ಹೆಚ್ಚು ಹೇಳುವುದರಿಂದೇನು ? ಕುರಂಗಿಯು ನಿನ್ನ ಮನೆಯಲ್ಲಿ ಪ್ರತ್ಯಕ್ಷ ಶತ್ರುವಾಗಿರುತ್ತಾಳೆಂದು ತಿಳಿ ॥ ೬೩ ॥ ಎಲೈ ಮಂಗಳಾಂಗನೆ ! ಪಾಪಿಷ್ಠಳಾದ ಕುರಂಗಿಯು ಚಾರಿತ್ರದಂತೆ ದುರ್ಲಭವಾದ ದ್ರವ್ಯವನ್ನೆಲ್ಲ ವಿಟಪುರುಷರಿಗೆ ಕೊಟ್ಟು ನಾಶಮಾಡಿದಳು ॥ ೬೪ ॥ ನಿರ್ಭಯವಾದ ಮನಸ್ಸುಳ್ಳವಳಾಗಿ ನಿನ್ನ ದ್ರವ್ಯವನ್ನು ಅಪಹರಿಸುವವಳು ದುರಭಿಪ್ರಾಯದಿಂದ ಪ್ರಾಣಾಪಹಾರವನ್ನು ಮಾಡಿದರೆ ತಡೆಯುವವನಾರು ? ॥ ೬೫ ॥ ಕಾಲಿನ ಮೆಟ್ಟಿನಂತೆ ಪುರುಷರಿಗೆ ನಿಶ್ಚಯವಾಗಿ ಜಾರುವಿಕೆಯುಂಟುಮಾಡುತ್ತಾಳೆ. ಹೆಂಗುಸನ್ನು ನಿರ್ಬಂಧದಲ್ಲಿಟ್ಟುಕೊಳ್ಳದೆ-ಸ್ವೇಚ್ಛೆಯಾಗಿ ಬಿಟ್ಟರೆ ಕೂಡಲೆ ಕೆಟ್ಟ ದಾರಿಯನ್ನು ಅನುಸರಿಸುವಳು ॥ ೬೭ ॥ ನಿರ್ದಯವಾದ ಮನಸ್ಸುಳ್ಳ ಹೆಂಗುಸರನ್ನು ನಂಬುವ ಮೂರ್ಖನು ಹಸಿವಿನಿಂದ ಆತುರವಾದ ದೇಹವುಳ್ಳ ಹೆಣ್ಣುಹಾವುಗಳನ್ನು ನಂಬುತ್ತಾನೆಂದು ತಿಳಿಯಬೇಕು ॥ ೬೭ ॥ ಮನೆಯಲ್ಲಿ ವಾಸಮಾಡುವ ದುಷ್ಟಸ್ತ್ರೀಯು ಹೆಣ್ಣುಹಾವಿನಂತೆಯೂ ಕಳ್ಳ

ಹೆಂಗುಸಿನಂತೆಯೂ ಹೆಣ್ಣಾನೆಯಂತೆಯೂ ರಾಕ್ಷಸಿಯಂತೆಯೂ ಶಾಕಿನಿಯಂತೆಯೂ ಪ್ರಾಣಹಾನಿಯನ್ನು ಮಾಡುವಳು " ॥ ೬೮ ॥

ಹಿತಭಾಷಿಯಾದ ಆ ಭಟ್ಟನ ಈ ಮಾತನ್ನು ಕೇಳಿ ದುರ್ಬುದ್ಧಿಯುಳ್ಳ ಆ ಬಹುಧಾನ್ಯಕನು ಮನೆಗೆ ಹೋಗಿ ಎಲ್ಲವನ್ನೂ ಕುರಂಗಿಗೆ ಹೇಳಿದನು ॥ ೬೯ ॥ ದುರಾಚಾರಿಣಿಯಾದ ಆ ಕುರಂಗಿಯು ಗಂಡನನ್ನು ಕುರಿತು " ಸ್ವಾಮಿಯೇ ! ನನ್ನ ಶೀಲವನ್ನು ಕೆಡಿಸುವುದಕ್ಕೆ ಪ್ರಯತ್ನಿಸಿದ ಈ ಭಟ್ಟನು ಇಷ್ಟಸಿದ್ಧಿಯುಳ್ಳವನಾಗದೆ ನನ್ನ ಮೇಲೆ ದೂಷಣವನ್ನು ಹೊರಿಸುತ್ತಾನೆ ॥ ೭೦ ॥ ಮೊಸಳೆಗಳಿಗೆ ಸಮುದ್ರವು ಉತ್ಪತ್ತಿಸ್ಥಾನವಾಗಿರುವಂತೆ ಅನ್ಯಾಯಗಳಿಗೆ ಈ ದುಷ್ಟಾತ್ಮನು ಮೂಲಕಾರಣನಾಗಿದ್ದಾನೆ. ಸ್ವಾಮಿಯೆ ! ಇವನನ್ನು ಶೀಘ್ರವಾಗಿ ಹೊರಗೆ ಹಾಕಿರಿ ’’ ಎಂದಳು ॥ ೭೧ ॥ ಆಕೆಯ ಆ ಮಾತಿನಿಂದ ಬಹುಧಾನ್ಯಕನು ಹಿತೈಷಿಯಾದ ಆ ಭಟ್ಟನನ್ನು ನಿರಾಕರಿಸಿದನು. ಹೆಂಗುಸರ ಮಾತಿನಲ್ಲಿ ಅನುರಾಗವುಳ್ಳವನಾಗಿರುವವನು ಏನನ್ನು ತಾನೆ ಮಾಡುವುದಿಲ್ಲ ? ॥ ೭೨ ॥ ವಿಚಾರವಿಲ್ಲದವರಿಗೆ ಹೇಳುವ ಒಳ್ಳೆಯ ಮಾತು, ಎರಡು ನಾಲಗೆಯುಳ್ಳ ಹಾವುಗಳಿಗೆ ಕುಡಿಸುವ ಹಾಲಿನಂತೆ, ಬಹಳ ಭಯವನ್ನುಂಟುಮಾಡುವುದು ॥ ೭೩ ॥ ಬಹುಧಾನ್ಯಕನಿಗೆ ಸಮಾನರಾಗಿರುವವರೂ ರಾಗಾಂಧರೂ ವಿಚಾರವಿಲ್ಲದವರೂ ಆದ ಮನುಷ್ಯರು ಹಿತವಚನದಲ್ಲಿಯೂ ನಿಜವಾಗಿ ದೋಷವನ್ನಾರೋಪಿಸುತ್ತಾರೆ ॥ ೭೪ ॥ ಹಿತಕಾರಿಯಾದ ಜೋಯಿಸನು ದುರಾಚಾರಿಣಿಯಾದ ಆ ಕುರಂಗಿಯ ಚರಿತ್ರೆಯನ್ನು ಹೇಳಿದರೆ ಅದನ್ನು ಆ ಮೂರ್ಖ—ಬಹುಧಾನ್ಯಕನು ಆಕೆಗೇ ಹೇಳಿದ ಮೇಲೆ ಅವನು ಇನ್ನೇನನ್ನು ತಾನೆ ಮಾಡುವುದಿಲ್ಲ ? ॥ ೭೫ ॥ ವಿಪ್ರರೆ ! ಈ ರೀತಿಯಾಗಿ ರಕ್ತ (ರಾಗವುಳ್ಳ) ಮೂರ್ಖಪುರುಷನ ವಿಷಯವನ್ನು ಹೇಳಿದೆನು. ಈಗ ಕ್ರಮದಿಂದ ಸೂಚಿಸಲ್ಪಡುವ ದ್ವಿಷ್ಟಮೂರ್ಖಪುರುಷನ ವಿಷಯವನ್ನು ಕೇಳಿರಿ ॥ ೭೬ ॥

೨. ದ್ವಿಷ್ಟಮೂರ್ಖಪುರುಷನ ಕಥೆ

ಕೋಟೀನಗರ ನಿವಾಸಿಗಳಾದ ಸ್ಕಂಧ ವಕ್ರರೆಂಬಿಬ್ಬರು ಗ್ರಾಮಾಧಿಪತಿಗಳಾಗಿದ್ದರು. ಅವರಲ್ಲಿ ವಕ್ರನು ಕುಟಿಲಮನಸ್ಸಿನವನಾಗಿದ್ದನು ‖ ೭೭ ‖ ಅವರಿಬ್ಬರೂ ಒಂದು ಗ್ರಾಮದ ಹುಟ್ಟುವಳಿಯನ್ನು ಅನುಭವಿಸುತ್ತಿದ್ದರು. ಹೀಗಿರುವಾಗ ಅವರಲ್ಲಿ ಪರಸ್ಪರ ದ್ವೇಷವುಂಟಾಯಿತು. ಒಂದು ಪದಾರ್ಥವನ್ನು ಹಲವರು ಅಪೇಕ್ಷಿಸಿದರೆ ದ್ವೇಷಕ್ಕೆ ಕಾರಣವಾಗುವುದು ಸಹಜವಾಗಿದೆ ‖ ೭೮ ‖ ಪ್ರಕಾಶವನ್ನಿಚ್ಛಿಸುವ ಕಾಗೆಗೂ ಕತ್ತಲೆಯನ್ನಿಚ್ಛಿಸುವ ಗೂಬೆಗೂ ಸ್ವಾಭಾವಿಕವಾದ ಮಹಾದ್ವೇಷವಿರುವಂತೆ, ಆ ಸ್ಕಂಧವಕ್ರರಲ್ಲಿ ದುರ್ನಿವಾರವಾದ ಮಹಾದ್ವೇಷವುಂಟಾಯ್ತು ‖ ೭೯ ‖ ವಕ್ರನು ಯಾವಾಗಲೂ ಜನರಿಗೆ ಬಹಳ ಉಪದ್ರವವನ್ನು ಮಾಡುತ್ತಿದ್ದನು. ದೋಷದಲ್ಲಿ ಬುದ್ಧಿಯುಳ್ಳ ಕುಟಿಲಮನುಷ್ಯನು ಲೋಕದಲ್ಲಿ ಯಾರಿಗೆ ತಾನೆ ಸುಖಕೆ ಕಾರಣನಾಗುತ್ತಾನೆ ? ‖ ೮೦ ‖ ಒಂದಾನೊಂದು ಕಾಲದಲ್ಲಿ ಈ ವಕ್ರನು, ಯಮರಾಜನಂತೆ, ಪ್ರಾಣಾಪಹಾರಿಯಾದ ವ್ಯಾಧಿಯನ್ನು ಹೊಂದಿದನು. ಲೋಕದಲ್ಲಿ ಬೇರೆಯವರಿಗೆ ದುಃಖವನ್ನುಂಟುಮಾಡುವ ಮೂರ್ಖನು ಯಾವ ದೋಷ—ದುಃಖವನ್ನು ತಾನೆ ಹೊಂದುವುದಿಲ್ಲ ? ‖ ೮೧ ‖ ಆ ವಕ್ರನ ಪರಿಶುದ್ಧಮನಸ್ಸಿನವನಾದ ಮಗನು ತಂದೆಯನ್ನು ಕುರಿತು. “ತಂದೆಯೆ ! ನೀನು ನಿರ್ದುಷ್ಟವಾದ ಯಾವುದಾದರೊಂದು ಧರ್ಮವನ್ನು ಮಾಡು. ಅದು ನಿನಗೆ ಪರಲೋಕದಲ್ಲಿ ಸುಖವನ್ನುಂಟುಮಾಡುವುದು ‖ ೮೨ ‖ ಅನೇಕಸುಖದುಃಖಗಳನ್ನುಂಟುಮಾಡಬಲ್ಲ ತಾನು ಮಾಡಿದ ಕರ್ಮವನ್ನು ಬಿಟ್ಟು ಪುತ್ರ ಕಳತ್ರ ಧನಾದಿಗಳಲ್ಲಿ ಯಾರೂ ತನ್ನೊಡನೆ ಪರಲೋಕಕ್ಕೆ ಬರುವುದಿಲ್ಲ ‖ ೮೩ ‖ ಹಲವು ದಾರಿಗಳುಳ್ಳ ದುರಂತವಾದ ಜನ್ಮವೆಂಬ ಅರಣ್ಯದಲ್ಲಿ ತಿರುಗುವವರಿಗೆ ಯಾವನೂ ಪರಕೀಯನಲ್ಲ, ಸ್ವಕೀಯನೂ ಅಲ್ಲ. ಈ ರೀತಿಯಾಗಿ ತಿಳಿದು ತಂದೆಯೆ ! ದುರ್ಬುದ್ಧಿಯನ್ನು

ಬಿಟ್ಟು ಹಿತಕರವಾದ ಯಾವುದಾದರೂ ಕಾರ್ಯವನ್ನು ಮಾಡು ‖ ೮೪ ‖ ಮಿತ್ರಪುತ್ರಾದಿಗಳಲ್ಲಿ ಮೋಹವನ್ನು ತ್ಯಜಿಸಿ ದ್ರವ್ಯವನ್ನು ದ್ವಿಜರಿಗೂ ಸಾಧು ಜನರಿಗೂ ಕೊಡು. ಇಷ್ಟದೇವರನ್ನು ಸ್ಮರಿಸು. ಅದರಿಂದ ನೀನು ಸುಖಕ್ಕೆ ನೆಲೆಯಾದ ಗತಿಯನ್ನು ಪಡೆಯುವೆ " ಎಂದು ಹೇಳಿದನು ‖ ೮೫ ‖ ಈ ಮಾತನ್ನು ಕೇಳಿ ಆ ವಕ್ರನು ಮಗನನ್ನು ಕುರಿತು " ಪುತ್ರನೆ ! ನನಗೆ ಹಿತವಾದ ಇದೊಂದು ಕೆಲಸವನ್ನು ಮಾಡು. ಸುಪುತ್ರನು ತಂದೆಯ ಪೂಜ್ಯವಾಕ್ಯವನ್ನೆಂದೂ ನಿರಾಕರಿಸುವುದಿಲ್ಲ ‖ ೮೬ ‖ ಎಲೌ ಮಗುವೆ ! ನಾನು ಬದುಕಿರುವಾಗ ನನ್ನ ವೈರಿಯಾದ ಸ್ಕಂಧನು ಬಂಧು ಪುತ್ರ ವಿಭವ ಸಮೇತನಾಗಿ ಯಾವಾಗಲೂ ಸೌಖ್ಯವನ್ನು ಪಡೆದನು, ನಾಶವನ್ನು ಹೊಂದ ಲಿಲ್ಲ ‖ ೮೭ ‖ ಮಗುವೆ ! ಇವನು ಬುಡಮಟ್ಟ ಹಾಳಾಗುವಂತಹ ಯಾವುದಾದರೊಂದು ಕೆಲಸವನ್ನು ಮಾಡು. ಅದರಿಂದ ನಾನು ದೇವ ಲೋಕದಲ್ಲಿ ಸಂತುಷ್ಟವಾದ ಮನಸ್ಸುಳ್ಳವನೂ ಸುಂದರವಾದ ಶರೀರವುಳ್ಳ ವನೂ ಆಗಿ ಬಹುಕಾಲದವರೆಗೆ ವಾಸಮಾಡುವೆನು ‖ ೮೮ ‖ ಮಗನೆ ! ನಾನು ಮೃತನಾದ ಮೇಲೆ ನನ್ನ ಹೆಣವನ್ನು ಈ ಸ್ಕಂಧನ ಹೊಲಕ್ಕೆ ತೆಗೆ ದುಕೊಂಡು ಹೋಗಿ ಕೋಲಿಗೆ ತೂಗುಹಾಕಿ ಪೈರುಗಳ ಸಮೂಹವನ್ನು ನಾಶಮಾಡುವ ಎಲ್ಲಾ ನಮ್ಮ ದನಗಳ ಎಮ್ಮೆಗಳ ಮತ್ತು ಕುದುರೆಗಳ ಹಿಂಡನ್ನು ಆ ಹೊಲಕ್ಕೆ ಬಿಡು ‖ ೮೯ ‖ ಈ ಸ್ಕಂಧನು ಬರುವುದನ್ನು ನೋಡು ವುದಕ್ಕೋಸ್ಕರ ನನ್ನ ಶವದ ಹತ್ತಿರ ಮರ ಹುಲ್ಲುಗಳ ಮರೆಯಲ್ಲಿರು. ಕೋಪಪರವಶನಾದ ಸ್ಕಂಧನು ನನ್ನನ್ನು ಹೊಡೆದಾಗ ಎಲ್ಲಾ ಜನರು ಕೇಳು ವುದಕ್ಕಾಗಿ ಅರಚಿಕೊ—ಅಳು ‖ ೯೦ ‖ ಆಗ ಇವನು ನನ್ನನ್ನು ಕೊಂದನೆಂದು ತಿಳಿದು ರಾಜನು ಇವನ ಸಂಪತ್ತಿಯನ್ನೆಲ್ಲ ಕಿತ್ತುಕೊಂಡು ಶಿಕ್ಷಿಸುವನು. ಅದರಿಂದ ಇವನು ಪುತ್ರಸಹಿತನಾಗಿ ಸಾಯುವನು " ಎಂದು ಹೇಳಿದನು ‖ ೯೧ ‖ ಈ ರೀತಿಯಾಗಿ ಹೇಳುತ್ತಿರುವ ಈ ಕುತ್ಸಿತನಾದ ನೀಚನನ್ನು ಮೃತ್ಯುವು ಬಂದು ಕೊಂದಿತು. ಮಗನು ಅವನ ಮಾತಿನಂತೆ ಮಾಡಿ

ದನು. ಪಾಪಿಷ್ಠನಿಗೆ ಸಹಾಯಕರು ಒದಗುತ್ತಾರೆ ॥ ೯೨ ॥ ಬುದ್ಧಿಹೀನನಾದ ಯಾವ ಮನುಷ್ಯನು ಸುಖಿಯಾಗಿರುವ ಇತರ ಮನುಷ್ಯನನ್ನು ನೋಡಿ ಸಾಯುವಾಗಲೂ ದ್ವೇಷಪರನಾಗಿರುತ್ತಾನೋ ಅವನಿಗೆ ನಿರ್ದಯನಾದ ಯಮನನ್ನು ಬಿಟ್ಟು ಬೇರೆ ಯಾವನೂ ಶಿಕ್ಷೆಯನ್ನುಂಟುಮಾಡುವವನಿಲ್ಲ ॥ ೯೩ ॥ ದ್ವಿಜನೆ! ಆ ವಕ್ರನು ಮಗನ ಹಿತವಚನವನ್ನು ನಡೆಸಲಿಲ್ಲ. ನಿಮ್ಮಲ್ಲಿ ಅವನಿಗೆ ಸಮಾನನಾದ ನೀಚರಿದ್ದರೆ ಆಗ ನಾನು (ಮನೋವೇಗನು) ಹಿತವಚನಗಳನ್ನು ಸೂಚಿಸುವುದಿಲ್ಲ ॥ ೯೪ ॥ ಯಾವ ಮನುಷ್ಯನು ಮತ್ತೊಬ್ಬನ ಚಿಂತೆಯಿಲ್ಲದೆ ಭೋಜನವನ್ನೂ ಶಯನವನ್ನೂ ಮಾಡುವುದಿಲ್ಲವೋ ಬೇರೆಯವರ ಸಂಪತ್ತಿಯನ್ನು ನೋಡಿ ಸಹಿಸುವುದಿಲ್ಲವೋ ಮಹಾದ್ವೇಷವೆಂಬ ವಜ್ರಾಗ್ನಿಯಿಂದ ಸುಡಲ್ಪಟ್ಟ ಮನಸ್ಸುಳ್ಳ ಇಂತಹ ಮನುಷ್ಯನು ಉಭಯಲೋಕಗಳಲ್ಲಿಯೂ ಪವಿತ್ರವಾದ ಸುಖವನ್ನು ಹೊಂದುವುದಿಲ್ಲ ॥ ೯೫ ॥ ದ್ವೇಷವುಳ್ಳ ಮನಸ್ಸುಳ್ಳವರೂ ನಿಕೃಷ್ಟರೂ ಅಲ್ಪರೂ ನೀಚರೂ ಆದ ಅಜ್ಞಾನಿಗಳು ಉರಿಯುತ್ತಿರುವ ದುರಂತವಾದ ನರಕಾಗ್ನಿಯನ್ನು ಪ್ರವೇಶಿಸಿ ಅಲ್ಲಿ ಬಹುಕಾಲದವರೆಗೆ ಇರುವುದಕ್ಕೆ ಸಮರ್ಥರಾಗಿರುತ್ತಾರೆ. ಆದರೆ ಬೇರೆಯವರ ಸಂಪತ್ತಿಯನ್ನು ನೋಡಿ ಸಹಿಸುವುದಕ್ಕೆ ಸಮರ್ಥರಾಗಿರುವುದಿಲ್ಲ ॥ ೯೬ ॥ ಯಾವ ಮೂರ್ಖನು ಹಿತವಚನವನ್ನು ಬಿಟ್ಟು ವಿಪರೀತವಾದುದನ್ನೆಲ್ಲ ಸ್ವೀಕರಿಸುತ್ತಾನೋ ಈ ದುಷ್ಟಹೃದಯವುಳ್ಳವನ ಮುಂದೆ ಅಮಿತಗತಿ (ಅಪಾರಜ್ಞಾನಿ) ಯು ಹಿತವಚನಗಳನ್ನು ಮಾತನಾಡುವುದಿಲ್ಲ ॥ ೯೭

ಇಂತು ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷಾಪಂಚಮಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

—o—

ಎಲೈ ವಿಪ್ರರೆ! ಬೆಂಕಿಯಂತೆ ಸಂತಾಪವನ್ನುಂಟುಮಾಡುವ ದ್ವಿಷ್ಟ (ದ್ವೇಷವುಳ್ಳ) ಮೂರ್ಖಮನುಷ್ಯನನ್ನು ವರ್ಣಿಸಿದೆನು. ಈಗ ಕಲ್ಲಿನಂತೆ ಬುದ್ಧಿಹೀನನಾದ ಮೂಢನ ವಿಷಯವನ್ನು ಕೇಳಿ || ೧೩||

೩. ಮನೋಮೂಢಮನುಷ್ಯನ ಕಥೆ

ಯಕ್ಷದೇವತೆಗಳ ಬೇರೊಂದು ಸ್ಥಾನವೋ ಎಂಬಂತಿರುವುದೂ ದೇವಾಲಯಗಳಿಂದ ವ್ಯಾಪ್ತವೂ ನಿಧಿ-ನಿಧಾನಗಳಿಗೆ ಸ್ಥಾನವೂ ಪ್ರಸಿದ್ಧವೂ ಆದ ಕಂಠೋಷ್ಠವೆಂಬ ನಗರವಿದೆ || ೨ || ಅಲ್ಲಿ ಬ್ರಾಹ್ಮಣಸಮೂಹದಿಂದ ಪೂಜಿತನೂ ನಾಲ್ಕು ಮುಖಗಳುಳ್ಳ ಬ್ರಹ್ಮನಂತೆ ವೇದವೇದಾಂಗಗಳನ್ನು ತಿಳಿದವನೂ ಆದ ಭೂತಮತಿಯೆಂಬ ಬ್ರಾಹ್ಮಣನಿದ್ದನು || ೩ || ಬಾಲಬ್ರಹ್ಮಚಾರಿಯೂ ವೇದಾಭ್ಯಾಸಮಾಡುವವನೂ ಧೀರಮನಸ್ಸಿನವನೂ ಆದ ಆ ಬ್ರಾಹ್ಮಣನಿಗೆ ಐವತ್ತು ವರ್ಷ ವಯಸ್ಸಾಗಿದ್ದಿತು. ಅದೃಷ್ಟದಿಂದ ಅವನ ಬಂಧುಗಳು ಯಜ್ಞದ ಬೆಂಕಿಯ ಜ್ವಾಲೆಯಂತೆ ಪ್ರಕಾಶಮಾನಳಾದ "ಯಜ್ಞಾ" ಎಂಬ ಕನ್ಯೆಯನ್ನು ತಂದು, ಮುರದ್ವಿಟ್-ವಿಷ್ಣುವಿಗೆ ಲಕ್ಷ್ಮಿಯನ್ನೋಪಾದಿಯಲ್ಲಿ, ಆ ಬ್ರಾಹ್ಮಣನಿಗೆ ಮದುವೆಮಾಡಿದರು || ೪-೫ || ಉಪಾಧ್ಯಾಯಸ್ಥಾನದಲ್ಲಿರುವವನೂ ಜನರಿಗೆ ಓದಿಸುವುದರಲ್ಲಿ ಸಮರ್ಥನೂ ಎಲ್ಲಾ ಬ್ರಾಹ್ಮಣರಿಂದ ಪೂಜಿಸಲ್ಪಡುವವನೂ ಯಾಗದ ತಿಳುವಳಿಕೆಯಲ್ಲಿ ನಿಪುಣನೂ ಸ್ಥಿರಮನಸ್ಸಿನವನೂ ಪ್ರಾಜ್ಞನೂ ಭೂತಲದಲ್ಲಿ ಪ್ರಸಿದ್ಧನೂ ಆದ ಆ ಭೂತಮತಿಯು ಆ ಯಜ್ಞೆಯೊಡನೆ ಭೋಗಿಗಳಿಗೆ ಸಮ್ಮತವಾದ ಭೋಗವನ್ನನುಭವಿಸುತ್ತಿದ್ದನು || ೬-೭ || ಅವನಲ್ಲಿಗೊಬ್ಬ ಯಜ್ಞನೆಂಬ ಹುಡುಗನು ಬಂದನು. ಅವನು ಯಜ್ಞದಂತೆ ಪ್ರಕಾಶಮಾನನೂ ಹೆಂಗುಸರ ಕಣ್ಣುಗಳೆಂಬ ದುಂಬಿಗಳಿಗೆ ತಾವರೆಯಂತಿರುವವನೂ ಯುವಕನೂ ಆಗಿದ್ದನು || ೮ || ವಿನಯಪರನೂ ತೀವ್ರವಾದ ಬುದ್ಧಿಯುಳ್ಳವನೂ ಆದ ಆ ಯಜ್ಞನನ್ನು ವೇದಾರ್ಥವನ್ನು ಗ್ರಹಣಮಾಡುವುದಕ್ಕೆ ಯೋಗ್ಯನೆಂದು

ತಿಳಿದು ಭೂತಮತಿಯು, ಆಕಾರವುಳ್ಳ ಅನರ್ಥವನ್ನೋಪಾದಿಯಲ್ಲಿ, ಪರಿಗ್ರಹಿಸಿದನು ‖ ೯ ‖ ಅವಸನ್ನು ನೋಡಿದ ಮಾತ್ರದಿಂದ ಯಜ್ಞಿಯು ಭಾರದಿಂದ ವ್ಯಾಪ್ತವಾಗಿ ಚಕ್ರದ ದೂರಿಮುರಿದು ಹೆಚ್ಚುಕಡಮೆಯಾಗಿ ನಿಂತುಹೋದ ಗಾಡಿಯಂತಾದಳು. ತದೇಕಚಿತ್ತಳಾದಳೆಂದು ಭಾವವು ‖ ೧೦ ‖ ರತಿಮನ್ಮಥರಂತೆ, ಅವರಿಬ್ಬರ ಸ್ನೇಹವೆಂಬ ವೃಕ್ಷವು ಸಹವಾಸವೆಂಬ ನೀರಿನಿಂದ ಸೇಚಿಸಲ್ಪಟ್ಟು ಇಷ್ಟಫಲವನ್ನು ಕೊಡುವುದಾಗಿ ಬೆಳೆಯಿತು ‖ ೧೧ ‖ ದರಿದ್ರನ ಒಟನಾಟವೂ ಸೇವಕನ ಪ್ರತಿಕೂಲತ್ವ–ವಿರೋಧವೂ ಮುದುಕನ ಯುವತಿಯಾದ ಹೆಂಡತಿಯೂ ಕುಲಕ್ಷಯವನ್ನು ಮಾಡುವುವೆಂದು ತಿಳಿಯಬೇಕು ‖ ೧೨ ‖ ಪರಪುರುಷಾಸಕ್ತಳಾದ ಕಾಮುಕಳು ಎಲ್ಲಾ ದೋಷವನ್ನು ಮಾಡುತ್ತಾಳೆ. ವಜ್ರದ ಬೆಂಕಿಯುರಿಯುವ ಯಾವ ತಾಪವನ್ನುಂಟುಮಾಡುವುದಿಲ್ಲ ? ‖ ೧೩ ‖ ಯಾವ ಮನುಷ್ಯನು ಮನೆಯಲ್ಲಿ ಹೆಂಗುಸನ್ನು ಸ್ವತಂತ್ರಳನ್ನಾಗಿಯೂ ತಡೆಯಿಲ್ಲದವಳನ್ನಾಗಿಯೂ ಮಾಡುತ್ತಾನೋ ಅವನು ಪೈರಿನಲ್ಲಿ ಉರಿಯುತ್ತಿರುವ ಬೆಂಕಿಯ ಜ್ವಾಲೆಯನ್ನು ಆರಿಸುವುದಿಲ್ಲವೆಂದು ತಿಳಿಯಬೇಕು ‖ ೧೪ ‖ ವ್ಯಾಧಿಯ ವೃದ್ಧಿಯಂತೆ, ಪದೇ ಪದೇ ಬಹಳ ಉನ್ನತಿಯನ್ನು ಹೊಂದುತ್ತಿರುವ ಹೆಂಗುಸನ್ನು ಉಪೇಕ್ಷೆಮಾಡಿ— ಲಕ್ಷ್ಯವನ್ನು ಕೊಡದೆ ಬಿಟ್ಟರೆ ಪ್ರಾಣಹಾನಿಯನ್ನು ಮಾಡಿ ಬಿಡುವಳು ‖ ೧೫ ‖ ಹೆಂಗುಸು ಶೀಘ್ರವಾಗಿ ಎಲ್ಲರಿಗೂ ಪ್ರೀತಿಯನ್ನುಂಟುಮಾಡುವವಳಾಗಿರುವುದರಿಂದ " ಯೋಷಾ " ಎಂದೂ ಕೋಪವನ್ನು ಮಾಡುವವಳಾಗಿರುವುದರಿಂದ " ಭಾಮಿನೀ " ಎಂದೂ ಕರೆಯಲ್ಪಡುತ್ತಾಳೆ ‖ ೧೬ ‖ ದೋಷಗಳಿಂದ ಮುಚ್ಚಿರುವುದರಿಂದ " ಸ್ತ್ರೀ " ಎಂದೂ ಈಕೆಯಲ್ಲಿ ಮನಸ್ಸು ಲೀನವಾಗುವುದರಿಂದ " ವಿಲಯಾ " ಎಂದೂ ಹೇಳಲ್ಪಡುತ್ತಾಳೆ ‖ ೧೭ ‖ ಪಾಪಕಾರ್ಯದಲ್ಲಿ ಮನಸ್ಸು ಸಂತೋಷಪಡುವಂತೆ ಮಾಡುವವಳಾಗಿರುವುದರಿಂದ " ರಮಣಿ " ಎಂದೂ ಲೋಕವನ್ನು ಮಾರಣಮಾಡು–ಕೊಳ್ಳುವವಳಾಗಿರುವುದರಿಂದ " ಕುಮಾರೀ " ಎಂದೂ ಹೇಳಲ್ಪಡುತ್ತಾಳೆ ‖ ೧೮ ‖

ಲೋಕವನ್ನು ಬಲಹೀನವನ್ನಾಗಿ ಮಾಡುವವಳಾಗಿರುವುದರಿಂದ " ಅಬಲಾ " ಎಂದೂ ಈಕೆಯಲ್ಲಿ ಆಸಕ್ತರಾದವರು ಮತ್ತರಾಗುವುದರಿಂದ " ಪ್ರಮದಾ " ಎಂದೂ ಹೇಳಲ್ಪಡುತ್ತಾಳೆ ॥ ೧೯ ॥ ಇವೇ ಮೊದಲಾದ ಹೆಂಗುಸರ ಹೆಸರೆಲ್ಲ, ವಿವಿಧಾನರ್ಥಗಳನ್ನು ಮಾಡುವುದರಲ್ಲಿ ಸಮರ್ಥಗಳಾದ ವೇದನೆಗಳ ಹೆಸರುಗಳಂತೆ, ಸ್ಫುಟವಾಗಿ ದುಃಖಕ್ಕೆ ಕಾರಣವಾಗಿರುತ್ತದೆ ॥ ೨೦ ॥ ಮನೋವ್ಯಾಪಾರದಂತೆ, ಹೆಂಗುಸನ್ನು ಯಾವಾಗಲೂ ಕಾಪಾಡದಿದ್ದರೆ ನಿಂದ್ಯಕಾರ್ಯವನ್ನು ಮಾಡುವಳಾದುದರಿಂದ ಹೆಂಗುಸನ್ನು ಯಾವಾಗಲೂ ಕಾಪಾಡಿ–ಅಂಕೆಯಲ್ಲಿಟ್ಟಿರಬೇಕು ॥ ೨೧ ॥ ಹಿತವನ್ನು ಬಯಸುವ ಸತ್ಪುರುಷರು ಹೊಳೆಗಳನ್ನೂ ಹೆಣ್ಣುಹಾವುಗಳನ್ನೂ ಹೆಣ್ಣುಹುಲಿಗಳನ್ನೂ ಮೃಗನೇತ್ರೆಯರಾದ ಹೆಂಗುಸರನ್ನೂ ಎಂದೂ ನಂಬುವುದಿಲ್ಲ ॥ ೨೨ ॥

ಒಂದಾನೊಂದು ಕಾಲದಲ್ಲಿ ಮಥುರೆಯಲ್ಲಿ ಪುಂಡರೀಕವೆಂಬ ಮಹಾಯಾಗವನ್ನು ಮಾಡುವುದಕ್ಕೋಸ್ಕರ ಅಲ್ಲಿಯ ದ್ವಿಜೋತ್ತಮರು ಹಣವನ್ನು ಕೊಟ್ಟು ಈ ಭೂತಮತಿ–ಬ್ರಾಹ್ಮಣನನ್ನು ಆಹ್ವಾನಿಸಿದರು ॥ ೨೩ ॥ ಆಗ ಆ ದ್ವಿಜನು ಹೆಂಡತಿಯನ್ನು ಕುರಿತು " ಎಲೈ ಯಜ್ಞೆಯೆ ! ಮನೆಯನ್ನು ಕಾಪಾಡಿಕೊಂಡು ಮನೆಯೊಳಗೆ ಮಲಗು. ಆ ಹುಡುಗನನ್ನು ಮನೆಯ ಬಾಗಿಲಿನಲ್ಲಿ ಮಲಗಿಸು " ಎಂದು ಹೇಳಿ ಹೋದನು ॥ ೨೪ ॥ ಗಂಡನು ಹೋದ ಮೇಲೆ ಆ ಪಾಪಿಷ್ಠಳಾದ ಯಜ್ಞೆಯು ಆ ಹುಡುಗನನ್ನು ತನ್ನ ವಿಟನನ್ನಾಗಿ ಮಾಡಿಕೊಂಡಳು. ಬರಿದಾಗಿರುವ ಮನೆಯಲ್ಲಿ ಸ್ವೇಚ್ಛಾಚಾರಿಣಿಯರಾದ–ವ್ಯಭಿಚಾರಿಣಿಯರ ದೊಡ್ಡದಾದ ರಾಜ್ಯವಾಗುವುದು ಸ್ವಾಭಾವಿಕವಾಗಿದೆ ॥ ೨೫ ॥ ದರ್ಶನಗಳಿಂದಲೂ ಸ್ಪರ್ಶನಗಳಿಂದಲೂ ರಹಸ್ಯಪ್ರಕಾಶನಗಳಿಂದಲೂ ಅವರ ತೀವ್ರವಾದ ಕಾಮ–ಪ್ರೀತಿಯು, ಘೃತಸ್ಪರ್ಶಗಳಿಂದ ಬೆಂಕಿಯಂತೆ, ಮತ್ತೆ ಶೀಘ್ರವಾಗಿ ವೃದ್ಧಿಯಾಯಿತು ॥ ೨೬ ॥ ಎಲ್ಲಾ ಸ್ತ್ರೀಯರೂ ಎಲ್ಲಾ ಪುರುಷರ ಮನಸ್ಸನ್ನು ಅಪಹರಣ ಮಾಡುತ್ತಾರೆ. ಸ್ವೇಚ್ಛಾಚಾ

ರಿಯಾದ ತರುಣನ ಮನಸ್ಸನ್ನು ಸ್ವೇಚ್ಛಾಚಾರಿಣಿಯಾದ ತರುಣಿಯು ಅಪಹರಣಮಾಡುವುದಿಲ್ಲವೇ ? ॥ ೨೭ ॥ ಯಜ್ಞೆಯು ಪುಷ್ಟವಾದ ಕುಚಗಳಿಂದ ಪೀಡಿತನಾದ ಆ ಹುಡುಗನು ಆಕೆಯನ್ನು ಎಡೆಬಿಡದೆ ಭೋಗಿಸಿದನು. ಜನರಿಲ್ಲದ ಸ್ಥಳದಲ್ಲಿ ಯುವತಿಯು ದೊರೆತರೆ ಯಾವನು ತಾನೆ ವಿರಾಗವನ್ನು ಹೊಂದುವನು ? ॥ ೨೮ ॥ ಸೌಂದರ್ಯಕ್ಕೆ ಗಣಿಯಾದ ಆ ಯಜ್ಞೆಯಿಂದ ದೃಢವಾಗಿ ಆಲಂಗಿಸಲ್ಪಟ್ಟ ಆ ಹುಡುಗನು ಪಾರ್ವತಿಯಿಂದ ಆಲಂಗಿಸಲ್ಪಟ್ಟ ಈಶ್ವರನನ್ನು ಹುಲ್ಲಿಗಿಂತ ಕಡೆಯಾಗಿ ತಿಳಿದನು ॥ ೨೯ ॥ ಸ್ತ್ರೀಪುರುಷರನ್ನು ಸೇರಿಸುವುದಕ್ಕೆ ಯಾವ ಸೇವಕನೂ ಇಲ್ಲ; ಕಾಮನೂ ಬರುವುದಿಲ್ಲ. ಅವರು ನೇತ್ರವಿಭ್ರಮಗಳಿಂದ ಕೂಡಲೆ ತಾವೇ ಸೇರಿಕೊಂಡರು ॥ ೩೦ ॥ ಕಾಮಸಕ್ತಳೂ ನವಯೌವನವತಿಯೂ ವ್ಯಭಿಚಾರಿಣಿಯೂ ಆದ ಸ್ತ್ರೀಯು ಪುರುಷನನ್ನು ನೋಡಿ ನಿಃಶಕಳಾಗಿ-ಸ್ಥಿರಮನಸ್ಕಳಾದರೆ ಇದಕ್ಕಿಂತ ಬೇರೆ ಆಶ್ಚರ್ಯವೇನಿದೆ ? ॥ ೩೧ ॥ ಬೆಂಕಿಯ ಜ್ವಾಲೆಯಿಂದ ಸ್ಪರ್ಶಿಸಲ್ಪಟ್ಟ ತುಪ್ಪದ ಮಡಿಕೆಯಂತೆ, ಬಗ್ಗಿದ ಹುಬ್ಬುಗಳುಳ್ಳ ಸ್ತ್ರೀಯಿಂದ ಸ್ಪರ್ಶಿಸಲ್ಪಟ್ಟ ಮನುಷ್ಯನು ಶೀಘ್ರವಾಗಿ ಕರಗಿ ಹೋಗುತ್ತಾನೆ, ಸ್ತ್ರೀಪರವಶನಾಗುತ್ತಾನೆಂದು ಭಾವವು ॥ ೩೨ ॥ ತನ್ನ ಹೆಂಡತಿಯು ಕೊಡುವ ಸುರತವೆಂಬ ಅಮೃತವುಳ್ಳ ಮಾನವನು ಅನೇಕ ಭೋಗವಸ್ತುಗಳುಳ್ಳವನಾಗಿದ್ದರೂ ಏಕಾಂತಸ್ಥಳಗಳಲ್ಲಿ ಬೇರೆ ಹೆಂಗುಸನ್ನು ಹೊಂದಿ ಪ್ರಾಯಿಕವಾಗಿ ಕಳವಳಪಡುತ್ತಾನೆ ॥ ೩೩ ॥ ಅಂದ ಮೇಲೆ ಮದೋನ್ಮತ್ತನೂ ಕಾಮಪೀಡಿತನೂ ಯುವಕನೂ ಆದ ಹುಡುಗನು ಏಕಾಂತದಲ್ಲಿ ಪರಸ್ತ್ರೀಯನ್ನು ಹೊಂದಿ ಕಳವಳಪಡುವುದಿಲ್ಲವೇ ? ॥ ೩೪ ॥ ದೃಢವಾದ ಪ್ರೇಮವೆಂಬ ಪಾಶದಿಂದ ಬಿಗಿಯಲ್ಪಟ್ಟ ಮನಸ್ಸುಳ್ಳವರೂ ಸುರತವೆಂಬ ಸಮುದ್ರದಲ್ಲಿ ಮುಳುಗಿದವರೂ ಆದ ಆ ಯಜ್ಞ ಯಜ್ಞೆಯರಿಗೆ ಈ ರೀತಿಯಾಗಿ ನಾಲ್ಕು ತಿಂಗಳು ಕಳೆಯಿತು ॥ ೩೫ ॥ ಒಂದಾನೊಂದು ದಿವಸ ಯಜ್ಞೆಯು ಪ್ರೇಮದ ಭಾರದಿಂದ ಆಯಾಸ

ಗೊಂಡವಳಾಗಿ ಯಜ್ಞನನ್ನು ಕುರಿತು "ಸ್ವಾಮಿಯೇ! ಈ ದಿವಸ ನೀನು ಬಾಡಿದ ಮುಖವುಳ್ಳವನಾಗಿ ಕಾಣಿಸುತ್ತಿರುವುದಕ್ಕೇನು ಕಾರಣ? ನನಗೆ ಹೇಳು" ಎಂದಳು ॥ ೩೬ ॥ ಅದಕ್ಕೆ ಆ ಯಜ್ಞನು "ಕಾಂತೆಯೆ! ಲಕ್ಷ್ಮಿಯೊಡನೆ ಸುಖವನ್ನನುಭವಿಸುವ ವಿಷ್ಣುವಿನಂತೆ, ನಿನ್ನೊಡನೆ ಸುಖವನ್ನನುಭವಿಸುವ ನನಗೆ ಬಹಳ ದಿನಗಳು ಕಳೆದುವು ॥ ೩೭ ॥ ಸುಂದರಿಯೇ! ಈಗ ಭಟ್ಟನು ಬರುವ ದಿನಗಳು ಸಮೀಪಿಸಿರುತ್ತವೆ. ಮನಸ್ಸಿಗೆ ಪ್ರಿಯಳಾದ ನಿನ್ನನ್ನು ಬಿಟ್ಟು ಏನು ಮಾಡಲಿ? ಎಲ್ಲಿಗೆ ಹೋಗಲಿ? ॥ ೩೮ ॥ ಮಹಾವಿಪತ್ತಿಯಿದೆ. ಹೋಗುವುದಕ್ಕೆ ಕಾಲುಗಳು ಬರುವುದಿಲ್ಲ. ಈ ಕಡೆಯಲ್ಲಿ ಕೆರೆ, ಈ ಕಡೆಯಲ್ಲಿ ಹುಲಿ. ಈ ಉಭಯಸಂಕಟದಲ್ಲಿ ಏನು ಮಾಡಲಿ?" ಎಂದನು. ॥ ೩೯ ॥ ಬಳಿಕ ಆ ಯಜ್ಞೆಯು ಯಜ್ಞನನ್ನು ಕುರಿತು "ಸ್ವಸ್ಥವಾಗಿರು. ಶೋಕವನ್ನು ಬಿಡು. ಮನಸ್ಸನ್ನು ಬೇರೆ ವಿಧವಾಗಿ ಮಾಡಬೇಡ ನಾನು ಹೇಳುವಂತೆ ಮಾಡು ॥ ೪೦ ॥ ಎಲೈ ಸಜ್ಜನನೆ! ನಾವು ಬಹಳ ದ್ರವ್ಯವನ್ನು ತೆಗೆದುಕೊಂಡು ಬೇರೆ ಕಡೆಗೆ ಹೋಗೋಣ. ಅಲ್ಲಿ ಸ್ವೇಚ್ಛೆಯಿಂದ ನಮ್ಮ ಹೃದಯಕ್ಕೆ ಪ್ರಿಯವಾದ ಸುರತವೆಂಬ ಅಮೃತವನ್ನು ಅನುಭವಿಸುವವರಾಗಿ ಕ್ರೀಡಿಸೋಣ ॥ ೪೧ ॥ ದುರ್ಲಭವೂ ಮನೋಹರವೂ ಆದ ಮನುಷ್ಯತ್ವವನ್ನು ಸಫಲವನ್ನಾಗಿ ಮಾಡೋಣ. ಕಳೆದುಹೋಗುವ ಈ ಯೌವನದ ಸಾರವಾದ ರಸವನ್ನು ಅನುಭವಿಸೋಣ ॥ ೪೨ ॥ ನೀನು ವ್ಯಾಕುಲಭಾವವನ್ನು ಬಿಟ್ಟು ಎರಡು ಹೆಣಗಳನ್ನು ತೆಗೆದುಕೊಂಡು ಬಾ. ಎಲ್ಲಾ ಜನರಿಗೂ ಗೋಚರವಾಗದಿರುವ ನಿರ್ಗಮನೋಪಾಯವನ್ನು ಮಾಡುವೆನು" ಎಂದಳು ॥ ೪೩ ॥ ಆ ಯಜ್ಞನು ಸಂತುಷ್ಟವಾದ ಮನಸ್ಸುಳ್ಳವನಾಗಿ ಆಕೆಯ ಮಾತನ್ನೆಲ್ಲ ಒಪ್ಪಿಕೊಂಡನು. ಕಾಮುಕರನ್ನು ಇಂತಹ ಕಾರ್ಯದಲ್ಲಿ ಎಚ್ಚರಿಸುವುದು ಕಷ್ಟವಲ್ಲ ॥ ೪೪ ॥ ಅವನು ಹೋಗಿ ರಾತ್ರಿಯಲ್ಲಿ ಎರಡು ಹೆಣಗಳನ್ನು ತಂದನು. ಹೆಂಗುಸರಿಂದ ಪ್ರಾರ್ಥಿಸಲ್ಪಟ್ಟ ಮನುಷ್ಯನು ಯಾವ ಸಾಹಸ

ವನ್ನು ತಾನೆ ಮಾಡುವುದಿಲ್ಲ ? ‖ ೪೫ ‖ ಆಕೆಯು ಮನೆಯಲ್ಲಿರುವ ದ್ರವ್ಯ ವನ್ನೆಲ್ಲ ತೆಗೆದುಕೊಂಡು ಒಂದು ಹೆಣವನ್ನು ಮನೆಯ ಬಾಗಿಲಿನಲ್ಲಿಯೂ ಮತ್ತೊಂದನ್ನು ಮನೆಯೊಳಗೂ ಇಟ್ಟು ಮನೆಗೆ ಬೆಂಕಿಯಿಟ್ಟು ಸುಟ್ಟಳು ‖ ೪೬ ‖ ಬಳಿಕ ಅವರಿಬ್ಬರೂ ಈ ಮನೆಯಿಂದ ಹೊರಟು, ಎರಡು ಜಿಂಕೆ ಗಳು ವಿಘಾತಕಾರಿಯಾದ ಬಲೆಯಿಂದ ತಪ್ಪಿಸಿಕೊಂಡು ಹೋಗುವಂತೆ, ಶೀಘ್ರವಾಗಿ ಉತ್ತರದಿಕ್ಕಿಗೆ ಹೋದರು ‖ ೪೭ ‖ ಇತ್ತ ಬೆಂಕಿಯು ಮನೆ ಯನ್ನು ಸುಟ್ಟು ಮೆಲ್ಲಮೆಲ್ಲಗೆ ಆರಿತು. ಬೆಳಿಗ್ಗೆ ಜನರೆಲ್ಲ ಬಂದು ಬರಿಯ ಬೂದಿಯನ್ನು ನೋಡಿ ಶೋಕಪಟ್ಟರು ‖ ೪೮ ‖ ಜನರು ಮನೆಯ ಹೊರಗೂ ಒಳಗೂ ಇದ್ದ ಹೆಣಗಳ ಮೂಳೆಗಳ ರಾಶಿಯನ್ನು ನೋಡಿ “ ಪತಿವ್ರತೆಯರಲ್ಲಿ ಮುಖ್ಯಳೂ ಗುಣಶಾಲಿನಿಯೂ ಆದ ಬ್ರಾಹ್ಮಣಿಯು ಹುಡುಗನೊಡನೆ ಬೆಂಕಿ ಯಿಂದ ಹೇಗೆ ಸುಡಲ್ಪಟ್ಟಳು ! ಅಹಾ ! ನೋಡಿರಿ ” ಎಂದು ದುಃಖಿತವಾದ ಮನಸ್ಸುಳ್ಳವರಾಗಿ ತಮ್ಮ ತಮ್ಮ ಮನೆಗೆ ಹೊರಟುಹೋದರು ‖ ೪೯–೫೦ ‖ ಕಾಮನಿಂದ ಶಿಕ್ಷಣವನ್ನು ಹೊಂದಿರುವ ಹೆಂಗುಸರು ತಿಳಿಯದಿರುವ ಪ್ರಪಂಚ–ಕಪಟವು ಮೂರು ಲೋಕಗಳಲ್ಲಿಯೂ ಯಾವುದೂ ಇಲ್ಲ ‖ ೫೧ ‖

ಜನರು ಭೂತಮತಿಗೆ ಪತ್ರವನ್ನು ಬರೆದರು. ದ್ವಿಜಶ್ರೇಷ್ಠನಾದ ಆತನು ಬಂದು ಸುಟ್ಟುಹೋಗಿರುವ ಮನೆಯನ್ನು ನೋಡಿ ಮೂರ್ಖಬುದ್ಧಿ ಯುಳ್ಳವನಾಗಿ ಅತ್ತನು ‖ ೫೨ ‖ “ ಮಹಾಬುದ್ಧಿಶಾಲಿಯಾದ ಹುಡುಗಾ ! ನನ್ನ ಆಜ್ಞೆಯನ್ನು ಪಾಲಿಸಿದವನೂ ಗುರುಶುಶ್ರೂಷೆಯಲ್ಲಿ ನಿಪುಣನೂ ಆದ ನಿನ್ನನ್ನು ನಿರ್ದಯವಾದ ಅಗ್ನಿಯು ಹೇಗೆ ಸುಟ್ಟಿತು ! ಬ್ರಹ್ಮಚಾರಿಯೂ ಶುಚಿಯೂ ಸಮರ್ಥನೂ ವಿನೀತನೂ ಶಾಸ್ತ್ರಪಾರಗಾಮಿಯೂ ಕುಲೀನನೂ ಬಾಲಕನೂ ಆದ ಅಂತಹ ಯಜ್ಞನನ್ನು ಇನ್ನೆಲ್ಲಿ ನೋಡುವುದು ? ‖ ೫೪ ‖ ಯಜ್ಞೆಯೆ ! ನನ್ನ ಆಜ್ಞಾನುಸಾರವಾಗಿರುವವಳೂ ಮನೆಯ ಕೆಲಸದಲ್ಲಿ ಆಸಕ್ತಳೂ ಪತಿವ್ರತೆಯೂ ಆದ ನೀನು ಕೋಮಲವಾದ ಬೆಂಕಿಯಿಂದ ಹೇಗೆ ಸುಡಲ್ಪಟ್ಟೆ ? ‖ ೫೫ ‖ ಕಾಂತೆಯೆ ! ಗುಣಗಳಿಗೂ ಶೀಲಗಳಿಗೂ

ಕಲೆಗಳಿಗೂ ಆಧಾರಳೂ ಪತಿಭಕ್ತಳೂ ಬಹು ಲಜ್ಜೆಯುಳ್ಳವಳೂ ಆದ ನಿನ್ನಂತಹ ಪ್ರಿಯಪತ್ನಿಯು ಮುಂದೆ ಎಂದೂ ಆಗುವುದಿಲ್ಲ ॥ ೫೬ ॥ ಚಂದ್ರಮುಖಿಯೆ ! ನೀನು ನನ್ನ ಮಾತಿನಂತಿದ್ದು ವಿಪತ್ತನ್ನು ಹೊಂದಿದವ ಳಾಗಿರುವುದರಿಂದ ಈ ಪಾಪದ ಶುದ್ಧಿಯು ಹೇಗಾಗುವುದು ? ॥ ೫೭ ॥ ಎಲೈ ಸುಂದರಿಯೇ ! ನಿನ್ನ ಎರಡು ಪಾದಗಳಿಂದ ಎರಡು ತಾವರೆಗಳನ್ನೂ ಕಣಕಾಲುಗಳಿಂದ ಮನ್ಮಥನ ಬಾಣಗಳನ್ನೂ ತುಂಬುವ ಚೀಲ–ಬತ್ತಳಿಕೆ ಯನ್ನೂ ತೊಡೆಗಳಿಂದ ಬಾಳೆಯ ಕಂಬಗಳನ್ನೂ ಜಘನ-ಕಟಿಪ್ರದೇಶದ ಶೋಭೆಯಿಂದ ಚಕ್ರವನ್ನೂ ಚಕ್ರವಾಕಪಕ್ಷಿಯನ್ನೂ ಹೊಕ್ಕಳಿನ ಶೋಭೆ ಯಿಂದ ನೀರಿನ ಸುಳಿಯನ್ನೂ ಹೊಟ್ಟೆಯಿಂದ ವಜ್ರಾಯುಧದ ಶೋಭೆ ಯನ್ನೂ ಕುಚಗಳಿಂದ ಭಂಗಾರದ ಕಲಶಗಳನ್ನೂ ಕೊರಳಿನಿಂದ ತಾವರೆಯ ಶೋಭೆಯನ್ನೂ ಮುಖದಿಂದ ಚಂದ್ರಬಿಂಬವನ್ನೂ ಕಣ್ಣುಗಳಿಂದ ಜಿಂಕೆಯ ಕಣ್ಣುಗಳನ್ನೂ ಹಣೆಯಿಂದ ಅಷ್ಟಮಿಯ ಚಂದ್ರನನ್ನೂ ಕೇಶಗಳಿಂದ ಚಮ ರೀಮೃಗದ ಬಾಲವನ್ನೂ ಮಾತಿನಿಂದ ಕೋಗಿಲೆಯ ಮಾತನ್ನೂ ಕ್ಷಮೆ ಯಿಂದ ಪೃಥ್ವಿಯನ್ನೂ ಜಯಿಸಿರುವೆ. ಕಾಂತೆಯೆ ! ನಿನ್ನನ್ನು ಸ್ಮರಿಸುತ್ತಿರುವ ನನಗೆ ಎಲ್ಲಿಂದ ಸುಖವಾಗುವುದು ? ॥ ೫೮–೬೧ ॥ ಎಲೈ ಕಾಂತೆಯೆ ! ಯಮನು ನಿನ್ನೊಡನೆ ನಿನ್ನ ದರ್ಶನವನ್ನೂ, ಸ್ಪರ್ಶನವನ್ನೂ, ನೋಡಿ ನಗುವಿಕೆ ಯನ್ನೂ, ಮರ್ಮವಚನವನ್ನೂ ಎಲ್ಲವನ್ನೂ ದೂರಮಾಡಿದನು ॥ ೬೨ ॥ ರಮಣೀಯವಾಗಿರುವ ಕಂಠೌಷ್ಠನಗರದಲ್ಲಿ ಕೊರಳು ತುಟಿ ಮೊದಲಾದ ಸುಂದರವಾದ ಅಂಗಗಳುಳ್ಳ ನೀನು, ದೇವತೆಗಳಿಗೆ ಸುಂದರಿಯಾದ ಸ್ತ್ರೀಯು ದೊರೆಯದಿರುವಂತೆ, ನನಗೆ ಭೋಗಿಸುವುದಕ್ಕೆ ದೊರೆಯಲಿಲ್ಲ ॥ ೬೩ ॥ ಮೃಗನೇತ್ರೆಯೆ ! ನಿನ್ನಿಂದ ಅಗಲಿರುವ ನನಗೆ ಸುಖವೆಲ್ಲಿಯದು ! ಸ್ತ್ರೀಚಕ್ರವಾಕಪಕ್ಷಿಯನ್ನು ಬಿಟ್ಟು ಪುರುಷಚಕ್ರವಾಕಪಕ್ಷಿಗೆ ಸುಖವೆಲ್ಲಿಂದ ಬರುವುದು ? " ॥ ೬೪ ॥

ಈ ರೀತಿಯಾಗಿ ದುಃಖಪೀಡಿತನಾಗಿರುವ ಆ ಭೂತಮತಿಯನ್ನು ಕುರಿತು ಒಬ್ಬ ಬ್ರಹ್ಮಚಾರಿಯು ಇಂತೆಂದನು "ಎಲೈ ಮೂಢನೆ ! ಪ್ರಯೋಜನವು ಕಳೆದು ಹೋದ ಮೇಲೆ ವ್ಯರ್ಥವಾಗಿ ಏತಕ್ಕೆ ಅಳುತ್ತಿರುವೆ ? ‖ ೬೫ ‖ ಗಾಳಿಯಿಂದ ಪ್ರೇರಿತಗಳಾದ ಎಲೆಗಳ ರಾಶಿಗಳಂತೆ, ಕರ್ಮದಿಂದ ಜೀವರಾಶಿಗಳು ಸ್ಫುಟವಾಗಿ ಸಂಯೋಗವನ್ನೂ ವಿಯೋಗವನ್ನೂ ಹೊಂದುತ್ತಿರುತ್ತವೆ ‖ ೬೬ ‖ ವಿಯೋಗವನ್ನು ಹೊಂದಿರುವ ಪ್ರಾಣಿಗಳಿಗೆ ಮತ್ತೆ ಸಂಯೋಗವಾಗುವುದು ದುರ್ಲಭ. ವಿಯೋಗವನ್ನು ಹೊಂದಿರುವ ಪರಮಾಣುಗಳು ಎಂದೂ ಮತ್ತೆ ಸೇರುವುದಿಲ್ಲ ‖ ೬೭ ‖ ಕೀವು, ರಕ್ತ, ಮಾಂಸ, ಮೇದಸ್ಸು, ಮೂಳೆ, ಮಜ್ಜಾ, ಶುಕ್ರ (ವೀರ್ಯ) ಮೊದಲಾದುವುಗಳ ರಾಶಿಯೂ ಸೂಕ್ಷ್ಮವಾದ ಚರ್ಮದಿಂದ ಮುಚ್ಚಲ್ಪಟ್ಟಿರುವುದೂ ಆದ ಕಾಮಿನಿಯ ಶರೀರದಲ್ಲಿ ಮನೋಹರವಾದ ವಸ್ತುವಾವುದು ? ‖ ೬೮ ‖ ಅದೃಷ್ಟವಶಾತ್ ಶರೀರದ ಹೊರಗಿನ ಭಾಗವು ಒಳಗೂ ಒಳಗಿನ ಭಾಗವು ಹೊರಗೂ ಆದರೆ ಅದನ್ನು ಅಪ್ಪಿಕೊಳ್ಳುವುದಂತಿರಲಿ, ಆಗ ಆ ಶರೀರವನ್ನು ನೋಡುವುದಕ್ಕಾದರೂ ಯಾವನು ಇಚ್ಛಿಸುವನು ? ‖ ೬೯ ‖ ಮೂರ್ಖನೇ ! ರಕ್ತವನ್ನು ಸುರಿಯುವ ದ್ವಾರವು ದುರ್ಗಂಧವೂ ಕೆಟ್ಟಮಾತುಗಳಿಂದ ಹೇಳತಕ್ಕುದೂ ಅಮೇಧ್ಯದ ಗುಂಡಿಗೆ ಸಮಾನವೂ ನಿಂದ್ಯವೂ ಆದ ಜಘನವನ್ನು ವಿವೇಕಿಯು ಹೇಗೆ ಮುಟ್ಟುವನು ? ‖ ೭೦ ‖ ಜೊಲ್ಲು, ಉಗುಳು, ಶ್ಲೇಷ್ಮ, ಹಲ್ಲಿನಲ್ಲಿ ಹುಳ ಇವೇ ಮೊದಲಾದುವುಗಳ ರಾಶಿಯಾಗಿರುವ ಮುಖವನ್ನು ವಿದ್ವಾಂಸರು ಚಂದ್ರನಿಗೆ ಹೋಲಿಸುವುದು ಹೇಗೆ ? ‖ ೭೧ ‖ ಗುಳ್ಳೆಗಳಂತಿರುವುವೂ ಮಾಂಸದ ಗಂಟುಗಳೂ ಆಗಿರುವ ಕುಚಗಳನ್ನು ತೀಕ್ಷ್ಣಬುದ್ಧಿಯುಳ್ಳ ವಿದ್ವಾಂಸರು ಸುವರ್ಣಕುಂಭಗಳಿಗೆ ಹೋಲಿಸುವುದು ಹೇಗೆ ? ‖ ೭೨ ‖ ಅಶುಚಿಗಳಿಗೆಲ್ಲ ಉತ್ಪತ್ತಿಸ್ಥಾನರೂ ವಿಚಿತ್ರವಾದ ರಂಧ್ರಗಳುಳ್ಳವರೂ ಆದ ಸ್ತ್ರೀಪುರುಷರ ಸಂಬಂಧವು, ಎರಡು ಅಮೇಧ್ಯಘಟಗಳ ಸಂಬಂಧದಂತಿರುವುದೆಂದು ಪ್ರಾಜ್ಞರು ತಿಳಿಯುತ್ತಾರೆ ‖ ೭೩ ‖ ಕಾಮುಕ

ಸ್ತ್ರೀಯೆಂಬ ನದಿಯು ಅನುರಾಗವೆಂಬ ಅಲೆಗಳ ರಾಶಿಯು ಪುರುಷರೆಂಬ ವೃಕ್ಷಗಳನ್ನು ಕೆಡವಿ ಒಯ್ದೊಯ್ದು ಭವವೆಂಬ ಸಮುದ್ರದಲ್ಲಿ ಚೆಲ್ಲುತ್ತದೆ ॥ ೭೪ ॥ ಯಾವ ಸ್ತ್ರೀಯು ನೀಚರಾದ ಪುರುಷರನ್ನು ಮೋಹಗೊಳಿಸಿ ನರಕಾಲಯದಲ್ಲಿಟ್ಟು ಅಲ್ಲಿಗೆ ತಾನು ಜೊತೆಯಲ್ಲಿ ಹೋಗುವುದಿಲ್ಲವೋ ಅಂತಹ ಸ್ತ್ರೀಯನ್ನು ವಿವೇಕಿಗಳು ಹೇಗೆ ಸೇವಿಸುತ್ತಾರೆ ? ॥ ೭೫ ॥ ಅನುಭುಕ್ತವಾದ ದುಷ್ಟಭೋಗಗಳು, ಬೆಂಕಿಯು ಕಟ್ಟಿಗೆಯನ್ನು ಸುಡುವಂತೆ, ಹೃದಯವನ್ನು ಸುಡುತ್ತವೆ. ಅವುಗಳಿಗೆ ಸಮಾನರಾದ ಶತ್ರುಗಳಾರು ? ॥ ೭೬ ॥ ಜೀವನು ವಿವೇಕವನ್ನೆಲ್ಲ ನಾಶಮಾಡುವ ಮದ್ದುಗಳಿಂದ ಹಿತಾಹಿತವನ್ನು ತಿಳಿಯದಿರುವಂತೆ, ಸ್ತ್ರೀಯರಿಂದ ಮೋಹಿತನಾದ ಜೀವನು ಹಿತಾಹಿತವನ್ನು ತಿಳಿಯುವುದೇ ಇಲ್ಲ ॥ ೭೭ ॥ "ಇವಳು ಹೆಂಡತಿಯು, ಇವನು ಮಗನು, ಇವಳು ತಾಯಿಯು, ಇವನು ತಂದೆಯು" ಈ ರೀತಿಯಾಗಿ ಬುದ್ಧಿಯು ಕರ್ಮದ ಪ್ರೇರಣೆಯಿಂದ ಮೂಢರಿಗುಂಟಾಗುವುದು ॥ ೭೮ ॥ ಹುಟ್ಟಿದಂದಿನಿಂದ ಕಾಪಾಡಲ್ಪಟ್ಟ ಶರೀರವು ಬೇರೆಯಾಗುವುದೆಂದ ಮೇಲೆ ಪತ್ನೀಪುತ್ರಧನಾದಿಗಳಲ್ಲಿ ಎಂತಹ ನಿರ್ವಾಹವಾಗುವುದು ? ಅವು ಬೇರೆಯಾಗದಿರುವುದು ಹೇಗೆ ?" ॥ ೭೯ ॥

ಬ್ರಹ್ಮಚಾರಿಯು ಈ ಮಾತನ್ನು ಹೇಳಿದ ಬಳಿಕ ಕೋಪಗೊಂಡ ಆ ಮೂಢನಾದ ಭೂತಮತಿಯು ಇಂತೆಂದನು. ಪ್ರಾಜ್ಞರು ಮೂರ್ಖರಿಗೆ ಮಾಡುವ ಉಪದೇಶವು ವ್ಯರ್ಥವಾಗುವುದು ॥ ೮೦ ॥ "ಎಲೈ ಬ್ರಹ್ಮಚಾರಿಯೇ ! ಹೆಂಗುಸರು ಬಹಳ ನಿಂದ್ಯವಾಗಿರುವ ಪಕ್ಷದಲ್ಲಿ ಸಕಲಮಾರ್ಗದರ್ಶಕರಾದ ಈಶ್ವರ ಬ್ರಹ್ಮ ವಿಷ್ಣು ದೇವೇಂದ್ರರುಗಳು ಹೆಂಡತಿಯರನ್ನು ಎದೆಯಲ್ಲಿ ಹೇಗೆ ಧರಿಸಿಕೊಳ್ಳುತ್ತಿದ್ದರು ? ॥ ೮೧ ॥ ಅಸಂಜ್ಞಿಗಳಾಗಿರುವ ಅಶೋಕ ಮೊದಲಾದ ವೃಕ್ಷಗಳೂ ಸ್ತ್ರೀಯರನ್ನು (ಲತೆಗಳನ್ನು) ಬಿಡುವುದೇ ಇಲ್ಲವೆಂದ ಮೇಲೆ ಈ ಪುರುಷರು ಸಮಸ್ತ ಸುಖಗಳಿಗೆ ಮೂಲಕಾರಣವಾದ ನಿಪುಣಸ್ತ್ರೀಯರನ್ನು ಹೇಗೆ ಬಿಡುವರು ? ॥ ೮೨ ॥ ಪ್ರಶಸ್ತ

ಪಾದ ಶರೀರವುಳ್ಳ ಯಾವ ಸ್ತ್ರೀಯರು ಪುತ್ರರೆಂಬ ಫಲಗಳನ್ನು ಕೊಡುತ್ತಾರೋ ಶ್ರಮವನ್ನೆಲ್ಲ ಪರಿಹರಿಸುತ್ತಾರೋ ಅಂತಹ ಈ ಸ್ತ್ರೀಯರನ್ನು ಬಿಟ್ಟು ಸಕಲೇಂದ್ರಿಯಸುಖವನ್ನು ಕೊಡುವ ವಸ್ತುವು ಈ ಲೋಕದಲ್ಲಿ ಮತ್ತಾವುದೂ ಇಲ್ಲ ॥ ೮೩ ॥ ಎಲೈ ಬ್ರಹ್ಮಚಾರಿಯೇ ! ಮೃಗನೇತ್ರೆಯರನ್ನು ಭೋಗಿಸುವ ಪುರುಷರೆಲ್ಲ ಮೂಢಮನಸ್ಸಿನವರಾಗುವ ಪಕ್ಷದಲ್ಲಿ ಈ ಜಗತ್ತಿನಲ್ಲಿ ಯುವತಿಯ ಸಂಗದಲ್ಲಿ ಆಸಕ್ತವಾದ ಮನಸ್ಸುಳ್ಳ ಯಾವ ಮನುಷ್ಯನೂ ವಿವೇಚನಾಪರನಿಲ್ಲವೆಂದಾಯ್ತು ॥ ೮೪ ॥ ಭಿನ್ನರುಚಿಯುಳ್ಳ ಜಗತ್ತಿನಲ್ಲಿ ಯಾವನಾದರೂ ತನ್ನ ಮನ್ನಸ್ಸಿಗೆ ಪ್ರಿಯವಾಗಿರುವುದನ್ನು ಹೇಳಲಿ. ತಡೆಯಿಲ್ಲ. ನನ್ನ ಅಭಿಪ್ರಾಯವಾದರೋ ಇದು–ನಿಸ್ಸಂದೇಹವಾಗಿ ಯುವತಿಗಿಂತ ಬೇರೆ ಸುಖದ ಕಾರಣವಿಲ್ಲ " ॥ ೮೫ ॥

ಬಹಳ ಮೂರ್ಖಮನಸ್ಸಿನವನಾದ ಆ ದ್ವಿಜನು ಈ ರೀತಿಯಾಗಿ ಹೇಳಿ ಹೆಂಡತಿಯ ಮತ್ತು ಹುಡುಗನ ಮೂಳೆಗಳನ್ನೆಲ್ಲ ತಾನು ಎರಡು ಸೋರೆಯ ಬುರುಡೆಗಳಲ್ಲಿರಿಸಿ ಬಹು ತ್ವರೆಯಿಂದ ದೇವಗಂಗೆಗೆ ಹೋದನು. ॥ ೮೬ ॥ ಆ ಭೂತಮತಿಗೆ ಪಟ್ಟಣದಲ್ಲಿ ಒಂದಾನೊಂದು ಕಡೆಯಲ್ಲಿ ಆ ದುಷ್ಟನಾದ ಹುಡುಗನು ಸಂಧಿಸಿ ಭಯದಿಂದ ಮೈನಡುಕವುಳ್ಳವನಾಗಿ ಅವನ ಚರಣಕಮಲಗಳಿಗೆ ಬಿದ್ದು " ಸ್ವಾಮಿಯೆ ! ನಾನು ಮಾಡಿರುವ ದುಷ್ಕಾರ್ಯವನ್ನು ಸಹಿಸು " ಎಂದನು ॥ ೮೭ ॥ ಆಗ ಆ ಭೂತಮತಿಯು " ಹುಡುಗನೆ ! ನೀನಾರು ? " ಎಂದು ಕೇಳಿದನು. ಹುಡುಗನು ವಿನಯಪರನಾಗಿ ಮತ್ತೆ ಆ ದ್ವಿಜನನ್ನು ಕುರಿತು " ಸ್ವಾಮಿಯೇ ! ನಾನು ನಿನ್ನ ಚರಣಕಮಲದ ಸೇವೆಯಿಂದ ಜೀವಿಸುತ್ತಿದ್ದ ಆ ಯಜ್ಞನೆಂಬ ಹುಡುಗನಾಗಿದ್ದೇನೆ " ಎಂದನು ॥ ೮೮ ॥ ಈ ಮಾತನ್ನು ಕೇಳಿ ಆ ಮೂಢಬುದ್ಧಿಯುಳ್ಳ ಭೂತಮತಿಯು " ಬೂದಿಯಾಗಿ ಹೋದ ಆ ನನ್ನ ಚತುರನಾದ ಹುಡುಗನು ಈಗೆಲ್ಲಿದ್ದಾನೆ ? ಎಲೈ ದುಷ್ಟನೆ ! ನೀನು ನಿನ್ನ ವಂಚನೆಯ ಮಾತನ್ನು ತಿಳಿಯದಿರುವ ಬೇರೆಯವನನ್ನು ವಂಚಿಸು ಹೋಗು " ಎಂದನು ॥ ೮೯ ॥

ಹೀಗೆ ಹೇಳಿ ಪಟ್ಟಣದ ಮಧ್ಯಕ್ಕೆ ಹೋದ ಆ ಭೂತಮತಿಗೆ ದುಷ್ಟಳಾದ ಆ ಪ್ರಿಯತಮೆ-ಯಜ್ಞೆಯು ಶೀಘ್ರವಾಗಿ ಸಿಕ್ಕಿದಳು. ಆಕೆಯು ಗಂಡನ ಚರಣಕಮಲಗಳಲ್ಲಿ ತಲೆಯನ್ನಿಟ್ಟು ಭಯದಿಂದ ಕಂಪಿತವಾದ ಮನಸ್ಸುಳ್ಳವಳಾಗಿ ‖ ೯೦ ‖ “ಗುಣಗಳಿಗೆ ಗಣಿಯಾಗಿರುವ ಪ್ರಿಯನೆ! ನಿನ್ನ ದ್ರವ್ಯವೆಲ್ಲ ಇದೆ. ನನ್ನ ದುರಭಿಪ್ರಾಯವನ್ನು ಸಹಿಸು ಕ್ಷಮಿಸು” ಹೀಗೆಂದಳು. ತಮ್ಮ ದುರಭಿಪ್ರಾಯದಿಂದ ಕಂಪಿತವಾದ ಮನಸ್ಸುಳ್ಳವರನ್ನು ಕುರಿತು ಶುಭಮತಿಯುಳ್ಳ ಮನುಷ್ಯನು ಎಂದೂ ಕೋಪಿಸಿಕೊಳ್ಳುವುದಿಲ್ಲ ‖ ೯೧ ‖ ಯಜ್ಞೆಯ ಮಾತನ್ನು ಕೇಳಿ ಆ ಭೂತಮತಿಯು ಆಕೆಯನ್ನು ಕುರಿತು “ನೀನಾರು? ಹೇಳು” ಎಂದನು. ಆಕೆಯು “ನಾನು ನಿನ್ನ ಪತ್ನಿಯಾದ ಯಜ್ಞೆ” ಎಂದು ಉತ್ತರವನ್ನಿತ್ತಳು. ಆಗ ಎಲ್ಲಾ ವಿಚಾರಬುದ್ಧಿಹೀನನಾದ ಆ ಭೂತಮತಿ ದ್ವಿಜನು “ಸೋರೆಯ ಬುರುಡೆಯೊಳಗಿರಿಸಲ್ಪಟ್ಟ ದೇಹವುಳ್ಳವಳಾದ ನನ್ನ ಪ್ರಿಯತಮೆ-ಯಜ್ಞೆಯು ಹೊರಕ್ಕೆ ಹೇಗೆ ಬಂದಳು? ನೀನು ನನಗೆ ಈ ನಗರದಲ್ಲಿರುವುದಕ್ಕೆ ಬಿಡದಿದ್ದರೆ ನಾನು ಬೇರೆ ನಗರಕ್ಕೆ ಹೋಗುತ್ತೇನೆ” ಹೀಗೆಂದು ಹೇಳಿ ಕೋಪಿಸಿಕೊಂಡು ಹೊರಟುಹೋದನು ‖ ೯೨-೯೩ ‖ ಯಾವ ಮೂರ್ಖಚಿತ್ತನಿಗೆ ವಸ್ತುವಿನಲ್ಲಿ ನಿಶ್ಚಯಜ್ಞಾನವುಂಟಾಗುವುದಿಲ್ಲವೋ ಮೂಢರನ್ನು ಮರ್ದಿಸುವವನಾದ ಯಮನಲ್ಲದೆ ಮತ್ತಾರು ಅವಿವೇಕಿಗೆ ವಿವೇಕವನ್ನುಂಟುಮಾಡುವನು? ‖ ೯೪ ‖ ಬುದ್ಧಿಯಿಲ್ಲದ ಮೂಢನು ಭವಭೀತಿಯನ್ನು ನಾಶಮಾಡುವ ಅಮಿತಗತಿ-ಅಪಾರಜ್ಞಾನವುಳ್ಳವನ ಮಾತನ್ನು ಹೃದಯದಲ್ಲಿ ಧರಿಸುವುದಿಲ್ಲ. ಹೀಗೆ ತಿಳಿದು ಸಮ್ಯಗ್ಜ್ಞಾನಿಗಳು ಸ್ಥಿರವಾದ ಶಿವಸುಖವನ್ನು ಕೊಡುವ ವಿಶದವಾದ ಶುಭಮತಿಯನ್ನು ಹೃದಯದಲ್ಲಿರಿಸುತ್ತಾರೆ ‖ ೯೫ ‖

ಇಂತು ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷಾಷಷ್ಠಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

—o—

ಎಲೈ ದ್ವಿಜರೇ ! ಈ ರೀತಿಯಾಗಿ ವಿವೇಕಶೂನ್ಯನಾದ ಮೂಢನನ್ನು ನಿಮಗೆ ತಿಳಿಸಿದೆನು. ಈಗ ತನ್ನ ಅಭಿಪ್ರಾಯವೆಂಬ ಗ್ರಹದಿಂದ ವ್ಯಾಪ್ತನಾದ ವ್ಯಗ್ರಾಹಿ-ಮೂರ್ಖ-ಮನುಷ್ಯನನ್ನು ತಿಳಿಸುವೆನು ॥ ೧ ॥

೪. ವ್ಯಗ್ರಾಹಿ-ಮೂರ್ಖ-ಮನುಷ್ಯನ ಕಥೆ.

ಅನಂತರದಲ್ಲಿ ನಂದುರದ್ವಾರಿಯೆಂಬ ನಗರದಲ್ಲಿ ದುರ್ಧರನೆಂಬ ರಾಜನಿದ್ದನು. ಅವನಿಗೆ ಹುಟ್ಟುಕುರುಡನಾದ ಜಾತ್ಯಂಧನೆಂಬ ಮಗನು ಹುಟ್ಟಿದನು ॥ ೨ ॥ ಆ ಮಗನು ತನ್ನ ಶರೀರದಲ್ಲಿರುವ ಹಾರ ಕಂಕಣ ಕೇಯೂರ ಕರ್ಣಕುಂಡಲ ಮೊದಲಾದ ಆಭರಣವನ್ನು ಪ್ರತಿದಿವಸ ಯಾಚಕರಿಗೆ ಕೊಡುತ್ತಿದ್ದನು ॥ ೩ ॥ ಅವನ ಲೋಕಾತೀತವಾದ ತ್ಯಾಗವನ್ನು ನೋಡಿ ಮಂತ್ರಿಯು ರಾಜನನ್ನು ಕುರಿತು " ಸ್ವಾಮಿಯೆ । ರಾಜಕುಮಾರನು ಭಂಡಾರವನ್ನೆಲ್ಲ ದಾನಮಾಡಿ ನಾಶಮಾಡಿದನು " ಎಂದನು ॥ ೪ ॥ ಆಗ ದೊರೆಯು "ಸತ್ಪುರುಷನೆ ! ಇವನಿಗೆ ಆಭರಣವನ್ನು ಕೊಡದಿದ್ದರೆ ಊಟವನ್ನೇ ಮಾಡುವುದಿಲ್ಲ. ನಾನೇನು ಮಾಡಲಿ ? " ಎಂದನು ॥ ೫ ॥ ಬಳಿಕ ಮಂತ್ರಿಯು ದೊರೆಯನ್ನು ಕುರಿತು " ಅದಕ್ಕೆ ನಾನೊಂದು ಉಪಾಯವನ್ನು ಮಾಡುತ್ತೇನೆ " ಎಂದನು. ಆಗ ದೊರೆಯು " ಮಾಡು, ಅಡ್ಡಿಯಿಲ್ಲ " ಎಂದು ಉತ್ತರವನ್ನಿತ್ತನು ॥ ೬ ॥ ಮಂತ್ರಿಯು ಕಬ್ಬಿಣದ ಆಭರಣವನ್ನೂ ಯಾಚಕರಿಗೆ ಹೊಡೆಯುವುದಕ್ಕೋಸ್ಕರ ಕಬ್ಬಿಣದ ಒಂದು ಕೋಲನ್ನೂ ಕೊಟ್ಟು ಆ ರಾಜಕುಮಾರನನ್ನು ಕುರಿತು " ಅಯ್ಯಾ ! ನಿನ್ನ ರಾಜ್ಯಪರಂಪರೆಯಾಗಿ ಬಂದಿರುವುದೂ ಪ್ರಾಜ್ಞರಿಂದ ಪೂಜಿಸಲ್ಪಟ್ಟುದೂ ಆದ ಈ ಆಭರಣವನ್ನು ಯಾರಿಗೂ ಕೊಡಬೇಡ. ಕೊಟ್ಟರೆ ರಾಜ್ಯವು ನಾಶವಾಗುವುದು. ರಾಜಕುಮಾರನೆ ! ಇದು ಕಬ್ಬಿಣವೆಂದು ಹೇಳುವವರಿಗೆಲ್ಲ ಈ ಕಬ್ಬಿಣದ ಕೋಲಿನಿಂದ ತಲೆಯ ಮೇಲೆ ಹೊಡೆಯಬೇಕು. ಯಾರಲ್ಲಿಯೂ ದಯೆಯನ್ನು ಮಾಡಬೇಡ " ಎಂದನು ॥ ೭-೯ ॥ ಮಂತ್ರಿಯು ಹೇಳಿದುದನ್ನೆಲ್ಲ

ರಾಜಕುಮಾರನು ಒಪ್ಪಿದನು. ಹುಟ್ಟುಕುರುಡನಾದ ಆ ರಾಜಕುಮಾರನು ಮಂತ್ರಿಯಿಂದ ಕೊಡಲ್ಪಟ್ಟ ಕಬ್ಬಿಣದ ಆಭರಣವು ಭಂಗಾರದ ಆಭರಣವೆಂದೇ ತಿಳಿದನು. ಈ ಲೋಕದಲ್ಲಿ ನಿಪುಣರು ಹೇಳಿದ ಮಾತನ್ನು ಯಾರು ತಾನೆ ಒಪ್ಪಿಕೊಳ್ಳುವುದಿಲ್ಲ ? ॥ ೧೦ ॥ ಬಳಿಕ ರಾಜಕುಮಾರನು ಶರೀರದಲ್ಲೆಲ್ಲ ರೋಮಾಂಚವುಳ್ಳವನಾಗಿಯೂ ಬಹುಸಂತುಷ್ಟವಾದ ಮನಸ್ಸುಳ್ಳವನಾಗಿಯೂ ಲೋಹಮಯವಾದ ಕೋಲನ್ನು ಹಿಡಿದುಕೊಂಡಿದ್ದನು ॥ ೧೧ ॥ ಯಾವನು ಕಬ್ಬಿಣದ ಒಡವೆಯೆಂದು ಹೇಳಿದನೋ ಅವನ ತಲೆಯ ಮೇಲೆ ಹೊಡೆದನು, ಹೇಳಿಕೆಯ ಮಾತನ್ನು ಕೇಳುವ ಬುದ್ಧಿಯುಳ್ಳ ನೀಚನು ಒಳ್ಳೆಯ ಕೆಲಸವನ್ನು ಹೇಗೆ ಮಾಡುವನು ? ॥ ೧೨ ॥ ಯಾವನು ತನಗೆ ಇಷ್ಟವಾಗಿರುವ ಮನುಷ್ಯನ ಮಾತು ಒಳ್ಳೆಯದೆಂದೂ ಬೇರೆಯವನ ಮಾತೆಲ್ಲ ಕೆಟ್ಟುದೆಂದೂ ತಿಳಿಯುತ್ತಾನೋ ಅಂತಹ ಅಧಮನನ್ನು ಬೋಧಿಸುವವನಾರು ? ॥ ೧೩ ॥ ಬೇರೆಯವರ ಮಾತನ್ನು ವಿಚಾರ ಮಾಡದಿರುವ ಜಾತ್ಯಂಧನಿಗೆ ಸಮಾನನೂ ತನ್ನ ಹಟದಲ್ಲೇ ಆಸಕ್ತವಾದ ಬುದ್ಧಿಯುಳ್ಳವನೂ ಆದ ಮೂರ್ಖನು ವ್ಯುದ್ಗ್ರಾಹಿಯೆಂದು ಪ್ರಾಜ್ಞರು ತಿಳಿಯುತ್ತಾರೆ ॥ ೧೪ ॥ ಮೇರುಪರ್ವತವನ್ನು ಹೇಗಾದರೂ ಕೈಯಿಂದ ಹೊಡೆದು ಭೇದಿಸಬಹುದು. ಆದರೆ ವ್ಯುದ್ಗ್ರಾಹಿ-ಮೂರ್ಖನನ್ನು ಮಾತಿನಿಂದ ಬೋಧಿಸುವುದು—ತಿಳುವಳಿಕೆಯನ್ನುಂಟುಮಾಡುವುದು ಶಕ್ಯವಲ್ಲ ॥ ೧೫ ॥ ಜಾತ್ಯಂಧನು ಭಂಗಾರದ ಆಭರಣವನ್ನು ಬಿಟ್ಟು ಕಬ್ಬಿಣದ ಆಭರಣವನ್ನು ಪರಿಗ್ರಹಿಸಿದಂತೆ ಅಜ್ಞಾನವೆಂಬ ಕತ್ತಲೆಯಿಂದ ಕುರುಡನಾಗಿರುವವನು, ಒಳ್ಳೆಯ ವಸ್ತುವನ್ನು ಬಿಟ್ಟು ದುಷ್ಟವಸ್ತುವನ್ನು ಪರಿಗ್ರಹಿಸುತ್ತಾನೆ. ॥ ೧೬ ॥ ಯಾವ ಮೂರ್ಖನು ಸುಂದರವಲ್ಲದ ವಸ್ತುವನ್ನು ಸುಂದರವೆಂದು ತಿಳಿಯುತ್ತಾನೋ ಅವನ ಮುಂದೆ ಪ್ರಾಜ್ಞನು ಒಳ್ಳೆಯ ಮಾತನ್ನು ಹೇಳುವುದಿಲ್ಲ ॥ ೧೭ ॥ ಇಷ್ಟ ವಿಷಯಗಳಲ್ಲಿ ಆಸಕ್ತರಾದ ಜನರು ಲೋಕವನ್ನು ವಂಚಿಸುವುದರಿಂದ ಸತ್ಪುರುಷರು ಯಾವಾಗಲೂ ನಿರ್ಮಲವಾದ ಬುದ್ಧಿಯಿಂದ

ವಿವೇಚನೆಯನ್ನು ಮಾಡಬೇಕು ॥ ೧೮ ॥ ಎಲೈ ವಿಪ್ರರೆ! ವ್ಯಾಘ್ರಾಹಿ ಮೂರ್ಖಮನುಷ್ಯನ ವಿಷಯವನ್ನು ಹೇಳಿಯಾಯ್ತು. ಈಗ ಪಿತ್ತದೂಷಿತ-ಮೂರ್ಖ-ಮನುಷ್ಯನ ವಿಷಯವನ್ನು ಹೇಳುತ್ತೇನೆ. ಏಕಾಗ್ರಮನಸ್ಸಿನಿಂದ ಕೇಳಿರಿ ॥ ೧೯ ॥

೫. ಪಿತ್ತದೂಷಿತ ಮೂರ್ಖ ಮನುಷ್ಯನ ಕಥೆ.

ಒಬ್ಬಾನೊಬ್ಬ ಮನುಷ್ಯನು ತೀವ್ರವಾದ ಪಿತ್ತಜ್ವರದಿಂದ ಬಾಡಿಹೋದ ದೇಹವುಳ್ಳವನಾಗಿ ಬೆಂಕಿಯಿಂದ ವಿಕಾರವಾದ ದೇಹವುಳ್ಳವನಂತಾದನು ॥ ೨೦ ॥ ಅವನಿಗೆ ಪುಷ್ಟಿಯನ್ನೂ ಸಂತೋಷವನ್ನೂ ಕೊಡುವುದೂ ಸಕ್ಕರೆಯಿಂದ ಮಿಶ್ರವಾಗಿರುವುದೂ ಕಾಯಿಸಲ್ಪಟ್ಟಿರುವುದೂ ಅಮೃತದಂತೆ ಪವಿತ್ರವೂ ಆದ ಹಾಲು ಕೊಡಲ್ಪಟ್ಟಿತು. ॥ ೨೧ ॥ ಆ ಅಧಮನು ಇದನ್ನು ಬೇವಿನ ರಸಕ್ಕೆ ಸಮಾನವಾದ ಕಹಿಯನ್ನಾಗಿ ತಿಳಿದನು. ಗೂಬೆಯು ಸೂರ್ಯನ ಪ್ರಕಾಶಮಾನವಾದ ತೇಜಸ್ಸನ್ನು ಕತ್ತಲೆಯೆಂದು ತಿಳಿಯುತ್ತದೆ ॥ ೨೨ ॥ ಈ ರೀತಿಯಾಗಿ ಯಾವನಾದರೂ ಮನುಷ್ಯನು ಮಿಥ್ಯಾಜ್ಞಾನವೆಂಬ ಮಹಾ ಪಿತ್ತಜ್ವರದಿಂದ ವ್ಯಾಕುಲನಾಗಿ ಯುಕ್ತಾಯುಕ್ತ ವಿಚಾರವನ್ನು ಮಾಡುವುದಿಲ್ಲ ॥ ೨೩ ॥ ಅಂಥವನಿಗೆ ಶಾಂತಿಯನ್ನುಂಟುಮಾಡುವುದರಲ್ಲಿ ಸಮರ್ಥವೂ ಜನ್ಮಜರಾಮರಣಗಳನ್ನು ನಾಶಮಾಡುವುದೂ ಅಮೃತದಂತೆ ಹೊಂದಲು ಕಷ್ಟಸಾಧ್ಯವೂ ಆದ ತತ್ವವನ್ನು ಬೋಧಿಸಿದರೆ ಅದು ಕಾಲಕೂಟವಿಷಕ್ಕೆ ಸಮಾನವೆಂದೂ ಬುದ್ಧಿಭ್ರಮೆಯನ್ನುಂಟು ಮಾಡುವುದೆಂದೂ ಜನ್ಮಜರಾಮರಣಗಳನ್ನುಂಟು ಮಾಡುವುದೆಂದೂ ಸುಲಭವಾದುದೆಂದೂ ಜಡವೆಂದೂ ಅವನು ತಿಳಿಯುತ್ತಾನೆ ॥ ೨೪-೨೫ ॥ ಯಾವ ಮನುಷ್ಯನು ಒಳ್ಳೆಯದನ್ನೆಲ್ಲ ಕೆಟ್ಟುದನ್ನಾಗಿ ತಿಳಿಯುತ್ತಾನೋ ಅಜ್ಞಾನದಿಂದ ವ್ಯಾಕುಲವಾದ ಮನಸ್ಸುಳ್ಳ ಆ ಮನುಷ್ಯನಿಗೆ ಪಿತ್ತದೂಷಿತನೆಂದು ಹೆಸರು ॥ ೨೬ ॥ ಹೀಗೆ ಜ್ಞಾನವಿಲ್ಲದ ಯಾವ ಮನುಷ್ಯನು ಅನ್ಯಾಯವನ್ನು ನ್ಯಾಯವನ್ನಾಗಿ ತಿಳಿ

ಯುತ್ತಾನೋ ಅವನಿಗೆ ತತ್ತ್ವವಿಚಾರವುಳ್ಳವರು ಯಾವುದನ್ನೂ ಉಪದೇಶಿಸಬಾರದು ॥ ೨೭ ॥ ಎಲೈ ವಿಪ್ರರೆ ! ವಿಪರೀತಾಭಿಪ್ರಾಯವುಳ್ಳ ಪಿತ್ತದೂಷಿತಮನುಷ್ಯನನ್ನು ನಿಮಗೆ ತಿಳಿಸಿದೆನು. ಈಗ ಚೂತಮೂರ್ಖಮನುಷ್ಯನ ವಿಷಯವನ್ನು ಹೇಳುತ್ತೇನೆ. ಮನಸ್ಸಿಟ್ಟು ಕೇಳಿರಿ ॥ ೨೮ ॥

೬. ಚೂತಮೂರ್ಖಮನುಷ್ಯನ ಕಥೆ.

ಸ್ವರ್ಗದಲ್ಲಿ ಅಪ್ಸರಸ್ತ್ರೀಯರಿಂದ ರಮಣೀಯವೂ ಮನೋಹರವಾದ ಮನೆಗಳುಳ್ಳದೂ ಆದ ಅಮರಾವತಿಯಂತೆ ಅಂಗದೇಶದಲ್ಲಿ ಪ್ರಾಜ್ಞರಿಂದ ಪೂಜಿತವಾದ ಚಂಪಾನಗರಿಯಿದೆ ॥ ೨೯ ॥ ಅಮರಾವತಿಯಲ್ಲಿ ದೇವತೆಗಳಿಂದ ಪೂಜಿಸಲ್ಪಡತಕ್ಕ ದೇವೇಂದ್ರನಂತೆ ಆ ಚಂಪಾನಗರದಲ್ಲಿ ಕಿರೀಟಗಳನ್ನು ಬಗ್ಗಿಸಿ ನಮಸ್ಕರಿಸುತ್ತಿರುವ ರಾಜರುಗಳಿಂದ ಭಜಿಲ್ಪಡತಕ್ಕವನಾದ ನೃಪಶೇಖರನೆಂಬ ರಾಜನಿದ್ದನು ॥ ೩೦ ॥ ಆವನ ಬಳಿಗೆ ಅವನ ಮಿತ್ರನಾದ ವಂಗದೇಶಾಧಿಪತಿಯು ಸಕಲರೋಗಗಳನ್ನೂ ಮುಪ್ಪನ್ನೂ ನಾಶಮಾಡುವುದೂ ಬೇರೆಯವರಿಂದ ಸೇವಿಸಲ್ಪಡತಕ್ಕುದೂ ಮನೋಹರವೂ ಪ್ರಾಣಿಗಳಿಗೆ ಪೂಜ್ಯವಾದ ರತ್ನತ್ರಯದಂತೆ ಹೊಂದುವುದಕ್ಕೆ ಕಷ್ಟಸಾಧ್ಯವೂ ಸುಖಕರವೂ ಸುಂದರವೂ ಆದ ರೂಪರಸಗಂಧಸ್ಪರ್ಶಗಳಿಂದ ಜನರ ಮನಸ್ಸನ್ನು ಸಂತೋಷಪಡಿಸಿರುವುದೂ ದಿವ್ಯಸ್ತ್ರೀಯ ಯೌವನಕ್ಕೆ ಸದೃಶವೂ ಪರಿಮಳದಿಂದ ದುಂಬಿಗಳನ್ನು ಆಕರ್ಷಿಸುವುದೂ ಆದ ಒಂದು ಮಾವಿನ ಹಣ್ಣನ್ನು ಕಳುಹಿಸಿದನು ॥ ೩೧–೩೩ ॥ ಆ ಮಾವಿನ ಹಣ್ಣನ್ನು ನೋಡಿದೊಡನೆಯೇ ದೊರೆಯು ಬಹು ಸಂತೋಷಪಟ್ಟನು. ರಮಣೀಯವಾದ ವಸ್ತುವು ದೃಷ್ಟಿಗೋಚರವಾದರೆ ಯಾರಿಗೆ ತಾನೆ ಹರ್ಷವಾಗುವುದಿಲ್ಲ ? ॥ ೩೪ ॥ "ಸಮಸ್ತರೋಗಗಳಿಗೆ ಅಗ್ನಿಯಂತಿರುವ ಈ ಒಂದು ಮಾವಿನ ಹಣ್ಣನ್ನು ಲೋಕಕ್ಕೆಲ್ಲ ಹಂಚುವುದಕ್ಕಾಗುವುದಿಲ್ಲ. ಈ ಮಾವಿನ ಹಣ್ಣು ಹಲವು ಹಣ್ಣುಗಳಾಗುವಂತೆ ಮಾಡುವೆನು " ಈ ರೀತಿಯಾಗಿ ದೊರೆಯು ವಿಚಾರಮಾಡಿ ವನ

ಪಾಲಕನಿಗೆ ಆ ಹಣ್ಣನ್ನು ಕೊಟ್ಟು “ ಅಯ್ಯಾ ! ಈ ಮಾವಿನ ಹಣ್ಣು ಅನೇಕ ಫಲಗಳನ್ನು ಕೊಡುವಂತೆ ಮಾಡು. ಇದನ್ನು ತೆಗೆದುಕೊಂಡು ಹೋಗಿ ವನದಲ್ಲಿ ಹುಟ್ಟುಹಾಕು ” ಎಂದನು ॥ ೩೫–೩೭ ॥ ಗಿಡವನ್ನು ಬೆಳೆಯಿಸುವುದರಲ್ಲಿ ನಿಪುಣನಾದ ಆ ವನಪಾಲಕನು ನಮಸ್ಕರಿಸಿ “ ಹಾಗೆಯೇ ಮಾಡುವೆನು ” ಎಂದು ಹೇಳಿ ಅದನ್ನು ವನದ ಮಧ್ಯದಲ್ಲಿ ಹುಟ್ಟುಹಾಕಿ ಕ್ರಮದಿಂದ ಬೆಳೆಯಿಸಿದನು ॥ ೩೮ ॥ ಆ ಮಾವು ದೊಡ್ಡ ಮರವಾಗಿ ಅನೇಕ ಫಲಗಳನ್ನು ಬಿಟ್ಟು ಶ್ರೇಷ್ಠವಾದ ನೆರಳುಳ್ಳುದೂ ಸಜ್ಜನರಂತೆ ಆಹ್ಲಾದಕರವೂ ಆಯ್ತು ॥ ೩೯ ॥ ದೈವವಶಾತ್ ಒಂದು ಪಕ್ಷಿಯು ಕಚ್ಚಿಕೊಂಡುಬಂದ ಹಾವಿನ ಮಾಂಸದ ಕೊಬ್ಬು ಆ ಮರದ ಒಂದು ಹಣ್ಣಿನ ಮೇಲೆ ಬಿದ್ದಿತು ॥ ೪೦ ॥ ಬಹುನಿಂದ್ಯವಾದ ಆ ಮಾಂಸದ ಕೊಬ್ಬಿನ ಸಂಬಂಧದಿಂದ, ಮುಪ್ಪಿನ ಯೌವನದಂತೆ, ನೇತ್ರಾನಂದಕರವೂ ಮನೋಹರವೂ ಆಗಿ ಹಣ್ಣಾಯ್ತು ॥ ೪೧ ॥ ಭಯಂಕರವಾದ ಅನ್ಯಾಯದಿಂದ ಪೂಜ್ಯವಾದ ದೊಡ್ಡ ವಂಶದ ಅವನತಿಯಾಗುವಂತೆ, ವಿಷದ ಬೇಗೆಯಿಂದ ಬೆಂದ ಆ ಹಣ್ಣು ಶೀಘ್ರವಾಗಿ ಬಿದ್ದಿತು ॥ ೪೨ ॥ ಸಂತೋಷಚಿತ್ತನಾದ ಆ ವನಪಾಲಕನು ಸರ್ವೇಂದ್ರಿಯಾಹ್ಲಾದಕರವಾದ ಆ ಹಣ್ಣನ್ನು ತೆಗೆದುಕೊಂಡುಹೋಗಿ ರಾಜನಿಗೆ ತೋರಿಸಿದನು ॥ ೪೩ ॥ ದೊರೆಯು ವಿಷಪೂರಿತವೂ ದುಷ್ಟವೂ ಮನೋಹರವೂ ಆದ ಆ ಮಾವಿನ ಹಣ್ಣನ್ನು ನೋಡಿ ಪರವಶನಾಗಿ ಅದನ್ನು ಯುವರಾಜನಿಗೆ ಕೊಟ್ಟನು ॥ ೪೪ ॥ ರಾಜಪುತ್ರನು ಪ್ರಸಾದವೆಂದು ಹೇಳಿ ಭಯಂಕರವಾದ ಕಾಲಕೂಟವಿಷದಂತೆ ಪ್ರಾಣಾಪಹಾರಿಯಾದ ಆ ವಿಷಫಲನ್ನು ಶೀಘ್ರವಾಗಿ ತಿಂದನು ॥ ೪೫ ॥ ಅವನು ಅದನ್ನು ತಿಂದೊಡನೆಯೇ ಸತ್ತುಹೋದನು. ದುಷ್ಟಪದಾರ್ಥವನ್ನು ಸೇವಿಸಿದರೆ ಅದು ಯಾವನ ಜೀವಿತವನ್ನು ಹರಣಮಾಡುವುದಿಲ್ಲ? ।೪೬। ವಿಪತ್ತನ್ನು ಹೊಂದಿದ ರಾಜಕುಮಾರನನ್ನು ನೋಡಿ ಕೋಪವೆಂಬ ಬೆಂಕಿಯಿಂದ ಸಂತಪ್ತನಾದ ರಾಜನು ಉದ್ಯಾನಕ್ಕೆ ಅಲಂಕಾರಪ್ರಾಯವಾಗಿದ್ದ ಆ ಗಿಡವನ್ನು ಕತ್ತರಿಸಿಸಿದನು ॥ ೪೭ ॥ ಕೆಮ್ಮು, ಮೈಯೊಣಗುವಿಕೆ, ಮುದಿ

ತನ್ನ, ಕುಷ್ಠ, ವಾಂತಿ, ಶೂಲ, ಕ್ಷಯ ಮೊದಲಾದ ದುಸ್ಸಾಧ್ಯವಾದ ರೋಗಗಳಿಂದ ಪೀಡಿತರೂ ಬದುಕಿನಲ್ಲಿ ವಿರಕ್ತರೂ ಆದ ಜನರು ಆ ವಿಷವೃಕ್ಷವನ್ನು ದೊರೆಯು ಕತ್ತರಿಸಿದನೆಂದು ಕೇಳಿ ಅದನ್ನು ತಿಂದು ಪ್ರಾಣತ್ಯಾಗ ಮಾಡಿಕೊಳ್ಳಬೇಕೆಂಬ ಇಚ್ಛೆಯುಳ್ಳವರಾಗಿ ತಿಂದರು ॥ ೪೮–೪೯ ॥ ಅದನ್ನು ತಿಂದೊಡನೆಯೇ ಅವರೆಲ್ಲರೂ ಸಮಸ್ತ ವ್ಯಾಧಿರಹಿತನಾಗಿಯೂ ಕಾಮನಂತೆ ರೂಪವುಳ್ಳವರಾಗಿಯೂ ಆದರು. ॥ ೫೦ ॥ ಹಾಗಾದುದನ್ನು ಕೇಳಿ ಆ ದೊರೆಯು ಆಶ್ಚರ್ಯವುಳ್ಳವನಾಗಿ ಅವರನ್ನು ಕರೆದು ಪ್ರತ್ಯಕ್ಷವಾಗಿ ನೋಡಿ ದುರ್ನಿವಾರ್ಯವಾದ ಬಹು ವಿಷಾದವನ್ನು ಹೊಂದಿದನು. ॥ ೫೧ ॥ "ವಿಚಿತ್ರವಾದ ಎಲೆಗಳಿಂದ ನಿಬಿಡವೂ ಭೂಮಂಡಲಕ್ಕೆ ಅಲಂಕಾರವೂ ಎಲ್ಲರಿಗೆ ರುಚಿಕರವೂ ಚಕ್ರವರ್ತಿಯಂತೆ ಅಭ್ಯುದಯವುಳ್ಳುದೂ ಉನ್ನತವೂ ಆದ ಆ ಮಾವಿನ ಮರವನ್ನು ವಿಚಾರಹೀನನೂ ಕೋಪದಿಂದ ವಿಚಾರಶೂನ್ಯನೂ ದುರ್ಬುದ್ಧಿಯುಳ್ಳವನೂ ಆದ ನಾನು ನಿರ್ಮೂಲವಾಗಿ ಹೇಗೆ ಕತ್ತರಿಸಿದೆನು ? ಕತ್ತರಿಸಲ್ಪಟ್ಟ ಆ ಮಾವಿನ ಮರವು ರೋಗನಾಶಕವಾಗಿದ್ದಿತು" ಈ ರೀತಿಯಾಗಿ ರಾಜನು, ದುರ್ನಿವಾರವಾದ ವಜ್ರದ ಬೆಂಕಿಯಿಂದ ದಹಿಸಲ್ಪಡುವಂತೆ, ಮನಸ್ಸಿನಲ್ಲಿ ಯಾವಾಗಲೂ ಪಶ್ಚಾತ್ತಾಪದಿಂದ ಸುಡಲ್ಪಟ್ಟನು ॥ ೫೨–೫೪ ॥ ಪೂರ್ವಾಪರವಿಚಾರವನ್ನು ಮಾಡದೆ ಯಾವನು ಕಾರ್ಯವನ್ನು ಮಾಡುತ್ತಾನೋ ಅವನು, ಮಾವಿನ ಮರವನ್ನು ನಾಶಮಾಡಿದವನಂತೆ, ತೀವ್ರವಾದ ಪಶ್ಚಾತ್ತಾಪವನ್ನು ಹೊಂದುತ್ತಾನೆ ॥ ೫೬ ॥ ವಿಚಾರವನ್ನು ಮಾಡದೆ ಯಾವ ಮನುಷ್ಯನು ದುರಭಿಪ್ರಾಯವುಳ್ಳವನಾಗಿ ಕಾರ್ಯವನ್ನು ಮಾಡುತ್ತಾನೋ ಅವನ ಇಷ್ಟಾರ್ಥವೆಲ್ಲ ಶೀಘ್ರವಾಗಿ ಪಲಾಯನ ಮಾಡುತ್ತದೆ ॥ ೫೭ ॥ ವಿಚಾರಶೂನ್ಯನೂ ಕೋಪದಿಂದ ವ್ಯಾಪ್ತವಾದ ಮನಸ್ಸುಳ್ಳವನೂ ಆದ ಮನುಷ್ಯನಿಗೆ ಇಹಪರಜನ್ಮಗಳಲ್ಲಿ ಎಲ್ಲಾ ದು:ಖಗಳು ಹಸ್ತಗತವಾಗುತ್ತವೆ ॥ ೫೮ ॥ ವಿವೇಕವಿಲ್ಲದವನಿಗೆ ಈ ರೀತಿಯಾಗಿ ಅನಿವಾರ್ಯವಾದ ದೋಷವುಂಟಾಗುವುದೆಂದು ತಿಳಿದು ಇಹಪರ

ಲೋಕಗಳಲ್ಲಿ ಸುಖಪ್ರದವಾದ ವಿವೇಕವನ್ನು ಹೃದಯದಲ್ಲಿ ಧರಸಬೇಕು ॥ ೫೯ ॥ ಹಿತಕಾಂಕ್ಷಿಯಾದ ಪ್ರಾಜ್ಞನು ದ್ರವ್ಯ ಕ್ಷೇತ್ರ ಕಾಲ ಶಕ್ತಿ ಯುಕ್ತ ಅಯುಕ್ತ ಮೊದಲಾದ ವಿಷಯಗಳನ್ನು ಯಾವಾಗಲೂ ವಿಚಾರ ಮಾಡ ಬೇಕು. ॥ ೬೦ ॥ ಮನುಷ್ಯರು ವಿಚಾರ ಪರರಾಗಿರುತ್ತಾರೆ, ಪಶುಗಳು ವಿಚಾರ ಶೂನ್ಯಗಳಾಗಿರುತ್ತವೆ. ಇದೇ ಮನುಷ್ಯರಿಗೂ ಪಶುಗಳಿಗೂ ಭೇದವನ್ನುಂಟು ಮಾಡತಕ್ಕದ್ದು ॥ ೬೧ ॥ ವಿಚಾರಬಾಹ್ಯರಾದ ವಿಪ್ರರೆ! ಮಾವಿನ ಮರ ವನ್ನು ನಾಶಮಾಡಿದ ಮೂರ್ಖಮನುಷ್ಯನನ್ನು ಸೂಚಿಸಿದೆನು. ಈಗ ಕ್ಷೀರಮೂರ್ಖ ಮನುಷ್ಯನ ಕಥೆಯನ್ನು ಹೇಳುತ್ತೇನೆ, ಚಿತ್ತವಿಟ್ಟು ಕೇಳಿರಿ ॥ ೬೨ ॥

೭. ಕ್ಷೀರಮೂರ್ಖ ಮನುಷ್ಯನ ಕಥೆ.

ಪ್ರಸಿದ್ಧವಾದ ಘೋಷಾರವೆಂಬ ದೇಶದಲ್ಲಿ ಸಮುದ್ರವ್ಯಾಪಾರವನ್ನು ತಿಳಿದವನೂ ಜಲಯಾತ್ರೆಯಲ್ಲಿ ಆಸಕ್ತನೂ ಆದ ಸಾಗರದತ್ತನೆಂಬ ವರ್ತ ಕನಿದ್ದನು ॥ ೬೩ ॥ ಒಂದಾನೊಂದು ಕಾಲದಲ್ಲಿ ಇವನು ಹಡಗನ್ನೇರಿ ಮೊಸಳೆ ನೆಗಳು ಹಾವು ಮೀನುಗಳಿಂದ ವ್ಯಾಪ್ತವಾದ ಸಮುದ್ರವನ್ನು ದಾಂಟಿ ಚೋಲದ್ವೀಪಕ್ಕೆ ಹೋದನು ॥ ೬೪ ॥ ಅವನು ಹೋಗುವಾಗ, ಸುಖವನ್ನು ಕೊಡುವುದರಲ್ಲಿ ಸಮರ್ಥವಾದ ಜಿನೇಶ್ವರವಚನದಂತೆ, ಹಾಲನ್ನು ಕೊಡುವ ಒಂದು ಹಸುವನ್ನು ತೆಗೆದುಕೊಂಡು ಹೋದನು ॥ ೬೫ ॥ ಹೋಗಿ ವ್ಯವ ಹಾರಚತುರನಾದ ವರ್ತಕನು ಆ ಚೋಲದ್ವೀಪದ ಯಜಮಾನನಾದ ತೋಮರನೆಂಬವನ ಮುಂದೆ ಕೈಗಾಣಿಕೆಯನ್ನಿಟ್ಟು ಅವನನ್ನು ಕಂಡನು ॥ ೬೬ ॥ ಮರುದಿವಸ ವರ್ತಕನು ದೇಹಕಾಂತಿಯನ್ನುಂಟು ಮಾಡುವುದೂ ಅಮೃತದಂತೆ ಒಳ್ಳೆಯ ರುಚಿಯುಳ್ಳದೂ ಆದ ಪಾಯಸವನ್ನು ತೆಗೆದು ಕೊಂಡು ಹೋಗಿ ತೋಮರನನ್ನು ನೋಡಿದನು ॥ ೬೭ ॥ ಅದರ ಮರುದಿ ವಸ ವರ್ತಕನು ಅಮೃತದಂತೆ ದುರ್ಲಭವೂ ಶ್ರೇಷ್ಠವೂ ಆದ ಸಣ್ಣಕ್ಕಿಯ

ಅನ್ನವನ್ನು ಮೊಸರಿನಲ್ಲಿ ಕಲಸಿ ಕೊಟ್ಟು ತೋಮರನನ್ನು ಕಂಡನು ॥ ೭೮ ॥ ಮೊದಲು ದೊರೆಯದಿದ್ದುದೂ ಪ್ರಕಾಶಮಾನವೂ ಆದ ಆ ಮಿಷ್ಟಾಹಾರವನ್ನು ಭುಂಜಿಸಿ ಸಂತುಷ್ಟವಾದ ಮನಸ್ಸುಳ್ಳ ತೋಮರನು ಆ ವರ್ತಕನನ್ನು ಕುರಿತು "ಅಯ್ಯಾ! ನಿನಗೆ ಇಂತಹ ದಿವ್ಯಭೋಜನವು ಎಲ್ಲಿ ದೊರೆಯುವುದು?" ಎಂದು ಕೇಳಿದನು. ಅದಕ್ಕೆ ವರ್ತಕನು "ನನಗೆ ಕುಲದೇವಿಯು ಇಂತಹ ಆಹಾರವನ್ನು ಕೊಡುತ್ತಾಳೆ" ಎಂದನು ॥ ೭೯–೮೦ ॥ ಬಳಿಕ ಆ ಮ್ಲೇಂಛರಾಜನಾದ ತೋಮರನು "ಎಲೈ ಮಂಗಳಾಂಗನೆ! ನಿನ್ನ ಈ ಕುಲದೇವತೆಯನ್ನು ನನಗೆ ಕೊಡು" ಎಂದು ವರ್ತಕನನ್ನು ಕೇಳಿದನು ॥ ೮೧ ॥ ಆಗ ವರ್ತಕನು "ದ್ವೀಪದ ಯಜಮಾನನೆ! ನಾನು ಇಚ್ಛಿಸುವ ದ್ರವ್ಯವನ್ನು ನೀನು ಕೊಡುವುದಾದರೆ ನನ್ನ ಕುಲದೇವತೆಯನ್ನು ಕೊಡುವೆನು" ಎಂದು ಉತ್ತರವಿತ್ತನು ॥ ೮೨ ॥ ಬಳಿಕ ತೋಮರನು ವರ್ತಕನನ್ನು ಕುರಿತು "ಅಯ್ಯಾ! ಸಂದೇಹ ಪಡಬೇಡ, ನಿನಗೆ ಇಷ್ಟವಾದ ದ್ರವ್ಯವನ್ನು ತೆಗೆದುಕೊ. ನಿನ್ನ ಕುಲದೇವತೆಯನ್ನು ನನಗೆ ಕೊಡು" ಎಂದನು ॥ ೮೩ ॥ ಆ ಮೇಲೆ ವರ್ತಕನು ತೋಮರನಿಗೆ ತನ್ನ ಧನವನ್ನು ಕೊಟ್ಟು ತನಗಿಷ್ಟವಾದ ದ್ರವ್ಯವನ್ನು ಅವನಿಂದ ತೆಗೆದುಕೊಂಡು ಹಡಗನ್ನೇರಿ ಸಮುದ್ರವನ್ನು ದಾಂಟಿ ಹೋದನು ॥ ೮೪ ॥ ಮರುದಿವಸ ತೋಮರನು ಆ ಹಸುವಿನ ಮುಂದೆ ಪಾತ್ರವನ್ನಿಟ್ಟು "ಹಸುವೆ! ಆ ವರ್ತಕನಿಗೆ ನೀನು ಕೊಡುವ ದಿವ್ಯಾಹಾರವನ್ನು ಕೊಡು" ಎಂದು ಕೇಳಿದನು ॥ ೮೫ ॥ ಈ ರೀತಿಯಾಗಿ ತೋಮರನಿಂದ ಹೇಳಲ್ಪಟ್ಟ ಆ ಹಸುವು, ಮೂರ್ಖನಾದ ಕಾಮುಕನ ಮಾತನ್ನು ಕೇಳಿ ಚತುರಳಾದ ವಿಲಾಸವತೀ–ಸ್ತ್ರೀಯಂತೆ, ಮೌನವಾಗಿ–ಸುಮ್ಮನಿತ್ತು ॥ ೮೬ ॥ ಮಾತನಾಡದಿರುವ ಗೋವನ್ನು ಕುರತು ತೋಮರನು "ಕುಲದೇವತೆಯೆ! ಸಂತೋಷದಿಂದ ನನಗೆ ದಿವ್ಯಾಹಾರವನ್ನು ಕೊಡು. ಭಕ್ತನ ಮಾತನ್ನು ನಡೆಸು" ಎಂದು ಪುನಃ ಕೇಳಿದನು ॥ ೮೭ ॥ ಹಸುವು ಮೂಕವಾಗಿ–ಮಾತನಾಡದಿರುವುದನ್ನು ನೋಡಿ ತೋಮರನು "ವರ್ತಕ

ನನ್ನ ನೆನೆದುಕೊಂಡಿರುವ ಈ ಕುಲದೇವತೆಯು ನನಗೆ ಬೆಳಿಗ್ಗೆ ಆಹಾರ ವನ್ನು ಕೊಟ್ಟೀತು, ದೇವಿಯೆ! ಈ ದಿವಸ ನೀನು ನಿರಾಕುಲಳಾಗಿರು" ಎಂದನು ॥ ೭೮ ॥ ಎರಡನೆಯ ದಿವಸ ಆ ಗೋವಿನ ಮುಂದೆ ದೊಡ್ಡ ಪಾತ್ರವನ್ನಿರಿಸಿ "ಸ್ವಸ್ಥಳಾದ ನೀನು ಈಗ ನನಗೆ ಇಷ್ಟವಾದ ಭೋಜ್ಯ ವನ್ನು ಕೊಡು" ಎಂದನು ॥ ೭೯ ॥ ಆಗಲೂ ಮೂಕವಾಗಿದ್ದ ಆ ಹಸು ವನ್ನು ನೋಡಿ ಕೋಪಗೊಂಡವನಾಗಿ ತನ್ನ ಭೃತ್ಯರಿಂದ ಅದನ್ನು ಆ ದ್ವೀಪದಿಂದ ಹೊರಕ್ಕೆ ಅಟ್ಟಿಸಿದನು ॥ ೮೦ ॥ ಗೋವು ಹಾಲನ್ನು ಬೇಡಿದರೆ ಎಂದೂ ಯಾರಿಗೂ ಕೊಡುವುದಿಲ್ಲವೆಂಬುದನ್ನು ಆ ತೋಮರನು ತಿಳಿಯ ಲಿಲ್ಲ, ಇವನ ಮೂರ್ಖತ್ವವನ್ನು ನೋಡಿರಿ ॥ ೮೧ ॥ ಹಾಲನ್ನು ಕೊಡುವ ಒಳ್ಳೆಯ ಗೋವನ್ನು ಮೂರ್ಖನಾದ ಮ್ಲೇಚ್ಛನು ಅಟ್ಟಿಸಿದನು. ಮೂರ್ಖನ ಕೈಯಲ್ಲಿ ಸಿಕ್ಕಿದ ಬಹುಮೂಲ್ಯವಾದ ರತ್ನವು ನಿಷ್ಪ್ರಯೋಜನವಾಗುವುದು ॥ ೮೨ ॥ ಕ್ರಮದಿಂದ ಹಾಲನ್ನು ಕರೆಯದಿದ್ದರೆ ಹಸುವು ಶುದ್ಧವಾದ ಹಾಲನ್ನು ಕೊಡುವುದಿಲ್ಲ. ಕಲ್ಲಿನಲ್ಲಿರುವ ಭಂಗಾರವನ್ನು ತೆಗೆಯುವುದಕ್ಕೆ ತಕ್ಕ ಕೆಲಸ ವನ್ನು ಮಾಡದಿದ್ದರೆ ಅದು ವ್ಯಕ್ತವಾಗುವುದೇ ಇಲ್ಲ ॥ ೮೩ ॥ "ಈ ಕಾರ್ಯವು ಹೇಗೆ ಸಿದ್ಧಿಸುವುದು? ಹಾನಿಯು ಹೇಗಾಗುವುದು? ಹೇಗೆ ಅಭಿವೃದ್ಧಿಯನ್ನು ಹೊಂದುವುದು?" ಈ ರೀತಿಯಾಗಿ ಯಾವನು ವಿಚಾರ ಮಾಡುವುದಿಲ್ಲವೋ ಅವನು ಉಭಯಭವಗಳಲ್ಲೂ ಯಾವಾಗಲೂ ದುಃಖ ವನ್ನು ಹೊಂದುವನು ॥ ೮೪ ॥ ಅಹಂಕಾರಿಯೂ ನಿಕೃಷ್ಟಮನಸ್ಸಿನವನೂ ಆದ ಯಾವನು ಸಾರವಾದ ವಿಚಾರವನ್ನು ಮಾಡುವುದಿಲ್ಲವೋ ಆ ಮ್ಲೇಚ್ಛ- ತೋಮರನಿಗೆ ಸಮಾನನೂ ಮಾನವಿಲ್ಲದವನೂ ಕಾರ್ಯಹಾನಿಯನ್ನು ಮಾಡಿಕೊಳ್ಳುವವನೂ ಆದ ಆ ಮನುಷ್ಯನನ್ನು ಪ್ರಾಜ್ಞರು ಪರಿತ್ಯಜಿಸಬೇಕು. ॥ ೮೫ ॥ ಬುದ್ಧಿಹೀನನಾದ ಮ್ಲೇಚ್ಛರಾಜನು ಆ ಗೋವಿಗೆ ಅಸಹ್ಯವಾದ ವಿಪ ತ್ತನ್ನುಂಟು ಮಾಡಿದನು. ಲೋಕದಲ್ಲಿ ಮೂರ್ಖನನ್ನು ಹೊಂದಿದವರೆಲ್ಲ ಅನಿ ವಾರ್ಯವಾಗಿ ಎಲ್ಲಾ ವಿಪತ್ತನ್ನು ಹೊಂದುತ್ತಾರೆ ॥ ೮೬ ॥ ಮೂರ್ಖತ್ವಕ್ಕೆ

ಸಮಾನವಾದ ಅಂಧಕಾರವಿಲ್ಲ. ಜ್ಞಾನಕ್ಕೆ ಸಮಾನವಾದ ಪ್ರಕಾಶವಿಲ್ಲ. ಜನ್ಮ ದುಃಖಕ್ಕೆ ಸಮಾನವಾದ ಶತ್ರುವಿಲ್ಲ. ಮೋಕ್ಷಕ್ಕೆ ಸಮಾನವಾದ ಬಂಧು ವಿಲ್ಲ ॥ ೮೭ ॥ ಉಷ್ಣಕಿರಣನಾದ ಸೂರ್ಯನಲ್ಲಿ ಎಂದಾದರೂ ಕತ್ತಲೆಯು ವಾಸಮಾಡಿದರೂ ಮಾಡಬಹುದು. ಸೂರ್ಯನಲ್ಲಿ ಶೈತ್ಯವುಂಟಾದರೂ ಆಗಬಹುದು. ಚಂದ್ರನಲ್ಲಿ ತಾಪವುಂಟಾದರೂ ಆಗಬಹುದು. ಆದರೆ ಮೂರ್ಖನಲ್ಲಿ ಎಂದೂ ವಿಚಾರವುಂಟಾಗುವುದಿಲ್ಲ ॥ ೮೮ ॥ ದುಷ್ಟಮೃಗ ಗಳು ತುಂಬಿರುವ ವನವನ್ನು ಪ್ರವೇಶಿಸುವುದೊಳ್ಳೆಯದು. ಸರ್ಪ ರಾಜನ ಸೇವೆಯನ್ನು ಮಾಡುವುದೊಳ್ಳೆಯದು. ವಜ್ರದ ಬೆಂಕಿ ಯನ್ನು ಪ್ರವೇಶಿಸುವುದೊಳ್ಳೆಯದು. ಆದರೆ ಮೂರ್ಖನನ್ನು ಒಂದು ಕ್ಷಣಕಾಲವೂ ಸೇವಿಸುವುದೊಳ್ಳೆಯದಲ್ಲ ॥ ೮೯ ॥ ಕುರುಡನಿಗೆ ನೃತ್ಯವೂ ಕಿವುಡನಿಗೆ ಗೀತವೂ ಕಾಗೆಗೆ ಶುಚಿತ್ವವೂ ಶವಕ್ಕೆ ಭೋಜ್ಯವೂ ನಪುಂಸಕ ನಿಗೆ ಹೆಂಡತಿಯೂ ಮೂರ್ಖನಿಗೆ ಕೊಡಲ್ಪಟ್ಟ ಸುಖಕರವಾದ ರತ್ನವೂ ವ್ಯರ್ಥವಾಗಿರುವುವು ॥ ೯೦ ॥ ಗೋವಿಗೆ ಹಣವನ್ನು ಕೊಟ್ಟು ತೆಗೆದುಕೊ ಳ್ಳುವವನು "ಈ ಗೋವು ಹೇಗೆ ನನಗೆ ಹಾಲನ್ನು ಕೊಡುವುದು ?" ಎಂದು ಯಾವ ಮೂಢಬುದ್ಧಿಯುಳ್ಳವನು ಕೇಳುವುದಿಲ್ಲವೋ ಅಂತಹ ಮ್ಲೇಚ್ಛನಿಗೆ ಸಮಾನನಾದ ಮೂರ್ಖನಿಲ್ಲವು ॥ ೯೧ ॥ ಸ್ವತಃ ತಿಳುವಳಿಕೆ ಯಿಲ್ಲದ ಯಾವ ಮನುಷ್ಯನು ತಿಳಿದವರನ್ನು ಕೇಳದೆ ಹಣವನ್ನು ಕೊಟ್ಟು ಪದಾರ್ಥವನ್ನು ತೆಗೆದುಕೊಳ್ಳುತ್ತಾನೋ ಅವನು ಅರಣ್ಯದಲ್ಲಿ ಬೆಲೆಯನ್ನು ತೆಗೆದುಕೊಳ್ಳುವುದಕ್ಕೋಸ್ಕರ ಕಳ್ಳರಿಗೆ ರತ್ನವನ್ನು ಕೊಡುತ್ತಾನೆಂದು ಊಹಿಸುತ್ತೇನೆ ॥ ೯೨ ॥ ಉಭಯಲೋಕಗಳಲ್ಲಿ ಸುಖವನ್ನಿಚ್ಛಿಸುವವರು ಅಹಂಕಾರವನ್ನು ಬಿಟ್ಟು ವಿನೀತರಾಗಿ ತಮಗೆ ತಿಳಿಯದಿರುವ ವಿಷಯವನ್ನು ಸತ್ಪುರುಷರಿಂದ ತಿಳಿದು ನೆನಪಿಟ್ಟು ವಿಧಿಪ್ರಕಾರವಾಗಿ ಆಚರಿಸಬೇಕು ॥ ೯೩ ॥ ದುಷ್ಟಬುದ್ಧಿಯುಳ್ಳ ಯಾವ ಮನುಷ್ಯರು ರಾಗದಿಂದಲೂ ದ್ವೇಷ ದಿಂದಲೂ ಮೋಹದಿಂದಲೂ ಕಾಮದಿಂದಲೂ ಕೋಪದಿಂದಲೂ ಮಾನ

ದಿಂದಲೂ ಲೋಭದಿಂದಲೂ ಔದಾಸೀನ್ಯದಿಂದಲೂ ವಿಚಾರವನ್ನು ಮಾಡು ವುದಿಲ್ಲವೋ ಅಂಥವರು ತಮ್ಮ ತಲೆಯ ಮೇಲೆ ಸಿಡಿಲನ್ನು ಹೊಡೆದು ಕೊಳ್ಳುತ್ತಾರೆಂದು ತಿಳಿಯಬೇಕು ॥ ೯೪ ॥ ದುರ್ಭೇದ್ಯವಾದ ಗರ್ವವೆಂಬ ಪರ್ವತದ ಶಿಖರವನ್ನೇರಿದ ಯಾವ ದುಷ್ಟಪಂಡಿತನು ಬೇರೆಯವರನ್ನು ಕೇಳಿ ತಿಳಿದುಕೊಳ್ಳುವುದಿಲ್ಲವೋ ಅಂಥವನು, ದ್ವೀಪದ ಯಜಮಾನನಾದ ತೋಮರನು ಕೈಗೆ ಸಿಕ್ಕಿದ ಪವಿತ್ರವಾದ ಹಾಲನ್ನು ಕಳೆದುಕೊಂಡು ಹಾಳಾದಂತೆ, ಕೈಗೆ ಸಿಕ್ಕಿದ ರತ್ನವನ್ನು ಕಳೆದುಕೊಂಡು ಹಾಳಾಗುವನು ॥ ೯೫ ॥ ಯಾವ ಮನುಷ್ಯರು ಯಾವಾಗಲೂ ವಿನಯಪರರಾಗಿ ಬೇರೆಯ ವರಲ್ಲಿ ಕೇಳಿ ತಿಳಿದು ಚೆನ್ನಾಗಿ ವಿಚಾರಮಾಡಿ ಯುಕ್ತಾಯುಕ್ತವಿಷಯ ವನ್ನೆಲ್ಲ ಮನಸ್ಸಿನಲ್ಲಿ ಭಾವಿಸಿ ಕಾರ್ಯವನ್ನು ಮಾಡುತ್ತಾರೋ ಅಂಥವರು ಅಪರಿಮಿತವಾದ ಜ್ಞಾನವುಳ್ಳವರೂ ಪ್ರಸಿದ್ಧವಾದ ಯಶಸ್ಸುಳ್ಳವರೂ ವಿಪ ತ್ತಿಲ್ಲದವರೂ ಆಗಿ ಮನುಷ್ಯ ಮತ್ತು ದೇವಸುಖವನ್ನು ಪಡೆದು ಕೊನೆಗೆ ಮುಕ್ತಿಯನ್ನು ಹೊಂದುತ್ತಾರೆ ॥ ೯೬ ॥

ಇಂತು ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷಾಸಪ್ತಮಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

—o—

ದೊರಕಿದ ಹಾಲನ್ನು ಕಳೆದುಕೊಂಡ ಅಜ್ಞಾನಿಯಾದ ಮ್ಲೇಚ್ಛನನ್ನು ವರ್ಣಿಸಿದ ಬಳಿಕ ಈಗ ಅಗರುಮೂರ್ಖಮನುಷ್ಯನನ್ನು ವರ್ಣಿಸುವೆನು ॥ ೧ ॥

೮. ಅಗರುಮೂರ್ಖ ಮನುಷ್ಯನ ಕಥೆ

ಮಗಧದೇಶದಲ್ಲಿ ಶತ್ರುಗಳೆಂಬ ಮದಗಜಗಳ ಕುಂಭಸ್ಥಳವನ್ನು ಸೀಳು ವುದರಲ್ಲಿ ಸಿಂಹದಂತಿರುವ ಗಜರಥನೆಂಬ ಪ್ರಸಿದ್ಧರಾಜನಿದ್ದನು ॥ ೨ ॥ ಒಂದಾನೊಂದು ಕಾಲದಲ್ಲಿ ಅನೇಕಪ್ರಕಾರವಾದ ಕ್ರೀಡೆಗಳುಳ್ಳ ಆ ರಾಜನು

ಕ್ರೀಡೆಗೋಸ್ಕರ ಹೊರಕ್ಕೆ ಹೊರಟು ಸೈನ್ಯವನ್ನು ಬಿಟ್ಟು ಮಂತ್ರಿಯೊಡನೆ ಬಹುದೂರ ಹೋದನು ॥ ೩ ॥ ಮುಂದೆ ಒಬ್ಬ ಸೇವಕನನ್ನು ನೋಡಿ ದೊರೆಯು ಮಂತ್ರಿಯನ್ನು ಕುರಿತು " ಇವನಾರು ? ಯಾರ ಸೇವಕ ? ಯಾರ ಮಗ ? ಹೇಳು " ಎಂದು ಕೇಳಿದನು ॥ ೪ ॥ ಬಳಿಕ ಮಂತ್ರಿಯು ದೊರೆಯನ್ನು ಕುರಿತು " ಸ್ವಾಮಿಯೆ ! ಇವನು ಹರಿಯೆಂಬ ಮಹತ್ತರನ ಮಗನಾದ ಹಾಲಿಕನೆಂಬ ತಮ್ಮ ಸೇವಕನು. ಇವನು ಹನ್ನೆರಡು ವರ್ಷ ಗಳಿಂದ ಕಷ್ಟಪಟ್ಟು ತಮ್ಮ ಪಾದಕಮಲಗಳ ಸೇವೆಯನ್ನು ಯಾವಾಗಲೂ ಮಾಡುತ್ತಿದ್ದಾನೆ " ಎಂದು ಹೇಳಿದನು ॥ ೫-೬ ॥ ಆ ಮಾತನ್ನು ಕೇಳಿ ರಾಜನು ಮಂತ್ರಿಯನ್ನು ಕುರಿತು " ಅಯ್ಯಾ ! ನೀನು ಈ ಹಾಲಿಕನ ಕಷ್ಟ ಕ್ಕೇನು ಕಾರಣವೆಂಬುದನ್ನು ನನಗೆ ಹೇಳದೆ ತಪ್ಪುಮಾಡಿದೆ. ಕಾಲಾಳಿಗೆ ಕಷ್ಟವಿದೆಯೋ ? ಇಲ್ಲವೇ ? ಯಾವನು ಸೇವಕ ? ಯಾವನು ಸೇವಕನಲ್ಲ ? ಈ ವಿಷಯಗಳನ್ನೆಲ್ಲ ತಿಳಿದು ಮಂತ್ರಿಯು ದೊರೆಗೆ ಹೇಳಬೇಕು, ಯಾವಾ ಗಲೂ ಶಾಸ್ತ್ರಪಾರಾಯಣವನ್ನು ಮಾಡುತ್ತಿರುವುದು ಸಾಧುಗಳ ಕರ್ತವ್ಯ ವಾಗಿದೆ. ಮನೆಯ ಕೆಲಸವನ್ನು ಮಾಡುತ್ತಿರುವುದು ಕುಲಸ್ತ್ರೀಯ ಕರ್ತವ್ಯ ವಾಗಿದೆ, ದೊರೆಯ ಕಾರ್ಯವನ್ನು ಯೋಚಿಸುವುದು ಮಂತ್ರಿಯ ಕರ್ತವ್ಯ ವಾಗಿದೆ " ಎಂದು ಹೇಳಿದನು ॥ ೭-೯ ॥ ಆ ಮೇಲೆ ಸಂತುಷ್ಟನಾದ ದೊರೆಯು ಹಾಲಿಕನನ್ನು ಕುರಿತು " ಅಯ್ಯಾ ! ನೀನು ಸಂಕರಾಟವೆಂಬ ಶ್ರೇಷ್ಠವಾದ ಮಠವನ್ನು ಸ್ವೀಕರಿಸು, ಬೇರೆ ಕಲ್ಪವೃಕ್ಷಗಳೋ ಎಂಬಂತೆ ಇಚ್ಛಿಸಿದ ವಸ್ತುವನ್ನು ಕೊಡುವ ಐದುನೂರು ಗ್ರಾಮಗಳನ್ನು ತೆಗೆದುಕೊ " ಎಂದು ಹೇಳಿದನು ॥ ೧೦-೧೧ ॥ ಆ ಮಾತನ್ನು ಕೇಳಿ ಬಳಿಕ ಹಾಲಿಕನು ರಾಜನನ್ನು ಕುರಿತು. " ಸ್ವಾಮಿಯೆ ! ಏಕಾಕಿಯಾದ ನಾನು ಈ ಅನೇಕ ಗ್ರಾಮಗಳಿಂದೇನು ಮಾಡಲಿ ? ಯಾವನಿಗೆ ಸಾವಿರಾರು ಕಾಲಾಳುಗಳು ಕಾಪಾಡುವವರಿದ್ದಾರೋ ಅಂಥವನಿಗೆ ಗ್ರಾಮಗಳನ್ನು ಕೊಡುವುದು ಯೋಗ್ಯವಾಗಿದೆ " ಎಂದನು ॥ ೧೨-೧೩ ॥ ತರುವಾಯ ರಾಜನು ಹಾಲಿಕ.

ರೈತನನ್ನು ಕುರಿತು “ ಅಯ್ಯಾ । ಮನೋಹರವಾದ ಗ್ರಾಮಗಳಿದ್ದರೆ ಅವುಗಳನ್ನು ಕಾಯುವುದಕ್ಕೆ ಸೇವಕರು ತಾವಾಗಿ ಉಂಟಾಗುತ್ತಾರೆ. ಗ್ರಾಮಗಳಿಂದ ದ್ರವ್ಯ ಸಂಪಾದನೆಯಾಗುವುದು. ದ್ರವ್ಯದಿಂದ ಭೃತ್ಯರೊದಗುತ್ತಾರೆ. ಭೃತ್ಯರಿಂದ ದೊರೆಯು ಸೇವೆಯನ್ನು ಮಾಡಿಸಿಕೊಳ್ಳುತ್ತಾನೆ. ಆದುದರಿಂದ ದ್ರವ್ಯಕ್ಕಿಂತ ಶ್ರೇಷ್ಠವಾದ ವಸ್ತುವು ಲೋಕದಲ್ಲಿಲ್ಲ. ಮನುಷ್ಯನು ದ್ರವ್ಯದಿಂದ ಕುಲೀನನೂ ಪಂಡಿತನೂ ಮಾನ್ಯನೂ ಶೂರನೂ ನ್ಯಾಯನಿಪುಣನೂ ವಿದ್ವಾಂಸನೂ ಧಾರ್ಮಿಕನೂ ಲೋಕಪ್ರಿಯನೂ ಆಗುತ್ತಾನೆ. ಹೆಚ್ಚು ಹಣವುಳ್ಳವನನ್ನು ಯೋಗಿಗಳೂ ವಾಚಾಳಿಗಳೂ ಸಮರ್ಥರೂ ಮುದುಕರೂ ಶಾಸ್ತ್ರನಿಪುಣರೂ ಎಲ್ಲರೂ ಸವಿಮಾತುಗಳನ್ನಾಡುವವರಾಗಿ ಭಜಿಸುತ್ತಾರೆ. . ಐಶ್ವರ್ಯವಂತನು ಕೊಳೆತು ಹೋದ ಕಾಲು ಕೈ ಮೂಗುಳ್ಳವನೂ ಕುಷ್ಠರೋಗಿಯೂ ಆಗಿದ್ದರೂ ಅವನನ್ನು ನವಯೌವನಭೂಷಿತಳಾದ ಸ್ತ್ರೀಯು ತಬ್ಬಿಕೊಂಡು ಮಲಗುತ್ತಾಳೆ. ಯಾವನ ಮನೆಯಲ್ಲಿ ದ್ರವ್ಯವಿದೆಯೋ ಅವನಿಗೆಲ್ಲರೂ ಸೇವಕರೂ ಪ್ರಿಯವಾದುದನ್ನು ಮಾಡುವವರೂ ವಶೀಭೂತರೂ ಆಗಿರುತ್ತಾರೆ. ಯಾವನ ಮನೆಯಲ್ಲಿ ಸಂಪತ್ತಿಯಿದೆಯೋ ಅವನು ಮೂರ್ಖನಾಗಿದ್ದರೂ ಅವನನ್ನು ಪ್ರಾಜ್ಞನು ಹೊಗಳುತ್ತಾನೆ, ಅವನು ಅಂಜುಬುರುಕನಾಗಿದ್ದರೂ ಶೂರನು ಅವನ ಸೇವೆ ಮಾಡುತ್ತಾನೆ. ಅವನು ಪಾಪಿಯಾಗಿದ್ದರೂ ಲೋಕವು ಅವನನ್ನು ಧಾರ್ಮಿಕನೆಂದು ಸ್ತುತಿಸುವುದು. ಚಕ್ರವರ್ತಿಗಳೂ ಕೇಶವರೂ ಬಲಭದ್ರರೂ ಎಲ್ಲರೂ ಗ್ರಾಮಗಳ ಅನುಗ್ರಹದಿಂದ ಬೇರೆಯವರಿಗೆ ಸಾಧಾರಣವಲ್ಲದ ಸಂಪತ್ತಿಯುಳ್ಳವರಾಗಿ ಗೌರವವನ್ನು ಹೊಂದಿದರು ” ಎಂದು ಹೇಳಿದನು ॥ ೧೪–೨೧ ॥ ಆ ಮಾತುಗಳನ್ನು ಕೇಳಿದ ಮೇಲೆ ಈ ಪಾಲಿಕನು ರಾಜನನ್ನು ಕುರಿತು “ ಸ್ವಾಮಿಯೆ ! ನನಗೆ ಮರಗಳೂ ಬಾವಿಯೂ ಇಲ್ಲದಿರುವ ಮತ್ತು ಯಾವಾಗಲೂ ಉಳುವುದಕ್ಕೆ ಅರ್ಹವಾದ ಒಂದು ಹೊಲವನ್ನು ದಯೆಯಿಟ್ಟು ಕೊಡು ” ಎಂದು ಕೇಳಿದನು ॥ ೨೨ ॥ ಆಗ ದೊರೆಯು ತನ್ನ

ಮನಸ್ಸಿನಲ್ಲಿ “ ಇವನು ತನ್ನ ಹಿತವನ್ನು ತಿಳಿಯುವುದಿಲ್ಲ. ಅಥವಾ ಹಳ್ಳಿಯವರಿಗೆ ಶುದ್ಧವಾದ ಬುದ್ಧಿಯು ಎಲ್ಲಿಂದ ಬಂದೀತು ? ” ಎಂದು ವಿಚಾರ ಮಾಡಿದನು ॥ ೨೩ ॥ ಆ ಮೇಲೆ ರಾಜನು ಮಂತ್ರಿಯನ್ನು ಕುರಿತು “ ಅಯ್ಯಾ ! ಅಗರುಚಂದನವೃಕ್ಷಗಳುಳ್ಳ ಒಂದು ಹೊಲವನ್ನು ಇವನಿಗೆ ಕೊಡು. ಕಟ್ಟಿಗೆಯನ್ನು ಮಾರಿ ಇವನು ಜೀವಿಸಿಕೊಂಡಿರಲಿ ’’ ಎಂದು ಆಜ್ಞಾಪಿಸಿದನು ॥ ೨೪ ॥ ತರುವಾಯ ಮಂತ್ರಿಯು ಅವನಿಗೆ ಇಷ್ಟವಸ್ತುಗಳನ್ನು ಕೊಡತಕ್ಕವೂ ಕಲ್ಪವೃಕ್ಷಗಳಿಗೆ ಸಮಾನಗಳೂ ಆದ ಅಗರುವೃಕ್ಷಗಳಿಂದ ನಿಬಿಡವಾದ ಒಂದು ಹೊಲವನ್ನು ತೋರಿಸಿದನು ॥ ೨೫ ॥ ಬಳಿಕ ಈ ಹಾಲಿಕನು ತನ್ನ ಮನಸ್ಸಿನಲ್ಲಿ “ಮಹಾರಾಜನು ಬಹಳ ಆಶೆಯುಳ್ಳವನು. ವಿವಿಧವೃಕ್ಷಗಳಿಂದ ವ್ಯಾಪ್ತವಾದ ಎಂತಹ ಹೊಲವನ್ನು ಕೊಟ್ಟನು ? ಮುಂದಿರುವ ಹೊಲವು ಅಂಜನದಂತೆ ಕಪ್ಪಾಗಿಯೂ ವಿಸ್ತಾರವಾಗಿಯೂ ಇದೆ. ನಾನು ಉಪದ್ರವವಿಲ್ಲದುದೂ ಭಿನ್ನಭಿನ್ನವೂ ಆದ ಹೊಲವನ್ನು ಕೇಳಿದೆನು. ಅಂತಹ ಹೊಲವನ್ನು ಕೊಡದೆ ಬೇರೆ ಹೊಲವನ್ನು ಕೊಟ್ಟನು. ಇದನ್ನು ತೆಗೆದುಕೊಳ್ಳುವೆನು. ಇವನ್ನಾದರೂ ಒಳ್ಳೆಯ ಹೊಲವನ್ನಾಗಿ ಮಾಡುವೆನು. ದೊರೆಯು ಇದನ್ನೂ ಕೊಡದಿದ್ದರೆ ಆಗ ಏನು ಮಾಡುವುದು ? ’’ ಈ ರೀತಿಯಾಗಿ ಯೋಚಿಸಿ ಬಳಿಕ “ ಮಹಾ ಪ್ರಸಾದ ” ಎಂದು ಹೇಳಿ ದುರ್ಬುದ್ಧಿಯುಳ್ಳ ಆ ರೈತನು ಮನೆಗೆ ಬಂದು ಹರಿತವಾದ ಕೊಡಲಿಯನ್ನು ತೆಗೆದುಕೊಂಡು ಹೊಲಕ್ಕೆ ಹೋಗಿ ॥ ೨೬–೨೯ ॥ ದುಂಬಿಗಳನ್ನು ಆಕರ್ಷಿಸುವುವೂ ದಿಕ್ಕುಗಳಲ್ಲಿ ಪರಿಮಳವನ್ನು ಬೀರಿ ಸಂತೋಷಪಡಿಸುವುವೂ ಉನ್ನತವೂ ಸರಳವೂ ಸಜ್ಜನರಂತೆ ಸೇವಿಸಲ್ಪಡತಕ್ಕವೂ ಸುಖವನ್ನು ಕೊಡುವುವೂ ದುರ್ಲಭಗಳೂ ದ್ರವ್ಯವನ್ನು ಕೊಡುವುವೂ ಆದ ಅಗರುವೃಕ್ಷಗಳನ್ನು ಕಡಿದು ಸುಟ್ಟನು. ವಿವೇಕವಿಲ್ಲದ ಸ್ವೇಚ್ಛಾಚಾರಿಗಳು ಒಳ್ಳೆಯ ಕೆಲಸವನ್ನೆಲ್ಲಿಯೂ ಮಾಡುವುದಿಲ್ಲ ॥ ೩೦–೩೨ ॥ ಸಂತೋಷದಿಂದ ತೋರಿಸಲ್ಪಟ್ಟಿದ್ದ ರಾಜನ ಹೊಲವನ್ನು ಹಾಲಿಕನು

ಚೆನ್ನಾಗಿ ಶೋಧಿಸಿದನು. ಅಹಂಕಾರವಶೀಭೂತರಾದ ನೀಚರು ತಮ್ಮ ಮೂರ್ಖತನದಿಂದಲೂ ಸಂತೋಷಪಡುತ್ತಾರೆ ‖ ೩೩ ‖ ಒಂದು ದಿವಸ ರಾಜನು ಹಾಲಿಕನನ್ನು ಕರೆಯಿಸಿ " ಇಂತಹ ಹೊಲದಲ್ಲಿ ಏನೇನನ್ನು ಬಿತ್ತಿದೆ ? " ಎಂದು ಕೇಳಿದನು. ಹಾಲಿಕನು " ಸ್ವಾಮಿಯೇ ! ಚೆನ್ನಾಗಿ ಉತ್ತು ಮಹಾಫಲಗಳನ್ನು ಕೊಡುವ ಹಾರಕಧಾನ್ಯಗಳನ್ನು ಬಿತ್ತಿದೆನು " ಎಂದನು ‖ ೩೪ ‖ ಅವನ ದುರ್ಬುದ್ಧಿಯನ್ನು ನೋಡಿ ದೊರೆಯು ಆ ರೈತನನ್ನು ಕುರಿತು " ಎಲೌ ! ಇಲ್ಲಿ ನೀನು ಸುಟ್ಟಮರಗಳಲ್ಲೇನಾದರೂ ಉಳಿದಿದೆಯೋ ? " ಎಂದು ಕೇಳಿದನು ‖ ೩೫ ‖ ಆಗ ಅವನು ಸುಟ್ಟು ಉಳಿದ ಮರದ ಒಂದು ಮೊಳದುದ್ದವಾದ ತುಂಡನ್ನು ತೆಗೆದುಕೊಂಡು ಬಂದು ತೋರಿಸಿದನು. ದೊರೆಯು ಅದನ್ನು ನೋಡಿ " ಅಯ್ಯಾ ! ಇದನ್ನು ತೆಗೆದುಕೊಂಡು ಹೋಗಿ ಪೇಟೆಯಲ್ಲಿ ಮಾರು, ಶೀಘ್ರವಾಗಿ ಹೋಗು " ಎಂದು ಹಾಲಿಕ-ರೈತನಿಗೆ ಹೇಳಿದನು. ಆಗ ಅವನು " ಸ್ವಾಮಿಯೆ ! ಈ ಕಟ್ಟಿಗೆಗೆ ಏನು ಬೆಲೆಯಾಗುವುದು ? " ಎಂದು ಕೇಳಿದನು ‖ ೩೬-೩೭ ‖ ದೊರೆಯು ನಕ್ಕು ಆ ಬುದ್ಧಿಯಿಲ್ಲದ ರೈತನನ್ನು ಕುರಿತು " ಅಯ್ಯಾ ! ವರ್ತಕನು ಎಷ್ಟು ಬೆಲೆಯನ್ನು ಕೊಡುವನೋ ಅದನ್ನೇ ತೆಗೆದುಕೊ " ಎಂದನು ‖ ೩೮ ‖ ತರುವಾಯ ಅವನು ಆ ಕಟ್ಟಿಗೆಯ ತುಂಡನ್ನು ಪೇಟೆಗೆ ತೆಗೆದುಕೊಂಡು ಹೋದನು. ಅದನ್ನು ನೋಡಿ ವರ್ತಕನು ಅದಕ್ಕೆ ಐದು ಹಣ ಬೆಲೆಯನ್ನು ಕೊಟ್ಟನು ‖ ೩೯ ‖ ಆಗ ಆ ರೈತನು ವಿಷಾದವೆಂಬ ಬೆಂಕಿಯಿಂದ ಬೆಂದು ಪಶ್ಚಾತ್ತಾಪವನ್ನು ಹೊಂದಿದನು. ತಿಳಿಯದೆ ಕೆಲಸವನ್ನು ಮಾಡುವ ಯಾವನಿಗೆ ತಾನೆ ಪಶ್ಚಾತ್ತಾಪವಾಗುವುದಿಲ್ಲ ? ‖ ೪೦ ‖ " ಒಂದು ತುಂಡನ್ನು ಮಾರಿದುದರಲ್ಲಿ ಈ ದ್ರವ್ಯವು ದೊರೆಯಿತೆಂದರೆ ಎಲ್ಲಾ ಮರಗಳ ಬೆಲೆಯನ್ನು ಲೆಕ್ಕಮಾಡುವವನಾರು ? ‖ ೪೧ ‖ ದೊರೆಯು ನನಗೆ ನಿಧಿಗೆ ಸಮಾನವಾದ ಹೊಲವನ್ನು ಕೊಟ್ಟನು. ಅಜ್ಞಾನಿಯೂ ಪಾಪಿಯೂ ಆದ ನಾನು ವ್ಯರ್ಥವಾಗಿ ಅದನ್ನು ಹಾಳುಮಾಡಿದೆನು ‖ ೪೨ ‖ ನಾನು

ಪ್ರಯತ್ನದಿಂದ ಮಂಗಳ ರಕ್ಷಣೆಯನ್ನು ಮಾಡಿದ್ದರೆ ಆಗ ನನಗೆ ಜನ್ಮ ಪರ್ಯಂತ ಸುಖಕ್ಕೆ ಸಾಧನವಾದ ದ್ರವ್ಯವುಂಟಾಗುತ್ತಿದ್ದಿತು " ‖ ೪೩ ‖ ಈ ರೀತಿಯಾಗಿ ಆ ರೈತನು, ವಿರಹಿಯು ಕಾಮನಿಂದ ದುಃಖಿತನಾಗುವಂತೆ, ದುಃಸಹವೂ ಅನಿವಾರ್ಯವೂ ಆದ ಪಶ್ಚಾತ್ತಾಪವೆಂಬ ಬೆಂಕಿಯಿಂದ ಬಹು ಕಾಲದವರೆಗೆ ದುಃಖಿತನಾದನು ‖ ೪೪ ‖ ಯಾವ ಅಧಮನು, ಆ ರೈತನಂತೆ, ಬಹು ಪ್ರಯತ್ನದಿಂದ ದೊರಕಿಸಿದ ದ್ರವ್ಯವನ್ನು ಹಾಳು ಮಾಡುತ್ತಾನೋ ಅವನು ಯಾವಾಗಲೂ ದುರ್ನಿವಾರ್ಯವಾದ ತಾಪವನ್ನು ಹೊಂದುತ್ತಾನೆ ‖ ೪೫ ‖ ಬುದ್ಧಿಹೀನನಾದ ಯಾವ ಮನುಷ್ಯನು ಸಾರಾಸಾರವಸ್ತುಗಳನ್ನು ತಿಳಿಯುವುದಿಲ್ಲವೋ ಅವನು ಕೈಗೆ ಸಿಕ್ಕಿದ ಬಹುದುರ್ಲಭವಾದ ರತ್ನ ವನ್ನು ಎಸೆದು ಬಿಡುತ್ತಾನೆ ‖ ೪೬ ‖ ದುರ್ಬುದ್ಧಿಯುಳ್ಳ ಯಾವ ಮನುಷ್ಯನು ಹೇಯೋಪಾದೇಯವಸ್ತುಗಳನ್ನು ಆಲೋಚಿಸುವುದಿಲ್ಲವೋ ಅವನು ಎಕ್ಕದ ಬೇರನ್ನು ದೊರಕಿಸುವುದಕ್ಕೋಸ್ಕರ ಭಂಗಾರದ ನೇಗಿಲಿನಿಂದ ಭೂಮಿ ಯನ್ನು ಊಳುತ್ತಾನೆ ‖ ೪೭ ‖ ಎಲೈ ದ್ವಿಜರೆ। ಇಲ್ಲಿ ಆ ರೈತನಂತೆ ಸಾರಾ ಸಾರಗಳನ್ನು ವಿಚಾರಮಾಡಲಾರದವನಿದ್ದರೆ ನನ್ನನ್ನು ಕೇಳಿದರೂ ನಾನು ಹೇಳುವುದಕ್ಕೆ ಹೆದರುತ್ತೇನೆ ‖ ೪೮ ‖ ದುರ್ಲಭವಾದ ಅಗರುವೃಕ್ಷ ವನ್ನು ಕತ್ತರಿಸಿದ ವಿಚಾರಶೂನ್ಯನನ್ನು ನಿಮಗೆ ತಿಳಿಸಿದುದಾಯ್ತು. ಈಗ ಚಂದನತ್ಯಾಗಿ—ಮೂರ್ಖಮನುಷ್ಯನ ವಿಷಯವನ್ನು ಹೇಳುತ್ತೇನೆ, ಕೇಳಿರಿ ‖ ೪೯ ‖

೯. ಚಂದನತ್ಯಾಗಿ ಮೂರ್ಖ ಮನುಷ್ಯನ ಕಥೆ.

ಸುಖಕ್ಕೆ ಆಧಾರವೂ ಪೂಜ್ಯವೂ ಗುರುಸಮಾನವೂ ಆದ ಮಧ್ಯದೇಶ ದಲ್ಲಿರುವ ಮಥುರಾನಗರದಲ್ಲಿ ಶಾಂತಮನನೆಂಬ ರಾಜನಿದ್ದನು ‖ ೫೦ ‖ ಒಂದಾನೊಂದು ಕಾಲದಲ್ಲಿ ಆ ರಾಜನು, ದುರ್ನಿವಾರ್ಯನಾದ ಗ್ರೀಷ್ಮನೂ

ರ್ಯನಿಂದ ಪೀಡಿತವಾದ ಆನೆಯಂತೆ, ಪಿತ್ತಜ್ವರದಿಂದ ಪೀಡಿತನಾಗಿ ಬೆಂಡಾದನು ‖ ೫೧ ‖ ಸೂರ್ಯನ ತಾಪದಿಂದ ಸ್ವಲ್ಪವಾದ ನೀರಿನಲ್ಲಿ ಮೀನಿನಂತೆ, ಆ ಜ್ವರದ ತಾಪದಿಂದ ತಪ್ತನಾದ ದೊರೆಯು ಕೋಮಲವಾದ ಹಾಸಿಗೆಯಲ್ಲಿ ಒದ್ದಾಡಿದನು ‖ ೫೨ ‖ ಸಮರ್ಥವಾದ ಔಷಧಗಳಿಂದ ಆ ರಾಜನನ್ನು ಉಪಚರಿಸಿದರೂ ದುರ್ನಿವಾರ್ಯವಾದ ತಾಪವು, ಕಟ್ಟಿಗೆಗಳಿಂದ ಬೆಂಕಿಯಂತೆ, ವೃದ್ಧಿಯನ್ನು ಹೊಂದಿತು ‖ ೫೩ ‖ ಸಜ್ಜನರು ದುರ್ಜನನ ತಾಪವನ್ನು ದೂರಮಾಡುವುದರಲ್ಲಿ ಅಸಮರ್ಥರಾಗಿರುವಂತೆ, ಎಂಟು ಪ್ರಕಾರವಾದ ಚಿಕಿತ್ಸೆಯನ್ನು ತಿಳಿದ ವೈದ್ಯರೂ ಈ ದೊರೆಯ ತಾಪವನ್ನು ದೂರಮಾಡುವುದಕ್ಕೆ ಸಮರ್ಥರಾಗಲಿಲ್ಲ ‖ ೫೪ ‖ ದೊರೆಯ ಶರೀರದಲ್ಲಿ ವೃದ್ಧಿಯನ್ನು ಹೊಂದುತ್ತಿರುವ ಆ ತಾಪವನ್ನು ನೋಡಿ ಮಂತ್ರಿಯು ಮಥುರಾನಗರದಲ್ಲೆಲ್ಲ “ ಯಾವನಾದರೂ ದೊರೆಯ ಶರೀರದಿಂದ ತಾಪವನ್ನು ನಾಶಮಾಡಿದರೆ ಅವನಿಗೆ ಗೌರವದೊಡನೆ ನೂರು ಗ್ರಾಮಗಳನ್ನೂ ರಾಜನು ಧರಿಸಿರುವ ಉತ್ಕೃಷ್ಟವಾದ ಕಂಠಾಭರಣವನ್ನೂ ದುರ್ಲಭವಾದ ಉಡುದಾರವನ್ನೂ ಎರಡು ವಸ್ತ್ರಗಳನ್ನೂ ಕೊಡಲಾಗುವುದು ” ಎಂದು ಡಂಗೂರವನ್ನೂ ಹೊಯ್ಸಿದನು ‖ ೫೫-೫೭ ‖ ಅದನ್ನು ಕೇಳಿ ಒಬ್ಬ ವರ್ತಕನು ಚಂದನದ ಕಟ್ಟಿಗೆಯನ್ನು ತರುವುದಕ್ಕೋಸ್ಕರ ಹೊರಕ್ಕೆ ಹೊರಟನು. ದೈವಯೋಗದಿಂದ ಒಬ್ಬ ಅಗಸನ ಕೈಯಲ್ಲಿರುವ ಕಟ್ಟಿಗೆಯನ್ನು ನೋಡಿ ಅದಕ್ಕೆ ದುಂಬಿಗಳು ಮುತ್ತಿದ್ದುದರಿಂದ ಅದು ಗೋಶೀರ್ಷಚಂದನವೆಂದು ತಿಳಿದು ಈ ವರ್ತಕನು ಅಗಸನನ್ನು ಕುರಿತು “ ಅಯ್ಯಾ ! ಈ ಬೇವಿನ ಕಟ್ಟಿಗೆಯು ನಿನಗೆ ಎಲ್ಲಿ ದೊರೆಯಿತು ? ” ಎಂದು ಕೇಳಿದನು ‖ ೫೮-೫೯ ‖ ಅದಕ್ಕೆ ಅಗಸನು “ ಹೊಳೆಯ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದುದು ಸಿಕ್ಕಿತು ” ಎಂದನು. ವರ್ತಕನು “ ನನ್ನಲ್ಲಿರುವ ಕಟ್ಟಿಗೆಯ ಹೊರೆಯನ್ನು ತೆಗೆದುಕೊಂಡು ಈ ಕಟ್ಟಿಗೆಯನ್ನು ಕೊಡು ” ಎಂದನು ‖ ೬೦ ‖ “ ಸಜ್ಜನನೆ ! ತೆಗೆದುಕೋ, ತಪ್ಪೇನು ? ” ಎಂದು ಹೇಳಿ ಅವಿವೇಕಿಯಾದ

ಆ ಅಗಸನು ಸೌದೆಯ ಹೊರೆಯನ್ನು ತೆಗೆದುಕೊಂಡು ಆ ಚಂದನದ ಕಟ್ಟಿಗೆಯನ್ನು ವರ್ತಕನಿಗೆ ಕೊಟ್ಟನು ॥ ೬೧ ॥ ಬುದ್ಧಿಶಾಲಿಯಾದ ವರ್ತಕನು ಬಂದು ಅದನ್ನು ತೇದು ಆ ದೊರೆಯ ದೇಹಕ್ಕೆಲ್ಲ ಚಂದನವನ್ನು ಬಳಿದನು ॥ ೬೨ ॥ ಅದರ ಸ್ಪರ್ಶದಿಂದ ದೊರೆಯ ತಾಪವೆಲ್ಲ, ಪ್ರಿಯಪತ್ನಿಯ ಸ್ಪರ್ಶದಿಂದ ವಿಯೋಗಿ ಪುರುಷನ ದುಃಖನಾಶವಾಗುವಂತೆ, ನೀಗಿತು ॥ ೬೩ ॥ ರಾಜನು ವಾಗ್ದಾನಮಾಡಿದ್ದನ್ನು ಶೀಘ್ರವಾಗಿ ಕೊಟ್ಟು ವರ್ತಕನನ್ನು ಪೂಜಿಸಿದನು. ದೊಡ್ಡವರಿಗೆ ಮಾಡಲ್ಪಟ್ಟ ಉಪಕಾರವು, ಕಲ್ಪವೃಕ್ಷದಂತೆ, ಪ್ರಯೋಜನಕಾರಿಯಾಗುವುದು ॥ ೬೪ ॥ ಚಂದನದ ಕಟ್ಟಿಗೆಯ ಪ್ರಭಾವದಿಂದ ವರ್ತಕನಿಗೆ ದೊರೆತ ಪೂಜಾಸತ್ಕಾರವನ್ನು ಕೇಳಿ ಆ ಅಗಸನು ಶೋಕಸಂತಪ್ತನಾಗಿ ತಲೆಗೆ ಹೊಡೆದಂತೆ ಅತ್ತನು ॥ ೬೫ ॥ "ಹಾ! ಚಂದನದ ಕಟ್ಟಿಗೆಯೆಂದು ತಿಳಿದ ದುರಾತ್ಮನಾದ ಈ ವರ್ತಕನು ಬಂದು, ಯಮನಂತೆ, ಹೇಗೆ ನನ್ನನ್ನು ವಂಚಿಸಿದನು! ಬೇವಿನ ಕಟ್ಟಿಗೆಯೆಂದು ಹೇಳಿ ನನ್ನ ಗೋಶೀರ್ಷಚಂದನವನ್ನು ಹೇಗೆ ತೆಗೆದುಕೊಂಡು ಬಿಟ್ಟನು! ಸತ್ವವನ್ನು ಅಪಹರಿಸುವ ವರ್ತಕರು ನಿಜವಾಗಿಯೂ ಯಮನನ್ನೂ ವಂಚಿಸುವರು" ॥ ೬೬-೬೭ ॥ ಈ ಪ್ರಕಾರವಾಗಿ ಆ ಅಗಸನು ಅಧಿಕವಾದ ಶೋಕದಿಂದ ಯಾವಾಗಲೂ ದಹಿಸಲ್ಪಡುತ್ತಿದ್ದಾನೆ. ಅಜ್ಞಾನದಲ್ಲಿರುವವರು ಸುಖವಾಗಿರುವುದಿಲ್ಲ. ॥ ೬೮ ॥ ಬೇವಿನ ಒಂದು ಕಟ್ಟಿಗೆಗೆ ವರ್ತಕನು ಸೌದೆಯ ಹೊರೆಯನ್ನು ಹೇಗೆ ಕೊಡುತ್ತಾನೆ ? ಎಂಬುದನ್ನು ಆ ಹೆಡ್ಡನಾದ ಅಗಸನು ತಿಳಿಯಲಿಲ್ಲ. ॥ ೬೯ ॥ ಸೂರ್ಯಕಿರಣಗಳಿಂದ ನಿವಾರಿಸಲಾಗದಿರುವುದೂ ದುರ್ನಿವಾರ್ಯವೂ ಆದ ಈ ಅಜ್ಞಾನವು ಕತ್ತಲೆಗಿಂತಲೂ ದೊಡ್ಡದಾಗಿದೆ ॥ ೭೦ ॥ ಕತ್ತಲೆಯಿಂದ ಕಾಣದಿರುವವನು ವಸ್ತುಸ್ವರೂಪವನ್ನು ಕಣ್ಣಿನಿಂದ ನೋಡದಿದ್ದರೂ ಮನಸ್ಸಿನಿಂದ ನೋಡುತ್ತಾನೆ. ಅಜ್ಞಾನದಿಂದ ಮೂಢವಾದ ಮನಸ್ಸುಳ್ಳವನು ವಸ್ತುಸ್ವರೂಪವನ್ನು ಮನಸ್ಸಿನಿಂದಲೂ ನೋಡುವುದಿಲ್ಲ, ಕಣ್ಣಿನಿಂದಲೂ ನೋಡುವುದಿಲ್ಲ ॥ ೭೧ ॥ ಎಲೈ ವಿಪ್ರರೇ!

ಗಂಧದ ಕಟ್ಟಿಗೆಯನ್ನು ಕೊಟ್ಟು ಬೇವಿನ ಕಟ್ಟಿಗೆಯನ್ನು ತೆಗೆದುಕೊಂಡ ವಿನಿಮಯವನ್ನು ಮಾಡಿಕೊಂಡ ಅಗಸನಂತಹವನು ಯಾವನಾದರೂ ನಿಮ್ಮಲ್ಲಿದ್ದರೆ ಯಥಾರ್ಥವಿಷಯವನ್ನು ನೀವುಗಳು ಕೇಳಿದರೂ ನಾನು ಮಾತನಾಡುವುದಕ್ಕೆ ಹೆದರುತ್ತೇನೆ ॥ ೭೨ ॥ ಹೀಗೆ ಜ್ಞಾನಶೂನ್ಯವಾದ ಚಂದನ ತ್ಯಾಗಿಯ ವಿಷಯವನ್ನು ಹೇಳಿದೆನು. ಈಗ ಎಲ್ಲಾ ನಿಂದೆಗಳಿಗೂ ಆಸ್ಪದವಾದ ಮೂರ್ಖರ ವಿಷಯವನ್ನು ಹೇಳುವೆನು ॥ ೭೩ ॥

೧೦ ನಾಲ್ಕು ಮಂದಿ ಮೂರ್ಖರ ಕಥೆ.

ಮಹಾಮೂರ್ಖರು ನಾಲ್ಕು ಮಂದಿಗಳು ವಿನೋದದಿಂದ ಎಲ್ಲಿಗೋ ಹೋಗುವವರು, ಜಿನೇಶ್ವರನಂತೆ, ಪಾಪರಹಿತನಾದ ಓರ್ವ ಮುಮುಕ್ಷುವನ್ನು ನೋಡಿದರು. ॥ ೭೪ ॥ ಅವನು ವೀರಶ್ರೇಷ್ಠನಾಗಿದ್ದರೂ ಹಿಂಸಕನಾಗಿರಲಿಲ್ಲ; ಎರಡು ಮಾತುಗಳನ್ನು (ವ್ಯವಹಾರನಯ ನಿಶ್ಚಯನಯ) ಮಾತನಾಡುವವನಾಗಿದ್ದರೂ ಸತ್ಯವಕ್ತನಾಗಿದ್ದನು. ಚಿತ್ತಾಪಹಾರಕನಾಗಿದ್ದರೂ ಚೋರನಾಗಿರಲಿಲ್ಲ. ನಿಷ್ಕಾಮನಾಗಿದ್ದರೂ ಬಹಳ ಬಲಶಾಲಿಯಾಗಿದ್ದನು ॥ ೭೫ ॥ ಶಾಸ್ತ್ರಗ್ರಂಥಗಳನ್ನು ಧರಿಸಿದ-ಜ್ಞಾನಿಯಾಗಿದ್ದರೂ ನಿರ್ಗ್ರಂಥ-ನಿಷ್ಪರಿಗ್ರಹಿಯಾಗಿದ್ದನು. ಕೊಳೆಯಾದ ಮೈಯುಳ್ಳವನಾಗಿದ್ದರೂ ನಿರ್ಮಲ-ಪಾಪರಹಿತನಾಗಿದ್ದನು. ರಕ್ಷಣೆಯುಳ್ಳವನಾಗಿದ್ದರೂ ನಿರ್ಬಂಧವುಳ್ಳವನಾಗಿದ್ದನು. ಮನೋವಾಕ್ಕಾಯವ್ಯಾಪಾರಗಳನ್ನು ತಡೆಯುವ ನಿಯಮವುಳ್ಳವನಾಗಿದ್ದನೆಂದರ್ಥವು. ವಿರೂಪನಾಗಿದ್ದರೂ ಜನಪ್ರಿಯನಾಗಿದ್ದನು. ॥ ೭೬ ॥ ಅಹಿಂಸಾದಿ ಮಹಾವ್ರತಗಳುಳ್ಳವನಾಗಿದ್ದರೂ ಅಜ್ಞಾನಾಂಧಕಾರ ಮೊದಲಾದವುಗಳನ್ನು ಮರ್ದಿಸುವವನಾಗಿದ್ದನು. ಸಮಸ್ತಪರಿಗ್ರಹರಹಿತನಾಗಿದ್ದರೂ ಈರ್ಯಾಸಮಿತಿ ಮೊದಲಾದ ಪಂಚಸಮಿತಿಗಳನ್ನು ಪಾಲಿಸುವವನಾಗಿದ್ದನು, ॥ ೭೭ ॥ ಪ್ರಾಣಿ ಸಮೂಹವನ್ನು ರಕ್ಷಿಸುವವನಾಗಿದ್ದರೂ

ಧರ್ಮವೆಂಬ ಬಾಣಪ್ರಯೋಗದಲ್ಲಿ ಚತುರನಾಗಿದ್ದನು. ಸತ್ಯದಲ್ಲಿ ಚಿತ್ತ ವಿಟ್ಟವನಾದರೂ ಧರ್ಮವೃದ್ಧಿಯನ್ನು ಮಾಡುವವನಾಗಿದ್ದನು ॥ ೭೮ ॥ ಸಮುದ್ರದಂತೆ ಗಂಭೀರನೂ ಮೇರುವಿನಂತೆ ಸ್ಥಿರನು ಸೂರ್ಯನಂತೆ ತೇಜಸ್ವಿಯೂ ಚಂದ್ರನಂತೆ ಕಾಂತಿಯುಳ್ಳವನೂ ಆಗಿದ್ದನೂ ॥ ೭೯ ॥ ಸಿಂಹದಂತೆ ನಿರ್ಭಯನೂ ಕಲ್ಪವೃಕ್ಷದಂತೆ ಇಚ್ಛಿಸಿದುದನ್ನು ಕೊಡುವವನೂ ಗಾಳಿಯಂತೆ ಸಂಬಂಧರಹಿತನೂ ಆಕಾಶದಂತೆ ನಿರ್ಮಲನೂ ಆಗಿದ್ದನು ॥ ೮೦ ॥ ಜನತೆಯು ಉರಿಯುತ್ತಿರುವ ಬೆಂಕಿಯನ್ನು ಸೇವಿಸಿ ಚಳಿಯನ್ನು ನಿವಾರಿಸಿಕೊಳ್ಳುವಂತೆ ಆ ಮುನಿಯನ್ನು ಸೇವಿಸಿ ಸಮಸ್ತಪ್ರಾಣಿಸಮೂಹ ವನ್ನು ಪೀಡಿಸುವುವೂ ಸಮ್ಯಗ್ದರ್ಶನ ಚಾರಿತ್ರಗಳನ್ನು ನಾಶಮಾಡುವುವೂ ಆದ ಪಾಪಗಳನ್ನು ಕ್ಷಣಕಾಲದಲ್ಲಿ ನಿವಾರಿಸಿಕೊಳ್ಳುವುದು ॥ ೮೧ ॥ ಯಾವನ ಪಂಚಬಾಣಗಳಿಂದ ಹೊಡೆಯಲ್ಪಟ್ಟ ಇಂದ್ರ ಬ್ರಹ್ಮ ವಿಷ್ಣು ಮಹೇಶ್ವರರು ಸೋತು ಯಾವಾಗಲೂ ಅನೇಕದುಃಖಗಳನ್ನು ಹೊಂದಿ ದರೋ ದುರ್ಜಯನಾದ ಅಂತಹ ಮನ್ಮಥನನ್ನು ಆ ಮುಮುಕ್ಷುವು ಕೊಂದನು—ಕಾಮವಿಜಯಿಯಾದನು ॥ ೮೨ ॥ "ಸ್ವರ್ಗದ ದೇವರ್ಕಳನ್ನು ಜಯಿ ಸಿರುವ ಮನ್ಮಥನನ್ನು ಯಾವನು ಜಯಿಸಿರುತ್ತಾನೋ ಅವನು ನಮ್ಮನ್ನು ಹೇಗೆ ಶೀಘ್ರವಾಗಿ ಜಯಿಸದಿರುವನು ?" ಹೀಗೆ ಹೆದರಿಯೋ ಎಂಬಂತೆ ಬಲಿಷ್ಠಗಳಾದ ಕೋಪ ಮೊದಲಾದುವು ಮಹಾಪರಾಕ್ರಮವುಳ್ಳ ಆ ಮುಮು ಕ್ಷುವನ್ನು ಸೇವಿಸಲಿಲ್ಲ ॥ ೮೩ ॥ ಆ ಮುನಿಯು ಯಾವಾಗಲೂ ತಪಸ್ಸುಗ ಳನ್ನು ಹೊಂದಿದನು, ತಮಸ್ಸು—ಅಜ್ಞಾನಗಳನ್ನು ಹೊಂದಲಿಲ್ಲ. ಸತ್ಕಥೆ ಯನ್ನು ಹೇಳುತ್ತಿದ್ದನು. ನಿಂದಿತವಾದ ವಿಕಥೆಯನ್ನು ಹೇಳುತ್ತಿರಲಿಲ್ಲ. ದೋಷಗಳನ್ನು ನಾಶಮಾಡಿದನು. ಅನೇಕ ಗುಣಗಳನ್ನು ನಾಶಮಾಡಲಿಲ್ಲ. ನಿದ್ರೆಯನ್ನು ಬಿಟ್ಟನು. ಜಿನೇಶ್ವರವಚನವನ್ನು ಬಿಡಲಿಲ್ಲ ॥ ೮೪ ॥ ಸಕಲ ಜನರಿಗೆ ಹಿತಕರವಾದ ಉಪದೇಶವುಳ್ಳವನೂ ಜಿನೇಶ್ವರನಂತೆ ಸಕಲಚರಾ ಚರವಸ್ತುಗಳ ವಿಷಯಗಳನ್ನು ತಿಳಿದಿರುವವನೂ ದೇವೇಂದ್ರರಿಂದಲೂ

ನರೇಂದ್ರರಿಂದಲೂ ವಂದಿತನೂ ಆದ ಆ ಮುನೀಶ್ವರನು ಸಮಸ್ತಜನರಿಗೆ ಚೆನ್ನಾಗಿ ಉಪದೇಶವನ್ನು ಮಾಡಿದನು ‖ ೮೫ ‖ ಆ ಮುನೀಶ್ವರನು ಇಂದ್ರಿಯವ್ಯಾಪಾರವನ್ನು ತಡೆದಿರುವವನಾದರೂ ಸಕಲವಸ್ತುಸಮೂಹವನ್ನು ಯಥಾರ್ಥರೂಪದಿಂದ ತಿಳಿಯುತ್ತಾನೆ. ಸ್ಥಾವರ ಜಂಗಮ ಜೀವಗಳನ್ನು ಚೆನ್ನಾಗಿ ರಕ್ಷಿಸಿರುವವನಾದರೂ ಭೋಗೋಪಭೋಗವಿಷಯಗಳ ಮರ್ದನವನ್ನು ಮಾಡಿದನು ‖ ೮೬ ‖ ಆ ನಾಲ್ಕು ಮಂದಿಗಳು ಆ ಮುನೀಶ್ವರನ ಗುಣಗಳಿಂದ ಕೂಡಿರುವುವೂ ಅಪಾರವಾದ ಸಂಸಾರವೆಂಬ ಸಮುದ್ರವನ್ನು ದಾಂಟಿಸುವುವೂ ಆದ ಪಾದಕಮಲಗಳೆಂಬ ನಾವೆಗಳನ್ನು ಭೂತಲದಲ್ಲಿ ಮಸ್ತಕವನ್ನಿರಿಸಿ ವಂದಿಸಿದರು ‖ ೮೭ ‖ ನಿರ್ದುಷ್ಟವಾದ ಆಚರಣೆಯುಳ್ಳ ಆ ಮುನೀಶ್ವರನು ಆ ನಾಲ್ಕು ಮಂದಿಗಳಿಗೂ ಸುಖಕ್ಕೋಸ್ಕರ ದುಃಖನಾಶಕವೂ ಚೆನ್ನಾಗಿ ಬೆಳೆದಿರುವ ಪಾಪವೆಂಬ ಪರ್ವತವನ್ನು ಭೇದಿಸುವುದರಲ್ಲಿ ಸಿಡಿಲಿನಂತಿರುವುದೂ ಆದ "ಧರ್ಮವೃದ್ಧಿ" ಎಂಬ ಆಶೀರ್ವಾದವನ್ನು ಮಾಡಿದನು ‖ ೮೮ ‖ ಆ ಮೂರ್ಖರು ಒಂದು ಯೋಜನ ದೂರದವರೆಗೆ ಹೋಗಿ ಅಲ್ಲಿ ಜಗಳವಾಡಿಕೊಂಡರು. ಇಚ್ಛಿಸಿದ ಫಲವನ್ನೆಲ್ಲ ಕೊಡುವ ಐಕಮತ್ಯವು ವಿವೇಕಹೀನರಿಗೆ ಎಲ್ಲಿಂದ ಬರುವುದು ? ‖ ೮೯ ‖ ಆ ನಾಲ್ಕು ಮಂದಿಗಳಲ್ಲಿ ಪ್ರತಿಯೊಬ್ಬನೂ "ಆ ಸಾಧುವು ನನಗೆ ಆಶೀರ್ವಾದವನ್ನು ಕೊಟ್ಟನು" ಎಂದು ಬಹುಸಮಯದವರೆಗೆ ಬಹಳ ಜಗಳವಾಯ್ತು ‖ ೯೦ ‖ ಆಗ ಒಬ್ಬನು "ಎಲೈ ಮೂರ್ಖರೆ ! ವ್ಯರ್ಥವಾಗಿ ಜಗಳವೇಕೆ ? ಮುನೀಶ್ವರನ ಬಳಿಗೆ ಹೋಗಿ ಕೇಳಿರಿ. ಅವನು ನಿಶ್ಚಯವನ್ನು ಹೇಳುವನು. ಸೂರ್ಯನಿರುವಾಗ ಕತ್ತಲೆಗಳಿರುವುದಿಲ್ಲ" ಎಂದು ಹೇಳಿದನು ‖ ೯೧ ‖ ಅವನ ಈ ಮಾತನ್ನು ಕೇಳಿ ಆ ಮೂರ್ಖರೆಲ್ಲ ಮುನೀಶ್ವರನ ಬಳಿಗೆ ಹೋಗಿ "ಮುನಿಪುಂಗವನೆ ! ಆಗ ನೀನು ಕೊಟ್ಟ ಆಶೀರ್ವಾದವು ಯಾವನಿಗೆ ಸೇರಬೇಕು ? ದಯೆಯಿಟ್ಟು ಹೇಳು" ಎಂದು ಕೇಳಿದರು ‖ ೯೨ ‖ ಬಳಿಕ ಆ ಮುನೀಶ್ವರನು "ನಿಮ್ಮಲ್ಲಿ ಯಾವನು ಮೂರ್ಖನೂ ನಿಂದ್ಯನೂ

ಬಹುಮೂಢನೂ ಆಗಿದ್ದಾನೋ ಅವನಿಗೆ ಆ ಆಶೀರ್ವಾದ" ಎಂದು ಹೇಳಿದನು. ಬಳಿಕ ಆ ನಾಲ್ಕು ಮಂದಿ ಮೂರ್ಖರು "ನಾನು ಮೂರ್ಖ, ನಾನು ಮೂರ್ಖ" ಎಂದು ಹೇಳಿದರು. ಜನರು ಎಲ್ಲಿಯೂ ತಿರಸ್ಕಾರವನ್ನು ಸಹಿಸುವುದಿಲ್ಲ ॥ ೯೩ ॥ ಅವರ ದುಃಸಾಧ್ಯವಾದ ಜಗಳವನ್ನು ಕೇಳಿ ಆ ಸಾಧುವು "ಎಲೈ ಮೂರ್ಖರೇ ! ಪಟ್ಟಣಕ್ಕೆ ಹೋಗಿ ವಿದ್ವಾಂಸರ ಮಾತಿನಿಂದ ಮೂರ್ಖತ್ವವನ್ನು ವಿವೇಚನ ಮಾಡಿರಿ. ಇಲ್ಲಿ ಜಗಳವಾಡಬೇಡಿ" ಎಂದು ಹೇಳಿದನು ॥ ೯೪ ॥ ಸಾಧುವಿನ ಈ ಮಾತನ್ನು ಕೇಳಿ ಶೀಘ್ರಗಾಮಿಗಳಾದ ಆ ಮೂರ್ಖರೆಲ್ಲ ಸಂತುಷ್ಟರಾಗಿ ಜಗಳವನ್ನು ಬಿಟ್ಟು ಶೀಘ್ರವಾಗಿ ಪಟ್ಟಣಕ್ಕೆ ಹೋದರು. ತಿರ್ಯಕ್ಪ್ರಾಣಿಗಳು ಕೂಡ ಸಂತುಷ್ಟವಾದ ಮನಸ್ಸಿನಿಂದ ಸಾಧುವಿನ ಲೋಕಪೂಜ್ಯವಾದ ವಾಕ್ಯವನ್ನು ಪಾಲಿಸುತ್ತವೆ. ಅಂದ ಮೇಲೆ ಜ್ಞಾನಿಗಳಾದ ಮನುಷ್ಯರು ಪಾಲಿಸುವುದಿಲ್ಲವೇ ? ॥ ೯೫ ॥

ಇಂತು ಅಮಿತಗತ್ಯಾಚಾರ್ಯವಿರಚಿತ ಧರ್ಮಪರೀಕ್ಷಾಷ್ಟಮಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

—o—

ಬಳಿಕ ಆ ಮೂರ್ಖರು ಪಟ್ಟಣಕ್ಕೆ ಹೋಗಿ ಪುರನಿವಾಸಿಗಳ ಮುಂದೆ "ಎಲೈ ಪಟ್ಟಣಿಗರೆ ! ನೀವು ನಮ್ಮಗಳ ಜಗಳವನ್ನು ವಿಚಾರಮಾಡಬೇಕು" ಎಂದು ಹೇಳಿದರು ॥ ೧ ॥ ಆಗ ಪಟ್ಟಣಿಗರು "ಎಲೈ ಮೂಢರಾದ ಭದ್ರಪುರುಷರೇ ! ನಿಮ್ಮ ಜಗಳವೆಂತಹದು ?" ಎಂದು ಕೇಳಿದರು. ಬಳಿಕ ಅವರು ತಮ್ಮಲ್ಲಿ ಮೂರ್ಖನಾರೆಂದು ಪ್ರಶ್ನೆ ಮಾಡಿದರು ॥ ೨ ॥ ಆಗ ಪಟ್ಟಣಿಗರು "ನಿಮ್ಮ ನಿಮ್ಮ ಸಮಾಚಾರವನ್ನು ಹೇಳಿ" ಎಂದರು. ಬಳಿಕ ಒಬ್ಬ ಮೂರ್ಖನು "ನನ್ನ ಈ ಕಥೆಯನ್ನು ಕೇಳಿರಿ' ಎಂದು ಮುಂದೆ ಹೇಳುವಂತೆ ವಿವರಿಸಿದನು ॥ ೩ ॥

"ವಿಧಿಯು ನನಗೆ ದೊಡ್ಡ ಹೊಟ್ಟೆಗಳುಳ್ಳವರೂ ಉದ್ದವಾದ ಕುಚಗಳುಳ್ಳವರೂ ಸಾಕ್ಷಾತ್ ಬೇತಾಳಗಳಂತೆ ಭಯಂಕರರೂ ಆದ ಇಬ್ಬರು ಮಡದಿಯರನ್ನು ಕೊಟ್ಟನು ‖ ೪ ‖ ‖ ಅವರು ನನಗೆ ಕಾಮಸುಖವನ್ನು ಕೊಡುವುದರಲ್ಲಿ ಪ್ರಾಣಗಳಿಗಿಂತಲೂ ಪ್ರಿಯರಾದರು. ಎಲ್ಲರಿಗೂ ಎಲ್ಲಾ ಸ್ತ್ರೀಯರೂ ಪ್ರಿಯರಾಗಿರುವುದು ಸ್ವಾಭಾವಿಕವಾಗಿದೆ ‖ ೫ ‖ ರಾಕ್ಷಸಿಯರಿಗೆ ಹೆದರುವಂತೆ ನಾನು ಅವರಿಗೆ ಯಾವಾಗಲೂ ಬಹಳ ಹೆದರುತ್ತೇನೆ. ಪ್ರಾಯಶಃ ಜಗತ್ತಿನಲ್ಲಿ ಸ್ತ್ರೀಯರಿಗೆ ಹೆದರದಿರುವವನಿಲ್ಲ ‖ ೬ ‖ ಅವರೊಡನೆ ವಿನೋದಿಸುತ್ತಿರುವ ನನಗೆ ಸುಖದಿಂದ ಕಾಲವು ಕಳೆಯುತ್ತಿದ್ದಿತು. ಒಂದಾನೊಂದು ದಿವಸ ನಾನು ರಾತ್ರಿಯಲ್ಲಿ ಮನೋಹರವಾದ ಹಾಸಿಗೆಯಲ್ಲಿ ಮಲಗಿದ್ದೆನು ‖ ೭ ‖ ಆಗ ಇವರಿಬ್ಬರೂ ತ್ವರೆಯಿಂದ ಬಂದು ನನ್ನ ಭುಜಗಳನ್ನು ಅವಲಂಬಿಸಿ—ತಲೆಗಿಂಬು ಮಾಡಿಕೊಂಡು ಇಕ್ಕಡೆಗಳಲ್ಲಿ ಮಲಗಿದರು. ‖ ೮ ‖ ವಿನೋದಕ್ಕೋಸ್ಕರ ನಾನು ತಲೆಯ ಮೇಲ್ಗಡೆಯಲ್ಲಿ ದೀಪವನ್ನಿಟ್ಟೆನು. ಕಾಮುಕರು ಯಾವಾಗಲೂ ತಮಗಿರುವ ವಿಪತ್ತನ್ನು ತಿಳಿಯುವುದಿಲ್ಲ. ‖ ೯ ‖ ದುರಾತ್ಮನಾದ ಒಂದು ಇಲಿಯು ಉರಿಯುತ್ತಿರುವ ಬತ್ತಿಯನ್ನು ಒಯ್ಯುತ್ತ ಮೇಲ್ಮೊಗವನ್ನು ಮಾಡಿಕೊಂಡು ಮಲಗಿದ್ದ ನನ್ನ ಮೇಲೆ ಅದನ್ನು ಕೆಡಹಿತು ‖ ೧೦ ‖ ಬಳಿಕ ನಾನು ಎಚ್ಚತ್ತು ಸುಡುತ್ತಿರುವ ಕಣ್ಣಿನ ಬಾಧೆಯುಳ್ಳವನಾಗಿ ಕೂಡಲೆ ಹೀಗೆ ವಿಚಾರ ಮಾಡಲಾರಂಭಿಸಿದೆನು ‖ ೧೧ ‖ 'ಬಲಗೈಯನ್ನೆಳೆದು ಬೆಂಕಿಯನ್ನಾರಿಸಿದರೆ ಆ ತೋಳಿನ ಮೇಲೆ ತಲೆಯನ್ನಿಟ್ಟು ಮಲಗಿರುವ ಬಲಗಡೆಯ ಹೆಂಡತಿಯು ಕೋಪಿಸುವಳು. ಎಡಗೈಯನ್ನೆಳೆದು ಬೆಂಕಿಯನ್ನಾರಿಸಿದರೆ ಆ ತೋಳಿನ ಮೇಲೆ ತಲೆಯನ್ನಿಟ್ಟು ಮಲಗಿರುವ ಎಡಗಡೆಯ ಹೆಂಡತಿಯು ಕೋಪಿಸುವಳು' ‖ ೧೨ ‖ ಬಳಿಕ ನಾನು ಹೆಂಡತಿಯರ ಭಯದಿಂದ ಸುಮ್ಮನೆ—ಸ್ಥಿರವಾಗಿದ್ದು ಬಿಟ್ಟೆನು. ಆಗ ನನ್ನ ಎಡದ ಕಣ್ಣು ಸಿಡಿದು ಕುರುಡಾಯಿತು ‖ ೧೩ ‖ ಬೆಂಕಿಯು ಕಣ್ಣನ್ನು ಸುಟ್ಟು ತಾನೇ ಶಾಂತವಾಯ್ತು. ನಾನು ಹೆದರಿ ಅದನ್ನಾರಿಸುವು

ದಕ್ಕೆ ಯಾವ ಉಪಾಯುವನ್ನೂ ಮಾಡಲಿಲ್ಲ ॥ ೧೪ ॥ ಸ್ತ್ರೀಯರಲ್ಲಿ ಆಸಕ್ತನಾಗಿ ಕಣ್ಣು ಸುಟ್ಟುಹೋಗುವುದನ್ನು ಉಪೇಕ್ಷಿಸಿರುವ ನನಗೆ ಸಮಾನನಾದ ಮೂರ್ಖನಿದ್ದರೆ ಹೇಳಿ ॥ ೧೫ ॥ ಹೆಂಗುಸರಿಗೆ ಹೆದರಿದ ನನಗೆ ಎಡದ ಕಣ್ಣು ಸಿಡಿದು ಹೋದಂದಿನಿಂದ ಒಕ್ಕಣ್ಣನೆಂದು ಹೆಸರಾಯ್ತು ॥ ೧೬ ॥ ಸ್ತ್ರೀಯರ ಅಭಿಪ್ರಾಯಾನುಸಾರವಾಗಿರುವ ಪುರುಷರು ಹೊಂದದಿರುವ ದುಃಖವು ಈ ಜನ್ಮದಲ್ಲಿಯೂ ಪರಜನ್ಮದಲ್ಲಿಯೂ ಇಲ್ಲ. ಉಭಯಭವಗಳಲ್ಲಿಯೂ ಬಹು ದುಃಖವನ್ನು ಹೊಂದುತ್ತಾರೆಂದು ಭಾವವು ॥ ೧೭ ॥ ಸ್ತ್ರೀಯರಿಗೆ ವಶರಾಗಿ ತಮ್ಮ ಕಣ್ಣುಗಳು ಉರಿದುಹೋಗುತ್ತಿದ್ದರೂ ಮೂಕರಾಗಿರುವ ದೀನ-ಮನುಷ್ಯರು ಇನ್ನೇನನ್ನು ತಾನೆ ಮಾಡುವುದಿಲ್ಲ ? ॥ ೧೮ ॥

ಎಲೈ ವಿಪ್ರರೆ ! ನಿಮ್ಮಲ್ಲಿ ಆ ಒಕ್ಕಣ್ಣನಿಗೆ ಸಮಾನನಾದವನು ಯಾವನಾದರೂ ಇದ್ದರೆ ನಾನು ಮಾತನಾಡುವುದಕ್ಕೆ ಹೆದರುತ್ತೇನೆ ॥ ೧೯ ॥ ಒಬ್ಬ ಮೂರ್ಖನು ತನ್ನ ಮೂರ್ಖತ್ವವನ್ನು ಹೇಳಿ ಮುಗಿಸಿದನಂತರ ಎರಡನೆಯ ಮೂರ್ಖನು ತನ್ನ ಮೂರ್ಖತ್ವವನ್ನು ಹೇಳಲಾರಂಭಿಸಿದನು ॥ ೨೦ ॥

"ಬ್ರಹ್ಮನು ಎಲ್ಲಾ ವಿಕಾರರೂಪಗಳನ್ನು ಸೇರಿಸಿ ಎಕ್ಕದ ಫಲದಂತೆ ತುಟಿಯುಳ್ಳ ಇಬ್ಬರು ಹೆಂಡತಿಯರನ್ನು ನನಗೋಸ್ಕರ ಮಾಡಿದನೆಂದು ಊಹಿಸುತ್ತೇನೆ ॥ ೨೧ ॥ ಅವರು ಕಪ್ಪಾಗಿರುವವರೂ ಕವಡೆಗೆ ಸಮಾನವಾದ ಹಲ್ಲುಗಳುಳ್ಳವರೂ ಉದ್ದವಾದ ಕಣಕಾಲು ಪಾದ ಮೂಗು ಇವುಗಳುಳ್ಳವರೂ ಕಂಚುಗಾರರ ಹೆಂಗುಸರಿಗೆ ಸಮಾನರೂ ಒಣಗಿದ ಮೈಗೂದಲುಳ್ಳವರೂ ಆಗಿದ್ದಾರೆ ॥ ೨೨ ॥ ನಿದ್ರೆಯರೂ ಹುಳಿತ ತಂಗೂಳನ್ನು ತಿನ್ನುವವರೂ ತಿನ್ನುವುದರಲ್ಲಿ ಹೆಣ್ಣುಕತ್ತೆಯನ್ನೂ ಅಶುಚಿತ್ವದಲ್ಲಿ ಹೆಣ್ಣುಹಂದಿಯನ್ನೂ ಚಪಲತೆಯಲ್ಲಿ ಹೆಣ್ಣುಕಾಗೆಯನ್ನೂ ಜಯಿಸಿ ಶೋಭಿಸುತ್ತಿದ್ದಾರೆ ॥ ೨೩ ॥ ಒಬ್ಬಳು ಹೆಂಡತಿಯು ಬಹು ಪ್ರೀತಿಯುಳ್ಳವಳಾಗಿ ನನ್ನ ಎಡಗಾಲನ್ನೂ ಇನ್ನೊಬ್ಬಳು ಬಲಗಾಲನ್ನೂ ತೊಳೆಯುತ್ತಾರೆ ॥ ೨೪ ॥ ಒಬ್ಬಳ ಹೆಸರು

ಖುಕ್ಷಿ, ಇನ್ನೊಬ್ಬಳ ಹೆಸರು ಖರಿ. ಅವರೊಡನೆ ವಿನೋದವಾಗಿ ಸುಖ ವನ್ನನುಭವಿಸುತ್ತಿರುವ ನನಗೆ ಕಾಲವು ಕಳೆಯುತ್ತಿರುವುದು ॥ ೨೫ ॥ ಒಂದಾನೊಂದು ಕಾಲದಲ್ಲಿ ಪ್ರಾಣಗಳಿಗಿಂತಲೂ ಹೆಚ್ಚು ಪ್ರಿಯಳಾದ ಖುಕ್ಷಿಯು ಸಂತುಷ್ಟಚಿತ್ತಳಾಗಿ ತನ್ನ ಪಾಲಿನ ನನ್ನ ಕಾಲನ್ನು ತೊಳೆದು ಇನ್ನೊಂದು ಕಾಲಿನ ಮೇಲಿಟ್ಟಳು ॥ ೨೬ ॥ ಅದನ್ನು ನೋಡಿ ಖರಿಯು ಒಂದು ಒನಕೆಯನ್ನು ತೆಗೆದುಕೊಂಡು ಬಲವಾಗಿ ಆ ಕಾಲಿನ ಮೇಲೆ ಹೊಡೆದು ಆ ಕಾಲನ್ನು ಮುರಿದಳು ॥ ೨೭ ॥ ಆಗ ಖುಕ್ಷಿಯು ಖರಿಯನ್ನು ಕುರಿತು "ಎಲೈ ದುಷ್ಕಾರ್ಯವನ್ನು ಮಾಡುವ ನೀಚಳೆ ! ಈ ದಿವಸ ನೀನು ತಡೆಯಿಲ್ಲದೆ ಇಂತಹ ಕೆಲಸವನ್ನು ಮಾಡುತ್ತಿಯೋ ? ದುಷ್ಟಳೆ ! ಹೆಣ್ಣುಕತ್ತೆಯು ಸಾವಿರಾರು ಗಂಡುಕತ್ತೆಗಳ ಭೋಗವನ್ನು ಹೊಂದುವಂತೆ, ನೀನು ಯಾವಾಗಲೂ ಸಾವಿರಾರು ವಿಟಪುರುಷರ ಭೋಗವನ್ನು ಹೊಂದಿಹೊಂದಿ ಪತಿವ್ರತೆಯಂತೆ ನಟಿಸುತ್ತಿರುವೆ' ಎಂದಳು ॥ ೨೮–೨೯ ॥ ಅದನ್ನು ಕೇಳಿ ಖರಿಯು ಖುಕ್ಷಿಯನ್ನು ಕುರಿತು 'ಎಲೈ ದುಷ್ಟಳೆ ! ನೀನು ನಿನ್ನ ತಾಯಿಯಂತೆ ಅನೇಕ ಪ್ರಕಾರವಾಗಿ ವಿಟರ ಗುಂಪನ್ನು ಸೇವಿಸಿ ನನ್ನ ಮೇಲೆ ದೋಷ ವನ್ನು ಹೊರಿಸುತ್ತಿರುವೆ. ನೀಚಳೆ ! ಐದುಕಡೆ ಜಟೆಯನ್ನು ಬಿಟ್ಟು ತಲೆಯನ್ನು ಬೋಳಿಸಿ ಮಡಕೆಯ ಚೂರು–ಬೊಕರೆಗಳ ಮಾಲೆಯನ್ನು ಹಾಕಿ ಪಟ್ಟಣದ ಮಧ್ಯದಲ್ಲಿ ತಿರುಗಿಸುತ್ತೇನೆ' ಎಂದಳು ॥ ೩೦–೩೧ ॥ ಈ ರೀತಿಯಾಗಿ ಆ ಖುಕ್ಷಿ–ಖರಿಯರಿಗೆ, ದುಷ್ಟರಾಕ್ಷಸಿಯರಿಗೆ ಜಗಳವಾಗುವಂತೆ, ಜನರು ನೋಡತಕ್ಕ ದೊಡ್ಡ ಜಗಳವಾಯ್ತು ॥ ೩೨ ॥ ಕೋಪಗೊಂಡ ಖುಕ್ಷಿಯು ಖರಿಯನ್ನು ಕುರಿತು 'ಎಲೈ ನೀಚಳೆ ! ನಿನ್ನ ತಾಯಿಯು ಬಂದು ಕಾಲನ್ನು ಕಾಪಾಡಲಿ' ಎಂದು ಇನ್ನೊಂದು ಕಾಲನ್ನು ಮುರಿದಳು ॥ ೩೩ ॥ ಎರಡು ಹೆಣ್ಣುಹುಲಿಗಳಿಗೆ ಸಿಕ್ಕಿದ ಕುರಿಯು ಪ್ಯೈನಡುಗಿರುವಂತೆ, ಆ ಇಬ್ಬರು ಹೆಂಡತಿಯರಿಂದ ಬೆದರಿ ನಾನು ಮೂಗನಾಗಿದ್ದೆನು ॥ ೩೪ ॥ ಹೆಂಡತಿಯರಿಗೆ ಹೆದರಿದವನಾಗಿ ನಾನು ಕಾಲುಗಳು ಮುರಿದುದನ್ನೂ ಪರಿ

ಗಣಿಸದಿದ್ದುದರಿಂದ ಆಗ ನನಗೆ 'ಕುಂಟಹಂಸಗತಿ' ಎಂದು ಹೆಸರಾಯಿತ್ತು ॥ ೩೫ ॥ ನನ್ನ ಮೂರ್ಖತ್ವವನ್ನು ನೋಡಿರಿ—ಆಗ ನಾನು ಹೆಂಡತಿಯರಿಗೆ ಹೆದರಿ ಮೂಗನಾಗಿದ್ದು ಬಿಟ್ಟೆನು ॥ ೩೬ ॥ ದುರಾಚಾರಿಣಿಯರೂ ಕುರೂಪಿಗಳೂ ನೀಚಕುಲದಲ್ಲಿ ಹುಟ್ಟಿದವರೂ ಆದ ಹೆಂಗುಸರಿಗೆ ಸೌಭಾಗ್ಯ ರೂಪ ಸೌಂದರ್ಯಗಳ ಅಹಂಕಾರವಿರುವಂತೆ, ಸದಾಚಾರಿಣಿಯರೂ ಸುಂದರಿಯರೂ ಸತ್ಕುಲದಲ್ಲಿ ಹುಟ್ಟಿದವರೂ ಪಾಪರಹಿತರೂ ಧಾರ್ಮಿಕರೂ ಆದ ಹೆಂಗುಸರಿಗೆಂದೂ ಸೌಭಾಗ್ಯ ರೂಪ ಸೌಂದರ್ಯಗಳ ಗರ್ವವಿರುವುದಿಲ್ಲ ॥ ೩೭–೩೮ ॥ ತನಗೆ ಹಿತವನ್ನು ಬಯಸುವ ಪ್ರಾಜ್ಞನು ಸತ್ಕುಲಪ್ರಸೂತಳೂ ಪತಿಭಕ್ತಿಯುಳ್ಳವಳೂ ಶಾಂತಳೂ ಧರ್ಮಮಾರ್ಗದಲ್ಲಿ ಚತುರಳೂ ಆದ ಒಬ್ಬ ಹೆಂಡತಿಯನ್ನೇ ಮಾಡಿಕೊಳ್ಳಬೇಕು ॥ ೩೯ ॥ ಹೆಂಗುಸರಿಗೆ ಅಡಿಯಾಳಾದ ಮನುಷ್ಯನು ತನ್ನ ವಂಶವನ್ನೂ ಕೀರ್ತಿಯನ್ನೂ ಸುಖವನ್ನೂ ಹಾಳುಮಾಡಿಕೊಂಡು ದುಃಸಹವಾದ ನರಕವೇದನೆಯನ್ನನುಭವಿಸುತ್ತಾನೆ. ಸಂದೇಹವಿಲ್ಲ ॥ ೪೦ ॥ ಶತ್ರುಗಳಿಗೂ ಹುಲಿಗಳಿಗೂ ಹಾವುಗಳಿಗೂ ಹೆದರದಿರುವವರೆಷ್ಟೋ ಮಂದಿಗಳಿರುತ್ತಾರೆ. ಆದರೆ ಹೆಂಗುಸಿಗೆ ಹೆದರದಿರುವವನೊಬ್ಬನೂ ಲೋಕದಲ್ಲಿ ಕಾಣುವುದಿಲ್ಲ ॥ ೪೧ ॥ ಕುಂಟಹಂಸಗತಿಗೆ ಸಮಾನರಾದ ದುರ್ಬುದ್ಧಿಯುಳ್ಳ ಮೂರ್ಖಮನುಷ್ಯರ ಮುಂದೆ ವಿವೇಕಿಯು ಯಥಾರ್ಥವಿಷಯವನ್ನು ಮಾತನಾಡಬಾರದು" ॥ ೪೨ ॥ ಈ ರೀತಿಯಾಗಿ ತನ್ನ ಸಮಾಚಾರವನ್ನು ಹೇಳಿ ಎರಡನೆಯ ಮೂರ್ಖನು ವಿರಾಮವನ್ನು ಹೊಂದಿದನು. ತರುವಾಯ ಮೂರನೆಯ ಮೂರ್ಖನು ನಿಂದ್ಯವಾದ ವಾರ್ತೆಯನ್ನು ಹೇಳಲು ತೊಡಗಿದನು ॥ ೪೩ ॥

"ಪುರನಿವಾಸಿಗಳೇ ! ಈಗ ನನ್ನ ಮೂರ್ಖತ್ವವನ್ನು ನಿಮಗೆ ಹೇಳುತ್ತೇನೆ. ಲಕ್ಷ್ಯವಿಟ್ಟು ಕೇಳಿರಿ ॥ ೪೪ ॥ ಒಂದಾನೊಂದು ಕಾಲದಲ್ಲಿ ನಾನು ಮಾವನ ಮನೆಗೆ ಹೋಗಿ ಹೆಂಡತಿಯನ್ನು ಕರೆದುಕೊಂಡು ಬಂದೆನು.

ಆಕೆಯು ರಾತ್ರಿಯಲ್ಲಿ ಮಾತನಾಡುತ್ತಿರಲಿಲ್ಲ. ಮಲಗುವುದಕ್ಕೆ ಬಂದಾಗ ನಾನು ಆಕೆಯನ್ನು ಕುರಿತು ‘ ಎಲೈ ಕೃಶೋದರಿಯೆ ! ನಮ್ಮಿಬ್ಬರಲ್ಲಿ ಮೊದಲು ಮಾತನಾಡುವವರು ನಿಜವಾಗಿಯೂ ಸೋಲುತ್ತಾರೆ, ಅವರು ತುಪ್ಪ ಬೆಲ್ಲದಿಂದ ಮಾಡಿದ ಹತ್ತು ಹೋಳಿಗೆಗಳನ್ನು ಕೊಡಬೇಕು ’ ಎಂದನು ॥ ೪೬ ॥ ಬಳಿಕ ಅವನ ಹೆಂಡತಿಯು ‘ ನಿಸ್ಸಂದೇಹವಾಗಿ ಹಾಗಾಗಲಿ ’ ಎಂದಳು. ಕುಲೀನಸ್ತ್ರೀಯರು ಗಂಡನ ಮಾತಿಗೆಲ್ಲಿಯೂ ಪ್ರತಿಕೂಲರಾಗಿರುವುದಿಲ್ಲ ॥ ೪೭ ॥ ಹೀಗೆ ನಾವು ಪ್ರತಿಜ್ಞೆಯುಳ್ಳವರಾಗಿರುವಾಗ ಕಳ್ಳನು ಮನೆಗೆ ನುಗ್ಗಿ ಹಣವನ್ನೆಲ್ಲ ದೋಚಿಕೊಂಡು ಹೋದನು ॥ ೪೮ ॥ ಆ ಕಳ್ಳನು ಮನೆಯಲ್ಲಿ ಸ್ವಲ್ಪವನ್ನೂ ಬಿಡದೆ ಕದ್ದುಕೊಂಡು ಹೋದನು. ಕಲಹವಿರುವಲ್ಲಿ ಜಾರರಿಗೂ ಚೋರರಿಗೂ ಆಧಿಪತ್ಯವುಂಟಾಗುತ್ತದೆ ॥ ೪೯ ॥ ಕಳ್ಳನು ಆ ಮೂರ್ಖನ ಹೆಂಡತಿಯ ಸೆರಗನ್ನು ಹಿಡಿದೆಳೆಯಲಾರಂಭಿಸಿದಾಗ ಆಕೆಯು ಗಂಡನನ್ನು ಕುರಿತು “ ಎಲೈ ದುರಾಚಾರಿಯೇ ! ಈಗಲೂ ನೀನು ಉದಾಸೀನನಾಗಿರುತ್ತೀಯಾ ? ಎಲೈ ದುಷ್ಟನೆ ! ನನ್ನ ಸೆರಗನ್ನು ಎಳೆಯುತ್ತಿದ್ದರೂ ನೀನು ಹೇಗೆ ಜೀವಿಸಿರುತ್ತಿ ? ಕುಲೀನರು ತಮ್ಮ ಪತ್ನಿಯರ ಅವಮಾನವನ್ನು ತಾವು ಜೀವಿಸಿರುವಾಗ ಸಹಿಸತಕ್ಕವರಲ್ಲ ” ಎಂದು ಹೇಳಿದಳು ॥ ೫೦–೫೧ ॥ ಆಕೆಯ ಮಾತನ್ನು ಕೇಳಿ ಆ ಮೂರ್ಖನು ನಕ್ಕು “ ಎಲೈ ಕಾಂತೆಯೇ ! ನಾನು ನಿನ್ನನ್ನು ಸೋಲಿಸಿದೆನು, ಸೋಲಿಸಿದೆನು. ಕಮಲಾಕ್ಷಿಯೆ ! ನೀನು ಮೊದಲು ಮಾತನಾಡಿದೆ. ನೀನು ಒಪ್ಪಿಕೊಂಡಂತೆ ಬೆಲ್ಲ ತುಪ್ಪದಿಂದ ಮಿಶ್ರವಾದ ಹತ್ತು ಹೋಳಿಗೆಗಳನ್ನು ನನಗೀಗ ಕೊಡು ” ಎಂದನು ॥ ೫೨–೫೩ ॥ ಪೂರ್ವಾರ್ಜಿತವೂ ಕಷ್ಟದಿಂದ ದೊರೆಯತಕ್ಕುದೂ ಧರ್ಮವನ್ನೂ ಸುಖವನ್ನೂ ಕೊಡತಕ್ಕುದೂ ಆದ ದ್ರವ್ಯವನ್ನು ಕಳೆದುಕೊಂಡೆನು. ನನ್ನ ಈ ಮೂರ್ಖತ್ವವನ್ನು ನೋಡಿರಿ. ಆಗ ನನಗೆ ಜನರು ‘ ಜೋದ ’ ಎಂದು ಹೆಸರನ್ನಿಟ್ಟರು. ” ಎಂದನು. ಮಿಥ್ಯಾಭಿಮಾನದಿಂದ ಪ್ರಾಣಿಯು ಯಾವ ತೊಂದರೆಯನ್ನು ಹೊಂದುವುದಿಲ್ಲ ! ॥ ೫೪ ॥

ಪ್ರಾಣಿಯು ತನ್ನ ಕಾರ್ಯಕ್ಕೆ ಹಾನಿಯಾಗುವುದಾಗಿದ್ದರೆ ತನ್ನ ಪ್ರಾಣವನ್ನೂ ಬಿಡುವುದು. ಆದರೆ ತುಂಡು ತುಂಡಾಗಿ ಮಾಡಲ್ಪಟ್ಟರೂ ಅಹಂಕಾರವನ್ನು ಬಿಡುವುದಿಲ್ಲ ॥ ೫೬ ॥ ಮನುಷ್ಯನು ಮಿಥ್ಯಾಭಿಮಾನದಿಂದ ದ್ರವ್ಯವನ್ನೆಲ್ಲ ಹಾಳುಮಾಡಿಕೊಳ್ಳುವುದು ಸತ್ಪುರುಷರಿಗೆ ಆಶ್ಚರ್ಯವಾಗಿ ತೋರುವುದಿಲ್ಲ–ಆದರೆ ಅದರಿಂದುಂಟಾಗುವ ನರಕವೇದನೆಯನ್ನು ಸಹಿಸುವುದಾಶ್ಚರ್ಯ ॥ ೫೭ ॥ ಜೋದನಿಗೆ ಸಮಾನರಾದ ಮೂರ್ಖನರಾಧಮರಿಗೆ ಸಾರಾಸಾರವನ್ನು ವಿಚಾರಮಾಡುವುದರಲ್ಲಿ ಅಧಿಕಾರವಿಲ್ಲ ॥ ೫೮ ॥ ಈ ರೀತಿಯಾಗಿ ಮೂರನೆಯವನು ತನ್ನ ಮೂರ್ಖತ್ವವನ್ನು ಹೇಳಿ ವಿರಾಮವನ್ನು ಹೊಂದಿದ ಬಳಿಕ ಜನರ ಕೇಳಿಕೆಯಂತೆ ನಾಲ್ಕನೆಯ ಮೂರ್ಖನು ಮಾತನಾಡಲಾರಂಭಿಸಿದನು ॥ ೫೯ ॥

"ಒಂದಾನೊಂದು ಕಾಲದಲ್ಲಿ ನಾನು ನನ್ನ ಹೆಂಡತಿಯನ್ನು ಕರೆದುಕೊಂಡು ಬರುವುದಕ್ಕೋಸ್ಕರ ಇಚ್ಛಿಸಿದ ಸುಖಕ್ಕೆ ಆಧಾರವೂ ಬೇರೊಂದು ಸ್ವರ್ಗದಂತಿರುವುದೂ ಆದ ಮಾವನ ಮನೆಗೆ ಹೋದೆನು ॥ ೬೦ ॥ ವಿವಿಧ ವರ್ಣಗಳಿಂದ ನಿಬಿಡವೂ ಪ್ರಿಯವೂ ಸಂತೋಷವನ್ನುಂಟುಮಾಡುವುದರಲ್ಲಿ ಸಮರ್ಥವೂ ಉಜ್ಜ್ವಲವೂ ಆದ ಜೀವವಾಕ್ಯದಂತೆ, ಹಲವು ಬಣ್ಣಗಳುಳ್ಳುದೂ ಜಿಡ್ಡಾಗಿರುವುದೂ ಸಂತೋಷವನ್ನುಂಟುಮಾಡುವುದರಲ್ಲಿ ಸಮರ್ಥವೂ ಪ್ರಕಾಶಮಾನವೂ ಆದ ಭೋಜನವನ್ನು ಮಾವನು ನನಗೆ ಕೊಟ್ಟನು ॥ ೬೧ ॥ ಆದರೆ ನಿವಾರಿಸುವುದಕ್ಕೂ ಮೀರುವುದಕ್ಕೂ ಕಷ್ಟವಾದ ಮಾರಿಯಂತಿರುವ ಲಜ್ಜೆಯಿಂದ ವಿಕಲಚಿತ್ತನಾದ ನಾನು ಆ ಪ್ರಿಯವಾದ ಭೋಜನವನ್ನು ಮಾಡಲಿಲ್ಲ ॥ ೬೨ ॥ ಅಲ್ಲಿ ಎರಡನೆಯ ದಿವಸದಲ್ಲಿಯೂ ದೇಹಧಾರಿಗಳಾದ ವ್ಯಥೆಗಳಂತಿರುವ ಊರಿನ ಹೆಂಗುಸರನ್ನು ನೋಡಿ ನಾನು ಭೋಜನವನ್ನು ಮಾಡಲಿಲ್ಲ ॥ ೬೩ ॥ ಮೂರನೆಯ ದಿವಸದಲ್ಲಿ ಮೈಯಲ್ಲೆಲ್ಲ ಉರಿಯನ್ನುಂಟುಮಾಡುವುದೂ ಪ್ರಳಯಕಾಲದ ಅಗ್ನಿಯಂತಿರುವುದೂ

ಪ್ರಬಲವೂ ಆದ ಜಠರಾಗ್ನಿಯುಂಟಾಯಿತು ॥ ೬೪ ॥ ಬಳಿಕ ನಾನು ಮೆಲ್ಲನೆ ಮಂಚದ ಕೆಳಗಿನ ಭಾಗವನ್ನು ನೋಡಿದೆನು. ಹಸಿವಿನಿಂದ ಪೀಡಿತನಾದ ವನು ಯಾವನ ಸಮ್ಮುಖವನ್ನು ತಾನೆ ನೋಡುವುದಿಲ್ಲ? ॥ ೬೫ ॥ ಅಲ್ಲಿ ಆಕಾಶವನ್ನು ಶುದ್ಧಮಾಡುವ ಚಂದ್ರಕಿರಣಗಳಂತಿರುವ ಸಣ್ಣಕ್ಕಿಗಳಿಂದ ತುಂಬಿದ ದೊಡ್ಡದೊಂದು ಪಾತ್ರವನ್ನು ನೋಡಿದೆನು ॥ ೬೬ ॥ ಆಗ ನಾನು ಮನೆಯ ಬಾಗಿಲನ್ನು ನೋಡಲಾಗಿ ಯಾರೂ ಇಲ್ಲದಿದ್ದುದರಿಂದ ಬಾಯಿ ತುಂಬ ಅಕ್ಕಿಯನ್ನು ಹಾಕಿಕೊಂಡೆನು. ಹೊಟ್ಟೆಯುರಿಯಿಂದ ಬೆಂದವನಿಗೆ ಮರ್ಯಾದೆಯೆಲ್ಲಿಯದು? ॥ ೬೭ ॥ ಆಗಲೇ ನನ್ನ ಹೆಂಡತಿಯು ಅಲ್ಲಿಗೆ ಬಂದಳು. ನಾನು ಅವಳಿಗೆ ನಾಚಿ ಮುಖವನ್ನು (ಅಕ್ಕಿಯಿಂದ) ಊದಿಸಿ ಕೊಂಡು ನಿಂತೆನು ॥ ೬೮ ॥ ದವಡೆ-ಕೆನ್ನೆಗಳನ್ನು ಊದಿಸಿಕೊಂಡು ಎವೆ ಯಿಕ್ಕದೆ ಕಣ್ಣುಗಳನ್ನು ಬಿಟ್ಟುಕೊಂಡಿದ್ದ ನನ್ನನ್ನು ನೋಡಿ ಆಕೆಯು ನನ ಗೇನೋ ಮಹಾ ದುಃಖವುಂಟಾಗಿದೆಯೆಂದೇ ಸಂದೇಹಪಟ್ಟು ತನ್ನ ತಾಯಿಗೆ ಹೇಳಿದಳು ॥ ೬೯ ॥ ಅತ್ತೆಯು ಬಂದು ನನ್ನನ್ನು ನೋಡಿ ನಾನು ಬದುಕು ವುದು ಸಂದೇಹವೆಂದು ತಿಳಿದಳು. ಪ್ರೀತಿಯುಳ್ಳವರು ತಮ್ಮ ಪ್ರೀತಿಪಾತ್ರ ನಾದವನಿಗೆ ಅಕಾಲದಲ್ಲಿಯೂ ಪ್ರೀತಿಯಿಂದ ಅಧಿಕವಿಪತ್ತನ್ನು ಶಂಕಿಸು ವುದು ಸ್ವಾಭಾವಿಕವಾಗಿದೆ ॥ ೭೦ ॥ ಅತ್ತೆಯು ಶೋಕದಿಂದ ನನ್ನ ಕೆನ್ನೆ ಯನ್ನು ತಿಕ್ಕಿದ ಹಾಗೆಲ್ಲ ನಾನು ಬೆಂಡಾದ ಮೈಯುಳ್ಳವನಾಗಿ ಚಲಿಸದಿ ದ್ದೆನು ॥ ೭೧ ॥ ಆಗ ನನ್ನ ಹೆಂಡತಿಯು ಅಳುತ್ತಿರುವುದನ್ನು ಕೇಳಿ ಆ ಹಳ್ಳಿಯ ಹೆಂಗುಸರೆಲ್ಲ ಬಂದು ಸೇರಿ ಸಾವಿರಾರು ರೋಗಗಳನ್ನು ಹೇಳಲು ತೊಡಗಿದರು ॥ ೭೨ ॥ ಆ ಹೆಂಗುಸರಲ್ಲೊಬ್ಬಳು 'ಮಾತೃದೇವತೆಗಳ ಪೂಜೆಯನ್ನು ಮಾಡದಿರುವುದರಿಂದ ಈ ಅನಿಷ್ಟವಾದ ಕಾರಣವುಂಟಾಗಿದೆ. ಬೇರೆ ಬಲವಾದ ಕಾರಣವಿಲ್ಲ' ಎಂದಳು ॥ ೭೩ ॥ ಇನ್ನೊಬ್ಬಳು 'ಇದು ದೇವತೆಗಳ ಉಪದ್ರವವೇ ಸರಿ. ಹಾಗಲ್ಲದಿದ್ದರೆ ಆಕಸ್ಮಿಕವಾಗಿ ಇಂತಹ ಬಾಧೆಯು ಹೇಗುಂಟಾಗುವುದು?' ಎಂದಳು ॥ ೭೪ ॥ ಮತ್ತೊಬ್ಬಳು

ತನ್ನ ಎಡಗೈಯ ಮೇಲೆ ನನ್ನ ಮುಖವನ್ನಿಟ್ಟು ಬಲಗೈಯನ್ನು ಅಲ್ಲಾಡಿಸಿ 'ತಾಯಿ ಕಿವಿಯ ಶೂಲೆಯುಂಟಾಗಿದೆ' ಎಂದಳು ॥ ೭೫ ॥ ಮಗುದೊಬ್ಬಳು ಶ್ಲೇಷ್ಮದೋಷವೆಂದೂ ಬೇರೊಬ್ಬಳು ಪಿತ್ತದಿಂದುಂಟಾದ ದೋಷವೆಂದೂ ಇನ್ನೊಬ್ಬಳು ವಾತದೋಷವೆಂದೂ ಮತ್ತೊಬ್ಬಳು ಸನ್ನಿಪಾತದೋಷವೆಂದೂ ಹೇಳಿದರು ॥ ೭೬ ॥ ಈ ರೀತಿಯಾಗಿ ಆ ಹೆಂಗುಸರು ವ್ಯಾಕುಲರಾಗಿ ಮಾತನಾಡುತ್ತಿರುವಾಗ ಶಸ್ತ್ರವೈದ್ಯನೊಬ್ಬನು ತನ್ನ ವೈದ್ಯದ ಪ್ರಶಂಸೆಯನ್ನು ಮಾಡುತ್ತ ಬಂದನು ॥ ೭೭ ॥ ಆತುರಚಿತ್ತಳಾದ ಅತ್ತೆಯು ಶೀಘ್ರವಾಗಿ ವೈದ್ಯನನ್ನು ಕರೆದು ಅವನಿಗೆ ದೋಷೋತ್ಪತ್ತಿಯನ್ನು ತಿಳಿಸಿ ನನ್ನನ್ನು ತೋರಿಸಿದಳು ॥ ೭೮ ॥ ಇಂಗಿತವಾದ ಆಕಾರವನ್ನು ತಿಳಿಯುವುದರಲ್ಲಿ ಚತುರನಾದ ಆ ವೈದ್ಯನು ಶಂಖವನ್ನು ಊದುವವನಂತಿರುವ ನನ್ನ ಕಲ್ಲಿನಂತೆ ಗಟ್ಟಿಯಾದ ಕೆನ್ನೆಗಳನ್ನು ನೋಡಿ ತನ್ನ ಕೈಯಿಂದ ಮುಟ್ಟಿ ತನ್ನ ಮನಸ್ಸಿನಲ್ಲಿ 'ಹೊಟ್ಟೆಹಸಿವಿನಿಂದ ಪೀಡಿತನಾದ ಇವನ ಬಾಯಿಯಲ್ಲಿ ಅಗಿಯದಿರುವ ಯಾವುದೋ ಪದಾರ್ಥವಿದೆ. ಇಂತಹ ಚೇಷ್ಟೆಯು ಬೇರೆಯವನಿಗುಂಟಾಗುವುದಿಲ್ಲವೆಂದು ಊಹಿಸುತ್ತೇನೆ.' ಎಂದು ನಿಶ್ಚಯಿಸಿದನು ॥ ೭೯–೮೦ ॥ ಬಳಿಕ ಸಮರ್ಥನಾದ ವೈದ್ಯನು ಮಂಚದ ಕೆಳಗೆ ಅಕ್ಕಿಯ ಪಾತ್ರೆಯನ್ನು ನೋಡಿ 'ತಾಯಿಯೆ! ಇವನಿಗೆ ದುಃಖಕರವೂ ಪ್ರಾಣಾಪಹಾರಕವೂ ಕಷ್ಟಸಾಧ್ಯವೂ ಆದ ತಂಡುಲವ್ಯಾಧಿಯುಂಟಾಗಿದೆ. ನಾನು ಇಚ್ಛಿಸುವಷ್ಟು ಹಣವನ್ನು ನೀನು ನನಗೆ ಕೊಡುವುದಾದರೆ ಇವನ ರೋಗವನ್ನು ನಿವಾರಣೆಮಾಡುತ್ತೇನೆ' ಎಂದು ಹೇಳಿದನು ಆಗ ಆ ಮೂರ್ಖನ ಅತ್ತೆಯು 'ವೈದ್ಯನೆ! ಕೊಡುವೆನು. ಹುಡುಗನ ರೋಗವನ್ನು ದೂರಮಾಡಿ ಬದುಕಿಸು' ಎಂದಳು ॥ ೮೧–೮೨ ॥ ಬಳಿಕ ವೈದ್ಯನು ಶಸ್ತ್ರದಿಂದ ನನ್ನ ಕೆನ್ನೆಗಳನ್ನು ಸೀಳಿ ವಿಷಾದಪಡುತ್ತಿದ್ದ ಆ ಹೆಂಗುಸರಿಗೆ ಸಣ್ಣಕ್ಕಿಗೆ ಸಮಾನಗಳೂ ನಾನಾಕಾರಗಳೂ ಆದ ಹುಳಗಳನ್ನು ತೋರಿಸಿ (ಆ ಮೂರ್ಖನು ಸಣ್ಣಕ್ಕಿಗಳನ್ನು ಹುಳುಗಳೆಂದು ಭ್ರಮಿಸಿ

ಹೇಳುವ ಮಾತಿದು) ಶೀಘ್ರವಾಗಿ ರೋಗವನ್ನು ನಿವಾರಣೆ ಮಾಡಿದನು. ಆಗ ಹೆಂಗುಸರು ಒಂದು ಜೊತೆ ಬಟ್ಟೆಯನ್ನು ವೈದ್ಯನಿಗೆ ಕೊಟ್ಟು ಸತ್ಕರಿಸಿದರು. ನಾನು ವ್ಯರ್ಥವಾದ ಗರ್ವವೆಂಬ ಬೆಂಕಿಯಿಂದ ತಪ್ತನಾಗಿ ದುರ್ನಿವಾರವಾದ ಬಾಧೆಯನ್ನು ಸಹಿಸಿಕೊಂಡು ಮೂಗನಾಗಿದ್ದೆನು ‖ ೮೩–೮೪ ‖ ಆಗ ಜನರೆಲ್ಲ ನನ್ನನ್ನು ಹಾಸ್ಯಮಾಡಿ 'ಗಲ್ಲಸ್ಫೋಟ' ನೆಂದು ಹೆಸರನ್ನಿಟ್ಟರು. ದುರ್ವ್ಯಾಪಾರವುಳ್ಳ ಪ್ರಾಣಿಯು ಶೀಘ್ರವಾಗಿ ನಿಂದ್ಯವಾದ ಹಾಸ್ಯವನ್ನೂ ದುಃಖವನ್ನೂ ಏತಕ್ಕೆ ಹೊಂದುವುದಿಲ್ಲ ? ‖ ೮೫ ‖ ಪುರನಿವಾಸಿಗಳೆ ! ಕೆನ್ನೆಗಳನ್ನು ಸೀಳಿಸಿಕೊಳ್ಳುವ ಅಸಹ್ಯವೇದನೆಯಲ್ಲಿಯೂ ಮೂಗನಾಗಿದ್ದ ನನ್ನ ಮೂರ್ಖತ್ವದಂತಹ ಸ್ವಾರ್ಥವಿನಾಶಕವಾದ ಮೂರ್ಖತ್ವವನ್ನು ಬೇರೆ ಎಲ್ಲಿಯಾದರೂ ನೀವುಗಳು ಕಂಡಿದ್ದರೆ ಹೇಳಿರಿ" ‖ ೮೬ ‖ ಲಜ್ಜೆ ಮಾನ ಪೌರುಷ ಶುಚಿತ್ವ ಅರ್ಥ ಕಾಮ ಧರ್ಮ ಸಂಯಮ ಏನೂ ಇಲ್ಲದಿರುವಿಕೆ ಇವುಗಳನ್ನು ಕಾಲವರಿತು ಉಪಯೋಗಿಸಿಕೊಂಡರೆ ಎಲ್ಲವೂ ಮನುಷ್ಯರಿಗೆ ಶೀಘ್ರವಾಗಿ ಇಚ್ಛಿಸಿದ ಸಿದ್ಧಿಯನ್ನು ಕೊಡುವುದು ‖ ೮೭ ‖ ಎಲೈ ವಿಪ್ರರೆ ! ಹೇಯೋಪಾದೇಯಜ್ಞಾನವಿಲ್ಲದಿರುವ ಮೂರ್ಖನು ವ್ಯರ್ಥವಾಗಿ ಅಹಂಕಾರವನ್ನು ಮಾಡಿದರೆ ಹಾಸ್ಯವನ್ನೂ ದುಃಖವನ್ನೂ ಜನಾಪವಾದವನ್ನೂ ಘೋರವಾದ ನರಕವಾಸವನ್ನೂ ಹೊಂದುವನು ‖ ೮೮ ‖ ಬಳಿಕ ಆ ನಗರನಿವಾಸಿಗಳು ಆ ಮೂರ್ಖರನ್ನು ಕುರಿತು "ಅಯ್ಯಾ ! ನೀವುಗಳು ಶೀಘ್ರವಾಗಿ ಆ ಸಾಧುವಿನ ಬಳಿಗೆ ಹೋಗಿ ತಮ್ಮ ಮೂರ್ಖತ್ವವನ್ನು ನಿರ್ಣಯಿಸಿಕೊಳ್ಳಿರಿ" ಎಂದು ಹೇಳಿ ಅವರನ್ನು ಬಿಟ್ಟುಬಿಟ್ಟರು. ಸತ್ಪುರುಷರು ಅಸಾಧ್ಯವಾದ ಕಾರ್ಯದಲ್ಲಿ ಪ್ರಯತ್ನವನ್ನು ಮಾಡುವುದಿಲ್ಲ ‖ ೮೯ ‖ ಎಲೈ ವಿಪ್ರರೆ ! ಸಾರಾಸಾರಜ್ಞಾನವಿಲ್ಲದ ನಾಲ್ಕು ಪ್ರಕಾರವಾದ ಮೂರ್ಖರನ್ನು ಹೇಳಿದೆನು. ನಿಮ್ಮಗಳ ಮಧ್ಯದಲ್ಲಿ ಯಾವನಾದರೂ ಅಂತಹ ಮೂರ್ಖನಿದ್ದರೆ ಯಥಾರ್ಥವಿಷಯವನ್ನು ಹೇಳುವುದಕ್ಕೆ ಹೆದರುತ್ತೇನೆ ‖ ೯೦ ‖ ವೇಶ್ಯೆಯು ಲಜ್ಜೆಯನ್ನೂ ಧನಾಢ್ಯನು ಬಹಳ ದಾನವನ್ನೂ

ಸೇವಕನು ಗರ್ವವನ್ನೂ ಬ್ರಹ್ಮಚಾರಿಯು ಭೋಗಾನುಭವವನ್ನೂ ಭಂಡನು ಶುಚಿತ್ವವನ್ನೂ ಪತಿವ್ರತೆಯು ಶೀಲನಾಶವನ್ನೂ ರಾಜನು ಲೋಭವನ್ನೂ ಮಾಡಿದರೆ ಅವರು ನಾಶವನ್ನು ಹೊಂದುವರು ॥ ೯೧ ॥ ವಿವೇಕಹೀನನಾದ ಮನುಷ್ಯನಿಗೆ ಕೀರ್ತಿಯೂ ಕಾಂತಿಯೂ ಸಂಪತ್ತಿಯೂ ಸತ್ಕಾರವೂ ಧರ್ಮವೂ ಲಾಭವೂ ಕಾಮವೂ ಧನವೂ ಸೌಖ್ಯವೂ ಎಂದೂ ಇರುವುದಿಲ್ಲ ಆದುದರಿಂದ ಯಾವಾಗಲೂ ವಿವೇಕವನ್ನು ಹೊಂದಬೇಕು ॥ ೯೨ ॥ ಕಾರಣವಿಲ್ಲದೆ ಯಾವನು ಅಹಂಕಾರಪಡುವನೋ ಜನರ ನಿಂದೆಗೆ ಪಾತ್ರನಾದ ಅಂತಹ ಬುದ್ಧಿಹೀನಮನುಷ್ಯನ ಎಲ್ಲಾ ಕಾರ್ಯಗಳೂ ಬಾಳುವಿಕೆಯೂ ಇಹಪರಲೋಕಗಳೆರಡರಲ್ಲಿಯೂ ನಾಶವಾಗುವುವು ॥ ೯೩ ॥ ಯಾವನು ಕಾಲಾನುಸಾರವಾಗಿ ವಿಚಾರಮಾಡಿ ಎಲ್ಲಾ ಕಾರ್ಯಗಳನ್ನು ಮಾಡುವನೋ ವಿದ್ವನ್ಮಾನ್ಯನಾದ ಆ ಮನುಷ್ಯನು ಸಾರವಾದ ಇಷ್ಟಾರ್ಥವನ್ನೆಲ್ಲ ಪಡೆದು ಮುಕ್ತಿಯನ್ನು ಹೊಂದುವನು ॥ ೯೪ ॥ ಈ ಜಗತ್ತಿನಲ್ಲಿ ಅಹಿತ-ಕಷ್ಟಕರವಾದ ಕಾರ್ಯವನ್ನು ಮಾಡಿದರೆ ಮುಂದೆ ನಿತ್ಯವಾದ ಸುಖವು ಪ್ರಾಪ್ತವಾಗುವುದು; ಇಲ್ಲಿ ಸುಖಕರವಾದ ಕಾರ್ಯವನ್ನು ಮಾಡಿದರೆ ಮುಂದೆ ದುಃಖವು ಪ್ರಾಪ್ತವಾಗುವುದು. ಆದುದರಿಂದ ಹಿತವನ್ನು ಬಯಸುವ ಅಪರಿಮಿತಜ್ಞಾನವುಳ್ಳವರು ಬುದ್ಧಿಯಿಂದ ಮನಸ್ಸಿನಲ್ಲಿ ವಿವೇಚನೆಮಾಡಿ ಮುಂದಿನ ಹಿತಕಾರ್ಯವನ್ನು ಮಾಡುತ್ತಾರೆ ॥ ೯೫ ॥

ಇಂತು ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷಾನವಮಪರಿಚ್ಛೇದದ
ಶಾಂತೀಶಪಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

—o—

ವಿಪ್ರರೇ ? ರಾಗದಿಂದ ಕುರುಡಾದ ಕಣ್ಣುಗಳುಳ್ಳ ರಕ್ತಮೂರ್ಖನು, ದ್ವೇಷವನ್ನು ಮಾಡುವ ದ್ವಿಷ್ಟಮೂರ್ಖನು, ವಿಜ್ಞಾನರಹಿತನಾದ ಮೂರ್ಖನು, ವ್ಯುದ್ಗ್ರಾಹಿಮೂರ್ಖನು, ಪಿತ್ತವಿಕಾರವುಳ್ಳ ಮೂರ್ಖನು, ಪರೀಕ್ಷೆಯನ್ನು ಮಾಡದೆ ಮಾವಿನ ಮರವನ್ನು ಕತ್ತರಿಸಿದ ವಿಪರೀತಾತ್ಮನು, ಸುರಭಿತ್ಯಾಗಿಮೂರ್ಖನು, ಅಗರುವಿಕ್ರಯಮೂರ್ಖನು, ಚಂದನದ ಕಟ್ಟಿಗೆಯನ್ನು ವಿನಿಮಯಮಾಡಿದ ಲೋಭಿಮೂರ್ಖನು, ವಿವೇಕಹೀನನು ಈ ಹತ್ತುಮಂದಿಗಳಂತಹವರು ನಿಮ್ಮಲ್ಲಿದ್ದರೆ ಯಾರು ? ‖ ೧-೨-೩ ‖ ಬಳಿಕ ಆ ವಿಪ್ರರು ಮನೋವೇಗನನ್ನು ಕುರಿತು "ಅಯ್ಯಾ ! ವಿಚಾರಪರರಾದ ನಾವುಗಳು, ಸರ್ಪವನ್ನು ಗರುಡನು ದಂಡಿಸುವಂತೆ, ಎರಡು ನಾಲಗೆಯುಳ್ಳ (ಚಾಡಿ ಹೇಳುವ) ಮೂರ್ಖನನ್ನು ದಂಡಿಸುತ್ತೇವೆ, ಎಂದರು ‖ ೪ ‖ ತರುವಾಯ ಮನೋವೇಗನು ವಿಪ್ರರನ್ನು ಕುರಿತು "ಎಲೈ ದ್ವಿಜರೆ ! ಹಟವುಳ್ಳವರು ನಿಮ್ಮಲ್ಲಿರಬಹುದೆಂದು ಸಂದೇಹವುಳ್ಳ ನನ್ನ ಮನಸ್ಸಿನಲ್ಲಿ ಇನ್ನೊಂದು ಸೂಕ್ಷ್ಮವಾದ ಸಂದೇಹವು ಈಗಲೂ ಇದೆ ‖ ೫ ‖ ಯಾವ ವಾದಿಯು ಬಳಿಯಲ್ಲಿ ಸುಂದರವಾದ ಆಸನವೂ ಉನ್ನತವಾದ ರುಮಾಲೂ ಹೊಸವಾದ ಪುಸ್ತಕವೂ ಶ್ರೇಷ್ಠವೂ ಮನೋಹರವೂ ಆದ ಯೋಗಾಸನವೂ ಮನೋಹರವಾದ ಎರಡು ಪಾದುಕೆಗಳೂ ಲೋಕರಂಜಕವಾದ ವೇಷವೂ ಇಲ್ಲವೋ ಅಂತಹ ವಾದಿಯ ಮಾತನ್ನು ಜನರು ನಂಬುವುದಿಲ್ಲ ‖ ೬-೭ ‖ ಸರಿಯಾದ ವೇಷವಿಲ್ಲದವನನ್ನು ಮೂರು ಲೋಕದಲ್ಲಿ ಯಾವನೂ ಪ್ರೀತಿಸುವುದಿಲ್ಲ. ಎಲ್ಲಾ ಕಡೆಗಳಲ್ಲಿಯೂ ಜನರು ಆಡಂಬರಗಳನ್ನು ಪೂಜಿಸುತ್ತಾರಲ್ಲದೆ ಗುಣಗಳನ್ನು ಪೂಜಿಸುವುದಿಲ್ಲ" ಎಂದು ಹೇಳಿದನು ‖ ೮ ‖ ಬಳಿಕ ವಿಪ್ರರು "ಅಯ್ಯಾ ! ಹೆದರಬೇಡ, ಪ್ರಕೃತವಿಷಯವನ್ನು ಹೇಳು. ಚರ್ವಿತಚರ್ವಣವು ಮಹಾತ್ಮರುಗಳಿಗೆ ಯೋಗ್ಯವಾದುದಲ್ಲ" ಎಂದರು ‖ ೯ ‖ ಆಗ ಮನೋವೇಗನು ವಿಪ್ರರನ್ನು ಕುರಿತು ಈ ರೀತಿಯಾಗಿ ಹೇಳಿದನು :—

"ದ್ವಿಜೋತ್ತಮರೆ ! ಹಾಗಾದರೆ ಪೂರ್ವಾಪರವಿಚಾರವನ್ನು ಮಾಡಿ ನನ್ನ ಮಾತನ್ನು ಸ್ವೀಕರಿಸಿರಿ ॥ ೧೦ ॥ ಈ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಮುಖ್ಯಕಾರಣನೂ ಲೋಕಪ್ರಸಿದ್ಧನೂ ಆದ ಪುಂಡರೀಕಾಕ್ಷ (ವಿಷ್ಣು) ದೇವನಿದ್ದಾನೆ ॥ ೧೧ ॥ ಅವನ ಅನುಗ್ರಹದಿಂದ ಜನರು ನಾಶವಾಗದ ಸ್ಥಾನವನ್ನು ಪಡೆಯುತ್ತಾರೆ. ಆವನು ಯಾವಾಗಲೂ ಆಕಾಶದಂತೆ ವ್ಯಾಪಕನೂ ನಿತ್ಯನೂ ನಿರ್ಮಲನೂ ಆಗಿರುತ್ತಾನೆ ॥ ೧೨ ॥ ಮೂರು ಲೋಕವೆಂಬ ಮನೆಯ ಆಧಾರಸ್ತಂಭಗಳೂ ಶತ್ರುಗಳಿಗೆ ಕಾಡುಗಿಚ್ಚಿನಂತಿರುವುವೂ ಆದ ಅವನ ಕೈಗಳು ಧನುಸ್ಸಿನಿಂದಲೂ ಶಂಖದಿಂದಲೂ ಗದೆಯಿಂದಲೂ ಚಕ್ರದಿಂದಲೂ ಅಲಂಕರಿಸಲ್ಪಟ್ಟಿವೆ ॥ ೧೩ ॥ ಅವನು ಲೋಕಕ್ಕೆ ಉಪದ್ರವವನ್ನು ಮಾಡುವವರೂ ದುಷ್ಟರೂ ಆದ ದಾನವರನ್ನು, ಕತ್ತಲೆಯ ಸಮೂಹವನ್ನು ಸೂರ್ಯನಂತೆ, ಶೀಘ್ರವಾಗಿ ಕೊಲ್ಲುತ್ತಾನೆ ॥ ೧೪ ॥ ಚಂದ್ರನ ಶರೀರದಲ್ಲಿ ತಾಪವನ್ನು ನಾಶಮಾಡುವುದೂ ಮನೋಹರವೂ ಆದ ಬೆಳದಿಂಗಳಿರುವಂತೆ, ಆ ದೇವನ ಶರೀರದಲ್ಲಿ ಲೋಕಕ್ಕೆ ಆನಂದವನ್ನುಂಟುಮಾಡುವವಳೂ ಪೂಜ್ಯಳೂ ಆದ ಲಕ್ಷ್ಮಿಯು ವಾಸಮಾಡುತ್ತಾಳೆ ॥ ೧೫ ॥ ಸುಂದರವಾದ ತನ್ನ ಮನೆಯಲ್ಲಿ ಲಕ್ಷ್ಮಿಯು ಸ್ಥಾಪಿಸಿರುವ ದೀಪವೋ ಎಂಬಂತೆ, ಆ ಪುಂಡರೀಕಾಕ್ಷನ ಶರೀರದಲ್ಲಿ ವಿಶದವಾದ ಕಾಂತಿಯುಳ್ಳ ಕೌಸ್ತುಭ ಮಣಿಯು ಪ್ರಕಾಶಿಸುತ್ತಿದೆ ॥ ೧೬ ॥ ಎಲೈ ದ್ವಿಜರೆ ! ವೈಕುಂಠದಲ್ಲಿ ಸಮಸ್ತದೇವರ್ಕಳಿಗಿಂತ ಹೆಚ್ಚಿನವನೂ ಪರಮಾತ್ಮನೂ ಆದ ದೇವನಲ್ಲಿ ಈ ರೀತಿಯಾಗಿ ಪ್ರತೀತಿಯು ನಿಮ್ಮಲ್ಲಿದೆಯೋ ? ಇಲ್ಲವೋ ? " ॥ ೧೭ ॥ ಬಳಿಕ ವಿಪ್ರರು ಮನೋವೇಗನನ್ನು ಕುರಿತು "ಅಯ್ಯಾ ! ಇಂತಹ ಚರಾಚರಜಗದ್ವ್ಯಾಪಿಯಾದ ಹರಿಯು ಇದ್ದಾನೆ. ಈ ವಿಷಯದಲ್ಲಿ ಯಾವನು ವಿವಾದಮಾಡುತ್ತಾನೆ ? ॥ ೧೮ ॥ ದುಃಖವೆಂಬ ಬೆಂಕಿಗೆ ಮೇಘವೂ ಜನ್ಮವೆಂಬ ಸಮುದ್ರಕ್ಕೆ ಹಡಗೂ ಆದ ಹರಿಯನ್ನು ಅಂಗೀಕರಿಸದಿರುವವರು ಮನುಷ್ಯದೇಹವುಳ್ಳ ಪಶುಗಳು " ಎಂದು

ಮಾತನಾಡಿದರು ॥ ೧೯ ॥ ಆಗ ಮನೋವೇಗನು "ಎಲೈ ಭಟ್ಟರೆ! ವಿಷ್ಣುವು ಇಂಥವನಾದರೆ ನಂದಗೋಕುಲದಲ್ಲಿ ಗೋಪಾಲರ ವೇಷಧಾರಿಯಾಗಿ ಗೋವುಗಳನ್ನು ಕಾಯುತ್ತಿದ್ದನೇಕೆ? ॥ ೨೦ ॥ ನವಿಲಿನ ಗರಿಗಳನ್ನು ಧರಿಸಿದವನೂ ಗಿರಿಮಲ್ಲಿಗೆ ಹೂವುಗಳ ಮಾಲೆಯಿಂದ ದೃಢವಾಗಿ ಕಟ್ಟಲ್ಪಟ್ಟವನೂ ಗೋಪಾಲರೊಡನೆ ಹೆಜ್ಜೆಹೆಜ್ಜೆಗೆ ರಾಸಕ್ರೀಡೆಯನ್ನು ಮಾಡುವವನೂ ಪಾಂಡುಪುತ್ರ-ಧರ್ಮರಾಯನಿಂದ ಕಳುಹಿಸಲ್ಪಟ್ಟು ಕಾಲಾಳಿನಂತೆ ವೇಗದಿಂದ ದುರ್ಯೋಧನನ ಬಳಿಗೆ ದೂತಕಾರ್ಯದಿಂದ ಹೋದವನು ಆನೆ ಕುದುರೆ ರಥ ಪದಾತಿಗಳಿಂದ ನಿಬಿಡವಾದ ಯುದ್ಧರಂಗದಲ್ಲಿ ಅರ್ಜುನನಿಗೆ ಸಾರಥಿಯೂ ಆಗಿ ರಥವನ್ನೇಕೆ ನಡೆಸಿದನು? ॥ ೨೧-೨೩ ॥ ದರಿದ್ರನು ಕೆಟ್ಟಮಾತನ್ನುಚ್ಚರಿಸಿ ಬೇಡುವಂತೆ, ವಿಷ್ಣುವು ವಾಮನರೂಪವನ್ನು ಮಾಡಿ ದೀನವಚನವನ್ನುಚ್ಚರಿಸಿ ಬಲಿಯನ್ನು ಭೂಮಿಯನ್ನೇಕೆ ಬೇಡಿದನು? ॥ ೨೪ ॥ ಸಮಸ್ತಲೋಕವನ್ನು ಧರಿಸಿರುವವನೂ ಸರ್ವಜ್ಞನೂ ವ್ಯಾಪಕನೂ ಸ್ಥಿರನೂ ಆದ ವಿಷ್ಣುವು (ರಾಮಾವತಾರದಲ್ಲಿ) ಸೀತೆಯ ವಿರಹವೆಂಬ ಬೆಂಕಿಯಿಂದ ಸಂತಪ್ತನಾದನೇಕೆ? ॥ ೨೫ ॥ ಇವೇ ಮೊದಲಾದ ಕಾರ್ಯಗಳು ಮಹಾತ್ಮನೂ ಯೋಗಿಗಳಿಗೆ ಗೋಚರನೂ ವಂದ್ಯನೂ ಜಗದ್ಗುರುವೂ ಆದ ದೇವರಿಗೆ ಯುಕ್ತವಾಗಿರುತ್ತವೆಯೇ? ॥ ೨೬ ॥ ರಾಗರಹಿತನಾದ ಹರಿಯು ಇಂತಹ ಕೆಲಸಗಳನ್ನು ಮಾಡುವುದು ತಪ್ಪಲ್ಲವಾದರೆ ಬಡವನ ಮಕ್ಕಳಾದ ನಾವುಗಳು (ಮನೋವೇಗ ಪವನವೇಗರು) ಸೌದೆಯನ್ನು ಮಾರಿದರೆ ತಪ್ಪೇನು? ॥ ೨೭ ॥ ಮುರದ್ವೇಷಿಯಾದ ಆ ಪರಮೇಷ್ಠಿ-ವಿಷ್ಣುವಿಗೆ ಇಂತಹ ಕ್ರೀಡೆಯಾದರೆ ಶಕ್ತ್ಯನುಸಾರವಾಗಿ ಸೌದೆಯನ್ನು ಮಾರುವ ನಮ್ಮ ಕ್ರೀಡೆಯನ್ನು ತಡೆಯುವವನಾರು?" ಎಂದನು ॥ ೨೮ ॥ ಮನೋವೇಗ—ಖೇಚರನ ಈ ಮಾತನ್ನು ಕೇಳಿ ದ್ವಿಜೋತ್ತಮರು ಈ ರೀತಿಯಾಗಿ ಹೇಳಿದರು—"ನಮ್ಮ ದೇವರು ಇಂಥವನಾಗಿದ್ದಾನೆ. ನಿನಗೇನು ಉತ್ತರವನ್ನು ಕೊಡಲಿ? ॥ ೨೯ ॥ ಈಗ ನಮ್ಮಗಳ

ಮನಸ್ಸಿನಲ್ಲಿಯೂ ಪರಮೇಷ್ಠಿಯಾದ ಹರಿಯು ಇಂತಹ ಕೆಲಸಗಳನ್ನು ಹೇಗೆ ಮಾಡುತ್ತಾನೆಂದು ಭ್ರಾಂತಿಯುಂಟಾಗುತ್ತದೆ ॥ ೩೦ ॥ ಅಯ್ಯಾ ! ನೀನು ಮೂಢಚಿತ್ತರಾದ ನಮ್ಮಗಳನ್ನು ಎಚ್ಚರಿಸಿದೆ. ಕಣ್ಣುಗಳುಳ್ಳವನೂ ದೀಪವಿಲ್ಲದಿದ್ದರೆ ರೂಪವನ್ನು ನೋಡುವುದಿಲ್ಲ ॥ ೩೧ ॥ ವಿಷ್ಣುವು ಬೇರೊಬ್ಬ ಪರಮೇಷ್ಠಿಯಿಂದ ಪ್ರೇರಿತನಾಗಿ ಇಂತಹ ಕೆಲಸವನ್ನು ಮಾಡುತ್ತಾನಾದರೆ ಈ ಮನೋವೇಗನು ತಂದೆಯಿಂದ ಪ್ರೇರಿತನಾಗಿ ಹುಲ್ಲಿನ ಮಾರಾಟವನ್ನು ಮಾಡುತ್ತಾನೆ ॥ ೩೨ ॥ ದೇವರು ಅನ್ಯಾಯವನ್ನು ಮಾಡಿದರೆ ಅವನು ಶಿಷ್ಟರನ್ನು ತಡೆಯಲಾರನು. ರಾಜನೇ ಧನವನ್ನು ಕದ್ದರೆ ಕಳ್ಳನನ್ನು ತಡೆಯುವವನಾರು ? ॥ ೩೩ ॥ ವಿಷ್ಣುವೇ ಇಂತಹ ಕೆಲಸವನ್ನು ಮಾಡುವಾಗ ಬೇರೆಯವನು ಮಾಡುವುದು ತಪ್ಪಲ್ಲ. ಅತ್ತೆಯು ದುರಾಚಾರಿಣಿಯಾದರೆ ಸೊಸೆಯು ದುರಾಚಾರಿಣಿಯಾಗುವುದು ತಪ್ಪಲ್ಲ ॥ ೩೪ ॥ ಪರಮೇಷ್ಠಿ-ಮಹಾವಿಷ್ಣುವಿನಲ್ಲಿ ರಾಗವಿರುವುದರಿಂದ ಅವನ ಅಂಶಗಳಾದ ಅವತಾರಗಳಲ್ಲಿಯೂ ರಾಗವಿದೆ. ಮಹಾವಿಷ್ಣುವಿನ ಅವತಾರರೂಪವಾದ ಅವಯವಗಳಲ್ಲಿ ರಾಗವಿರುವಾಗ ಅವಯವಿಯಾದ ಮಹಾವಿಷ್ಣುವು ರಾಗವಿಲ್ಲದವನಾಗಿರುವುದು ಹೇಗೆ ? ॥ ೩೫ ॥ ಲೋಕವೆಲ್ಲವೂ ವಿಷ್ಣುವಿನ ಹೊಟ್ಟೆಯೊಳಗಿರುತ್ತದೆಂದ ಮೇಲೆ ಸೀತೆಯು ಹೇಗೆ ಅಪಹರಿಸಲ್ಪಟ್ಟಳು ? ಹೇಗೆಂದರೆ-ಆಕಾಶದೊಳಗಿರುವ ಪದಾರ್ಥವು ಅದರ ಹೊರಗಿರತಕ್ಕದಲ್ಲ ॥ ೩೬ ॥ ಈ ದೇವರು ವ್ಯಾಪಕನಾಗಿದ್ದರೆ ಇಷ್ಟವಸ್ತುವಿನ ವಿರಹವು ಹೇಗೆ ಸಂಭವಿಸುವುದು ? ಈ ಬೇವರು ನಿತ್ಯನಾಗಿದ್ದರೆ ವಿಯೋಗ-ವಿರಹದಿಂದ ಪೀಡಿತನಾದುದು ಹೇಗೆ ? ॥ ೩೭ ॥ ದೇವರು ಬೇರೆಯವರ ಆಜ್ಞಾನುಸಾರವಾಗಿ ಆ ಕೆಲಸಗಳನ್ನು ಮಾಡುತ್ತಾನೆನ್ನುವುದಾದರೆ ಅವನು ಲೋಕಾಧಿಪತಿಯು ಹೇಗೆ? ಹೇಗೆಂದರೆ-ಸೇವಕರ ಕೆಲಸವನ್ನು ರಾಜನೆಂದೂ ಮಾಡುವುದಿಲ್ಲ ॥ ೩೮ ॥ ಸರ್ವಜ್ಞನಾಗಿರುವ ದೇವರು ರಾಮಾವತಾರದಲ್ಲಿ ಸೀತೆಯ ವಾರ್ತೆಯನ್ನು ಮರ ಮೊದಲಾದುವುಗಳಲ್ಲಿ ಹೇಗೆ ಕೇಳುತ್ತಾನೆ ? ಲೋಕಾಧಿಪತಿಯಾದ ದೇವರು

ಬಲಿಯಲ್ಲಿ ಭೂಮಿಯನ್ನು ಯಾಚನೆಮಾಡುವುದು ಹೇಗೆ? ಲೋಕರಕ್ಷಣೆಯಲ್ಲಿ ಜಾಗರೂಕನಾಗಿರುವ ಆ ದೇವರು ಮಲಗಿ ನಿದ್ರಿಸುವುದು ಹೇಗೆ? ರಾಗರಹಿತನಾಗಿರುವ ದೇವರು ಕಾಮಸೇವನೆಯನ್ನು ಮಾಡುವುದು ಹೇಗೆ? ॥ ೩೯ ॥ ಆ ದೇವರು ಮೀನು, ಆಮೆ, ಹಂದಿ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ ಮೊದಲಾದ ಅವತಾರಗಳನ್ನು ಧರಿಸಿ, ಇತರ ಪ್ರಾಣಿಯಂತೆ, ಯಾವ ಕಾರಣದಿಂದ ದುಃಖಿತನಾದನು? ॥ ೪೦ ॥ ಸುತ್ತಲೂ ನವದ್ವಾರಗಳಿಂದ ಮಲಗಳನ್ನು ಸುರಿಯುತ್ತಿರುವುದೂ ಒಂಬತ್ತು ತೂತುಗಳಿಂದ ಕೂಡಿರುವ ಅಮೇಧ್ಯಮಯವಾದ ಮಡಿಕೆಯಂತಿರುವುದೂ ಕರ್ಮದಿಂದ ನಿರ್ಮಿತವೂ ಮಲಗಳಿಗೆಲ್ಲ ನಿವಾಸಸ್ಥಾನವೂ ಆದ ದೇಹ ವನ್ನು ನಿಷ್ಕಲ್ಮಷನೂ ಸ್ವತಂತ್ರನೂ ಆದ ಆ ದೇವರು ಹೇಗೆ ಪರಿಗ ಹಿಸುತ್ತಾನೆ? ॥ ೪೧–೪೨ ॥ ಆ ಪ್ರಭುವು ದಾನವರನ್ನು ಸೃಷ್ಟಿಸಿ ಮತ್ತೆ ಅವರನ್ನು ಹೇಗೆ ಕೊಂದನು? ಲೋಕದಲ್ಲಿ ಮಕ್ಕಳಿಗೆ ಅಪಕಾರವನ್ನು ಮಾಡುವವನಾವನೂ ಕಾಣುವುದಿಲ್ಲ ॥ ೪೩ ॥ ನಿತ್ಯತೃಪ್ತಿಯುಳ್ಳ ಆ ದೇವರು ಹೇಗೆ ಊಟಮಾಡುವನು? ಮರಣರಹಿತನಾದ ದೇವರು ಹೇಗೆ ಸಾಯುತ್ತಾನೆ? ಭಯವನ್ನೂ ಕೋಪವನ್ನೂ ಬಿಟ್ಟಿರುವ ದೇವರು ಶಸ್ತ್ರವನ್ನು ಹೇಗೆ ಸ್ವೀಕರಿಸುತ್ತಾನೆ? ॥ ೪೪ ॥ ಸರ್ವಜ್ಞನಾದ ದೇವರು ವಪೆ, ರಕ್ತ, ಮಾಂಸ, ಮೂಳೆ, ಮಜ್ಜಾ, ಶುಕ್ರಧಾತು ಮೊದಲಾದುವುಗಳಿಂದ ದೂಷಿತವೂ ಮಲದ ಗೃಹಕ್ಕೆ ಸಮಾನವೂ ಆದ ಗರ್ಭದಲ್ಲಿ ಹೇಗಿರುತ್ತಾನೆ? ॥ ೪೫ ॥ ಅಯ್ಯಾ! ಈ ರೀತಿಯಾಗಿ ಯೋಚಿಸುವವರೂ ಪೂರ್ವಾಪರವಿಚಾರವನ್ನು ಮಾಡುವವರೂ ಆದ ನಮ್ಮಗಳಿಗೆ ನಿನ್ನ ಮಾತಿನಲ್ಲಿ ಹೆಚ್ಚು ಭಕ್ತಿಯುಂಟಾಯಿತು ॥ ೪೬ ॥ ತನ್ನ ಸಂಶಯವನ್ನು ನಿವಾರಣೆ ಮಾಡುವುದರಲ್ಲಿಯೂ ಶಕ್ತಿಯಿಲ್ಲದಿರುವವನು ಹೇತುವಾದಿಗಳಾದ ಬೇರೆಯವರಿಗೆ ಉತ್ತರವನ್ನು ಹೇಗೆ ಕೊಡಬಲ್ಲನು? ॥ ೪೭ ॥ ನೀನು ಸರಿಯಾಗಿ ಹೇಳಿದೆ. ಆದುದರಿಂದ ನೀನು ಜಯಲಾಭದಿಂದ ಭೂಷಿತನಾಗಿ ಹೋಗು

ನಾವು ಸಕಲದೂಷಣದೂರನಾದ ದೇವರನ್ನು ಹುಡುಕುತ್ತೇವೆ ॥ ೪೮ ॥ ಆತ್ಮಕಲ್ಯಾಣವನ್ನು ಬಯಸುವವರು ಜನ್ಮ ಜರಾ ಮರಣ ರೋಗ ಕ್ರೋಧ ಲೋಭ ಭೀತಿಗಳನ್ನು ನಾಶಮಾಡಿರುವ ದೇವರನ್ನು ಪೂರ್ವಾಪರವಿರೋಧವಿಲ್ಲದಂತೆ ಹುಡುಕಬೇಕು " ॥ ೪೯ ॥ ಈ ರೀತಿಯಾಗಿ ವಿಪ್ರರಿಂದ ಹೇಳಲ್ಪಟ್ಟ ಪ್ರಾಜ್ಞನಾದ ಖೇಚರ-ಮನೋವೇಗನು ಜಿನೇಶ್ವರನ ವಚನಗಳೆಂಬ ಜಲಗಳಿಂದ ನಿರ್ಮಲವಾದ ಮನಸ್ಸುಳ್ಳವನಾಗಿ ಅಲ್ಲಿಂದ ಹೊರಟುಹೋದನು ॥ ೫೦ ॥ ಉದ್ಯಾನವನ್ನು ಹೊಂದಿ ಅಲ್ಲಿ ಮನೋವೇಗನು ಪವನವೇಗನನ್ನು ಕುರಿತು " ಮಿತ್ರನೆ ! ಲೋಕಸಾಮಾನ್ಯನಾದ ಈ ದೇವರನ್ನು ವಿಚಾರಪೂರ್ವಕವಾಗಿ ನಿನಗೆ ತಿಳಿಸಿದೆನು. ಈಗ ಸಂಶಯವೆಂಬ ಕತ್ತಲೆಯನ್ನು ನಾಶಮಾಡುವುದರಲ್ಲಿ ಸೂರ್ಯನಂತಿರುವ ಇನ್ನೊಂದು ವಿಷಯವನ್ನು ನಿನಗೆ ಹೇಳುತ್ತೇನೆ, ಕೇಳು " ಎಂದು ಹೇಳಿದನು ॥ ೫೧–೫೨ ॥

" ಮಿತ್ರನೆ ! ಈ ಭರತಕ್ಷೇತ್ರದಲ್ಲಿ ಯಾವಾಗಲೂ ತಂತಮ್ಮ ಸ್ವಭಾವಗಳಿಂದುಂಟಾಗುವ ಷಡೃತುಗಳಂತೆ ಯಥಾಕ್ರಮವಾಗಿ ಆರು ಕಾಲಗಳಿರುತ್ತವೆ ॥ ೫೩ ॥ ಅವುಗಳಲ್ಲಿ ನಾಲ್ಕನೆಯ ಸಮಯದಲ್ಲಿ ಚಂದ್ರನಂತೆ ಉಜ್ಜ್ವಲವಾದ ಕೀರ್ತಿಯುಳ್ಳವರೂ ಬಹಳ ಮಾನ್ಯರೂ ಆದ ಅರುವತ್ತುಮೂರು ಶಲಾಕಾಪುರುಷರಾದರು ॥ ೫೪ ॥ ಅವರಲ್ಲಿ ಇಪ್ಪತ್ತುನಾಲ್ಕು ಮಂದಿಗಳು ತೀರ್ಥಂಕರರು. ಹನ್ನೆರಡು ಮಂದಿಗಳು ಚಕ್ರವರ್ತಿಗಳು. ಒಂಬತ್ತು ಮಂದಿಗಳು ಬಲರಾಮರು. ಒಂಬತ್ತು ಮಂದಿಗಳು ನಾರಾಯಣರು. ಒಂಬತ್ತು ಮಂದಿಗಳು ಪ್ರತಿನಾರಾಯಣರು ॥ ೫೫ ॥ ಭೂಮಂಡಲಕ್ಕೆ ಅಲಂಕಾರರಾದ ಅವರೆಲ್ಲರೂ ಕಾಲಾಧೀನರಾಗಿ ಹೋದರು. ಜಗತ್ತಿನಲ್ಲಿ ಕಾಲವು ನುಂಗದಿರುವ ಪದಾರ್ಥವಿಲ್ಲ ॥ ೫೬ ॥ ನಾರಾಯಣರಲ್ಲಿ ಕೊನೆಯವನಾದ ನಾರಾಯಣನು ವಸುದೇವನ ಮಗ-ಕೃಷ್ಣನಾಗಿದ್ದನು. ಅವನು ನಿಷ್ಕಲ್ಮಷನಾದ ಪರಮೇಷ್ಠಿಯೆಂದು ಅವನ ಭಕ್ತರಾದ ದ್ವಿಜರು ಹೇಳುತ್ತಾರೆ ॥ ೫೭ ॥

ವ್ಯಾಪಕನೂ ನಿಷ್ಕಲ—ಶರೀರರಹಿತನೂ ಧ್ಯಾನಿಸುವುದಕ್ಕೆ ಯೋಗ್ಯನೂ ಜರಾಮರಣಗಳನ್ನು ನಾಶಮಾಡಿದವನೂ ಅಚ್ಛೇದ್ಯನೂ ನಾಶರಹಿತನೂ ದೇವನೂ ಆದ ವಿಷ್ಣುವನ್ನು ಧ್ಯಾನಿಸುವವನು ದುಃಖವನ್ನು ಹೊಂದುವುದಿಲ್ಲವೆಂದು ಹೇಳುತ್ತಾರೆ ‖ ೫೮ ‖ ಮೀನು, ಆಮೆ, ಹಂದಿ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ ಇವು ಹತ್ತು ಅವತಾರಗಳಾಗಿರುತ್ತವೆ ‖ ೫೯ ‖ ದೇವರು ಶರೀರರಹಿತನೆಂದು ಹೇಳಿ ಮತ್ತೆ ಹತ್ತು ಅವತಾರಗಳನ್ನು ಹೊಂದಿದನೆಂದು ಹೇಳುತ್ತಾರೆ. ಈ ಮಾತು ಪೂರ್ವಾಪರವಿರೋಧವಾಗಿರುವುದರಿಂದ ಅಂಥವನು ಆಪ್ತನೆಂದು ವಿದ್ವಾಂಸರು ಹೇಳುವುದಿಲ್ಲ ‖ ೬೦ ‖ ಬಲಿಯನ್ನು ಬಂಧಿಸಿದ ವಿಷಯವನ್ನು ಈಗ ನಾನು ನಿನಗೆ ಹೇಳುತ್ತೇನೆ. ಇದನ್ನು ಮೂರ್ಖಜನರು ಬೇರೆ ವಿಧವಾಗಿ ಪ್ರಸಿದ್ಧಮಾಡಿರುತ್ತಾರೆ ‖ ೬೧ ‖ ಮಿತ್ರನೆ! ದುಷ್ಟನಾದ ಬಲಿಯೆಂಬ ದ್ವಿಜನು ಮುನಿಗಳಿಗೆ ಉಪದ್ರವವನ್ನು ಮಾಡಲುದ್ಯುಕ್ತನಾದಾಗ ತಪಸ್ಸಾಮರ್ಥ್ಯವನ್ನು ಹೊಂದಿದ್ದ ವಿಷ್ಣುಕುಮಾರನೆಂಬ ಯೋಗಿಯು ವಾಮನರೂಪವನ್ನು ಧಾರಣಮಾಡಿ ಮೂರು ಹೆಜ್ಜೆಗಳಷ್ಟು ನೆಲವನ್ನು ಬಲಿಯಿಂದ ಪಡೆದು ಬಳಿಕ ಮಹಾಕಾಯನಾಗಿ ಬೆಳೆದು ಬಲಿಯನ್ನು ಬಂಧಿಸಿದನು. ಈ ರೀತಿಯಾಗಿ ಕಥೆಯನ್ನು ಮೂರ್ಖಜನರು ಬೇರೆ ವಿಧವಾಗಿ ತಿಳಿದಿರುತ್ತಾರೆ ‖ ೬೨–೬೩ ‖ ನಿತ್ಯನೂ ನಿರಂಜನನೂ ಸೂಕ್ಷ್ಮನೂ ಮರಣವೂ ಉತ್ಪತ್ತಿಯೂ ಇಲ್ಲದಿರುವವನೂ ಹತ್ತು ಅವತಾರಗಳನ್ನು ಹೊಂದಿರುವವನೂ ಆದ ಈ ವಿಷ್ಣುವು ದೇಹವಿಲ್ಲದವನೆಂಬುದು ಹೇಗೆ? ‖ ೬೪ ‖ ಮಿತ್ರನೆ! ಪುರಾಣವು ಪೂರ್ವಾಪರವಿರೋಧಗಳಿಂದ ತುಂಬಿದೆ. ಬೇರೆ ಲೌಕಿಕವಿಷಯವನ್ನೂ ನಿನಗೆ ಹೇಳುತ್ತೇನೆ" ಎಂದು ಹೇಳಿ ಮನೋವೇಗನು ಕಟ್ಟಿಗೆಯನ್ನು ಮಾರುವವನ ವೇಷವನ್ನು ಬಿಟ್ಟನು ‖ ೬೫ ‖ ಈ ಮನೋವೇಗನು ತನ್ನ ವಿದ್ಯಾಪ್ರಭಾವದಿಂದ ವಕ್ರವಾದ ಹೆಚ್ಚು ತಲೆಗೂದಲುಗಳುಳ್ಳವನೂ ಕಾಡಿಗೆಯಂತೆ ಕಾಂತಿಯುಳ್ಳವನೂ ದಪ್ಪವಾದ ಕೈಕಾಲು

ಗಳುಳ್ಳವನೂ ಆದ ಬೇಡರವನಾದನು ‖ ೬೬ ‖ ಬಳಿಕ ಪವನವೇಗನೂ ಮಾರ್ಜಾಲವಿದ್ಯೆಯಿಂದ ಬಿಳುಪು ಕೆಂಪುಬೆರೆದ ಬಣ್ಣದ ಕಣ್ಣುಗಳುಳ್ಳದೂ ಕತ್ತರಿಸಲ್ಪಟ್ಟ ಕಿವಿಗಳುಳ್ಳದೂ ಆದ ಕಪ್ಪುಬೆಕ್ಕಾದನು ‖ ೬೭ ‖ ಮನೋವೇಗನು ಒಂದು ಕುಂಭದೊಳಗೆ ಬೆಕ್ಕನ್ನಿಟ್ಟುಕೊಂಡು ಪಟ್ಟಣಕ್ಕೆ ಪ್ರವೇಶಮಾಡಿ ನಗಾರಿಯನ್ನೂ ಘಂಟೆಗಳನ್ನೂ ಹೊಡೆದು ಸುವರ್ಣಪೀಠದಲ್ಲಿ ಕುಳಿತನು ‖ ೬೮ ‖ ನಗಾರಿಯ ಶಬ್ದವನ್ನು ಕೇಳಿ ವಿಪ್ರರು ವೇಗದಿಂದ ಬಂದು “ ಏನೋ ? ನೀನು ವಾದವನ್ನು ಮಾಡದೆ ಸುವರ್ಣಪೀಠದಲ್ಲಿ ಕುಳಿತೆ ” ಎಂದು ಹೇಳಿದರು ‖ ೬೯ ‖ ಬಳಿಕ ಈ ಮನೋವೇಗನು ವಿಪ್ರರನ್ನು ಕುರಿತು “ ಎಲೈ ವಿಪ್ರರೇ ! ನಾನು ವಾದದ ಹೆಸರನ್ನೂ ತಿಳಿಯುವುದಿಲ್ಲ. ಕಾಡಿನಲ್ಲಿ ತಿರುಗಾಡುವ ಪಶುರೂಪನಾದ ನಾನು ಹೇಗೆ ವಾದವನ್ನು ಮಾಡುವೆನು ? ” ಎಂದು ಹೇಳಿದನು ‖ ೭೦ ‖ ಆಗ ಬ್ರಾಹ್ಮಣರು “ ಎಲೌ ಮೂರ್ಖನೆ ! ಹಾಗಾದರೆ ನೀನು ಭಟ್ಟರುಗಳಿಗೆ ವಾದಿಯ ಸೂಚನೆಯನ್ನು ಮಾಡುವ ನಗಾರಿಯನ್ನು ಶೀಘ್ರವಾಗಿ ಹೊಡೆದು ಸುವರ್ಣಪೀಠದಲ್ಲಿ ಹೇಗೆ ಕುಳಿತೆ ? ” ಎಂದರು ‖ ೭೧ ‖ ಅದಕ್ಕೆ ಮನೋವೇಗನು “ ಎಲೈ ವಿಪ್ರರೆ ! ನಾನು ಕುತೂಹಲದಿಂದ ಈ ಪೀಠವನ್ನೇರಿದೆನಲ್ಲದೆ ವಾದಿಯೆಂಬ ಅಹಂಕಾರದಿಂದಲ್ಲ. ಭೇರಿಯು ಹೊಡೆಯಲ್ಪಡುತಕ್ಕುದೆಂದು ಅದನ್ನು ಹೊಡೆದನು. ಭಂಗಾರದ ಪೀಠವನೇರುವುದಕ್ಕೆ ಮೂರ್ಖನಿಗೆ ಅರ್ಹತೆಯಿಲ್ಲವಾದರೆ ಏಳುತ್ತೇನೆ ” ಎಂದು ಹೇಳಿ ಇಳಿದನು ‖ ೭೨–೭೩ ‖ ಆಗ ವಿಪ್ರರು “ ಇಲ್ಲಿಗೇಕೆ ನೀನು ಬಂದೆ ? ” ಎಂದು ಕೇಳಿದರು. ಅದಕ್ಕೆ ಮನೋವೇಗನು “ ಬೇಡರವನಾದ ನಾನು ಬೆಕ್ಕನ್ನು ಮಾರುವುದಕ್ಕೋಸ್ಕರ ಬಂದೆನು ” ಎಂದು ಹೇಳಿದನು ‖ ೭೪ ‖ ಆಗ ದ್ವಿಜರು “ ಈ ಬೆಕ್ಕಿನ ಮಹತ್ತ್ವವೇನು ? ಬೆಲೆಯೇನು ? ಹೇಳು ” ಎಂದು ಕೇಳಿದರು. ಅದಕ್ಕೆ ಆ ಬೇಡರವನು “ಗರುಡನ ವಾಸನೆಯಿಂದ ಸರ್ಪಗಳು ನಾಶವಾಗುವಂತೆ, ಈ ಬೆಕ್ಕಿನ ವಾಸನೆಯಿಂದ ಹನ್ನೆರಡು ಯೋಜನಪ್ರದೇಶದಲ್ಲಿರುವ ಇಲಿಗಳೆಲ್ಲ ತತ್ಕ್ಷಣದಲ್ಲಿ ನಾಶವಾ

ಗುತ್ತವೆ. ಮಹಾಕಾಂತಿಯುಳ್ಳ ಈ ಬೆಕ್ಕಿಗೆ ಭಂಗಾರದ ಐವತ್ತು ನಾಣ್ಯಗಳು ಬೆಲೆ. ವಿಪ್ರರೆ! ನಿಮ್ಮಗಳಿಗೇನಾದರೂ ಪ್ರಯೋಜನವಿದ್ದರೆ ಇದನ್ನು ತೆಗೆದುಕೊಳ್ಳಿರಿ" ಎಂದನು ॥ ೭೫-೭೭ ॥ ಆಗ ವಿಪ್ರರೆಲ್ಲ ಸೇರಿ "ಇಲಿಗಳನ್ನು ನಾಶಮಾಡುವುದರಲ್ಲಿ ಸಮರ್ಥವಾದ ಈ ಬೆಕ್ಕನ್ನು ತೆಗೆದುಕೊಳ್ಳಿರಿ. ಒಂದು ದಿನದಲ್ಲಿ ಇಲಿಗಳು ನಾಶಮಾಡುವ ದ್ರವ್ಯದ ಸಹಸ್ರಭಾಗಗಳಲ್ಲಿ ಒಂದು ಭಾಗವನ್ನೂ ಇದಕ್ಕೆ ಬೆಲೆ ಕೊಡುವುದಿಲ್ಲ" ಎಂದು ಒಬ್ಬರಿಗೊಬ್ಬರು ಮಾತನಾಡಿಕೊಂಡರು ॥ ೭೮-೭೯ ॥ ತರುವಾಯ ದ್ವಿಜರು ಬೆಲೆಯನ್ನು ಸೇರಿಸಿ ಶೀಘ್ರವಾಗಿ ಆ ಬೆಕ್ಕನ್ನು ತೆಗೆದುಕೊಂಡರು. ಪ್ರಾಜ್ಞರು ಕಷ್ಟಸಾಧ್ಯವಾದ ವಸ್ತುವನ್ನು ದೊರಕಿಸುವ ವಿಷಯದಲ್ಲಿ ಕಾಲಹರಣವನ್ನು ಮಾಡಬಾರದು ॥ ೮೦ ॥ ಅನಂತರದಲ್ಲಿ ಖೇಚರ-ಮನೋವೇಗನು ವಿಪ್ರರನ್ನು ಕುರಿತು "ಎಲೈ ವಿಪ್ರರೆ! ಈ ಬೆಕ್ಕನ್ನು ಪರೀಕ್ಷಿಸಿ ತೆಗೆದುಕೊಳ್ಳಿರಿ. ಹಾಗೆ ಮಾಡದಿದ್ದರೆ ನಿಜವಾಗಿಯೂ ಬಹಳ ಹಾನಿಯುಂಟಾಗುವುದು" ಎಂದನು ॥ ೮೧ ॥ ಆ ಮೇಲೆ ಆ ವಿಪ್ರರು ಕಿವಿಯಿಲ್ಲದಿರುವ ಆ ಬೆಕ್ಕನ್ನು ಚೆನ್ನಾಗಿ ನೋಡಿ "ಇದು ತನ್ನ ಕಿವಿಗಳನ್ನು ಹೇಗೆ ನಾಶಮಾಡಿಕೊಂಡಿತು? ಹೇಳು" ಎಂದು ಮನೋವೇಗನನ್ನು ಕೇಳಿದರು ॥ ೮೨ ॥ ಬಳಿಕ ಮನೋವೇಗನು ಆ ವಿಪ್ರರನ್ನು ಕುರಿತು "ಆಲಸ್ಯದಿಂದ ಖಿನ್ನನಾದ ನಾನು ರಾತ್ರಿಯಲ್ಲಿ ವಿಚಿತ್ರವಾದ ಇಲಿಗಳಿರುವ ಒಂದು ದೇವಾಲಯದಲ್ಲಿ ಮಲಗಿದ್ದೆನು. ಅಲ್ಲಿ ಇಲಿಗಳು ಬಂದು ಹೊಟ್ಟೆಹಸಿವಿನಿಂದ ಬಳಲಿ ನಿಶ್ಚೇಷ್ಟೆಯಾಗಿ ಚಲಿಸದೆ ಮಲಗಿದ್ದ ಈ ಬೆಕ್ಕಿನ ಕಿವಿಗಳನ್ನು ತಿಂದುವು" ಎಂದು ಉತ್ತರವನ್ನಿತ್ತನು ॥ ೮೩-೮೪ ॥ ಆಗ ಬಹಳ ನಗೆಯುಳ್ಳವರಾದ ಆ ದ್ವಿಜರು ಮನೋವೇಗನನ್ನು ಕುರಿತು "ಎಲೈ ಮೂರ್ಖನೆ! ನಿನ್ನ ಮಾತು ಪರಸ್ಪರ ವಿರೋಧವಾಗಿದೆ. ಯಾವ ಬೆಕ್ಕಿನ ವಾಸನೆಯಿಂದಲೇ ಹನ್ನೆರಡು ಯೋಜನ ದೂರದಲ್ಲಿ ಇಲಿಗಳು ಹೋಗುತ್ತವೋ ಅಂತಹ ಬೆಕ್ಕಿನ ಕಿವಿಗಳನ್ನು ಅವು ಹೇಗೆ ಕತ್ತರಿಸಿದುವು?" ಎಂದರು ॥ ೮೫-೮೬ ॥

ಬಳಿಕ ಜಿನಪಾದಕಮಲಗಳಲ್ಲಿ ದುಂಬಿಯಂತಿರುವ ಆ ಖೇಚರ—ಮನೋವೇಗನು ವಿಪ್ರರನ್ನು ಕುರಿತು “ ಎಲೈ ವಿಪ್ರರೇ ! ಒಂದು ದೋಷದಿಂದಲೇ ಇದರ ಇತರಗುಣಗಳೆಲ್ಲ ಹೋದುವೇ ? ” ಎಂದನು ‖ ೮೭ ‖ ಆಗ ದ್ವಿಜರು ಈ ದೋಷದಿಂದ ಎಲ್ಲಾ ಗುಣವು ಪಲಾಯನಮಾಡುತ್ತದೆ. ಒಂದು ಬಿಂದು ವಿಷದಿಂದ ಅಮೃತವು ಹಾಳಾಗುವುದಿಲ್ಲವೇ ? ” ಎಂದರು ‖ ೮೮ ‖ ಬಳಿಕ ಮನೋವೇಗನು “ ಈ ದೋಷದಿಂದ ಗುಣಗಳು ಹೋಗುವುದಿಲ್ಲ. ಸೂರ್ಯನ ಕಿರಣಗಳು ಕತ್ತಲೆಯಿಂದ ಮರ್ದಿಸಲ್ಪಟ್ಟು ಹೋಗಿಬಿಡುತ್ತವೆಯೋ ? ಬಡವರ ಮಕ್ಕಳೂ ಕಾಡಿನಲ್ಲಿ ಓಡಾಡುವವರೂ ಪಶುಗಳಿಗೆ ಸಮಾನರೂ ಆದ ನಾವುಗಳು ಇಲ್ಲಿ ಪ್ರಾಜ್ಞರಾದ ನಿಮ್ಮಗಳೊಡನೆ ಮಾತನಾಡಲು ಸಮರ್ಥರಲ್ಲ ” ಎಂದನು ‖ ೮೯–೯೦ ‖ ಅದಕ್ಕೆ ದ್ವಿಜರು “ ಇಲ್ಲಿ ನಿಜವಾಗಿ ನಿನ್ನ ತಪ್ಪಿಲ್ಲ. ಬೆಕ್ಕಿನ ತಪ್ಪನ್ನು ಹೋಗಲಾಡಿಸು ” ಎಂದರು. ಆಗ ಮನೋವೇಗನು “ ದ್ವಿಜರೆ ! ನಾನು ಆ ತಪ್ಪನ್ನು ಹೋಗಲಾಡಿಸುತ್ತೇನೆ. ಆದರೆ ಪಟ್ಟಣದ ಯಜಮಾನರಾದ ನಿಮ್ಮಗಳೊಡನೆ ಮಾತನಾಡುವುದಕ್ಕೆ ನನ್ನ ಮನಸ್ಸು ಭಯಪಡುತ್ತದೆ ‖ ೯೧–೯೨ ‖ ಮನುಷ್ಯನು ಬಾವಿಯ ಕಪ್ಪೆಗೆ ಸಮಾನನೂ ಕೃತಕಬಧಿರನಿಗೆ ಸಮಾನನೂ ಕ್ಲೇಶವನ್ನು ಹೊಂದಿರುವ ಸೇವಕನಿಗೆ ಸಮಾನನೂ ಆದರೆ ನಿಜವಾದ ವಸ್ತುಸ್ವರೂಪವನ್ನು ಕೂಡ ಮಾತನಾಡುವ ನನ್ನ ಮನಸ್ಸಿನಲ್ಲಿ ಭಯವನ್ನುಂಟುಮಾಡುವ ಮಹಾಸಂದೇಹವುಂಟಾಗುವುದು ‖ ೯೩ ‖ ಯಾವ ಮನುಷ್ಯನು ಸತ್ಯವಾದ ಶಾಸ್ತ್ರವನ್ನು ನಂಬುವುದಿಲ್ಲವೋ, ತನ್ನ ವಿಷಯವು ಚಿಕ್ಕದಾಗಿದ್ದರೂ ದೊಡ್ಡದೆಂದು ಹೇಳುತ್ತಾನೋ ಮತ್ತು ಇತರವಸ್ತುವಿನ ಪರಿಮಾಣವನ್ನು ನೋಡುವುದಿಲ್ಲವೋ ಅಂಥವನು ಕೂಪಮಂಡೂಕಕ್ಕೆ ಸಮಾನನೆಂದು ಹೇಳುತ್ತಾರೆ ‖ ೯೪ ‖ ಒಂದಾನೊಂದು ಕಾಲದಲ್ಲಿ ಸಮುದ್ರನಿವಾಸಿಯಾದ ರಾಜಹಂಸಪಕ್ಷಿಯನ್ನು ನೋಡಿ ಒಂದು ಕಪ್ಪೆಯು ‘ ಅಯ್ಯಾ ! ನೀನು ಎಲ್ಲಿ ವಾಸಮಾಡುತ್ತಿ ? ’ ಎಂದು ಕೇಳಿತು. ಅದಕ್ಕೆ ಹಂಸವು ‘ ನಾನು ಸಮುದ್ರ

ದಲ್ಲಿ ವಾಸಮಾಡುತ್ತೇನೆ' ಎಂದು ಹೇಳಿತು. ಆಗ ಕಪ್ಪೆಯು 'ನಿನ್ನ ಈ ಸಮುದ್ರವು ಎಷ್ಟು ದೊಡ್ಡದಾಗಿದೆ?' ಎಂದು ಕೇಳಿತು. ಅದಕ್ಕೆ ಹಂಸವು 'ಬಹಳ ದೊಡ್ಡದಾಗಿದೆ' ಎಂದು ಹೇಳಿತು ॥೯೫॥ ಆಗ ಕಪ್ಪೆಯು ಕೈಗಳನ್ನು ಪಸರಿಸಿ 'ಅಯ್ಯಾ! ಸಮುದ್ರವು ಇಷ್ಟಿರಬಹುದೋ?' ಎಂದು ಪುನಃ ಕೇಳಿತು. ಅದಕ್ಕೆ ಹಂಸವು 'ಬಹಳ ದೊಡ್ಡದು' ಎಂದು ಹೇಳಿತು. ಆಗ ಕಪ್ಪೆಯು 'ನನ್ನ ಬಾವಿಗಿಂತ ದೊಡ್ಡದೋ?' ಎಂದು ಕೇಳಿತು ॥೯೬॥ ಈ ರೀತಿಯಾಗಿ ಸತ್ಯವನ್ನು ಕೂಡ ಯಾವನು ಗ್ರಹಿಸುವುದಿಲ್ಲವೋ ಅಂತಹ ನಿಕೃಷ್ಟನು ಕಪ್ಪೆಗೆ ಸಮಾನನಾಗಿರುತ್ತಾನೆ. ಅವನಿಗೆ ಪ್ರಾಜ್ಞರು ತತ್ತ್ವವನ್ನು ತಿಳಿಸಬಾರದು. ಸತ್ಪುರುಷರು ತಮ್ಮ ಕಾರ್ಯವನ್ನು ನಿಷ್ಫಲವನ್ನಾಗಿ ಮಾಡುವುದಿಲ್ಲ ॥೯೭॥ ದುರ್ಬುದ್ಧಿಯುಳ್ಳ ಯಾವ ಲುಬ್ಧಮನುಷ್ಯನು ಸ್ವಜನರ ಶಬ್ದಗಳಿಂದಲೂ ಶಕುನಗಳ ಶಬ್ದಗಳಿಂದಲೂ ನಿವಾರಿಸಲ್ಪಟ್ಟವನಾದರೂ ಆ ಶಬ್ದಗಳನ್ನು ಕೇಳದೆ ಬಲವಾದ ನಗಾರಿ ಮೊದಲಾದುವುಗಳ ಶಬ್ದಗಳಿಂದ ಇತರ ಶಬ್ದವನ್ನು ಮರೆಮಾಡಿ ಕಾರ್ಯವನ್ನು ಮಾಡುತ್ತಾನೋ ಅಂತಹ ನಿಕೃಷ್ಟಮನುಷ್ಯನು ಕೃತಕಬಧಿರನೆಂದು ಹೇಳಲ್ಪಡುತ್ತಾನೆ ॥೯೮॥ ದೊರೆಯು ಕೊಡುವವನಲ್ಲ-ಕೃಪಣನೆಂದೂ ದುರ್ಬುದ್ಧಿಯುಳ್ಳವನೆಂದೂ ಆಶೆಯುಳ್ಳವನೆಂದೂ ತಿಳಿದು ಕೂಡ ಅವನನ್ನು ಯಾವ ಸೇವಕನು ಬಿಡುವುದಿಲ್ಲವೋ ಬಹುಕಾಲದ ದುಃಖವನ್ನು ನೋಡದಿರುವವನೂ ನಿಂದ್ಯನೂ ಆದ ಅಂತಹ ಸೇವಕನು ಕ್ಲಿಷ್ಟಭೃತನೆಂದು ಹೇಳಲ್ಪಡುತ್ತಾನೆ ॥೯೯॥ ಯಾವ ಮನುಷ್ಯರು ಈ ಕೂಪಮಂಡೂಕ ಕೃತಕಬಧಿರ ಕ್ಲಿಷ್ಟಭೃತ್ಯ-ಮನುಷ್ಯರಿಗೆ ಸಮಾನರೂ ಮತಿಹೀನರೂ ಕಾರ್ಯಾಕಾರ್ಯವನ್ನು ತಿಳಿಸುವ ವಾಕ್ಯವನ್ನು ತಿರಸ್ಕರಿಸುವವರೂ ದೀನರೂ ಆಗಿರುತ್ತಾರೋ ಅಂತಹ ಮನುಷ್ಯರಿಗೆ ಪ್ರಾಜ್ಞರಿಂದ ಸ್ತುತಿಸಲ್ಪಟ್ಟುದೂ ನಿತ್ಯವೂ ಆದ ಮುಕ್ತಿಲಕ್ಷ್ಮಿಯನ್ನು ನೋಡುವವರೂ ಅಪರಿಮಿತ

ಜ್ಞಾನಧಾರಕರೂ ಆದ ಸತ್ಪುರುಷರು ವಸ್ತುಸ್ವರೂಪವನ್ನು ಹೇಳಬಾರದು ॥ ೧೦೦ ॥

ಇಂತು ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷಾದಶಮಪರಿಚ್ಛೇದದ ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

—o—

ಅನಂತರದಲ್ಲಿ ವಿಪ್ರರು ಈ ಮನೋವೇಗನನ್ನು ಕುರಿತು " ನಾವೇನು ಯುಕ್ತಿಯಿಂದ ಚೆನ್ನಾಗಿ ಸಿದ್ಧವಾದ ಮಾತನ್ನೂ ತಿಳಿಯದಿರುವ ಇಂತಹ ಮೂರ್ಖರೇ ? " ಎಂದರು ॥ ೧ ॥ ಬಳಿಕ ಪ್ರಾಜ್ಞರಿಗೆ ಸಂತೋಷದಾಯಕನಾದ ಖೇಚರರಾಜಪುತ್ರನಾದ ಮನೋವೇಗನು ಆ ವಿಪ್ರರನ್ನು ಕುರಿತು " ಎಲೈ ವಿಪ್ರರೇ ! ಹಾಗಾದರೆ ಕೇಳಿ, ಮನೋಗತವನ್ನು ವ್ಯಕ್ತಮಾಡುತ್ತೇನೆ ॥ ೨ ॥ ತೇಜಸ್ಸುಗಳಿಗೆ ನಿವಾಸಸ್ಥಾನವಾಗಿರುವ ಸೂರ್ಯನಂತೆ, ದೋಷಗಳುಳ್ಳ ತಪಸ್ಸುಗಳಿಗೆ ನಿವಾಸಸ್ಥಾನನಾದ ಮಂಡಪಕೌಶಿಕನೆಂಬ ತಪಸ್ವಿಯಿದ್ದನು ॥ ೩ ॥ ಒಂದಾನೊಂದು ಕಾಲದಲ್ಲಿ ಈ ತಪಸ್ವಿಯು ವಿಶುದ್ಧವಾದ ದೇಹವುಳ್ಳ ನಕ್ಷತ್ರಗಳೊಡನೆ ಚಂದ್ರನಂತೆ, ವಿಶುದ್ಧವಾದ ದೇಹವುಳ್ಳ ತಪಸ್ವಿಗಳೊಡನೆ ಭೋಜನವನ್ನು ಮಾಡುವುದಕ್ಕೋಸ್ಕರ ಕುಳಿತನು ॥ ೪ ॥ ನಿಂದ್ಯನಾದ ಚಂಡಾಲನಂತೆ ಖಿನ್ನನಾಗಿ ಕುಳಿತಿರುವ ಆ ಮಂಡಪಕೌಶಿಕತಾಪಸನನ್ನು ನೋಡಿ ಅವನನ್ನು ಮುಟ್ಟುವುದಕ್ಕೆ ಹೆದರಿದ ಆ ಎಲ್ಲ ತಪಸ್ವಿಗಳು ಶೀಘ್ರವಾಗಿ ಎದ್ದರು ॥ ೫ ॥ ಆಗ ಆ ತಾಪಸನು ' ಜೊತೆಯಲ್ಲಿ ಊಟಮಾಡುತ್ತಿರುವ ನನ್ನನ್ನು ನಾಯಿಯನ್ನು ನೋಡುವಂತೆ ನೋಡಿ ಏತಕ್ಕೆ ಎದ್ದಿರಿ ? ಹೇಳಿರಿ ' ಎಂದು ಆ ತಪಸ್ವಿಗಳನ್ನು ಪ್ರಶ್ನೆ ಮಾಡಿದನು ॥ ೬ ॥ ಅದಕ್ಕೆ ಆ ತಪಸ್ವಿಗಳು ' ಬಾಲಬ್ರಹ್ಮಚಾರಿಯೂ ಪುತ್ರಮುಖವನ್ನು ನೋಡದಿರುವವನೂ ಆದ ನೀನು ತಪಸ್ವಿಗಳಲ್ಲಿ ಬಹಿ

ಭರ್ಜಿತನಾಗಿರುವವನು. ಅಪುತ್ರನಿಗೆ ಗತಿಯಿಲ್ಲ. ಅವನ ತಪಸ್ಸಿಗೆ ಸ್ವರ್ಗವು ದೊರೆಯುವುದಿಲ್ಲ. ಆದುದರಿಂದ ಪುತ್ರಮುಖವನ್ನು ನೋಡಿ ಶ್ರೇಯಸ್ಸಿಗೋಸ್ಕರ ತಪಸ್ಸನ್ನು ಮಾಡುವುದಾಗಿದೆ ' ಎಂದು ಈ ಮಂಡಪಕೌಶಿಕನಿಗೆ ಹೇಳಿದರು ॥ ೭ ॥ ಆಗ ಅವನು ಹೋಗಿ ಸ್ವಜನರಲ್ಲಿ ತನಗೆ ಕನ್ಯೆಯನ್ನು ಕೊಡಬೇಕೆಂದು ಕೇಳಿದನು. ಅವನಿಗೆ ವಿವಾಹದ ವಯಸ್ಸು ಕಳೆದು ಹೋಗಿದ್ದುದರಿಂದ ಆ ಸ್ವಜನರೆಂದೂ ಅವನಿಗೆ ಕನ್ಯೆಯನ್ನು ಕೊಡಲಿಲ್ಲ ॥ ೯ ॥ ಆಗ ಅವನು ಶೀಘ್ರವಾಗಿ ಪುನಃ ಆ ತಪಸ್ವಿಗಳ ಬಳಿಗೆ ಹೋಗಿ ' ಮುದುಕನಾದ ನನಗೆ ಯಾವನೂ ಕನ್ಯೆಯನ್ನು ಕೊಡುವುದಿಲ್ಲ. ನಾನೇನು ಮಾಡಲಿ ? ' ಎಂದು ಅವರನ್ನು ಪ್ರಶ್ನೆಮಾಡಿದನು ॥ ೧೦ ॥ ಆಗ ಅವರು ' ನೀನು ಎಲ್ಲಿಯಾದರೂ ವಿಧವೆಯನ್ನು ಸಂಗ್ರಹಿಸಿಕೊಂಡು ಸುಖಿಯಾಗಿರು. ಇಬ್ಬರಿಗೂ ದೋಷವಿಲ್ಲವೆಂದು ತಾಪಸಾಗಮದಲ್ಲಿ—ಗಂಡನು ದೇಶಾಂತರಕ್ಕೆ ಹೋದರೆ, ನಪುಂಸಕನಾಗಿದ್ದರೆ, ತಪ್ಪಿಸಿಕೊಂಡುಹೋದರೆ, ಪತಿತ–ಜಾತಿಚ್ಯುತನಾದರೆ, ಸತ್ತುಹೋದರೆ ಈ ಐದು ಆಪತ್ತುಗಳಲ್ಲಿ ಸ್ತ್ರೀಯರಿಗೆ ಬೇರೆ ಪತಿಯು ವಿಧಿಸಲ್ಪಡುತ್ತಾನೆಂದು ಹೇಳಿದೆ ' ಎಂದು ಮಂಡಪಕೌಶಿಕನಿಗೆ ಹೇಳಿದರು ॥ ೧೧–೧೨ ॥ ಆ ಮೇಲೆ ಅವನು ಆ ತಪಸ್ವಿಗಳ ಹೇಳಿಕೆಯಂತೆ ಒರ್ವ ವಿಧವೆಯನ್ನು ವಿಧಿಗನುಸಾರವಾಗಿ ಪರಿಗ್ರಹಿಸಿದನು. ವಿಷಯಸುಖದಲ್ಲಿ ತಾನೇ ಲೋಲನಾಗಿರುವವನಿಗೆ ಗುರುವಿನ ಆಜ್ಞೆಯೂ ದೊರೆತರೆ ಹೇಳುವುದೇನು ? ॥ ೧೩ ॥ ಆ ವಿಧವೆಯನ್ನು ಭೋಗಿಸುತ್ತಿರುವ ಮಂಡಪಕೌಶಿಕನಿಗೆ ಎಲ್ಲರಿಂದಲೂ ಪ್ರಾರ್ಥಿಸಲ್ಪಡತಕ್ಕುದೂ ರೂಪವನ್ನು ಧರಿಸಿರುವುದೂ ಆದ ನೀತಿಯಂತೆಯೂ ಸಂಪತ್ತಿಯಂತೆಯೂ ಮನೋಹರಳಾದ ಕನ್ಯೆಯೊಬ್ಬಳು ಹುಟ್ಟಿದಳು ॥ ೧೪ ॥ ಆಕೆಯು ಹರ ಹರಿ ಬ್ರಹ್ಮ ದೇವೇಂದ್ರ ಮೊದಲಾದ ಸ್ವರ್ಗಿಕರಲ್ಲಿ ದುರ್ನಿವಾರ್ಯನಾದ ಮನ್ಮಥನನ್ನು ವೃದ್ಧಿಹೊಂದಿಸುವವಳಾಗಿ ಬೆಳೆದಳು ॥ ೧೫ ॥ ಕಾಯಿಸಿದ ಭಂಗಾರದಂತೆ ಕಾಂತಿಯುಳ್ಳವಳೂ ಪ್ರಾಜ್ಞರಿಗೆ ಇಷ್ಟವಾದ

ಎಲ್ಲಾ ಕುಲಗುಣಗಳಿಗೆ ನಿವಾಸಸ್ಥಾನಳೂ ಆದ ಆ ಕನ್ಯೆಗೆ 'ಛಾಯಾ' ಎಂದು ಹೆಸರಾಯ್ತು ॥ ೧೬ ॥ ಆಕೆಯು ತನ್ನ ದೇಹಕಾಂತಿಸಂಪತ್ತಿಯಿಂದ ಎಲ್ಲಾ ಸ್ತ್ರೀಯರನ್ನು ಜಯಿಸಿದ್ದಳು. ಆಕೆಯ ಛಾಯೆಯು ತನ್ನ ಆದರ್ಶ ದಿಂದ ತನಗೆ ತಾನೇ ಆದರ್ಶವಾಗಿ-ಅಸದೃಶವಾಗಿದ್ದಿತು ॥ ೧೭ ॥ ಲೋಭಿಯ ಮನೆಯಲ್ಲಿ ಪರೋಪಕಾರಿಣಿಯಾದ ಲಕ್ಷ್ಮಿಯಂತೆ, ಈ ಮಂಡಪ ಕೌಶಿಕನ ಮನೆಯಲ್ಲಿ ಆ ಮನೋಹರಳಾದ ಕನ್ಯೆಯು ಎಂಟು ವರುಷ ವಯಸ್ಸಿನವಳಾದಳು ॥ ೧೮ ॥ ಒಂದಾನೊಂದು ಕಾಲದಲ್ಲಿ ಈ ಮಂಡಪ ಕೌಶಿಕನು ತನ್ನ ಪತ್ನಿಯನ್ನು ಕುರಿತು 'ಪ್ರಿಯೆ ! ಸಮಸ್ತ ಪಾಪವನ್ನು ನಾಶಮಾಡುವ ತೀರ್ಥಯಾತ್ರೆಯನ್ನು ಮಾಡೋಣ ॥ ೧೯ ॥ ಕಾಂತೆಯೆ ! ಭಂಗಾರದಂತೆ ಕಾಂತಿಯುಳ್ಳವಳೂ ನವಯೌವನವತಿಯೂ ಶುಭಲಕ್ಷಣ ಗಳುಳ್ಳವಳೂ ಆದ ಛಾಯೆಯನ್ನು ಯಾವ ದೇವನ ಕೈಯಲ್ಲಿರಿಸೋಣ ? ॥೨೦ ॥ ಯಾವನ ಕೈಯಲ್ಲಿ ಕನ್ಯೆಯನ್ನು ಅರ್ಪಿಸುತ್ತೇವೋ ಅವನೇ ಆಕೆ ಯನ್ನು ಪರಿಗ್ರಹಿಸುತ್ತಾನೆ. ಲೋಕದಲ್ಲಿ ಸ್ತ್ರೀರತ್ನದಿಂದ ವಿಮುಖನಾಗಿರು ವವನು ಯಾವನೂ ಇಲ್ಲ ॥ ೨೧ ॥ ಸರ್ಪವನ್ನು ಧರಿಸಿರುವ ರುದ್ರನು ಸ್ತ್ರೀಗೆ ಅರ್ಧಶರೀರವನ್ನು ಕೊಟ್ಟಿರುವವನೂ ಕಾಮಾಗ್ನಿಯಿಂದ ಸಂತಪ್ತವಾದ ದೇಹವುಳ್ಳವನಾಗಿ ಯಾವಾಗಲೂ ವಿಷಮದೃಷ್ಟಿಯುಳ್ಳವನೂ ಆಗಿದ್ದಾನೆ ॥ ೨೨ ॥ ದೇಹದಲ್ಲಿರುವ ಪಾರ್ವತಿಯನ್ನು ಬಿಟ್ಟು ಗಂಗೆಯನ್ನು ಭೋಗಿ ಸುವ ಆ ರುದ್ರನು ಉತ್ತಮಲಕ್ಷಣವುಳ್ಳ ಕನ್ಯೆಯನ್ನು ಹೊಂದಿ ಹೇಗೆ ಬಿಡುವನು ? ॥ ೨೩ ॥ ದುರ್ನಿವಾರ್ಯನಾದ ಯಾವನ ಹೃದಯದಲ್ಲಿ ಯಾವಾಗಲೂ ಸಮುದ್ರದಲ್ಲಿ ಬಡವಾನಲದಂತೆ, ಮಹಾತಾಪವುಳ್ಳ ಕಾಮಾ ಗ್ನಿಯು ಉರಿಯುತ್ತಿದೆಯೋ ಅಂತಹ ಕಾಮುಕನಾದ ಧೂರ್ಜಟಿ-ಶಿವನಿಗೆ ಈ ಮಗಳನ್ನು ಹೇಗೆ ಅರ್ಪಿಸಲಿ ? ಪ್ರಾಜ್ಞರು ಹಾಲನ್ನು ಕಾಪಾಡುವುದ ಕ್ಕೋಸ್ಕರ ಬೆಕ್ಕಿಗೆ ಕೊಡುವುದಿಲ್ಲವಷ್ಟೆ ॥ ೨೪-೨೫ ॥ ನದಿಗಳಿಂದ ಸಮು

ದ್ರವು ತೃಪ್ತಿಯನ್ನು ಹೊಂದದಿರುವಂತೆ, ಹದಿನಾರು ಸಾವಿರ ಗೋಪಿಕಾ ಸ್ತ್ರೀಯರನ್ನು ಭೋಗಿಸುತ್ತಿರುವ ಹರಿಯು ತೃಪ್ತಿಯನ್ನು ಹೊಂದಿರುವುದಿಲ್ಲ ॥ ೨೬ ॥ ಅವನು ಗೋಪಿಯರನ್ನು ಬಿಟ್ಟು ಹೃದಯದಲ್ಲಿರುವ ಲಕ್ಷ್ಮಿಯನ್ನು ಭೋಗಿಸುತ್ತಾನೆ. ಅಂತಹ ಮಾಧವನು ಸುಂದರಳಾದ ಕನ್ಯೆಯನ್ನು ಪಡೆದು ಹೇಗೆ ಬಿಡುವನು ? ॥ ೨೭ ॥ ಇಂತಹ ವಿಷ್ಣುವಿಗೆ ಮಗಳನ್ನು ಹೇಗೆ ಅರ್ಪಿಸಲಿ ? ರತ್ನವನ್ನು ಕಾಪಾಡುವುದಕ್ಕೋಸ್ಕರ ಕಳ್ಳನ ಕೈಯಲ್ಲಿ ಯಾವನು ಕೊಡುತ್ತಾನೆ ? ॥ ೨೮ ॥ ದೇವಾಂಗನೆಯ ನೃತ್ಯವನ್ನು ನೋಡಿದುದರಿಂದಲೇ ಯಾವನು ತನ್ನ ಸಾರವಾದ ತಪಸ್ಸ್ಯವನ್ನು ಬಿಟ್ಟನೋ ಅಂತಹ ಬ್ರಹ್ಮನು ಸುಂದರಳಾದ ಕಾಮಿನಿಯನ್ನು ಹೊಂದಿ ಏನು ಮಾಡಲಿಕ್ಕಿಲ್ಲ ? ॥ ೨೯ ॥

ಒಂದಾನೊಂದು ಕಾಲದಲ್ಲಿ ದೇವೇಂದ್ರನ ಆಸನವು ನಡುಗಿತು. ಆಗ ಅವನು ಬೃಹಸ್ಪತಿಯನ್ನು ಕರೆದು 'ಎಲೈ ಸಾಧುವೆ ! ನನ್ನ ಆಸನವನ್ನು ಯಾವನು ನಡುಗಿಸಿದನು ?' ಎಂದು ಪ್ರಶ್ನೆಮಾಡಿದನು ॥ ೩೦ ॥ ಆಗ ಬೃಹಸ್ಪತಿಯು ಇಂದ್ರನನ್ನು ಕುರಿತು 'ದೇವಾ ! ರಾಜಕಾರಣವಾಗಿ ಬ್ರಹ್ಮನು ನಾಲ್ಕು ಸಾವಿರ ವರ್ಷಗಳಿಂದ ತಪಸ್ಸನ್ನು ಮಾಡುತ್ತಾನೆ ॥ ೩೧ ॥ ಪ್ರಭುವೆ ! ಅವನ ಮಹಾತಪಃಪ್ರಭಾವದಿಂದ ನಿನ್ನ ಈ ಆಸನದ ಕಂಪವುಂಟಾಯ್ತು. ತಪಸ್ಸಿನಿಂದ ಏನುತಾನೆ ಸಾಧಿಸಲ್ಪಡುವುದಿಲ್ಲ ? ॥ ೩೨ ॥ ಇಂದ್ರನೆ ! ನೀನು ಉತ್ತಮಸ್ತ್ರೀಯನ್ನು ಕಳುಹಿ ಅವನ ತಪಸ್ಸನ್ನು ಹಾಳುಮಾಡು—ತಪಸ್ಸನ್ನು ಹಾಳುಮಾಡುವುದರಲ್ಲಿ ಸ್ತ್ರೀಯನ್ನು ಬಿಟ್ಟು ಬೇರೆ ಉಪಾಯವಿಲ್ಲ' ಎಂದನು ॥ ೩೩ ॥ ಆಗ ಈ ದೇವೇಂದ್ರನು ದೇವಸ್ತ್ರೀಯರ—ಪ್ರತಿಯೊಬ್ಬಳ ತಿಲಮಾತ್ರ ರೂಪವನ್ನು ತೆಗೆದುಕೊಂಡು ತಿಲೋತ್ತಮೆಯೆಂಬ ಸುಂದರಸ್ತ್ರೀಯನ್ನು ನಿರ್ಮಾಣಮಾಡಿ ಆಕೆಯನ್ನು ಕುರಿತು 'ನೀನು ಹೋಗಿ ಬ್ರಹ್ಮನನ್ನು ತಪೋಭ್ರಷ್ಟನನ್ನಾಗಿ ಮಾಡು' ಎಂದು ಹೇಳಿ ಇಂದ್ರನು ಆ ತಿಲೋತ್ತಮೆಯನ್ನು

ಕಳುಹಿಸಿಕೊಟ್ಟನು ‖ ೩೪–೩೫ ‖ ಆಕೆಯು, ಮನಸ್ಸನ್ನು ಮೋಹಗೊಳಿಸುವುದಕ್ಕೆ ಸಮರ್ಥವಾದ ಹುಳಿತ ಹೆಂಡದಂತೆ, ಬ್ರಹ್ಮನ ತಪಸ್ಸನ್ನು ಕೆಡಿಸುವುದಕ್ಕೆ ಸಮರ್ಥವೂ ಶೃಂಗಾರರಸಭರಿತವೂ ಉತ್ಕೃಷ್ಟವೂ ಆದ ನೃತ್ಯವನ್ನು ಅವನ ಮುಂದೆ ಮಾಡಿದಳು ‖ ೩೬ ‖ ಸಮರ್ಥಳಾದ ಆ ತಿಲೋತ್ತಮೆಯು, ಕಾಮನೆಂಬ ವೃಕ್ಷವನ್ನು ಬೆಳೆಯಿಸುವುದಕ್ಕೆ ಮೇಘಗಳಿಗೆ ಸಮಾನಗಳಾದ ತನ್ನ ಗುಪ್ತಾವಯವಗಳನ್ನು ಬ್ರಹ್ಮನಿಗೆ ತೋರಿಸಿದಳು ‖ ೩೭ ‖ ಬ್ರಹ್ಮನ ಚಂಚಲವಾದ ದೃಷ್ಟಿಯು ಆಕೆಯ ಪಾದಗಳಲ್ಲಿಯೂ ಕಣಕಾಲುಗಳಲ್ಲಿಯೂ ತೊಡೆಗಳಲ್ಲಿಯೂ ವಿಸ್ತಾರವಾದ ಜಘನಸ್ಥಳದಲ್ಲಿಯೂ ನಾಭಿಯಲ್ಲಿಯೂ ಕುಚದ್ವಯದಲ್ಲಿಯೂ ಕೊರಳಿನಲ್ಲಿಯೂ ಮುಖಕಮಲದಲ್ಲಿಯೂ ಕ್ರಮವಾಗಿ ವಿಶ್ರಮಿಸಿ ವಿಶ್ರಮಿಸಿ ದೇಹದ ಸುತ್ತಲೂ ಓಡಾಡುತ್ತ ಬಹುಕಾಲದವರೆಗೆ ಕ್ರೀಡಿಸಿತು ‖ ೩೮–೩೯ ‖ ಮೆಲ್ಲನೆ ಸಂಚಾರಮಾಡುವವಳೂ ವಿಲಾಸಕ್ಕೂ ವಿಭ್ರಮಕ್ಕೂ ಆಧಾರಳೂ ಆದ ಆ ತಿಲೋತ್ತಮೆಯು, ನರ್ಮದಾನದಿಯು ವಿಂಧ್ಯಪರ್ವತದ ಮಧ್ಯವನ್ನು ಭೇದಿಸಿರುವಂತೆ, ಬ್ರಹ್ಮನ ಹೃದಯವನ್ನು ಭೇದಿಸಿದಳು ‖ ೪೦ ‖ ಬ್ರಹ್ಮನು ತನ್ನಲ್ಲಿ ಅನುರಕ್ತನಾಗಿದ್ದಾನೆಂದು ಆತನ ನೋಟದಿಂದ ತಿಳಿದು ತಿಲೋತ್ತಮೆಯು ದಕ್ಷಿಣ ಪಶ್ಚಿಮೋತ್ತರ ದಿಕ್ಕುಗಳಲ್ಲಿ ಕುಣಿದು ಅವನ ಮನಸ್ಸನ್ನು ತಿರುಗಿಸುವವಳಾಗಿ ಸಂಚರಿಸಿದಳು ‖ ೪೧ ‖ ದೇವತೆಗಳಿಗೆ ಅಧಿಪತಿಯಾದ ಆ ಬ್ರಹ್ಮನು ನಾಚಿಕೆಯುಳ್ಳವನಾಗಿ ಕುತ್ತಿಗೆಯನ್ನು ತಿರುಗಿಸಿ ನೋಡಲಿಲ್ಲ. ಲಜ್ಜೆಯಿಂದಲೂ ಅಹಂಕಾರದಿಂದಲೂ ಮಾಯಾಚಾರದಿಂದಲೂ ಮನುಷ್ಯನು ಒಳ್ಳೆಯ ಕೆಲಸವನ್ನೆಲ್ಲಿ ಮಾಡುವನು ? ‖ ೪೨ ‖ ಬುದ್ಧಿಯಿಲ್ಲದ ಬ್ರಹ್ಮನು ಪ್ರತಿಯೊಂದು ದಿಕ್ಕಿನಲ್ಲಿ ಆ ತಿಲೋತ್ತಮೆಯನ್ನು ನೋಡಬೇಕೆಂಬ ಇಚ್ಛೆಯುಳ್ಳವನಾಗಿ ಒಂದೊಂದು ಸಾವಿರ ವರ್ಷಗಳ ತಪಸ್ಸನ್ನು ಕೊಟ್ಟು ಆಯಾ ದಿಕ್ಕಿನಲ್ಲಿ ಮುಖವನ್ನು ಮಾಡಿದನು ‖ ೪೩ ‖ ಚೆನ್ನಾಗಿ ಆಸಕ್ತವಾಗಿರುವ ದೃಷ್ಟಿಯುಳ್ಳ

ಬ್ರಹ್ಮನನ್ನು ನೋಡಿ ತಿಲೋತ್ತಮೆಯು ಆಕಾಶಪ್ರದೇಶಕ್ಕೇರಿದಳು. ಸ್ತ್ರೀಯರು ತಮ್ಮಲ್ಲಿ ಆಸಕ್ತವಾದ ಮನಸ್ಸುಳ್ಳವರಿಗೆ ಯಾವ ವಂಚನೆಯನ್ನು ತಾನೆ ಮಾಡುವುದಿಲ್ಲ ? ‖ ೪೪ ‖ ಈ ಬ್ರಹ್ಮನು ಐದುನೂರು ವರ್ಷಗಳ ತಪಸ್ಸಿನ ತೇಜಸ್ಸಿನಿಂದ ಆ ತಿಲೋತ್ತಮೆಯನ್ನು ನೋಡಬೇಕೆಂಬ ಇಚ್ಛೆಯುಳ್ಳವನಾಗಿ ಆಕಾಶದಲ್ಲಿ ಕತ್ತೆಯ ತಲೆಯನ್ನು ಮಾಡಿಕೊಂಡನು ‖ ೪೫ ‖ ರಾಗಾಸಕ್ತನಾದ ಆ ಬ್ರಹ್ಮನ ತಪಸ್ಸು ಸಫಲವಾಗಲಿಲ್ಲ. ಅವನಿಗೆ ನರ್ತನದ ನೋಟವೂ ದೊರೆಯಲಿಲ್ಲ. ಉಭಯಭ್ರಷ್ಟತ್ವವುಂಟಾಯಿತು ‖ ೪೬ ‖ ಆ ಸುರಸುಂದರಿಯು ಬ್ರಹ್ಮನನ್ನು ತಪೋಭ್ರಷ್ಟನನ್ನಾಗಿ ಮಾಡಿ ಹೊರಟು ಹೋದಳು. ಸ್ತ್ರೀಯರು ರಾಗವುಳ್ಳವರನ್ನೆಲ್ಲ ನಿಜವಾಗಿಯೂ ವಂಚಿಸುತ್ತಾರೆ ‖ ೪೭ ‖ ಈ ತಿಲೋತ್ತಮೆಯನ್ನು ಕಾಣದೆ ಬ್ರಹ್ಮನು ಬುದ್ಧಿಶೂನ್ಯನಾಗಿ ಆಶ್ಚರ್ಯವನ್ನು ಹೊಂದಿ ತನ್ನ ದರ್ಶನಕ್ಕೋಸ್ಕರ ಬಂದ ದೇವತೆಗಳ ಮೇಲೆ ಕೋಪಗೊಂಡನು ‖ ೪೮ ‖ ಅವನು ಕತ್ತೆಯ ಮುಖದಿಂದ ದೇವತೆಗಳನ್ನು ಭಕ್ಷಿಸುವುದಕ್ಕಾರಂಭಿಸಿದನು. ವಿಸ್ಮಯಾನ್ವಿತರಾದವರೆಲ್ಲರೂ ಸ್ವಭಾವದಿಂದಲೇ ಬೇರೆಯವರ ಮೇಲೆ ಕೋಪಗೊಳ್ಳುತ್ತಾರೆ ‖ ೪೯ ‖ ಆಗ ದೇವತೆಗಳು ಈಶ್ವರನ ಬಳಿಗೆ ಹೋಗಿ ಅವನಿಗೆ ಈ ಬ್ರಹ್ಮನ ಚೇಷ್ಟೆಯನ್ನು ತಿಳಿಸಿದರು. ತಮ್ಮ ದುಃಖನಿವಾರಣೆಗಾಗಿ ಎಲ್ಲರೂ ಪ್ರಯತ್ನಿಸುತ್ತಾರೆ ‖ ೫೦ ‖ ಈಶ್ವರನು ಬಂದು ಬ್ರಹ್ಮನ ಐದನೆಯ ತಲೆಯನ್ನು ಕತ್ತರಿಸಿದನು. ಬೇರೆಯವರಿಗೆ ಅಪಕಾರವನ್ನು ಮಾಡುವವನ ತಲೆಯು ಕತ್ತರಿಸಲ್ಪಡುವುದೆಂಬುದರಲ್ಲಿ ಸಂಶಯವೇನಿದೆ ? ‖ ೫೧ ‖ ಈ ಬ್ರಹ್ಮನು ಬ್ರಹ್ಮಹತ್ಯಾಸಕ್ತನಾದ ಶಿವನನ್ನು ಕೋಪದಿಂದ 'ನಿನ್ನ ಕೈಯಿಂದ ನನ್ನ ಈ ತಲೆಯು ಬೀಳದಿರಲಿ' ಎಂದು ಶಪಿಸಿದನು ‖ ೫೨ ‖ ಆಗ ಶಿವನು 'ಸಾಧುವೆ ! ನಾನು ಬ್ರಹ್ಮಹತ್ಯಾದೋಷವನ್ನು ಮಾಡಿದೆನು. ಅನುಗ್ರಹಿಸು—ಕ್ಷಮಿಸು' ಎಂದು ಹೇಳಿದನು. ಬ್ರಹ್ಮನು ಆ ಪಾರ್ವತೀಪತಿಯನ್ನು ಕುರಿತು 'ಶಿವನೆ ! ವಿಷ್ಣುವು

ರಕ್ತದಿಂದ ನನ್ನ ಈ ತಲೆಯನ್ನು ಸೇಚನೆ ಮಾಡಿದಾಗ ಇದು ನಿನ್ನ ಕೈಯಿಂದ ಬೀಳುವುದು ' ಎಂದು ಹೇಳಿದನು || ೫೩-೫೪ || ಶಿವನು ಬ್ರಹ್ಮನ ಮಾತನ್ನು ಒಪ್ಪಿಕೊಂಡು ಕಪಾಲವ್ರತವನ್ನು ಗ್ರಹಣಮಾಡಿದನು. ಸರ್ವವ್ಯಾಪಿಯಾದ ಪ್ರಪಂಚವನ್ನು ದೇವತೆಗಳೂ ಬಿಡುವುದಕ್ಕೆ ಕಷ್ಟವಾಗುವುದು || ೫೫ || ಶಿವನು ಬ್ರಹ್ಮಹತ್ಯಾದೋಷವನ್ನು ನಿವಾರಣೆಮಾಡುವುದಕ್ಕೋಸ್ಕರ ವಿಷ್ಣುವಿನ ಬಳಿಗೆ ಹೋದನು. ಜನವು ತನ್ನನ್ನು ಪವಿತ್ರನನ್ನಾಗಿ ಮಾಡಿಕೊಳ್ಳುವುದಕ್ಕೋಸ್ಕರ ಯಾವನನ್ನು ತಾನೆ ಆಶ್ರಯಿಸುವುದಿಲ್ಲ ? || ೫೬ || ಇತ್ತ ಬ್ರಹ್ಮನು ಮೃಗಸಮೂಹದಿಂದ ಪರಿಪೂರ್ಣವೂ ದಟ್ಟವೂ ಆದ ಅರಣ್ಯವನ್ನು ಹೊಕ್ಕನು. ತೀವ್ರವಾದ ಕಾಮಾಗ್ನಿಯಿಂದ ಸಂತಪ್ತನಾದ ಜ್ಞಾನಶೂನ್ಯನು ಎಲ್ಲಿಗೆ ತಾನೆ ಹೋಗುವುದಿಲ್ಲ ? || ೫೭ || ಆ ಅರಣ್ಯದಲ್ಲಿ ಋತುಮತಿಯಾಗಿದ್ದ ಒಂದು ಹೆಣ್ಣುಕರಡಿಯನ್ನು ನೋಡಿ ಅದನ್ನು ಭೋಗಿಸಿದನು. ಬ್ರಹ್ಮಚರ್ಯದಿಂದ ಸಂತಪ್ತರಾದವರಿಗೆ ಹೆಣ್ಣುಕತ್ತೆಯೂ ಅಪ್ಸರಸ್ತ್ರೀಯಂತೆ ತೋರುವುದು || ೫೮ || ಆ ಕರಡಿಯು ಶೀಘ್ರವಾಗಿ ಗರ್ಭಧಾರಣವನ್ನು ಮಾಡಿ ಯೋಗ್ಯಕಾಲದಲ್ಲಿ ಲೋಕತ್ರಯಪ್ರಸಿದ್ಧನಾದ ಜಾಂಬವನೆಂಬ ಮಗನನ್ನು ಪಡೆಯಿತು || ೫೯ || ಕಾಮಪೀಡಿತವಾದ ಮನಸ್ಸುಳ್ಳ ಯಾವ ಬ್ರಹ್ಮನು ತಿರ್ಯಕ್‌ಸ್ತ್ರೀಯನ್ನು ಕೂಡ ಸೇವಿಸುತ್ತಾನೋ ಅಂತಹ ಮೂಢಬುದ್ಧಿಯುಳ್ಳ ಬ್ರಹ್ಮನು ಈ ಸುಂದರಕನ್ಯೆಯನ್ನು ಹೇಗೆ ಬಿಡುವನು ? || ೬೦ || ಗೌತಮನ ಪತ್ನಿಯಾದ ಅಹಲ್ಯೆಯನ್ನು ನೋಡಿ ಆಕೆಯು ಕಾಮಲತೆಯೆಂದು ಕೇಳಿ ಪರಸ್ತ್ರೀಲಂಪಟನಾದ ದೇವೇಂದ್ರನು ಚಂಚಲನಾದನು || ೬೧ || ಗೌತಮನು ಕೋಪದಿಂದ ದೇವೇಂದ್ರನಿಗೆ ಶಾಪವನ್ನು ಕೊಟ್ಟನು. ಆದರಿಂದ ಅವನು ಮೈಯಲ್ಲೆಲ್ಲ ಸಾವಿರ ಯೋನಿಗಳುಳ್ಳವನಾದನು. ಮನ್ಮಥನ ಆಜ್ಞಾನುಸಾರವಾಗಿರುವ ಯಾವನು ತಾನೇ ದುಃಖವನ್ನು ಹೊಂದುವುದಿಲ್ಲ ? || ೬೨ || ದೇವತೆಗಳು ಗೌತಮನನ್ನು ಕುರಿತು ' ಎಲೈ ಮುನಿಯೇ ? ಈ ಇಂದ್ರನನ್ನು ಅನುಗ್ರಹಿಸು ' ಎಂದು

ಹೇಳಿದರು. ಆಗ ಮತ್ತೆ ಅನುಗ್ರಹವನ್ನು ಮಾಡಿದ ಗೌತಮನು ಇಂದ್ರನನ್ನು ಸಾವಿರಕಣ್ಣುಗಳುಳ್ಳವನನ್ನಾಗಿ ಮಾಡಿದನು ‖ ೬೩ ‖ ಈ ರೀತಿಯಾಗಿ ಕಾಮನಿಂದಲೂ ಮೋಹದಿಂದಲೂ ಮೃತ್ಯುವಿನಿಂದಲೂ ಪೀಡಿತನಾಗದಿರುವವನೂ ದೋಷರಹಿತನೂ ಆದ ದೇವರು ಲೋಕದಲ್ಲಿ ಯಾವನೂ ಕಾಣುವುದಿಲ್ಲ ‖ ೬೪ ‖ ಸತ್ಯಶೌಚಪರಾಯಣನಾದ ಯಮದೇವರೊಬ್ಬನೇ ವಿರುದ್ಧಪಕ್ಷವನ್ನು ಮರ್ದಿಸುವವನೂ ಧೀರನೂ ಸಮವರ್ತಿಯೂ ಆಗಿರುತ್ತಾನೆ ‖ ೬೫ ‖ ಇವನ ಬಳಿಯಲ್ಲಿ ಕನ್ಯೆಯನ್ನು ಸ್ಥಾಪಿಸಿ ನಾನು ಯಾತ್ರೆಯನ್ನು ಮಾಡುವೆನು " ಈ ರೀತಿಯಾಗಿ ಯೋಚಿಸಿ ಆ ಮಂಡಪಕೌಶಿಕನು ತನ್ನ ಮಗಳನ್ನು ಯಮನ ಬಳಿಯಲ್ಲಿರಿಸಿದನು ‖ ೬೬ ‖ ಆ ಮೇಲೆ ಮಂಡಪಕೌಶಿಕನು ಪತ್ನೀಸಹಿತನಾಗಿ ತೀರ್ಥಯಾತ್ರೆಗೋಸ್ಕರ ಹೊರಟುಹೋದನು. ಪ್ರಾಜ್ಞನಾದವನು ನಿರಾಕುಲನಾಗಿ ಧರ್ಮಕಾರ್ಯದಲ್ಲಿ ತೊಡಗುತ್ತಾನೆ ‖ ೬೭ ‖ ಮನಸಿಜನೆಂಬ ವೃಕ್ಷಕ್ಕೆ ಭೂಮಿಯಂತಿರುವ ಆ ಹುಡುಗಿಯನ್ನು ನೋಡಿ ಸಮವರ್ತಿ–ಯಮನು ಆಕೆಯನ್ನು ತನ್ನ ಪ್ರಿಯಳನ್ನಾಗಿ ಮಾಡಿಕೊಂಡನು. ಸ್ತ್ರೀಯರಲ್ಲಿ ನಿಸ್ಪೃಹನಾಗಿರುವವನಿರುವುದಿಲ್ಲ ‖ ೬೮ ‖ ಯಮನು ಆಕೆಯನ್ನು ಬೇರೆಯವರು ಅಪಹರಿಸುವರೆಂಬ ಭಯದಿಂದ ತನ್ನ ಹೊಟ್ಟೆಯೊಳಗಿರಿಸಿಕೊಂಡನು. ದುರ್ಬುದ್ಧಿಯುಳ್ಳ ಕಾಮುಕನು ಕಾಮುಕಳಾದ ಪತ್ನಿಯನ್ನು ಎಲ್ಲಿ ತಾನೆ ಸ್ಥಾಪಿಸುವುದಿಲ್ಲ ? ‖ ೬೯ ‖ ಈ ಯಮನು ಆಕೆಯನ್ನು ತನ್ನ ಹೊಟ್ಟೆಯಿಂದ ಈಚೆಗೆ ತೆಗೆತೆಗೆದು ಭೋಗಿಸಿ ಬೇರೆಯವರು ಅಪಹರಿಸಿಬಿಡುವರೆಂಬ ಸಂದೇಹವುಳ್ಳವನಾಗಿ ಆಕೆಯನ್ನು ಮತ್ತೆ ನುಂಗಿ ಹೊಟ್ಟೆಯೊಳಗಿರಿಸಿಕೊಳ್ಳುತ್ತಾನೆ ‖ ೭೦ ‖ ಈ ಪ್ರಕಾರವಾಗಿ ಆಕೆಯೊಡನೆ ಸುರತಾಮೃತವನ್ನು ಅನುಭವಿಸುವವನು ತಾನು ಇಂದ್ರನಿಗಿಂತ ಹೆಚ್ಚಿನವನೆಂದು ತಿಳಿಯುವವನೂ ಆದ ಆ ಯಮನಿಗೆ ಸುಖದಿಂದ ಕಾಲವು ಕಳೆಯುತ್ತಿದ್ದಿತು ‖ ೭೧ ‖ ಶುಭ್ರವಾದ ಪುಸ್ತಕವೂ ಸಾಧ್ವಿಯಾದ ಸ್ತ್ರೀಯೂ ಬೇರೆಯವರ ಕೈಗೆ ಸೇರಿದರೆ ತನ್ನ ಕೈಯಿಂದ

ಹೋಯಿತೆಂದು ತಿಳಿಯಬೇಕು. ಒಂದು ವೇಳೆ ಹಿಂದಿರುಗಿ ಬಂದರೂ ಪುಸ್ತಕವು ಘರ್ಷಿಸಲ್ಪಟ್ಟು-ಕೊಳೆಯಾಗಿಯೂ ಸ್ತ್ರೀಯು ಸ್ಪರ್ಶಿಸಲ್ಪಟ್ಟವ ಳಾಗಿಯೂ ದೊರೆಯುವರು ॥ ೭೨ ॥ ಹೀಗಿರುವಾಗ ಒಂದಾನೊಂದು ಕಾಲ ದಲ್ಲಿ ವಾಯುವು ಅಗ್ನಿಯನ್ನು ಕುರಿತು 'ಅಯ್ಯಾ ! ದೇವರ್ಕಳ ಮಧ್ಯದಲ್ಲಿ ಯಮನೊಬ್ಬನು ಯಾವಾಗಲೂ ಸೌಖ್ಯದಿಂದಿದ್ದಾನೆ ॥ ೭೩ ॥ ಅವನಿಗೆ ಸುರತವೆಂಬ ಅಮೃತದ ನದಿಯಾಗಿರುವ ಒಬ್ಬಳು ಸ್ತ್ರೀಯು ದೊರೆತಿದ್ದಾಳೆ. ಆಕೆಯನ್ನು ಗಟ್ಟಿಯಾಗಿ ಅಪ್ಪಿಕೊಂಡು ಅವನು ಸುಖವೆಂಬ ಸಮುದ್ರದ ಮಧ್ಯದಲ್ಲಿ ಮಲಗಿರುತ್ತಾನೆ ॥ ೭೪ ॥ ಗಂಗೆಯು ಕೊಡುವ ಜಲದಿಂದ ಸಮುದ್ರವು ಯಾವಾಗಲೂ ತೃಪ್ತಿಯನ್ನು ಹೊಂದದಿರುವಂತೆ, ಆ ಸ್ತ್ರೀಯು ಕೊಡುತ್ತಿರುವ ಪಾವನವಾದ ಸುಖದಿಂದ ಈ ಯಮನು ಯಾವಾಗಲೂ ತೃಪ್ತಿಯನ್ನು ಹೊಂದುವುದಿಲ್ಲ' ಎಂದು ಹೇಳಿದನು ॥ ೭೫ ॥ ಆಗ ಅಗ್ನಿಯು ನನಗೆ ಆ ಮೃಗಲೋಚನೆಯೊಡನೆ ಹೇಗೆ ಸಂಬಂಧವಾದೀತು ?' ಎಂದು ವಾಯುವನ್ನು ಪ್ರಶ್ನೆಮಾಡಿದನು. ಅದಕ್ಕೆ ವಾಯುವು ಅಗ್ನಿಯನ್ನು ಕುರಿತು 'ಈ ಯಮನು ಆ ಸುಂದರಿಯನ್ನು ರಕ್ಷಿಸುತ್ತಿದ್ದಾನೆ. ಕಾಣುವುದಕ್ಕೂ ಆಕೆಯು ಸಿಕ್ಕುವುದಿಲ್ಲ ಅಗ್ನಿಯೆ ! ಆಕೆಯ ಸಂಗಮವಾದರೋ ಹೇಗಾ ಗುವುದು ? ॥ ೭೬-೭೭ ॥ ಆಕೆಯು ತನ್ನ ಶೋಭೆಯಿಂದ ಎಲ್ಲಾ ದೇವಸ್ತ್ರೀ ಯರನ್ನು ಜಯಿಸಿರುತ್ತಾಳೆ. ಯಮನು ಆಕೆಯನ್ನು ಭೋಗಿಸಿ ತನ್ನ ಹೊಟ್ಟೆಯೊಳಗಿಟ್ಟುಕೊಳ್ಳುತ್ತಾನೆ ॥ ೭೮ ॥ ಯಮನು ತನ್ನ ನಿತ್ಯಕ್ರಿಯಾ ನುಷ್ಠಾನವನ್ನು ಮಾಡುವ ಕಾಲದಲ್ಲಿ ಮಾತ್ರ ಒಂದು ಜಾವದವರೆಗೆ ಆಕೆಯು ಹೊರಗೆ ಒಂಟಿಯಾಗಿರುತ್ತಾಳೆ. ಆಗ ಕಣ್ಣುಗಳಿಗೆ ಕಾಣಿಸಿಕೊ ಳ್ಳುತ್ತಾಳೆ' ಎಂದನು ॥ ೭೯ ॥ ಆಗ ಅಗ್ನಿಯು 'ವಾಯುದೇವನೆ ! ಒಂದು ಜಾವದಲ್ಲಿ ಮೂರು ಲೋಕದಲ್ಲಿರುವ ಸ್ತ್ರೀಯನ್ನೂ ಪರಿಗ್ರಹಿಸುವೆನು, ನಿಶ್ಚಯ. ಹೀಗಿರುವಾಗ ಒಬ್ಬ ಸ್ತ್ರೀಯ ವಿಷಯದಲ್ಲಿ ಮಾತೇನು ? ॥ ೮೦ ॥

ಏಕಾಕಿನಿಯೂ ಯೌವನದಿಂದ ಭೂಷಿತವಾದ ಶರೀರವುಳ್ಳವಳೂ ಕಾಮಾ ಕ್ರಾಂತವಾದ ದೇಹವುಳ್ಳವಳೂ ಆದ ಸ್ತ್ರೀಯನ್ನು ಯುವಕರು ಶೀಘ್ರವಾಗಿ ವಶಮಾಡಿಕೊಳ್ಳುತ್ತಾರೆ. ಈ ವಿಷಯದಲ್ಲಿ ಆಶ್ಚರ್ಯವೇನೂ ಇಲ್ಲ' ಎಂದನು ‖ ೮೧ ‖ ತೀಕ್ಷ್ಣವಾದ ಕಾಮಬಾಣಗಳಿಂದ ಭೇದಿಸಲ್ಪಟ್ಟ ದೇಹ ವುಳ್ಳ ಅಗ್ನಿಯು ವಾಯುವನ್ನು ಕುರಿತು ಈ ಪ್ರಕಾರವಾಗಿ ಹೇಳಿ ಯಮನು ಸುಂದರಿಯಾದ ಆ ಛಾಯೆಯನ್ನು ಹೊರಗಿರಿಸಿ ನಿತ್ಯಕ್ರಿಯಾನುಷ್ಠಾನ ವನ್ನು ಮಾಡುತ್ತಿದ್ದ ಪ್ರದೇಶಕ್ಕೆ ಹೋದನು ‖ ೮೨ ‖ ಯಮನು ಬಂದು ಪತ್ನಿಯನ್ನು ಹೊರಗಿರಿಸಿ ಪಾಪವನ್ನು ನಿವಾರಣಮಾಡಿಕೊಳ್ಳಬೇಕೆಂಬ ಇಚ್ಛೆಯುಳ್ಳವನಾಗಿ ಗಂಗಾನದಿಗೆ ಪ್ರವೇಶಮಾಡಿದನು. ಆಗ ಅಗ್ನಿಯು ಸುಂದರವಾದ ರೂಪವನ್ನು ಮಾಡಿಕೊಂಡು ಆಕೆಯ ಸಂಗವನ್ನು ಮಾಡಿ ದನು ‖ ೮೩ ‖ ಹೆಣ್ಣು ಆಡು ಹಸುರಾದ ಮರದೆಲೆಗಳ ರಾಶಿಯನ್ನು ನೋಡಿ ತಿನ್ನುವುದಕ್ಕಾರಂಭಿಸುವಂತೆ, ನಿರಂಕುಶಳಾದ ಹೆಂಗುಸು ತನ್ನ ಮನಸ್ಸಿಗೆ ಇಷ್ಟನಾದ ಪುರುಷನನ್ನು ಪರಿಗ್ರಹಿಸುತ್ತಾಳೆ. ಅಂತಹ ಹೆಂಗುಸರನ್ನು ನಿರ್ಬಂಧದಲ್ಲಿರಿಸಿದರೆ ಕೋಪಗೊಳ್ಳುತ್ತಾರೆ ‖ ೮೪ ‖ ಛಾಯೆಯು ಅಗ್ನಿ ಯೊಡನೆ ಸಂಗವನ್ನು ಮಾಡಿ ಬಳಿಕ ಅವನನ್ನು ಕುರಿತು 'ಸ್ವಾಮಿಯೇ! ನೀನು ಶೀಘ್ರವಾಗಿ ಹೊರಟು ಹೋಗು. ವಿರುದ್ಧಾಚರಣೆಯುಳ್ಳ ನನ್ನ ಗಂಡನಾದ ಯಮನು ಬರುವ ಕಾಲವಿದು. ನಾನು ನಿನ್ನೊಡನಿರುವುದನ್ನು ಕಂಡರೆ ಅವನು ನನ್ನ ಮೂಗನ್ನು ಕೊಯ್ವನು. ಕೋಪಿಷ್ಠನಾಗಿ ನಿನ್ನನ್ನೂ ಕೊಲ್ಲುವನು. ಜಾರನನ್ನು ನೋಡಿ ಯಾವನೊಬ್ಬನೂ ಸಹಿಸುವುದಿಲ್ಲ' ಎಂದಳು ‖ ೮೫–೮೬ ‖ ಆಗ ಅಗ್ನಿಯು ದರ್ಪವಾದ ಕುಚಗಳಿಂದ ಪೀಡಿತ ವಾದ ದೇಹವುಳ್ಳ ಆ ಛಾಯೆಯನ್ನು ಆಲಿಂಗಿಸಿ 'ಎಲೈ ಪ್ರಿಯಳೆ! ನಿನ್ನನ್ನು ಬಿಟ್ಟು ಹೋದರೆ ದುಷ್ಟಮನವುಳ್ಳ ವಿಯೋಗವೆಂಬ ಈ ಆನೆಯು ನನ್ನನ್ನು ಕೊಲ್ಲುವುದು. ಪ್ರಿಯಳೆ! ದುಷ್ಟನಾದ ಯಮನಿಂದ ಹರಿತವಾದ ಬಾಣ

ಗಳಿಂದ ನಿನ್ನ ಮುಂದೆ ನಾನು ಕೊಲ್ಲಲ್ಪಟ್ಟರೆ ಅದೊಳ್ಳೆಯದು. ಆದರೆ ನೀನಿಲ್ಲದೆ ಯಾವಾಗಲೂ ಉರಿಯುತ್ತಿರುವ ದುರಂತವಾದ ಕಾಮಾಗ್ನಿಯಿಂದ ದಹಿಸಲ್ಪಡುವುದೊಳ್ಳೆಯದಲ್ಲ ' ಎಂದನು ॥ ೮೭–೮೮ ॥ ಈ ಪ್ರಕಾರವಾಗಿ ಹೇಳುತ್ತಿರುವ ಅಗ್ನಿಯನ್ನು ಛಾಯೆಯು ಶೀಘ್ರವಾಗಿ ಒಡಿದು ನುಂಗಿ ಹೊಟ್ಟೆಯೊಳಗಿರಿಸಿಕೊಂಡಳು. ಸ್ತ್ರೀಯ ಹೃದಯದಲ್ಲಿ ಇಷ್ಟಪುರುಷನ ಚಿತ್ರವು ಇದ್ದೇ ಇರುವುದು ॥ ೮೯ ॥ ಆಕೆಯ ಹೊಟ್ಟೆಯೊಳಗಿರುವ ಅಗ್ನಿಯನ್ನು ತಿಳಿಯದವನಾದ ಯಮನು ನಿತ್ಯಕ್ರಿಯೆಯನ್ನು ಮಾಡಿಕೊಂಡು ಬಂದು ಪತ್ನಿಯನ್ನು ತನ್ನ ಹೊಟ್ಟೆಯೊಳಗೆ ಮಾಡಿದನು. ಸ್ತ್ರೀಯರ ವ್ಯಾಪಾರವು ವಿದ್ವಾಂಸರಿಗೂ ಅಗೋಚರವಾಗಿರುತ್ತದೆ ॥ ೯೦ ॥ ಅಗ್ನಿದೇವನಿಲ್ಲದೆ ಲೋಕದಲ್ಲೆಲ್ಲ ಭೋಜನಪಾಕ, ಹೋಮ, ದೀಪವನ್ನುರಿಸುವಿಕೆ, ಯಾಗ ಮೊದಲಾದ ಕ್ರಿಯೆಗಳಿಗೆ ಹಾನಿಯು ಸಂಭವಿಸಿರುವುದನ್ನು ನೋಡಿ ಮನುಷ್ಯರೂ ದೇವರ್ಕಳೂ ವ್ಯಾಕುಲರಾದರು ॥ ೯೧ ॥ ಬಳಿಕ ದೇವೇಂದ್ರನು ವಾಯುವನ್ನು ಕುರಿತು ' ಅಯ್ಯಾ ! ನೀನು ಅಗ್ನಿದೇವನನ್ನು ಹುಡುಕು. ದೇವರ್ಕಳ ಮಧ್ಯದಲ್ಲಿ ನೀನು ಎಲ್ಲಾ ಕಡೆಗಳಲ್ಲಿ ಸಂಚರಿಸುವವನು. ನಿನ್ನ ಮಿತ್ರನಾದ ಅಗ್ನಿಯ ವಾಸಸ್ಥಳವನ್ನು ನೀನು ಬಲ್ಲೆ ' ಎಂದನು ॥ ೯೨ ॥ ಬಳಿಕ ವಾಯುವು ಎಲ್ಲಾ ಕಡೆಗಳಲ್ಲಿ ಅಗ್ನಿಯನ್ನು ಹುಡುಕಿ ಬಂದು ಇಂದ್ರನನ್ನು ಕುರಿತು ' ದೇವಾ ! ಮೂರು ಲೋಕದಲ್ಲಿ ಸುತ್ತಲೂ ಹುಡುಕಿದೆನು. ನಾನು ಅಗ್ನಿಯನ್ನು ನೋಡಲಿಲ್ಲ. ಸ್ವಾಮಿಯೆ ! ಒಂದು ಕಡೆಯಲ್ಲಿ ಇವನನ್ನು ಹುಡುಕಿ ನೋಡಲಿಲ್ಲ. ಅಲ್ಲಿಯೂ ಹುಡುಕಿ ನೋಡುತ್ತೇನೆ ' ಎಂದು ಹೇಳಿ ವಾಯುವು ಎಲ್ಲಾ ದೇವರ್ಕಳನ್ನು ಊಟಕ್ಕೆ ಕರೆದು ಅವರೆಲ್ಲರಿಗೆ ಒಂದೊಂದು ಪೀಠವನ್ನು ಕೊಟ್ಟು ಯಮನಿಗೆ ಮೂರು ಪೀಠಗಳನ್ನು ಕೊಟ್ಟನು ॥ ೯೪ ॥ ದೇವತೆಗಳೆಲ್ಲರೂ ಶೀಘ್ರವಾಗಿ ತಂತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡ ಬಳಿಕ ಅಪರಿಮಿತವಾದ ಗತಿಯುಳ್ಳ

ವಾಯುವು ಬೇರೆಲ್ಲರಿಗೂ ಒಂದೊಂದು ಭಾಗವನ್ನು ಕೊಟ್ಟು ಯಮನಿಗೆ ಮೂರು ಭಾಗವನ್ನು ಕೊಟ್ಟನು. ಲೋಕದಲ್ಲಿ ಪ್ರಪಂಚವ್ಯವಹಾರವನ್ನು ಮಾಡಿದ ಹೊರತು ಕಾರ್ಯವು ಸಿದ್ಧಿಸುವುದಿಲ್ಲ ॥ ೯೫ ॥

ಇಂತು ಅಮಿತಗತ್ಯಾಚಾರ್ಯವಿರಚಿತ ಧರ್ಮಪರೀಕ್ಷೈಕಾದಶಪರಿಚ್ಛೇದದ ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

—o—

ಅನಂತರದಲ್ಲಿ ಯಮನು ತನಗೆ ಕೊಟ್ಟ ಮೂರು ಭಾಗವನ್ನು ನೋಡಿ ವಾಯುವನ್ನು ಕುರಿತು 'ವಾಯುವೇ! ನೀನು ನನಗೆ ಮೂರು ಭಾಗವನ್ನೇಕೆ ಕೊಟ್ಟೆ? ॥ ೧ ॥ ನನ್ನೊಳಗಿರುವ ಪತ್ನಿಯು ಎರಡನೆಯವಳಾದರೆ ಎರಡು ಭಾಗವನ್ನು ಕೊಡಬೇಕಾಗಿದ್ದಿತು. ಮೂರನೆಯ ಭಾಗವನ್ನು ಕೊಡುವುದಕ್ಕೇನು ಕಾರಣ? ಹೇಳು' ಎಂದನು ॥ ೨ ॥ ಬಳಿಕ ವಾಯುವು ಯಮನನ್ನು ಕುರಿತು 'ಅಯ್ಯಾ ಸಾಧುವೆ! ನಿನ್ನ ಮನಃಪ್ರಿಯಳನ್ನು ಕಕ್ಕು. ಆಗ ಮೂರು ಭಾಗಗಳಿಗೆ ಕಾರಣವನ್ನು ನೀನೇ ತಿಳಿಯುವೆ' ಎಂದನು ॥ ೩ ॥ ಆ ಮೇಲೆ ಯಮನು ಛಾಯೆಯನ್ನು ಕಕ್ಕಿದನು. ವಾಯುವು ಆಕೆಯನ್ನು ನೋಡಿ 'ಮಂಗಳಾಂಗಿಯೆ! ನೀನು ನಿನ್ನ ಪ್ರಿಯನಾದ ಅಗ್ನಿಯನ್ನು ಕಕ್ಕು' ಎಂದನು ॥ ೪ ॥ ತರುವಾಯ ಆಕೆಯು ಪ್ರಕಾಶಮಾನನಾದ ಅಗ್ನಿಯನ್ನು ಕಕ್ಕಿದಳು. ಆಗ ದೇವರ್ಕಳು ಆಶ್ಚರ್ಯಪಟ್ಟರು. ಮೊದಲು ನೋಡದಿರುವ ವಿಷಯವನ್ನು ನೋಡಿದರೆ ಯಾರು ತಾನೇ ಆಶ್ಚರ್ಯಪಡುವುದಿಲ್ಲ? ॥ ೫ ॥ ಕಾಮಾತುರಳಾದ ಯಾವ ಸ್ತ್ರೀಯು ಜ್ವಲಿಸುತ್ತಿರುವ ಅಗ್ನಿಯನ್ನು ನುಂಗಿದಳೋ ಆ ಸ್ತ್ರೀಗೆ ನಿಜವಾಗಿಯೂ ಹೊಂದುವುದಕ್ಕೂ ಮಾಡುವುದಕ್ಕೂ ಕಷ್ಟವಾದ ವಸ್ತುವಿಲ್ಲ ॥ ೬ ॥ ಅಗ್ನಿಯನ್ನು ನೋಡಿ ಕುಪಿತನಾದ ಯಮನು ದಂಡವನ್ನು ತೆಗೆದುಕೊಂಡು ಹೊಡೆಯುವುದಕ್ಕೆ

ಓಡಿದನು. ಜಾರನನ್ನು ಪ್ರತ್ಯಕ್ಷವಾಗಿ ಕಂಡರೆ ಯಾವನಿಗೆ ತಾನೆ ಕ್ಷಮೆ ಯುಂಟಾಗುವುದು ? ॥ ೭ ॥ ಕೈಯಲ್ಲಿ ದಂಡವನ್ನು ತೆಗೆದುಕೊಂಡ ಯಮ ನನ್ನು ನೋಡಿ ಅಗ್ನಿಯು ಓಡಿಹೋದನು. ನೀಚರಿಗೂ ಜಾರರಿಗೂ ಚೋರರಿಗೂ ಸ್ಥಿರತ್ವವೆಲ್ಲಿಂದುಂಟಾಗುವುದು ? ॥ ೮ ॥ ಅಗ್ನಿಯು ಓಡಿ ಹೋಗಿ ಮರಗಳ ಮತ್ತು ಕಲ್ಲುಗಳ ಗುಂಪಿನಲ್ಲಿ ಪ್ರವೇಶಿಸಿ ನಡುಗಿ ಅಡಗಿ ಕೊಂಡನು. ಜಾರರೂ ಚೋರರೂ ಎಂದೂ ಸ್ಪಷ್ಟವಾಗಿ–ಕಾಣಿಸಿಕೊಂಡಿ ರುವುದೇ ಇಲ್ಲ ॥ ೯ ॥ ಆಗ ಮರ–ಕಲ್ಲುಗಳಲ್ಲಿ ಅಡಗಿಕೊಂಡ ಈ ಅಗ್ನಿಯು ಇದುವರೆಗೂ ಪ್ರಯೋಗವನ್ನು ಮಾಡಿದ ಹೊರತು ಕಾಣಿಸಿಕೊಳ್ಳುತ್ತಿಲ್ಲ ॥೧೦॥ ವಿಪ್ರರೇ ! ನಿಮ್ಮಗಳ ಪುರಾಣವು ಇಂಥದಾಗಿದೆಯೋ ? ಇಲ್ಲವೋ ?" ಎಂದು ಮನೋವೇಗನು ವಿಪ್ರರನ್ನು ಕೇಳಿದನು. ವಿಪ್ರರು ಒಪ್ಪಿ ಕೊಂಡರು ॥ ೧೧ ॥ ಮನೋವೇಗನು ವಿಪ್ರರನ್ನು ಕುರಿತು "ವಿಪ್ರರೆ ! ದೂರದಲ್ಲಿರುವವನಾದರೂ ಎಲ್ಲರ ಶುಭಾಶುಭವನ್ನು ತಿಳಿಯುವವನೂ ಶಿಷ್ಟಪರಿಪಾಲನವನ್ನೂ ದುಷ್ಟನಿಗ್ರಹವನ್ನೂ ಪುನಃಪುನಃ ಮಾಡುವವನೂ ಆದ ಯಮನು ತನ್ನೊಳಗಿರುವ ಪತ್ನಿಯ ಹೊಟ್ಟೆಯಲ್ಲಿರುವ ಅಗ್ನಿಯನ್ನು ತಿಳಿಯಲಿಲ್ಲವಾದರೂ ಅವನ ದೇವತ್ವವು ಹೇಗೆ ಓಡಿಹೋಗುವುದಿಲ್ಲವೋ ಹಾಗೆಯೇ ಹೆಚ್ಚು ಗುಣಗಳುಳ್ಳ ನನ್ನ ಬೆಕ್ಕಿನ ಕಿವಿಯನ್ನು ಇಲಿಗಳು ಕತ್ತ ರಿಸಿದರೂ ಅದರ ಗುಣಗಳು ನಾಶವಾಗುವುದಿಲ್ಲ " ಎಂದನು ॥ ೧೨–೧೪ ॥ ಬಳಿಕ ವಿಪ್ರರು ಮನೋವೇಗನನ್ನು ಕುರಿತು "ಅಯ್ಯಾ ! ನೀನು ಚೆನ್ನಾಗಿ ಹೇಳಿದೆ. ಪ್ರಾಜ್ಞರಾದ ಸತ್ಪುರುಷರು ನ್ಯಾಯವಿಲ್ಲದ ಪಕ್ಷವನ್ನು ಸಮ ರ್ಥನಮಾಡುವುದಿಲ್ಲ ॥ ೧೫ ॥ ನಮ್ಮಗಳ ಪುರಾಣಗಳನ್ನು ವಿಚಾರಮಾಡಿ ದರೆ ಅವು, ಹಳೆಯ ಬಟ್ಟೆಗಳಂತೆ, ನೂರಾರು ಪಾಲಾಗುತ್ತವೆ. ನಾವೇನು ಮಾಡೋಣ ? " ಎಂದರು ॥ ೧೬ ॥ ಅವರ ಈ ಮಾತನ್ನು ಕೇಳಿ ಖೇಚರ ಪುತ್ರನು "ಎಲೈ ವಿಪ್ರರೆ ! ಭವವೆಂಬ ವೃಕ್ಷಕ್ಕೆ ಅಗ್ನಿಯಂತಿರುವ ದೇವರ ಸ್ವರೂಪವನ್ನು ಹೇಳುತ್ತೇನೆ, ಕೇಳಿ ॥ ೧೭ ॥ ಲಾವಣ್ಯವೆಂಬ ಜಲಕ್ಕೆ ದಡ

ದುತಿರುವವರೂ ಕಾಮನಿಗೆ ಆವಾಸಸ್ಥಾನರೂ ಕಡೆಗಣ್ಣಿನ ನೋಟಗಳೆಂಬ ಬಾಣಗಳಿಂದ ಎಲ್ಲಾ ಜನರನ್ನು ಭೇದಿಸುವವರೂ ಆದ ಮೂರು ಲೋಕದಲ್ಲಿರುವ ಉತ್ತಮಸ್ತ್ರೀಯರು ಯಾವನ ಮನಸ್ಸನ್ನು ಚಂಚಲವನ್ನಾಗಿ ಮಾಡಲಾರದೆ ಹೋದರೋ ಅಂತಹ ದೇವರನ್ನು ಮನೋವಾಕ್ಕಾಯಗಳಿಂದ ಸಮಸ್ಕರಿಸಿರಿ ॥ ೧೮–೧೯ ॥ ಶಂಕರನು ಮುಕ್ತಿಗೆ ಕಾರಣವೂ ಪವಿತ್ರವೂ ಆದ ಯೋಗವನ್ನು ಬಿಟ್ಟು ಪಾರ್ವತಿಯನ್ನು ತನ್ನ ಅರ್ಧಶರೀರದಲ್ಲಿರಿಸಿ ಕೊಳ್ಳುವಂತೆ ಯಾವನು ಮಾಡಿದನೋ ॥ ೨೦ ॥ ಬೇರೆಯವರಿಗೆ ಅಪ್ಪಣೆಯನ್ನು ಮಾಡುವವನಾದ ವಿಷ್ಣುವು ಸುಖಕಾಂಕ್ಷಿಯನಾಗಿ ಗೋಪಿಯರ ಉಗುರುಗಳಿಂದ ಗಾಯವಾದ ತನ್ನ ಎದೆಯಲ್ಲಿ ಲಕ್ಷ್ಮಿಯನ್ನು ಧರಿಸಿಕೊಳ್ಳುವಂತೆ ಯಾವನು ಮಾಡಿದನೋ ॥ ೨೧ ॥ ಬ್ರಹ್ಮನು ದೇವಸ್ತ್ರೀಯ ನೃತ್ಯವನ್ನು ನೋಡಿ ಯಾವನ ಬಾಣಗಳಿಂದ ಹೊಡೆಯಲ್ಪಟ್ಟು ಹುಲ್ಲಿನಂತೆ ತಪಸ್ಸನ್ನು ಬಿಟ್ಟು ನಾಲ್ಕು ಮುಖಗಳುಳ್ಳವನಾದನೋ ॥ ೨೨ ॥ ಯಾವನ ದುರ್ನಿವಾರ್ಯವೂ ಹರಿತವೂ ಆದ ಬಾಣಗಳಿಂದ ಹೊಡೆಯಲ್ಪಟ್ಟ ದೇವೇಂದ್ರನು ದುಷ್ಕೃತ್ಯವನ್ನು ಮಾಡಿ ಸಹಸ್ರಯೋನಿತ್ವವನ್ನು ಹೊಂದಿದನೋ ॥ ೨೩ ॥ ಎಲ್ಲಾ ದೋಷಗಳನ್ನು ನಾಶಮಾಡುವವನೂ ಎಲ್ಲರಿಗಿಂತಲೂ ಬಲಿಷ್ಠನೂ ಆದ ಯಮನು ಹೆದರಿ ತನ್ನ ಪ್ರಿಯೆಯಾದ ಛಾಯೆಯನ್ನು ಹೊಟ್ಟೆಯೊಳಗಿರಿಸಿಕೊಳ್ಳುವಂತೆ ಯಾವನು ಮಾಡಿದನೋ ॥ ೨೪ ॥ ಅಗ್ನಿಯು ಮೂರು ಲೋಕಗಳಲ್ಲಿರುವ ದೇವರ್ಕಳಿಗೆ ಮುಖರೂಪನಾಗಿದ್ದರೂ ಯಾವನಿಂದ ಕಲ್ಲುಮರಗಳ ಗುಂಪುಗಳಲ್ಲಿ ಪ್ರವೇಶಿಸಲ್ಪಟ್ಟನೋ ॥ ೨೫ ॥ ಅಂತಹ ದುರ್ಜಯನಾದ ಮನ್ಮಥನನ್ನು ಜಯಿಸಿರುವ ಪರಮೇಷ್ಠಿ-ದೇವರ ಅನುಗ್ರಹದಿಂದ ಆತ್ಮಸಿದ್ಧಿಯುಂಟಾಗುವುದು " ಎಂದು ಹೇಳಿದನು ॥ ೨೬ ॥ ಈ ರೀತಿಯಾಗಿ ಮನೋವೇಗನು ವಿಪ್ರರ ಮುಂದೆ ಪರಮಾತ್ಮವಿಚಾರವನ್ನು ಮಾಡಿ ಉಪವನಕ್ಕೆ ಹೋಗಿ ಮಿತ್ರನಾದ ಪವನವೇಗನನ್ನು ಕುರಿತು " ಮಿತ್ರನೆ ! ನೀನು ಇತರ

ರಿಗೆ ಸಮ್ಮತನಾದ ವಿಶಿಷ್ಟದೇವರ ವಿಷಯವನ್ನು ಕೇಳಿದೆಯಾ ? ವಿಚಾರ ಚತುರರಾಗಿರುವವರು ವಿಚಾರವನ್ನು ಸಹಿಸದಿರುವ ದೇವರನ್ನು ತ್ಯಜಿಸ ಬೇಕು ‖ ೨೮ ‖ ಎಲ್ಲಾ ಕಡೆಗಳಲ್ಲಿಯೂ ದೇವರ್ಕಳ ಅಣಿಮಾದ್ಯಷ್ಟಗುಣ ಗಳು ಪ್ರಸಿದ್ಧವಾಗಿವೆ ಅವುಗಳಲ್ಲಿ 'ಲಘಿಮಾ' ಎಂಬ ಗುಣವು ಶ್ರೇಷ್ಠ ವಾಗಿದೆ ‖ ೨೯ ‖ ಈಶ್ವರನ ಮದುವೆಯಲ್ಲಿ ಪುರೋಹಿತನಾದ ಬ್ರಹ್ಮನು ಪಾರ್ವತಿಯ ಸ್ಪರ್ಶದಿಂದ ಕಾಮಪೀಡಿತನಾಗಿ ಶೀಘ್ರವಾಗಿ ಕಳವಳಗೊಂ ಡನು ‖ ೩೦ ‖ ಶಿವನು ನರ್ತನವನ್ನು ಮಾಡುವ ಕಾಲದಲ್ಲಿ ತಪಸ್ವಿನಿಯ ರನ್ನು ಪೀಡಿಸಿದುದರಿಂದ ತಪಸ್ವಿಗಳು ಅವನ ಲಿಂಗವನ್ನು ಕತ್ತರಿಸಿದರು. ಅವನು ಅದರಿಂದ ದುಃಸಹವಾದ ದುಃಖವನ್ನು ಸಹಿಸಿದನು ‖ ೩೧ ‖ ಅಹ ಲ್ಯೆಯಿಂದ ದೇವೇಂದ್ರನೂ ಛಾಯೆಯಿಂದ ಯಮನೂ ಅಗ್ನಿಯೂ ಕುಂತಿ ಯಿಂದ ಸೂರ್ಯನೂ ಅಭೇದ್ಯವಾದ ಲಾಘವವನ್ನು ಹೊಂದಿದರು ‖ ೩೨ ‖ ಈ ರೀತಿಯಾಗಿ ದೋಷರಹಿತನೂ ಲೋಕಸಮ್ಮತನೂ ಕಾಮನಿಗೆ ಪರವಶ ನಾಗದಿರುವವನೂ ಆದ ದೇವರೊಬ್ಬನೂ ಇಲ್ಲ ‖ ೩೩ ‖ ಸಾಧುವೇ ! ಜಿನ ಶಾಸನವಲ್ಲಿ ಹೇಳಿರುವುದನ್ನು ಈಗ ಕೇಳು. ಕತ್ತೆಯ ತಲೆಯನ್ನು ಕತ್ತರಿ ಸಿದ ವಿಧಾನವನ್ನು ನಿನಗೆ ಹೇಳುತ್ತೇನೆ ‖ ೩೪ ‖ ಸಾತ್ಯಕಿಯೆಂಬ ಮುನಿಗೆ ಜ್ಯೇಷ್ಠೆಯೆಂಬ ತಪಸ್ವಿನಿಯ ಗರ್ಭದಲ್ಲಿ ಜನಿಸಿದ ರುದ್ರನು ಬಹು ಕಷ್ಟ ಕರವಾದ ತಪಸ್ಸನ್ನು ಮಾಡಿ ವಿದ್ಯೆಗಳಿಗೆ ಅಧಿಪತಿಯಾದನು ‖ ೩೫ ‖ ನದಿಗಳು ಸಮುದ್ರವನ್ನು ಸೇರುವಂತೆ, ಐದುನೂರು ಮಹಾವಿದ್ಯೆಗಳೂ ಏಳುನೂರು ಕ್ಷುದ್ರವಿದ್ಯೆಗಳೂ ಧೀರನಾದ ಆ ರುದ್ರನನ್ನು ಸೇರಿದುವು ‖ ೩೬ ‖ ಅವನು ಏಕಾದಶಾಂಗ, ಚತುರ್ದಶಪೂರ್ವಪರಮಾಗಮದಲ್ಲಿ ಏಕಾದಶಾಂಗ, ದಶಪೂರ್ವಪರಮಾಗಮದ ವರೆಗೆ ಅಧ್ಯಯನವನ್ನು ಮಾಡಿ ಅಲ್ಲಿ ವಿದ್ಯಾವೈಭವದಿಂದ ಮದಿಸಿ ತಪೋಭ್ರಷ್ಟನಾದನು. ಅಧಿಕಭೋಗ ವನ್ನು ಕೊಡುವ ಸ್ತ್ರೀಯರಿಂದ ಯಾವನು ತಾನೆ ಆಚರಣೆಯಿಂದ ಭ್ರಷ್ಟ ನಾಗುವುದಿಲ್ಲ ? ‖ ೩೭ ‖ ಅವನು ಎಂಟುನೂರು ವಿದ್ಯಾಧರಕನ್ಯೆಯರನ್ನು

ನೋಡಿ ಆಗಲೇ ಕಾಮಾತುರನಾಗಿ ತಪಸ್ಸನ್ನು ತ್ಯಜಿಸಿ ಆ ಕನ್ಯೆಯರ ತಂದೆ ಯನ್ನು ಕೇಳಿ ಅವರನ್ನು ಪರಿಗ್ರಹಿಸಿದನು ‖ ೩೮ ‖ ಈ ರುದ್ರನ ರತಿಕಾರ್ಯವನ್ನು ಸಹಿಸಿಕೊಳ್ಳಲಾರದ ಆ ಕನ್ಯೆಯರು ನಾಶವಾದರು. ಎಲ್ಲಾ ಕಡೆಯಲ್ಲಿಯೂ ಅನುರೂಪವಲ್ಲದ-ವ್ಯತ್ಯಸ್ತವಾದ ಕಾರ್ಯವು ನಾಶವನ್ನು ಹೊಂದುವುದು ‖ ೩೯ ‖ ಬಳಿಕ ರತಿಕಾರ್ಯದಲ್ಲಿ ಸಮರ್ಥಳಾದ ಗೌರಿ ಯನ್ನು ಕೇಳಿ ಆಕೆಯನ್ನು ಸ್ವೀಕರಿಸಿದನು. ಇಷ್ಟವಾದ ಕಾರ್ಯವನ್ನು ಮಾಡಬೇಕೆಂದಿಚ್ಛೆಯುಳ್ಳವನು ಯೋಗ್ಯವಾದ ಉಪಾಯದಲ್ಲಿ ಪ್ರಯತ್ನಿಸು ವನು ‖ ೪೦ ‖ ಒಂದಾನೊಂದು ಕಾಲದಲ್ಲಿ ಅವನು ಆ ಗೌರಿಯೊಡನೆ ರಮಿಸಿ ತ್ರಿಶೂಲವಿದ್ಯೆಯನ್ನು ಸ್ವೀಕರಿಸುವವನಾಗಿರಲು, ಪತಿವ್ರತಾಸ್ತ್ರೀಯು ಪರಪುರುಷನಿಂದ ನಾಶವನ್ನು ಹೊಂದುವಂತೆ, ಆ ತ್ರಿಶೂಲವಿದ್ಯೆಯು ನಷ್ಟ ವಾಯ್ತು ‖ ೪೧ ‖ ಹಾಗೆ ತ್ರಿಶೂಲವಿದ್ಯೆಯು ನಾಶವಾಗಲು ಅಭಿಮಾನಪರ ನಾದ ಆ ರುದ್ರನು ಬೇರೊಂದು ಬ್ರಾಹ್ಮಣೀವಿದ್ಯೆಯನ್ನು ಸಾಧಿಸುವುದಕ್ಕೆ ಉದ್ಯುಕ್ತನಾದನು ‖ ೪೨ ‖ ಆ ವಿದ್ಯಾದೇವತೆಯ ಪ್ರತಿಮೆಯನ್ನು ಮಾಡಿ ಅದರ ಮುಂದೆ ಅವನು ಜಪವನ್ನು ಮಾಡುವಾಗ ಅದು ವಿಕ್ರಿಯೆಯನ್ನು ಮಾಡಲಾರಂಭಿಸಿತು ‖ ೪೩ ‖ ಅದು ಆಕಾಶದಲ್ಲಿ ವಾದನವನ್ನೂ ನರ್ತನ ವನ್ನೂ ಗಾನವನ್ನೂ ಪ್ರಾರಂಭಿಸಿತು. ಅವನು ಅದನ್ನು ನೋಡುವಾಗ ಉತ್ತಮವಾದ ಸ್ತ್ರೀಯು ಅವನಿಗೆ ಗೋಚರಳಾದಳು ‖ ೪೪ ‖ ಅವನು ತನ್ನ ಮುಖವನ್ನು ಕೆಳಕ್ಕೆ ಮಾಡಿ ಆ ಪ್ರತಿಮೆಯನ್ನು ನೋಡಿದಾಗ ಅದರಲ್ಲಿ ಚತು ರ್ಮುಖನಾದ ದಿವ್ಯಮಾನವನನ್ನು ಕಂಡನು ‖ ೪೫ ‖ ಆವನು ಆ ಮಾನ ವನ ತಲೆಯ ಮೇಲೆ ಬೆಳೆಯುತ್ತಿರುವ ಕತ್ತೆಯ ತಲೆಯನ್ನು ನೋಡಿ, ಉನ್ನತವಾದ ಕಮಲವನ್ನು ಕತ್ತರಿಸುವಂತೆ, ಆ ತಲೆಯನ್ನು ಶೀಘ್ರವಾಗಿ ಕತ್ತರಿಸಿದನು ‖ ೪೬ ‖ ಅದು ಇವನ ಕೈಗೆ ಅಂಟಿಕೊಂಡು ಸ್ಥಿರವಾಗಿದ್ದು, ಸುಖಸೌಭಾಗ್ಯವನ್ನು ನಾಶಮಾಡುವ ಪಾತಕವು ಹೃದಯದಿಂದ ಬಿಟ್ಟು ಹೋಗದಿರುವಂತೆ, ಅದು ಇವನ ಕೈಯಿಂದ ಕೆಳಕ್ಕೆ ಬೀಳಲಿಲ್ಲ ‖ ೪೭ ‖

ಈ ರೀತಿಯಾಗಿ ಆ ಬ್ರಾಹ್ಮಣೀವಿದ್ಯೆಯು ರುದ್ರನ ಜಪಾದಿಕ್ರಿಯೆಯನ್ನು ವ್ಯರ್ಥವನ್ನಾಗಿ ಮಾಡಿ ತನ್ನ ವಿಕ್ರಿಯೆಯನ್ನು ಉಪಸಂಹರಿಸಿ ಹೊರಟು ಹೋಯ್ತು. ನಿರರ್ಥಕನಾದ ಮನುಷ್ಯನಲ್ಲಿ ಸ್ತ್ರೀಯು ಎಲ್ಲಿಯೂ ನಿಲ್ಲುವುದಿಲ್ಲ ॥ ೪೮ ॥ ರುದ್ರನು ರಾತ್ರಿಕಾಲದಲ್ಲಿ ಸ್ಮಶಾನದಲ್ಲಿ ಪ್ರತಿಮೆಯಂತೆ ಯೋಗಾರೂಢನಾಗಿದ್ದ ವರ್ಧಮಾನಜಿನನನ್ನು ನೋಡಿ ಆ ಬ್ರಾಹ್ಮಣೀವಿದ್ಯಾಸಂಬಂಧಿಯಾದ ಮನುಷ್ಯನೆಂದು ಸಂದೇಹಗೊಂಡು ಉಪದ್ರವವನ್ನು ಮಾಡಿದನು ॥ ೪೯ ॥ ಪ್ರಾತಃಕಾಲದಲ್ಲಿ ಅವನು ವರ್ಧಮಾನಜಿನನನ್ನು ನೋಡಿ ಬಹುಪಶ್ಚಾತ್ತಾಪಪಟ್ಟು ನಮಸ್ಕರಿಸಿ ಖಿನ್ನಮನಸ್ಕನಾಗಿ ಸ್ತೋತ್ರವನ್ನು ಮಾಡುತ್ತ ಮಾಡುತ್ತ ಅವನ ಪಾದಸ್ಪರ್ಶವನ್ನು ಮಾಡಿದನು ॥ ೫೦ ॥ ಜಿನಪಾದಸ್ಪರ್ಶಮಾತ್ರದಿಂದ ಆ ಕಪಾಲವು, ವಿನಯಪರನಾದ ಮನುಷ್ಯನ ಮನಸ್ಸಿನಿಂದ ಪಾಪವು ತೊಲಗುವಂತೆ, ಅವನ ಕೈಯಿಂದ ಕೂಡಲೆ ಬಿದ್ದುಹೋಯ್ತು ॥ ೫೧ ॥ ಎಲೈ ಸಾಧುವೆ ! ಕತ್ತೆಯ ತಲೆಯ ಛೇದನದಲ್ಲಿರುವ ಈ ವಿಧವಾದ ಕ್ರಮವನ್ನು ಮಿಥ್ಯಾತ್ವವೆಂಬ ಅಂಧಕಾರದಿಂದ ವ್ಯಾಪ್ತರಾದ ಜನರು ಬೇರೆ ವಿಧವಾಗಿ ಕಲ್ಪನೆಮಾಡಿರುತ್ತಾರೆ ॥ ೫೨ ॥ ಮಿತ್ರನೆ ! ಆಶ್ಚರ್ಯಕರವಾದ ಮತ್ತೊಂದು ವಿಷಯವನ್ನು ಈಗ ನಿನಗೆ ತೋರಿಸುತ್ತೇನೆ, ” ಎಂದು ಹೇಳಿ ಆ ಖೇಚರ–ಮನೋವೇಗನು ಋಷಿಯ ರೂಪವನ್ನು ಸ್ವೀಕರಿಸಿದನು ॥ ೫೩ ॥ ಧರ್ಮಸಂಸ್ಕಾರವುಳ್ಳವನೂ ಸಮರ್ಥನೂ ಆದ ಮನೋವೇಗನು ಪವನವೇಗನೊಡನೆ ಪುನಃ ಪಶ್ಚಿಮದಿಕ್ಕಿನಿಂದ ಪಾಟಲೀಪುರವನ್ನು ಪ್ರವೇಶಿಸಿದನು ॥ ೫೪ ॥ ಆ ಖೇಚರನು ನಗಾರಿಯನ್ನು ಬಾರಿಸಿ ವಿಪ್ರರ ಮನಸ್ಸಿನಲ್ಲಿ ಯಾವನೋ ವಾದಿಯು ಬಂದನೆಂಬ ಸಂದೇಹವನ್ನುಂಟುಮಾಡುವವನಾಗಿ ಸುವರ್ಣಪೀಠವನ್ನೇರಿದನು ॥ ೫೫ ॥ ಮೇಘಗರ್ಜನೆಯನ್ನು ಕೇಳಿ ಶರಭಮೃಗಗಳು ಹೊರಡುವಂತೆ, ಆ ಭೇರಿಯ ಶಬ್ದವನ್ನು ಕೇಳಿ ಪಕ್ಷಪಾತಪರರಾದ ಬ್ರಾಹ್ಮಣರೆಲ್ಲ ಹೊರಟರು ॥ ೫೬ ॥ ಆ ವಿಪ್ರರು ಮನೋವೇಗನನ್ನು

ನೋಡಿ "ಎಲೈ ಸಾಧುವೆ! ವಾದವನ್ನು ಮಾಡುತ್ತಿಯೋ?" ಎಂದು ಕೇಳಿದರು. ಆಗ ಅವನು "ಎಲೈ ವಿಪ್ರರೆ! ನಾನು ವಾದದ ಹೆಸರನ್ನೂ ತಿಳಿಯುವುದಿಲ್ಲ" ಎಂದನು ॥ ೫೭ ॥ ಆ ಮಾತನ್ನು ಕೇಳಿ ವಿಪ್ರರು "ನೀನು ಮೂರ್ಖನಾಗಿದ್ದು ಭೇರಿಯನ್ನೇಕೆ ಹೊಡೆದೆ?" ಎಂದು ಕೇಳಿದರು. ಅದಕ್ಕೆ ಮನೋವೇಗನು "ಎಲೈ ದ್ವಿಜರೇ! ಕುತೂಹಲದಿಂದ ನಾನು ಭೇರಿಯನ್ನು ಹೊಡೆದೆನು. ಜನ್ಮಾರಭ್ಯ ಅಪೂರ್ವವಾದ ವಿಷಯವನ್ನು ನೋಡಿ ಭಂಗಾರದ ಪೀಠದಲ್ಲಿ ಕುಳಿತುಕೊಂಡೆನಲ್ಲದೆ ವಾದಿಯೆಂಬ ಗರ್ವದಿಂದಲ್ಲ. ದ್ವಿಜರೆ! ನನ್ನ ಮೇಲೆ ಕೋಪಿಸಿಕೊಳ್ಳಬೇಡಿ" ಎಂದನು ॥ ೫೮–೫೯ ॥ ಬಳಿಕ ವಿಪ್ರರು ಮನೋವೇಗನನ್ನು ಕುರಿತು "ಅಯ್ಯಾ! ಯಾರು ನಿನ್ನ ಗುರು? ಹೇಳು" ಎಂದರು. ಅದಕ್ಕವನು "ನನಗೆ ಗುರು ಇಲ್ಲ. ನಾನು ಸ್ವಯಂ ತಪಸ್ಸನ್ನು ಸ್ವೀಕರಿಸಿದೆನು" ಎಂದನು ॥ ೬೦ ॥ ಬಳಿಕ ವಿಪ್ರರು "ಎಲೈ ಸುಬುದ್ಧಿಯೇ! ಗುರುವಿಲ್ಲದೆ ನೀನು ಯಾವ ಕಾರಣದಿಂದ ಸ್ವಯಂ ತಪಸ್ಸನ್ನು ಸ್ವೀಕರಿಸಿದೆ? ಹೇಳು" ಎಂದು ಹೇಳಿದರು ॥ ೬೧ ॥ ಆಗ ಮನೋವೇಗನು "ಎಲೈ ದ್ವಿಜರೆ! ಹೇಳುತ್ತೇನೆ. ಆದರೆ ಹೆದರಿಕೆಯಾಗುತ್ತದೆ. ಸ್ಪಷ್ಟವಾಗಿ ನಿಮಗೆ ಹೇಳುತ್ತೇನೆ, ಕೇಳಿ ॥ ೬೨ ॥

ಚಂಪಾನಗರದಲ್ಲಿ ಗುರುವರ್ಮನೆಂಬ ದೊರೆಗೆ ಹರಿಯೆಂಬವನು ಮಂತ್ರಿಯಾಗಿದ್ದನು. ಒಂದು ದಿನ ಏಕಾಕಿಯಾಗಿದ್ದ ಆ ಹರಿಯು ನೀರಿನಲ್ಲಿ ತೇಲುತ್ತಿರುವ ಕಲ್ಲನ್ನು ನೋಡಿದನು ॥ ೬೩ ॥ ಅವನು ರಾಜಸಭೆಯಲ್ಲಿ ಆ ಆಶ್ಚರ್ಯವಿಷಯವನ್ನು ಹೇಳಲು "ಕಲ್ಲು ನೀರಿನಲ್ಲಿ ತೇಲುವುದಿಲ್ಲ" ಎಂದು ಅವನ ಮಾತನ್ನು ನಂಬದೆ ದೊರೆಯು ಕೋಪಗೊಂಡು "ನಿಜವಾಗಿಯೂ ಈ ಬ್ರಾಹ್ಮಣನಿಗೆ ಎಲ್ಲಿಯೋ ಪಿಶಾಚವು ಹಿಡಿದಿದೆ. ಹಾಗಲ್ಲದಿದ್ದರೆ ಬುದ್ಧಿಯಿರುವವನು ಇಂತಹ ಅಸಂಭವವಿಷಯವನ್ನು ಹೇಗೆ ಹೇಳುತ್ತಾನೆ?" ಎಂದು ಅವನನ್ನು ಬಂಧಿಸಿದನು ॥ ೬೪–೬೫ ॥ ಬಳಿಕ ಆ ಮಂತ್ರಿಯು ದೊರೆ

ಯನ್ನು ಕುರಿತು "ದೇವಾ! ಮೂಢನಾದ ನಾನು ಈ ಸುಳ್ಳನ್ನು ಹೇಳಿದೆನು" ಎಂದನು. ಆಗ ದೊರೆಯು ಅವನನ್ನು ಬಂಧನದಿಂದ ಬಿಡಿಸಿದನು || ೬೬ || ಅನಂತರದಲ್ಲಿ ಆ ಮಂತ್ರಿಯು ರಮಣೀಯವಾದ ಉದ್ದೇಶ–ಇಷ್ಟಾರ್ಥವನ್ನು ತನ್ನಲ್ಲಿಟ್ಟುಕೊಂಡು ಕಪಿಗಳಿಗೆ ವಿವಿಧವಾದ್ಯಗಳಿಂದ ಕೂಡಿದ ಸಂಗೀತವನ್ನು ಕಲಿಸಿದನು || ೬೭ || ಬಳಿಕ ಅವನು ಮನಸ್ಸಿಗೆ ವ್ಯಾಮೋಹವನ್ನುಂಟುಮಾಡುವ ಉತ್ತಮವಾದ ಆ ಸಂಗೀತವನ್ನು ಏಕಾಕಿಯಾಗಿ ಉದ್ಯಾನದಲ್ಲಿರುವ ದೊರೆಗೆ ತೋರಿಸಿದನು || ೬೮ || ದೊರೆಯು ಸಂತುಷ್ಟನಾಗಿ ಈ ಸಂಗೀತವನ್ನು ಭಟ್ಟರುಗಳಿಗೆ ತೋರಿಸುವಷ್ಟರಲ್ಲಿ ಆ ಕಪಿಗಳು ಸಂಗೀತವನ್ನು ನಿಲ್ಲಿಸಿ ಹತ್ತುದಿಕ್ಕುಗಳಿಗೆ ಚದರಿ ಹೋದುವು || ೬೯ || ಆಗ ಮಂತ್ರಿಯು "ಎಲೈ ಭಟ್ಟರುಗಳೆ! ದೊರೆಯನ್ನು ನಿಜವಾಗಿ ಭೂತವು ಹಿಡಿದಿದೆ" ಎಂದು ಹೇಳಿ ಬಂಧಿಸಿದನು || ೭೦ || ಮೊದಲು ದೊರೆಯು ಹೇಳಿದ್ದ ಮಾತನ್ನೇ ಮತ್ತೆ ಹೇಳಿ ಸಂತುಷ್ಟಚಿತ್ತನಾದ ಮಂತ್ರಿಯು ಬಂಧಿತನಾಗಿದ್ದ ದೊರೆಯನ್ನು ಬಂಧನದಿಂದ ಬಿಡಿಸಿ "ಎಲೈ ದೊರೆಯೆ! ವನದಲ್ಲಿ ನೀನು ವಾನರಗಳ ಸಂಗೀತವನ್ನು ನೋಡಿದಂತೆ, ನಾನು ನೀರಿನಲ್ಲಿ ತೇಲುತ್ತಿರುವ ಕಲ್ಲನ್ನು ನೋಡಿದೆನು" ಎಂದನು || ೭೧–೭೨ || ದೊರೆಯ ಮತ್ತು ಮಂತ್ರಿಯ ವೃತ್ತಾಂತವನ್ನು ತಿಳಿದಿರುವ ಪ್ರಾಜ್ಞರು ನಿಜವಾಗಿಯೂ ತಾವು ಪ್ರತ್ಯಕ್ಷವಾಗಿ ನೋಡಿರುವ ವಿಷಯವಾದರೂ ನಂಬತಕ್ಕುದಲ್ಲದ ವಿಷಯವನ್ನು ಅವರುಗಳಿಗೆ ಹೇಳಬಾರದು || ೭೩ || ಎಲೈ ಬ್ರಾಹ್ಮಣರೆ! ಏಕಾಕಿಯಾದ ನನ್ನ ವಾಕ್ಯವನ್ನು ನೀವುಗಳು ನಂಬಬಾರದು. ಆದುದರಿಂದ ನನ್ನನ್ನು ಕೇಳಿದರೂ ನಾನು ಹೇಳುವುದಿಲ್ಲ" ಎಂದನು || ೭೪ || ಬಳಿಕ ಆ ವಿಪ್ರರು ಮನೋವೇಗನನ್ನು ಕುರಿತು "ಅಯ್ಯಾ! ಯುಕ್ತಿಯಿಂದ ಸಂಘಟಿತವಾಗುವ ಮಾತನ್ನು ತಿಳಿಯದಿರುವ ಇಂತಹ ಬಾಲಕರೇ ನಾವು?" ಎಂದು ಮಾತನಾಡಿದರು || ೭೫ || ಅನಂತರದಲ್ಲಿ ಮನೋವೇಗನು "ನೀವುಗಳು ವಿಚಾರಪರರಾದರೆ ಸ್ಪಷ್ಟವಾಗಿ ಹೇಳುತ್ತೇನೆ. ಒಂದೇ ಮನಸ್ಸಿನಿಂದ ಕೇಳಿರಿ || ೭೬ || ಶ್ರೀಪುರದಲ್ಲಿ ಮುನಿದತ್ತ

ನೆಂಬ ಶ್ರಾವಕನಿರುತ್ತಾನೆ. ಅವನು ನನ್ನ ತಂದೆ. ವಿದ್ಯಾಭ್ಯಾಸಕ್ಕೋಸ್ಕರ ಅವನು ನನ್ನನ್ನು ಓರ್ವ ಋಷಿಗೆ ಸಮರ್ಪಿಸಿದನು ॥ ೭೭ ॥ ಒಂದಾನೊಂದು ದಿವಸ ಆ ಮುನಿಯು ಕಮಂಡಲುವನ್ನು ಕೊಟ್ಟು ನೀರನ್ನು ತರುವುದಕ್ಕೋಸ್ಕರ ನನ್ನನ್ನು ಕಳುಹಿದನು. ನಾನು ಬಹಳ ಹೊತ್ತು ಆಟವಾಡುತ್ತಿದ್ದೆನು ॥ ೭೮ ॥ ಆಗ ವಿದ್ಯಾರ್ಥಿಗಳು ಬಂದು 'ಅಯ್ಯಾ ! ನಿನ್ನ ಗುರುವು ಕೋಪಗೊಂಡಿದ್ದಾನೆ. ಇವನು ಶೀಘ್ರವಾಗಿ ಬಂದು ನಿನ್ನನ್ನು ಶಿಕ್ಷಿಸುವನು. ನೀನು ತಪ್ಪಿಸಿಕೊ' ಎಂದರು ॥ ೭೯ ॥ ಬೇರೆ ಪಟ್ಟಣದಲ್ಲಿಯೂ ಅಧ್ಯಾಪಕರಾದ ಸಾಧುಗಳು ಇದ್ದೇ ಇರುತ್ತಾರೆಂದು ನಾನು ಯೋಚಿಸಿ ಅಲ್ಲಿಂದ ತಪ್ಪಿಸಿಕೊಂಡು ಬೇರೆ ಪಟ್ಟಣಕ್ಕೆ ಹೋದೆನು ॥ ೮೦ ॥ ಆ ಪಟ್ಟಣದ ಮಧ್ಯದಲ್ಲಿ ಪ್ರವೇಶಿಸುತ್ತಿರುವ ನಾನು, ಜಲಪಾತವುಳ್ಳ ಸಂಚರಿಸುವ ದೊಡ್ಡ ಪರ್ವತವೋ ಎಂಬಂತೆ, ಮದಜಲಧಾರೆಯಿಂದ ಭೂತಲವನ್ನು ನೆನಸಿಕೊಂಡು ಇದಿರಾಗಿ ಬರುತ್ತಿರುವ ಆನೆಯನ್ನು ನೋಡಿದೆನು ॥ ೮೧ ॥ ನನ್ನನ್ನು ನೋಡಿ ಕಿವಿಗಳನ್ನೂ ಬಾಲವನ್ನೂ ಅಳ್ಳಾಡಿಸದಿರುವುದೂ ಭಯಂಕರವೂ ಮಾವಟಿಗನ ಅಂಕೆಯನ್ನು ಮೀರಿದುದೂ ಆದ ಆ ಆನೆಯು ಸೊಂಡಿಲನ್ನು ಚಾಚಿಕೊಂಡು, ಅಂಕೆಯಿಲ್ಲದ ದೇಹಧಾರಿಯಾದ ಮೃತ್ಯುವಿನಂತೆ, ಓಡಿಸಿಕೊಂಡುಬಂದಿತು ॥ ೮೨ ॥ ನನ್ನನ್ನು ರಕ್ಷಿಸುವವರಾರೂ ಕಾಣಲಿಲ್ಲ. ಮೈಯೆಲ್ಲ ನಡುಕವುಳ್ಳವನೂ ಓಡಿಹೋಗಲಾರದವನೂ ಆದ ನಾನು ಬಳಿಕ ಕಮಂಡಲುವನ್ನು ಬಿಳುಪಾದ ಬೆಂಡೆಯ ಗಿಡದಲ್ಲಿರಿಸಿ ನೋಡಿದೆನು ॥ ೮೩ ॥ ದೈವಯೋಗದಿಂದ ನನಗೊಂದು ಉಪಾಯವು ತೋರಿತು. ಆ ಆನೆಯ ದೆಸೆಯಿಂದ ಭೀತನಾದ ನಾನು ಆಗ ಆ ಕಮಂಡಲುವಿನ ನಾಲದಲ್ಲಿ ಅದರೊಳಕ್ಕೆ ಪ್ರವೇಶಿಸಿದೆನು. ಈಗ ನಾನು ಈ ಆನೆಯಿಂದ ತಪ್ಪಿಸಿಕೊಂಡೆನೆಂದು ಒಂದು ಕ್ಷಣಕಾಲದವರೆಗೆ ಸಂತುಷ್ಟನಾಗಿರುವಲ್ಲಿ ವಿರುದ್ಧವಾದ ಮನಸ್ಸುಳ್ಳ ಆ ದೊಡ್ಡಆನೆಯು ವೇಗದಿಂದ ಬಂದು ಆ ನಾಲದಲ್ಲೇ ಕಮಂಡಲುವಿನೊಳಕ್ಕೆ ಪ್ರವೇಶಿಸಿ ಅಲ್ಲಿ ಅಳುತ್ತಿರುವ ನನ್ನ ವಸ್ತ್ರವನ್ನು ಸೊಂಡಿಲಿನಿಂದ

ಒಡಿದು ಹರಿಯುವುದಕ್ಕೆ ತೊಡಗಿತು ॥ ೮೪-೮೫ ॥ ಆ ವಸ್ತ್ರವನ್ನು ಹರಿಯುವುದರಲ್ಲಿ ದತ್ತಚಿತ್ತವಾದ ಆನೆಯನ್ನು ನೋಡಿ ವ್ಯಾಕುಲನಾದ ನಾನು ಶೀಘ್ರವಾಗಿ ಕಮಂಡಲುವಿನ ಮೇಲಿನ ತೂತಿನಿಂದ (ಮುಖದಿಂದ) ಹೊರಟೆನು. ಆಯುಷ್ಯವಿದ್ದರೆ ಪ್ರಾಣಿಗಳಿಗೆ ಉಪಾಯಗಳು ಗೋಚರವಾಗುತ್ತವೆ ॥ ೮೭ ॥ ಆನೆಯೂ ಅದೇ ತೂತಿನಿಂದ ಹೊರಟಿತು. ಆಗ ಅದು ಕಮಂಡಲುವಿನ ತೂತಿನಲ್ಲಿ ಸಿಕ್ಕಿಕೊಂಡ ತನ್ನ ಬಾಲದ ಕೂದಲನ್ನು ಕೀಳುವುದಕ್ಕೆ ಅಸಮರ್ಥವಾಗಿಯೂ ದುಃಖಿತವಾದ ಮನಸ್ಸುಳ್ಳದಾಗಿಯೂ ಕ್ಲೇಶವನ್ನನುಭವಿಸುತ್ತ ಬಹುಕಾಲದವರೆಗೆ ಬಿದ್ದಿತ್ತು ॥ ೮೭ ॥ ಭೂತಲದಲ್ಲಿ ಬಿದ್ದಿದ್ದ ಆನೆಯನ್ನು ನೋಡಿ ನಾನು 'ದುರ್ಬುದ್ಧಿಯುಳ್ಳ ಶತ್ರುವೆ! ನೀನು ಇಲ್ಲೇ ಸಾಯು' ಎಂದು ಹೇಳಿ ಭೀತವಾದ ನಡುಕವಿಲ್ಲದವನೂ ಸ್ವಸ್ಥವಾದ ಮನಸ್ಸುಳ್ಳವನೂ ಆಗಿ ಅಲ್ಲಿಂದ ಮತ್ತೊಂದು ಪಟ್ಟಣಕ್ಕೆ ಹೋದೆನು ॥ ೮೮ ॥ ಅಲ್ಲಿ ಮನೋಹರವಾದ ಜಿನೇಶ್ವರಾಲಯವನ್ನು ನೋಡಿ ಜಿನಪತಿಯ ವಂದನೆಯನ್ನು ಮಾಡಿ ಶ್ರಮಾತುರನಾದ ನಾನು ವಸ್ತ್ರವಿಲ್ಲದವನಾಗಿ ಅಲ್ಲಿ ಭೂತಲದಲ್ಲಿ ಮಲಗಿದ್ದು ಒಂದು ರಾತ್ರಿಯನ್ನು ಕಳೆದೆನು ॥ ೮೯ ॥ 'ಇಲ್ಲಿ ಯಾವನನ್ನು ಬೇಡಿದರೆ ನನಗೆ ಬಟ್ಟೆಯನ್ನು ಕೊಡುವನು? ಬಟ್ಟೆಯಿಲ್ಲದವರು ಬೇಡುವುದಕ್ಕೂ ಆಗುವುದಿಲ್ಲ. ನಾನು ಕುಲಪರಂಪರೆಯಾಗಿ ಬಂದ ಜೈನತಪಸ್ಸನ್ನು ಬಹುಕಾಲದವರೆಗೆ ಮಾಡುತ್ತೇನೆ' ಎಂದು ಯೋಚಿಸಿ ತಪಸ್ವಿಯಾದೆನು ॥ ೯೦ ॥ ಪುರ ರತ್ನೋತ್ಪತ್ತಿಸ್ಥಾನ ಗ್ರಾಮಗಳಿಂದ ವಿಭೂಷಿತವಾದ ಭೂಮಿಯನ್ನು ವಿನೋದದಿಂದ ಸಂಚರಿಸುತ್ತ ಅಲ್ಲಿಂದ ಕ್ರಮವಾಗಿ ನಿಮ್ಮ ಈ ವಿದ್ವನ್ನಿಬಿಡವಾದ ಪಟ್ಟಣವನ್ನು ನೋಡುವುದಕ್ಕೋಸ್ಕರ ಈಗ ಬಂದೆನು ॥ ೯೧ ॥ ನಾನೇ ವ್ರತವನ್ನು ಸ್ವೀಕರಿಸುವುದಕ್ಕುಂಟಾಗಿರುವ ಈ ಕಾರಣವನ್ನು ಸಂಕ್ಷೇಪದಿಂದ ನಾನು ನಿಮ್ಮಗಳಿಗೆ ತಿಳಿಸಿದೆನು" ಎಂದು ಹೇಳಿದನು. ಮನೋವೇಗನ ಈ ಮಾತನ್ನು ಕೇಳಿ ಹಾಸ್ಯದಿಂದ ನಗುಮೊಗದವರಾದ ಆ ವಿಪ್ರರು "ದುರ್ಮತಿಯೆ! ಸುಳ್ಳನ್ನು ಹೇಳುವುದರಲ್ಲಿ ಜಾಣರೂ

ವಿಚಿತ್ರವಾದ ವೇಷವುಳ್ಳವರೂ ಆದ ಸಾವಿರಾರು ಮಂದಿಗಳನ್ನು ನೋಡಿದ್ದೇವೆ. ಆದರೆ ನಿನ್ನಂತೆ ವ್ರತದಲ್ಲಿರುವವನು ಎಲ್ಲಿಯೂ ಸುಳ್ಳನ್ನು ಹೇಳುವದಿಲ್ಲ ॥ ೯೩ ॥ ಬೇಡೆಯು ಗಿಡದ ಕೊಂಬೆಯಲ್ಲಿರುವ ಕಮಂಡಲುವಿನಲ್ಲಿ ಆನೆಯ ಪ್ರವೇಶವನ್ನೂ ಇರುವಿಕೆಯನ್ನೂ ತಿರುಗಾಡುವಿಕೆಯನ್ನೂ ಹೊರಡುವಿಕೆಯನ್ನೂ ಮೂರು ಲೋಕದಲ್ಲಿ ಯಾವನೂ ಎಂದೂ ನೋಡಲಿಲ್ಲ ॥ ೯೪ ॥ ಎಲೈ ದುರ್ಬುದ್ಧಿಯೆ ! ಬೆಂಕಿಯಲ್ಲಿ ನೀರೂ ಕಲ್ಲಿನಲ್ಲಿ ತಾವರೆಯೂ ಕತ್ತೆಯ ತಲೆಯಲ್ಲಿ ಕೊಂಬೂ ಸೂರ್ಯನಲ್ಲಿ ಕತ್ತಲೆಯೂ ಬೆಟ್ಟದಲ್ಲಿ ಚಲನವೂ ಎಂದಾದರೂ ಉಂಟಾದೀತು. ಆದರೆ ನಿನ್ನ ಮಾತಿನಲ್ಲಿ ಸತ್ಯತ್ವವುಂಟಾಗಲಾರದು " ಎಂದು ಹೇಳಿದರು ॥ ೯೫ ॥ ಆಗ ಖೇಚರ-ಮನೋವೇಗನು " ಅಯ್ಯಾ ! ದ್ವಿಜರೇ ! ! ನಾವಾದರೋ ಇಂತಹ ಸುಳ್ಳನ್ನು ಹೇಳುವುದರಲ್ಲಿ ಆಸಕ್ತರಾಗಿರುವವರು, ನಿಜ. ಆದರೆ ತಮ್ಮಗಳ ಮತದಲ್ಲಿ ನಿವಾರಿಸಲಾಗದ ಇಂತಹ ಹೇರಳವಾದ ಸುಳ್ಳು ಕಂಡುಬರುವುದಿಲ್ಲವೇ ? " ಎಂದು ಹೇಳಿದನು ॥ ೯೬ ॥ ಈ ಜಗತ್ತಿನಲ್ಲಿ ಎಲ್ಲರೂ ಬೇರೆಯವರಲ್ಲಿರುವ ದೋಷವನ್ನು ಹುಡುಕುತ್ತಾರೆ. ತಮ್ಮ ಮತದ ಪೋಷಣೆಯನ್ನೂ ಮಾಡುತ್ತಾರೆ. ಆದರೆ ಅಪರಿಮಿತವಾದ ಗತಿಯುಳ್ಳ ಬುದ್ಧಿಯನ್ನೂ ಬೇರೆಯವರ ಗುಣಗಳ ಶುದ್ಧಿಯನ್ನೂ ಪ್ರಸಿದ್ಧಮಾಡುವ ನಿರ್ಮಲನಾದ ಮನುಷ್ಯನು ವಿರಳವಾಗಿರುತ್ತಾನೆ ॥ ೯೭ ॥

ಇಂತು ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷಾದ್ವಾದಶಪರಿಚ್ಛೇದದ
ಶಾಂತೀಶಪಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

—o—

ಅನಂತರದಲ್ಲಿ ಸೂತ್ರಕಂಠರಾದ ದ್ವಿಜರು ಮನೋವೇಗನನ್ನು ಕುರಿತು " ಅಯ್ಯಾ ! ವೇದದಲ್ಲಾಗಲಿ ಪುರಾಣದಲ್ಲಾಗಲಿ ಇಂತಹ ಅಸಂಭಾವ್ಯವಿಷಯವನ್ನು ನೀನು ನೋಡಿದ್ದರೆ ಹೇಳು ॥ ೧ ॥ ಪುರಾಣದಲ್ಲಿಯೂ ವೇದದ

ಲ್ಲಿಯೂ ಇಂತಹ ಅಸಂಭಾವ್ಯವಿಷಯವಿದ್ದರೆ ಅದು ನಮ್ಮಗಳಿಗೆ ಗ್ರಾಹ್ಯವೇ ಅಲ್ಲ. ನ್ಯಾಯನಿಪುಣರಾಗಿರುವವರು ಎಲ್ಲಿಯೂ ನ್ಯಾಯರಹಿತವಾದ ವಚನವನ್ನು ಪರಿಗ್ರಹಿಸುವುದೇ ಇಲ್ಲ" ಎಂದನು ॥ ೨ ॥ ಅನಂತರದಲ್ಲಿ ಋಷಿರೂಪಧಾರಿಯಾದ ಖೇಚರಪುತ್ರನು ಆ ವಿಪ್ರರನ್ನು ಕುರಿತು "ವಿಪ್ರರೆ ! ಅಂತಹ ವಿಷಯವನ್ನು ತಿಳಿದಿದ್ದೇನೆ, ಹೇಳುತ್ತೇನೆ. ಆದರೆ ಹೇಳುವುದಕ್ಕೆ ಹೆದರುತ್ತೇನೆ ॥ ೩ ॥ ದ್ವಿಜರೆ ! ನಾನು ನನ್ನ ಸಮಾಚಾರವನ್ನು ಹೇಳಿದರೂ ನೀವುಗಳು ಕೋಪಿಸುತ್ತೀರಿ. ಅಂದಮೇಲೆ ವೇದ ಪುರಾಣಾರ್ಥವನ್ನು ಹೇಳಿದರೆ ನನ್ನ ಮೇಲೆ ಕೋಪಿಸಿಕೊಳ್ಳುವುದಿಲ್ಲವೇ ?" ಎಂದನು ॥ ೪ ॥ ಆಗ ದ್ವಿಜರು ಮನೋವೇಗನನ್ನು ಕುರಿತು "ಅಯ್ಯಾ ! ನೀನು ಸಂದೇಹ ವನ್ನು ಬಿಟ್ಟು ಮಾತನಾಡು. ನೀನು ಹೇಳುವಂತೆ ನಮ್ಮ ಶಾಸ್ತ್ರವಿದ್ದರೆ ನಾವು ನಿಜವಾಗಿಯೂ ಅದನ್ನು ಬಿಟ್ಟು ಬಿಡುವೆವು" ಎಂದರು ॥ ೫ ॥ ಆಗ ಮನೋವೇಗನು ದ್ವಿಜರನ್ನು ಕುರಿತು "ವಿಪ್ರರೆ ! ನೀವುಗಳು ವಿಚಾರಪರ ರಾಗಿದ್ದರೆ ಹೇಳುತ್ತೇನೆ, ತದೇಕಚಿತ್ತರಾಗಿ ಕೇಳಿರಿ ॥ ೬ ॥ ಒಂದಾನೊಂದು ಕಾಲದಲ್ಲಿ ಧರ್ಮರಾಜನು ಸಭೆಯಲ್ಲಿ 'ಪಾತಾಳದಿಂದ ಫಣೀಂದ್ರನನ್ನು ತರಲು ಶಕ್ತನಾದವನು ಯಾವನಾದರೂ ಇದ್ದಾನೋ ?' ಎಂದನು ॥ ೭ ॥ ಆಗ ಅರ್ಜುನನು 'ದೇವಾ ! ನಾನು ಪಾತಾಳಕ್ಕೆ ಹೋಗಿ ಏಳುಮಂದಿ ಮುನಿಗಳೊಡನೆ ಫಣೀಂದ್ರನನ್ನು ತರುವೆನು' ಎಂದನು ॥ ೮ ॥ ಬಳಿಕ ಅರ್ಜುನನು ಗಾಂಡೀವಧನುಸ್ಸನ್ನು ಏರಿಸಿ ಹರಿತವಾದ ಮುಖವುಳ್ಳ ಬಾಣ ಗಳಿಂದ, ಕಾಮನು ಪತಿವಿಯೋಗವನ್ನು ಹೊಂದಿರುವ ಸ್ತ್ರೀಯನ್ನು ಭೇದಿ ಸುವಂತೆ, ಭೂಮಿಯನ್ನು ಶೀಘ್ರವಾಗಿ ಎಡೆಬಿಡದೆ ಭೇದಿಸಿದನು ॥ ೯ ॥ ತರುವಾಯ ಪಾರ್ಥನು ಪಾತಾಳಕ್ಕೆ ಹೋಗಿ ಹತ್ತು ಕೋಟಿ ಸೈನ್ಯಯುಕ್ತ ನಾದ ಆದಿಶೇಷನನ್ನು ಏಳುಮಂದಿ ಮುನಿಗಳೊಡನೆ ಕರೆದುಕೊಂಡು ಬಂದನು ॥ ೧೦ ॥ ಎಲೈ ವಿಪ್ರರೆ ! ನಿಮ್ಮ ಆಗಮವು ಈ ಪ್ರಕಾರವಾಗಿದೆಯೋ ! ಇಲ್ಲವೋ ? ಹೇಳಿರಿ" ಎಂದನು. ಆಗ ಅವರು ತಮ್ಮ ಆಗಮವು ಆ ರೀತಿ

ಯಾಗಿರುವುದು ನಿಶ್ಚಯವೆಂದು ಒಪ್ಪಿಕೊಂಡರು ‖ ೧೧ ‖ ಬಳಿಕ ಮನೋವೇಗನು ದ್ವಿಜರನ್ನು ಕುರಿತು "ಎಲೈ ದ್ವಿಜರೆ! ಚಿಕ್ಕದಾದ ಬಾಣದಿಂದುಂಟಾದ ತೂತಿನಿಂದಲೂ ಹತ್ತುಕೋಟಿ ಸೈನ್ಯಸಮೇತನಾದ ಫಣೀಂದ್ರನು ಬರುತ್ತಾನಾದರೆ ಕಮಂಡಲುವಿನ ತೂತಿನಿಂದ ಆನೆಯು ಹೇಗೆ ಹೊರಡುವುದಿಲ್ಲ? ಮತ್ಸರವನ್ನು ಬಿಟ್ಟು ಶೀಘ್ರವಾಗಿ ಹೇಳಿರಿ ‖ ೧೨-೧೩ ‖ ನಿಮ್ಮಗಳ ಆಗಮವು ಸತ್ಯ, ನನ್ನ ಮಾತಾದರೋ ಸತ್ಯವಲ್ಲ. ಈ ವಿಷಯದಲ್ಲಿ ಒಂದು ಪಕ್ಷಪಾತವಲ್ಲದೆ ಬೇರೆ ಕಾರಣವಿಲ್ಲ" ಎಂದನು ‖ ೧೪ ‖ ಆಗ ಒಬ್ಬ ಭೂಸುರನು ಮನೋವೇಗನನ್ನು ಕುರಿತು "ಅಯ್ಯಾ! ಆನೆಯು ಕಮಂಡಲುವಿನ ಹೊಟ್ಟೆಯಲ್ಲಿ ಹೇಗೆ ಅಡಕವಾಗುತ್ತದೆ? ಆನೆಯ ಭಾರದಿಂದ ಬೆಂಡೆಯ ಗಿಡವು ಹೇಗೆ ಮುರಿಯಲಿಲ್ಲ? ‖ ೧೫ ‖ ಆನೆಯು ದಪ್ಪವಾದ ಮೈಯೆಲ್ಲ ಕಮಂಡಲುವಿನ ತೂತಿನಿಂದ ಹೊರಡುವಾಗ ಅದರ ದಟ್ಟವಾದ ಬಾಲದ ಕೂದಲು ಆ ತೂತಿನಲ್ಲಿ ಹೇಗೆ ಸಿಕ್ಕಿಕೊಂಡಿದ್ದಿತು? ‖ ೧೬ ‖ ನಿನ್ನ ಈ ಮಾತನ್ನು ನಾನು ನಂಬುವುದೇ ಇಲ್ಲ" ಎಂದನು. ತರುವಾಯ ಮನೋವೇಗನು "ಎಲೈ ವಿಪ್ರರೆ! ನಿಜವಾಗಿಯೂ ಇದು ಸತ್ಯ. ಅಗಸ್ತ್ಯನು ಅಂಗುಷ್ಠದಿಂದಲೇ ಸಮುದ್ರದ ನೀರೆಲ್ಲವನ್ನೂ ಕುಡಿದನೆಂದು ನಿಮ್ಮ ಆಗಮದಲ್ಲಿರುತ್ತದೆ ‖ ೧೭ ‖ ಎಲೈ ದ್ವಿಜರೆ! ಅಗಸ್ತ್ಯನ ಹೊಟ್ಟೆಯಲ್ಲಿ ಸಮುದ್ರದ ನೀರೆಲ್ಲ ಅಡಕವಾಗುತ್ತದೆಂದ ಮೇಲೆ ಕಮಂಡಲುವಿನ ಹೊಟ್ಟೆಯಲ್ಲಿ ನನ್ನೊಡನೆ ಆನೆಯು ಅಡಕವಾಗುವುದಿಲ್ಲವೇಕೆ? ‖ ೧೮ ‖ ಬ್ರಹ್ಮನು ಒಂದು ಸಮುದ್ರದಲ್ಲಿ ಕಾಣದೆ ಹೋದ ತನ್ನ ಸೃಷ್ಟಿಯನ್ನು ವ್ಯಾಕುಲನಾಗಿ ಎಲ್ಲಾ ಕಡೆಗಳಲ್ಲಿ ಹುಡುಕುತ್ತ ತಿರುಗಿದನು ‖ ೨೦ ‖ ಬ್ರಹ್ಮನು ಮರದ ಬುಡದಲ್ಲಿ ಕೆಂಪಗಸೆಯ ಕೊಂಬೆಯಲ್ಲಿ ಸಾಸಿವೆಯಷ್ಟು ದೊಡ್ಡದಾದ ಕಮಂಡಲುವನ್ನಿರಿಸಿ ಕುಳಿತಿರುವ ಅಗಸ್ತ್ಯನನ್ನು ನೋಡಿದನು ‖ ೨೧ ‖ ಆಗ ಅಗಸ್ತ್ಯಮುನಿಯು ಬ್ರಹ್ಮನನ್ನು ನೋಡಿ ಅವನಿಗೆ ನಮಸ್ಕಾರವನ್ನು ಮಾಡಿ 'ಬ್ರಹ್ಮನೆ! ಹೀಗೆ ನೀನು ವ್ಯಾಕುಲಚಿತ್ತನಾಗಿ ಎಲ್ಲಿ ತಿರು

ಗುತ್ತಿರುವೆ ? ' ಎಂದು ಕೇಳಿದನು || ೨೨ || ಅದಕ್ಕೆ ಬ್ರಹ್ಮನು ' ಸಾಧುವೆ ! ನನ್ನ ಸೃಷ್ಟಿಯು ಎಲ್ಲಿಯೋ ಓಡಿಹೋಗಿದೆ. ಮೂಢನಾಗಿ ಈ ಸೃಷ್ಟಿಯನ್ನು ಹುಡುಕುತ್ತ, ಗ್ರಹಪೀಡಿತನಾದ-ಹುಚ್ಚನಂತೆ, ತಿರುಗುತ್ತಿದ್ದೇನೆ ' ಎಂದನು || ೨೩ || ಆಗ ಅಗಸ್ತ್ಯನು ಬ್ರಹ್ಮನನ್ನು ಕುರಿತು ' ಅಯ್ಯಾ ವಿಧಿಯೆ ! ನನ್ನ ಕಮಂಡಲುವಿನ ಹೊಟ್ಟೆಯಲ್ಲಿ ಪ್ರವೇಶಿಸಿ ಆ ಸೃಷ್ಟಿಯನ್ನು ಹುಡುಕು. ಬೇರೆ ಕಡೆಗೆ ಹೋಗಬೇಡ ' ಎಂದನು || ೨೪ || ಬಳಿಕ ಬ್ರಹ್ಮನು ಕಮಂಡಲುವಿನಲ್ಲಿ ಪ್ರವೇಶಿಸಿ ಅಲ್ಲಿ ಆಲದ ಮರದ ಎಲೆಯಲ್ಲಿ ಹೊಟ್ಟೆಯನ್ನುಬ್ಬಿಸಿಕೊಂಡು ಮಲಗಿರುವ ಶ್ರೀಪತಿ-ವಿಷ್ಣುವನ್ನು ನೋಡಿದನು || ೨೫ || ಆಗ ಬ್ರಹ್ಮನು ವಿಷ್ಣುವನ್ನು ಕುರಿತು ' ಶ್ರೀಪತಿಯೇ ! ನೀನು ಬಹಳವಾಗಿ ಉಬ್ಬಿದ ಹೊಟ್ಟೆಯುಳ್ಳವನೂ ನಿಶ್ಚಲವಾದ ದೇಹವುಳ್ಳವನೂ ಆಗಿ ಏತಕ್ಕೆ ಮಲಗಿರುವೆ ? ' ಎಂದನು || ೨೬ || ಅದಕ್ಕೆ ವಿಷ್ಣುವು ಬ್ರಹ್ಮನನ್ನು ಕುರಿತು ' ಅಯ್ಯಾ ! ಒಂದು ಸಮುದ್ರದಲ್ಲಿ ಹರಿದುಹೋಗಿ ನಾಶವಾಗುತ್ತಿದ್ದ ನಿನ್ನ ಸೃಷ್ಟಿಯನ್ನು ನೋಡಿ ಅದನ್ನು ನನ್ನ ಹೊಟ್ಟೆಯೊಳಗಿರಿಸಿಕೊಂಡೆನು ' ಎಂದು ಹೇಳಿದನು || ೨೭ || ಆದುದರಿಂದ ಹರಿಯು ಕೊಂಬೆಗಳಿಂದ ವ್ಯಾಪ್ತವಾದ ದೊಡ್ಡ ಆಲದ ಮರದಲ್ಲಿ ವಿಸ್ತಾರವಾದ ಎಲೆಯಲ್ಲಿ ಉಬ್ಬಿದ ಹೊಟ್ಟೆಯುಳ್ಳವನಾಗಿ ಮಲಗಿದನು || ೨೮ || ಬಳಿಕ ಬ್ರಹ್ಮನು ವಿಷ್ಣುವನ್ನು ಕುರಿತು ' ಶ್ರೀಪತಿಯೆ ! ಜಲಪ್ರಳಯದಲ್ಲಿ ನಾಶವನ್ನು ಹೊಂದುತ್ತಿದ್ದ ಸೃಷ್ಟಿಯನ್ನು ರಕ್ಷಿಸಿ ನೀನು ಒಳ್ಳೆಯದನ್ನು ಮಾಡಿದೆ. ಶ್ರೀಪತಿಯೆ ! ನನ್ನ ಈ ಸೃಷ್ಟಿಯನ್ನು ನೋಡುವುದಕ್ಕೆ ಮನಸ್ಸು ಕುತೂಹಲವುಳ್ಳುದಾಗಿದೆ. ಎಲ್ಲರಿಗೂ ಮಕ್ಕಳ ವಿಯೋಗವು ಬಹಳ ಕಷ್ಟಕರವಾಗಿದೆ-ಮಕ್ಕಳನ್ನು ಬಿಟ್ಟಿರುವುದು ಕಷ್ಟ ' ಎಂದನು || ೨೯-೩೦ || ಆಗ ವಿಷ್ಣುವು ಬ್ರಹ್ಮನನ್ನು ಕುರಿತು ' ಬ್ರಹ್ಮನೆ ! ನೀನು ನನ್ನ ಹೊಟ್ಟೆಯಲ್ಲಿ ಪ್ರವೇಶಮಾಡಿ ಸಂತೋಷದಿಂದ ನೋಡು. ವ್ಯರ್ಥವಾಗಿ ಏತಕ್ಕೆ ದುಃಖಪಡುವೆ ? ' ಎಂದನು || ೩೧ || ಆ ಮೇಲೆ ಬ್ರಹ್ಮನು ವಿಷ್ಣುವಿನ ಹೊಟ್ಟೆಯನ್ನು ಪ್ರವೇಶಿಸಿ ಅಲ್ಲಿ ತನ್ನ

ಸೃಷ್ಟಿಯನ್ನು ನೋಡಿ ಬಹಳವಾಗಿ ಸಂತೋಷಪಟ್ಟನು. ಮಕ್ಕಳನ್ನು ನೋಡಿದಾಗ ಯಾವನ ಮನಸ್ಸು ತಾನೆ ಸಂತೋಷಪಡುವುದಿಲ್ಲ ? ॥ ೩೨ ॥ ಬ್ರಹ್ಮನು ಬಹುಕಾಲದವರೆಗೆ ಅಲ್ಲಿದ್ದು ತನ್ನ ಸೃಷ್ಟಿಯನ್ನೆಲ್ಲ ನೋಡಿ ಅಲ್ಲಿಂದ ಹರಿಯ ನಾಭಿಕಮಲದ ನಾಲದಿಂದ ಹೊರಟನು ॥ ೩೩ ॥ ಆಗ ತನ್ನ ಅಂಡ ಕೋಶದ ಕೂದಲಿನ ತುದಿಯು ಆ ನಾಲದಲ್ಲಿ ಬಲವಾಗಿ ಅಂಟಿಕೊಂಡಿತು. ಅದನ್ನು ಎಳೆಯುವುದು ಕಷ್ಟವೆಂದು ತಿಳಿದು ಲಜ್ಜಿತನಾಗುವ ಸಂದೇಹವುಳ್ಳವನಾಗಿ ಆ ಕೂದಲಿನ ತುದಿಯನ್ನೇ ಕಮಲವನ್ನಾಗಿ ಮಾಡಿ ತನ್ನ ಆ ಕಮಲಪೀಠದಲ್ಲಿ ಕುಳಿತುಕೊಂಡನು. ವಿಶ್ವವ್ಯಾಪಿಯಾದ ಮಾಯೆಯನ್ನು ದೇವತೆಗಳೂ ಬಿಡುವುದಿಲ್ಲ ॥ ೩೪-೩೫ ॥ ಆ ಮೇಲೆ ಬ್ರಹ್ಮನು ಕಮಲಾಸನನೆಂದು ಲೋಕದಲ್ಲಿ ಪ್ರಸಿದ್ಧಿಯನ್ನು ಹೊಂದಿದನು. ದೊಡ್ಡವರು ಮಾಡುವ ಪ್ರಪಂಚ-ಮಾಯಾಚಾರವೂ ನಿಜವಾಗಿ ಪ್ರಸಿದ್ಧಿಯನ್ನು ಹೊಂದುವುದು ॥ ೩೬ ॥ ಈ ಪ್ರಕಾರವಾದುದು ನಿಮ್ಮಗಳ ಪುರಾಣದ ಅರ್ಥ. ಇದು ಸಟೆಯೋ ? ದಿಟವೋ ? ಮಾತ್ಸರ್ಯವಿಲ್ಲದವರಾಗಿ ಹೇಳಿರಿ. ಸತ್ಪುರುಷರು ಅಸತ್ಯವಾದಿಗಳಲ್ಲ " ಎಂದು ಹೇಳಿದನು ॥ ೩೭ ॥ ಆಗ ಆ ವಿಪ್ರರು ಮನೋವೇಗನನ್ನು ಕುರಿತು " ಅಯ್ಯಾ ! ಈ ಪ್ರಕಾರವಾದ ಕಥೆಯು ನಮ್ಮ ಪುರಾಣದಲ್ಲಿರುವುದು, ನಿಜ. ಸೂರ್ಯನು ಉದಯಿಸಿದರೆ ಮುಚ್ಚುವುದಕ್ಕೆ ಯಾರಿಂದ ಸಾಧ್ಯ ? " ಎಂದರು ॥ ೩೮ ॥ ಬಳಿಕ ಮನೋವೇಗನು " ಎಲೆ ವಿಪ್ರರೆ ! ಬ್ರಹ್ಮನ ಕೇಶವು ನಾಭಿಕಮಲದ ತೂತಿನಲ್ಲಿ ಸಿಕ್ಕಿಕೊಂಡಿತೆಂದ ಮೇಲೆ ಆನೆಯ ಬಾಲದ ಕೂದಲು ಕಮಂಡಲುವಿನ ತೂತಿನಲ್ಲೇಕೆ ಸಿಕ್ಕಿಕೊಳ್ಳುವುದಿಲ್ಲ ? ॥ ೩೯ ॥ ವಿಶ್ವಸಹಿತವಾದ ಕಮಂಡಲುವಿನ ಭಾರದಿಂದ ಕೆಂಪಗಸೆಯ ಗಿಡವು ಮುರಿಯಲಿಲ್ಲವೆಂದ ಮೇಲೆ ಒಂದು ಆನೆಯಿಂದ ಕೂಡಿದ ಕಮಂಡಲುವಿನ ಭಾರದಿಂದ ಬೆಂಡೆಯ ಗಿಡವೇತು ಮುರಿಯುವುದು ? ॥ ೪೦ ॥ ಸಾಸಿವೆಯಷ್ಟಿರುವ ಕಮಂಡಲುವಿನಲ್ಲಿ ವಿಶ್ವವೆಲ್ಲ ಅಡಕವಾದುದೆಂದ ಮೇಲೆ ದೊಡ್ಡ ಕಮಂಡಲುವಿನಲ್ಲಿ ನನ್ನೊಡನೆ ಆನೆಯೇಕೆ ಅಡಕ

ವಾಗಿರಬಾರದು ? ॥ ೪೧ ॥ ಬ್ರಹ್ಮಸೃಷ್ಟಿಯು ಸಮುದ್ರದಲ್ಲಿ ಕೊಚ್ಚಿ ಹೋಗುತ್ತಿದ್ದಿತೆಂದರೆ ಆ ಸಮುದ್ರವು ಬ್ರಹ್ಮಸೃಷ್ಟಿಯಿಂದ ಬಹಿರ್ಭೂತವಾಗಿತ್ತೇ ? ವಿಷ್ಣುವು ಜಗತ್ತನ್ನು ತನ್ನ ಹೊಟ್ಟೆಯೊಳಗಿರಿಸಿದ ಮೇಲೆ ಅವನಿದ್ದುದೆಲ್ಲಿ ? ಕೆಂಪಗಸೆಯು ಗಿಡವಿದ್ದುದೆಲ್ಲಿ ? ಆ ಚಿಕ್ಕ ಕಮಂಡಲುವಿದ್ದುದೆಲ್ಲಿ ? ಅಗಸ್ತ್ಯನಿದ್ದುದೆಲ್ಲಿ ? ಬ್ರಹ್ಮನು ಸುತ್ತಾಡಿದುದೆಲ್ಲಿ ? ॥ ೪೨ ॥ ನಿಮ್ಮ ಈ ವಿಚಿತ್ರ ಪಕ್ಷವು ಸರಿಯಾಗಿದೆ. ಜಗತ್ತಿನಲ್ಲಿ ಬೆಂಡೆಯ ಗಿಡವಿದ್ದು ಅದರಲ್ಲಿ ಕಮಂಡಲುವೂ ಅದರೊಳಗೆ ಆನೆಯೂ ಇರುತ್ತವೆಂಬ ನನ್ನ ಪಕ್ಷವಾದರೋ ಸರಿಯಲ್ಲ. ಅಲ್ಲವೇ ? ॥ ೪೩ ॥ ಸರ್ವಜ್ಞನೂ ವ್ಯಾಪಕನೂ ಆದ ಬ್ರಹ್ಮನು ಚರಾಚರಜಗತ್ತನ್ನು ತಿಳಿಯುತ್ತಾನೆ. ಅವನು ಹುಡುಕುತ್ತಿದ್ದ ಸೃಷ್ಟಿಯು ಸ್ಥಾನವನ್ನೇಕೆ ತಿಳಿಯಲಿಲ್ಲ? ॥ ೪೪ ॥ ಈ ಬ್ರಹ್ಮನು ನರಕದಿಂದಲೂ ಪ್ರಾಣಿಗಳನ್ನು ಶೀಘ್ರವಾಗಿ ಎಳೆಯುವುದಕ್ಕೆ ಶಕ್ತನಾಗಿರುತ್ತಾನೆಂದ ಮೇಲೆ ತನ್ನ ಅಂಡಕೋಶದ ಕೂದಲಿನ ತುದಿಯನ್ನೆಳೆಯುವುದಕ್ಕೇಕೆ ಶಕ್ತನಾಗಲಿಲ್ಲ ? ॥ ೪೫ ॥ ಪ್ರಳಯವಾಗುವುದನ್ನು ಮೊದಲೇ ತಿಳಿದು ಸಮಸ್ತಪೃಥ್ವಿಯನ್ನು ಕಾಪಾಡುವ ಈ ಹರಿಯು ಸೀತೆಯ ಹರಣವನ್ನೇಕೆ ತಿಳಿಯಲಿಲ್ಲ ? ಆಕೆಯನ್ನು ರಕ್ಷಿಸಲಿಲ್ಲವೇಕೆ ? ॥ ೪೬ ॥ ಎಲ್ಲವನ್ನೂ ಮೋಹಗೊಳಿಸುವವನಾದ ಈ ಶ್ರೀಪತಿಯು ಇಂದ್ರಜಿತ್ತಿನಿಂದ ಮೂರ್ಛೆಗೊಳಿಸಲ್ಪಟ್ಟು ನಾಗಪಾಶಗಳಿಂದ ಲಕ್ಷ್ಮಣಸಹಿತನಾಗಿ ಬಂಧಿಸಲ್ಪಟ್ಟುದು ಹೇಗೆ ? ॥ ೪೭ ॥ ಯಾವನ ಸ್ಮರಣಮಾತ್ರದಿಂದ ಎಲ್ಲ ವಿಪತ್ತುಗಳು ನಾಶವಾಗುತ್ತವೋ ಅಂತಹ ಹರಿಯು ತಾನೇ ಸೀತಾವಿಯೋಗವೇ ಮೊದಲಾದ ವಿಪತ್ತುಗಳನ್ನು ಹೊಂದಿರುವುದು ಹೇಗೆ ? ॥ ೪೮ ॥ ತನ್ನ ಹತ್ತು ಜನ್ಮಗಳನ್ನು ನಾರದನಿಗೆ ಹೇಳಿದ ಹರಿಯು ಫಣಿಪತಿಯನ್ನು ಕುರಿತು ' ಫಣಿರಾಜನೆ ! ನೀನು ಕಮಲದಂತೆ ಕೈ ಕಾಲು ಮೊಗವುಳ್ಳವಳೂ ರೂಪಲಾವಣ್ಯಗಳ ನದಿಯೂ ಗುಣಶಾಲಿನಿಯೂ ಆದ ಪತ್ನಿಯನ್ನು ನೋಡಿದೆಯಾ ? ' ಎಂದು ತನ್ನ ಪತ್ನಿಯನ್ನು ಕೇಳಿದನೇಕೆ ? ॥ ೪೯–೫೦ ॥ ಅನಾದಿಕಾಲದ ಮಿಥ್ಯಾತ್ವವೆಂಬ ಗಾಳಿಯಿಂದ ವಕ್ರರಾಗಿರುವ

ಜನರನ್ನು ನೂರಾರು ಜನ್ಮಗಳಿಂದಲೂ ನೆಟ್ಟನೆ-ಸರಿಮಾಡಲು ಯಾವನು ಸಮರ್ಥನು ? ॥ ೫೧ ॥ ಕ್ಷುಧೆ, ತೃಷೆ, ಭಯ, ದ್ವೇಷ, ರಾಗ, ಮೋಹ, ಮದ, ವ್ಯಾಧಿ, ಚಿಂತೆ, ಜನ್ಮ, ಜರಾ, ಮೃತ್ಯು, ವಿಷಾದ, ವಿಸ್ಮಯ, ಪ್ರೀತಿ, ಬೆವರು, ಖೇದ, ನಿದ್ರೆ, ಇವು ಪ್ರಾಣಿಗಳಲ್ಲಿರುವ ಸಾಧಾರಣವಾದ ದೋಷಗಳು. ದುಃಖಹೇತುಗಳಾದ ಈ ಹದಿನೆಂಟು ದೋಷಗಳು ಎಲ್ಲರಲ್ಲಿಯೂ ಇರುತ್ತವೆ ॥ ೫೨-೫೩ ॥ ಕ್ಷುಧೆಯೆಂಬ ಬೆಂಕಿಯುರಿಯಿಂದ ತಪ್ತವಾದ ದೇಹವು ಶೀಘ್ರವಾಗಿ ಒಣಗುವುದು ಐದು ಇಂದ್ರಿಯಗಳು ತಂತಮ್ಮ ವಿಷಯಗಳಲ್ಲಿ ಪ್ರವರ್ತಿಸುವುದಿಲ್ಲ ॥ ೫೪ ॥ ಬಾಯಾರಿಕೆಯಿಂದ ಪೀಡಿತನಾದವನ ವಿಲಾಸ, ವಿಭ್ರಮ, ಹಾಸ, ಸಂಭ್ರಮ, ಕುತೂಹಲ ಮೊದಲಾದುವೆಲ್ಲ ನಾಶವಾಗುತ್ತವೆ ॥ ೫೫ ॥ ಗಾಳಿಯ ಹೊಡೆತಕ್ಕೆ ಸಿಕ್ಕಿದ ಎಲೆಯಂತೆ, ಭಯದಿಂದ ಮೈಯೆಲ್ಲ ನಡುಗುವುದು, ಮಾತು ಪಲಾಯನ ಮಾಡುವುದು, ಎಲ್ಲವೂ ವಿಪರೀತವಾಗಿ ತೋರುವುದು ॥ ೫೬ ॥ ದ್ವೇಷದಿಂದ ಆಕುಲನಾದ ಮನುಷ್ಯನು ಎಲ್ಲರ ದೋಷವನ್ನು ಗ್ರಹಣಮಾಡುತ್ತಾನೆ. ಕೆಲಸವಿಲ್ಲದೆ ಕೋಪ ಮಾಡುತ್ತಾನೆ. ಬುದ್ಧಿಶೂನ್ಯನಾಗಿ ಯಾವನ ಗುಣವನ್ನೂ ತಿಳಿಯುವುದಿಲ್ಲ ॥ ೫೭ ॥ ರಾಗದಿಂದ ಆತುರವಾದ ಮನಸ್ಸುಳ್ಳ ನೀಚನು ಪಂಚೇಂದ್ರಿಯವಿಷಯಲೋಲುಪನೂ ಪರಪೀಡೆಯನ್ನು ಮಾಡುವವನೂ ಆಗಿ ಯುಕ್ತಾಯುಕ್ತವಿಷಯಗಳನ್ನು ನೋಡುವುದಿಲ್ಲ ॥ ೫೮ ॥ ' ನನ್ನ ಹೆಂಡತಿ, ನನ್ನ ಮಗಳು, ನನ್ನ ಮನೆ, ನನ್ನ ಬಂಧು ' ಈ ರೀತಿಯಾಗಿ ಮೋಹವೆಂಬ ಪಿಶಾಚದಿಂದ ಎಲ್ಲಾ ಜನರೂ ಮೋಹಿತರಾಗುತ್ತಾರೆ ॥ ೫೯ ॥ ಜ್ಞಾನಮದ ಜಾತಿಮದ ಕುಲಮದ ಐಶ್ವರ್ಯಮದ ತಪೋಮದ ರೂಪಮದ ಶಕ್ತಿಮದ ಮೊದಲಾದ ಮದಗಳಿಂದ ಮತ್ತನಾದ ದುರಾಚಾರಿ-ಮನುಷ್ಯನು ಎಲ್ಲಾ ಜನರನ್ನು ತಿರಸ್ಕರಿಸುತ್ತಾನೆ ॥ ೬೦ ॥ ಶ್ಲೇಷ್ಮ ವಾತ ಪಿತ್ತಗಳಿಂದುಂಟಾದ ರೋಗಗಳೆಂಬ ಬೆಂಕಿಗಳಿಂದ ತಪ್ತನಾದ ಮನುಷ್ಯನು ರೋಗಪರವಶವಾದ ದೇಹವುಳ್ಳವನಾಗಿ ಎಂದೂ ಸುಖವನ್ನು ಹೊಂದುವುದಿಲ್ಲ ॥ ೬೧ ॥ ಚಿಂತೆ

ಯಿಂದ ಮನುಷ್ಯನು ‘ ಮಿತ್ರನು ಹೇಗಾಗುವನು, ದ್ರವ್ಯವು ಹೇಗುಂಟಾಗುವುದು, ಮಕ್ಕಳು ಹೇಗಾಗುವರು, ಪತ್ನಿಯು ಹೇಗಾಗುವಳು, ಪ್ರಸಿದ್ಧಿಯು ಹೇಗಾಗುವುದು, ಪ್ರೀತಿಯು ಹೇಗಾಗುವುದು ’ ಈ ರೀತಿಯಾಗಿ ಯೋಚಿಸುತ್ತಾನೆ ‖ ೬೨ ‖ ನರಕವಾಸಕ್ಕಿಂತಲೂ ಅಧಿಕದುಃಖಕರವೂ ಕ್ರಿಮಿಸಮೂಹದಿಂದ ವ್ಯಾಪ್ತವೂ ಆದ ಗರ್ಭದಲ್ಲಿ ಪ್ರಾಣಿಯು ಮತ್ತೆ ಮತ್ತೆ ದುಃಖಕರವಾದ ಜನ್ಮವನ್ನು ಹೊಂದುವುದು ‖ ೬೩ ‖ ಯಾವನ ಶರೀರವು ಕೂಡ ಅವನ ವಶದಲ್ಲಿಲ್ಲವೋ ಅಂತಹ ಚೇತನಾಶೂನ್ಯನಾದ ಮುದುಕನಿಗೆ ಯಾವನು ವಶನಾಗಿರುತ್ತಾನೆ ? ‖ ೬೪ ‖ ಯಾವುದರ ಹೆಸರನ್ನು ಕೇಳಿದರೂ ಚಿತ್ತವು ಬಹಳವಾಗಿ ಕಂಪಿಸುತ್ತದೋ ಅಂತಹ ಮೃತ್ಯುವು ಸಾಕ್ಷಾತ್ತಾಗಿ ಬಂದರೆ ಭಯವನ್ನುಂಟುಮಾಡುವುದಿಲ್ಲವೇ ? ‖ ೬೫ ‖ ಉಪಸರ್ಗದಲ್ಲಿಯೂ ಮಹಾರೋಗದಲ್ಲಿಯೂ ಪುತ್ರರ ಮಿತ್ರರ ಮತ್ತು ಧನದ ನಾಶದಲ್ಲಿಯೂ ಉಂಟಾಗುವ ವಿಷಾದವು ಅಲ್ಪಶಕ್ತಿಯುಳ್ಳವನಿಗೆ ಪ್ರಾಣಾಪಹಾರಿಯಾಗುವುದು ‖ ೬೬ ‖ ತನಗೆ ಸಂಭವವಲ್ಲದಿರುವ ಬೇರೆಯವರ ಸಂಪತ್ತಿಯನ್ನು ನೋಡಿ ಜ್ಞಾನಶೂನ್ಯನಾದ ಜೀವನಿಗೆ ಪರಮಾಶ್ಚರ್ಯವುಂಟಾಗುವುದು ‖ ೬೭ ‖ ಸಮಸ್ತ ಅಮೇಧ್ಯಮಯವೂ ಹೇಯವೂ ಗ್ಲಾನಿಯನ್ನುಂಟುಮಾಡುವುದೂ ಕುತ್ಸಿತವೂ ಆದ ದೇಹದಲ್ಲಿ, ನೀಚನಾದ ಮನುಷ್ಯನು, ಶ್ವಾನದಂತೆ, ರತಿ–ಪ್ರೀತಿಯನ್ನು ಮಾಡುತ್ತಾನೆ ‖ ೬೮ ‖ ಶಕ್ತಿಹೀನನಾದ ಮನುಷ್ಯನು ಕೆಲಸವನ್ನು ಮಾಡುವಾಗ ಅವನ ದೇಹವನ್ನು ಮರ್ದಿಸುವುದೂ ಬೆಂಡಾಗಿ ಮಾಡುವುದೂ ಆದ ಬೆಮರುಂಟಾಗುವುದು ‖ ೬೯ ‖ ದುರ್ನಿವಾರ್ಯವೂ ಕೆಲಸವನ್ನು ಮಾಡುವುದರಿಂದುಂಟಾಗುವುದೂ ಆದ ಶ್ರಮದಿಂದ ಸಂತಪ್ತವಾದ ದೇಹವು, ಬೆಂಕಿಯಿಂದ ಕಾಯಿಸಲ್ಪಟ್ಟ ತುಪ್ಪದ ಮಡಕೆಯಂತೆ, ಶೀಘ್ರವಾಗಿ ಖೇದಗೊಳ್ಳುವುದು ‖ ೭೦ ‖ ಮದ್ಯದಿಂದ ಜ್ಞಾನಶೂನ್ಯನಾಗಿರುವವನಂತೆ, ನಿದ್ರೆಯಿಂದ ವಶೀಭೂತವಾದ ಜೀವವು ಸಕಲವ್ಯಾಪಾರಶೂನ್ಯವಾಗಿ ಹಿತಾಹಿತವನ್ನು ತಿಳಿಯುವುದಿಲ್ಲ ‖ ೭೧ ‖

ಹರನು ಕಪಾಲರೋಗದಿಂದ ಪೀಡಿತನಾಗಿದ್ದಾನೆಂದೂ ಹರಿಯು ಶಿರೋರೋಗಿಯೆಂದೂ ಸೂರ್ಯನು ಕುಷ್ಠರೋಗಿಯೆಂದೂ ಅಗ್ನಿಯು ಪಾಂಡುರೋಗವುಳ್ಳವನೆಂದೂ ಹೇಳಲಾಗಿದೆ. ವಿಷ್ಣುವು ನಿದ್ರೆಯಿಂದ ವ್ಯಾಪ್ತನಾಗಿದ್ದಾನೆ. ಅಗ್ನಿಯು ಹೊಟ್ಟೆಹಸಿವಿನಿಂದ ವ್ಯಾಪ್ತನಾಗಿದ್ದಾನೆ. ಶಂಕರನು ಯಾವಾಗಲೂ ರತಿಯಿಂದ ವ್ಯಾಪ್ತನಾಗಿದ್ದಾನೆ. ವಿಷ್ಣುವು ರಾಗದಿಂದ ವ್ಯಾಪ್ತನಾಗಿದ್ದಾನೆ ॥ ೭೨-೭೩ ॥ ಸ್ತ್ರೀಯಿರುವವನಲ್ಲಿ ರಾಗವಿರುತ್ತದೆಂದೂ ವೈರಿಯನ್ನು ನಾಶಮಾಡುವವನಲ್ಲಿ ದ್ವೇಷವಿರುತ್ತದೆಂದೂ ತನಗೆ ವಿಘ್ನವು ಬರುವುದೆಂಬ ತಿಳಿವಳಿಕೆಯಿಲ್ಲದಿರುವವನಲ್ಲಿ ಅಜ್ಞಾನವಿರುತ್ತದೆಂದೂ ಆಯುಧಗಳನ್ನು ಸಂಗ್ರಹಿಸಿಕೊಂಡಿರುವವನಲ್ಲಿ ಭಯವಿರುತ್ತದೆಂದೂ ಸೂಚಿತವಾಗುವುದು ॥ ೭೪ ॥ ಈ ದೋಷಗಳಿಂದ ಪೀಡಿತರಾಗಿರುವವರು ಬೇರೆಯವರನ್ನು ದೋಷಮುಕ್ತರನ್ನಾಗಿ ಹೇಗೆ ಮಾಡುವರು ? ಆನೆಗಳನ್ನು ಕೊಂದಿರುವ ಸಿಂಹಗಳಿಗೆ ಜಿಂಕೆಗಳನ್ನು ಕೊಲ್ಲುವುದರಲ್ಲಿ ಕಷ್ಟವಿರುವುದಿಲ್ಲ. ದೋಷಗಳನ್ನು ತಾವು ನಾಶಮಾಡಿದ್ದರೆ ಬೇರೆಯವರ ದೋಷಗಳನ್ನು ನಾಶಮಾಡಬಲ್ಲರೆಂದು ಭಾವವು ॥ ೭೫ ॥ ರೂಪವುಳ್ಳ ವಸ್ತುವಿನಲ್ಲಿ ಯಾವಾಗಲೂ ಗಂಧ ಸ್ಪರ್ಶ ರಸಾದಿಗಳು ಅವಿನಾಭಾವಿಗಳಾಗಿರುವಂತೆ, ರಾಗವುಳ್ಳವನಲ್ಲಿ ಎಲ್ಲಾ ದೋಷಗಳಿರುತ್ತವೆ. ಈ ವಿಷಯದಲ್ಲಿ ಸಂಶಯವಿಲ್ಲ ॥ ೭೬ ॥ ಪುರಾಣದಲ್ಲಿ ಹೇಳಿರುವಂತೆ, ಬ್ರಹ್ಮ ವಿಷ್ಣು ಮಹೇಶ್ವರರು ಏಕಮೂರ್ತಿಗಳಾಗಿದ್ದರೆ ಪರಸ್ಪರವಾಗಿ ಶಿರಶ್ಛೇದ ಮೊದಲಾದ ಕಾರ್ಯಗಳನ್ನು ಹೇಗೆ ಮಾಡುತ್ತಾರೆ ? ॥ ೭೭ ॥ ಮೇಲೆ ಹೇಳಲ್ಪಟ್ಟ ಈ ದೋಷಗಳನ್ನು, ಸೂರ್ಯನು ಕತ್ತಲೆಯ ಸಮೂಹಗಳನ್ನು ನಾಶಮಾಡುವಂತೆ, ಯಾವನು ನಾಶಮಾಡಿರುತ್ತಾನೋ ಪಾಪವನ್ನು ನಾಶಮಾಡುವುದಕ್ಕೆ ಸಮರ್ಥನಾದ ಅಂಥವನು ಎಲ್ಲಾ ದೇವರ್ಕಳಿಗೂ ಸ್ವಾಮಿಯಾಗಿರುತ್ತಾನೆ ॥ ೭೮ ॥ ಬ್ರಹ್ಮನು ನೀರಿನೊಳಗೆ ತನ್ನ ವೀರ್ಯವನ್ನು ಇರಿಸಿದನೆಂದೂ ಅದರಿಂದ ಗುಳ್ಳೆಯೆದ್ದಿತೆಂದೂ ಅದರಿಂದ ಜಗತ್ತನ್ನುಂಟುಮಾಡುವ ಒಂದು ಅಂಡವುಂಟಾಯಿ

ತೆಂದೂ ನಿಮ್ಮ ಪುರಾಣದಲ್ಲಿ ಹೇಳಿದೆ ॥ ೭೯ ॥ ಆ ಅಂಡವು ಎರಡಾಗಿ ಮಾಡಲ್ಪಟ್ಟ. ಬಳಿಕ ಅದರಿಂದ ಮೂರು ಲೋಕಗಳ ಉತ್ಪತ್ತಿಯಾಯ್ತು. ಹೀಗೆ ನಿಮ್ಮ ಆಗಮದಲ್ಲಿ ಹೇಳಿರುವುದು ನಿಜವಾಗಿರುವುದಾದರೆ ಆ ನೀರೆಲ್ಲಿತ್ತು ? ॥ ೮೦ ॥ ಸಕಲಪದಾರ್ಥಗಳ ಉತ್ಪತ್ತಿಯ ಕಾರಣ–ಸಾಮಗ್ರಿಗಳಿಲ್ಲದಿರುವ ಆಕಾಶದಲ್ಲಿ ನದೀ ಪರ್ವತ ಭೂಮಿ ವೃಕ್ಷ ಮೊದಲಾದ ಪದಾರ್ಥಗಳ ಉತ್ಪತ್ತಿಯ ಕಾರಣ–ಸಾಮಗ್ರಿಯು ಎಲ್ಲಿ ದೊರೆಯುವುದು ? ॥ ೮೧ ॥ ಸೃಷ್ಟಿಗಿಂತ ಮೊದಲು ಯಾವ ಆಕಾಶದಲ್ಲಿ ಒಂದು ಶರೀರದ ಕಾರಣ–ಸಾಮಗ್ರಿಯೂ ದುರ್ಲಭವಾಗಿದ್ದಿತೋ ಅಂತಹ ಆಕಾಶದಲ್ಲಿ ಮೂರು ಲೋಕಗಳ ಉತ್ಪತ್ತಿಗೆ ಕಾರಣವಾದ ಮೂರ್ತದ್ರವ್ಯವು ಎಲ್ಲಿ ದೊರೆಯುವುದು ? ॥ ೮೨ ॥ ಶರೀರವಿಲ್ಲದಿರುವ ಬ್ರಹ್ಮನು ಸೃಷ್ಟಿಯನ್ನು ಮಾಡಿರುವುದು ಹೇಗೆ ? ಶರೀರರಹಿತನಾಗಿರುವವನು ಶರೀರವನ್ನು ಮಾಡುವುದು ಹೇಗೆ ? ॥ ೮೩ ॥ ಸಮಸ್ತಪೃಥ್ವಿಯನ್ನು ತಾನು ಸೃಷ್ಟಿಸಿ ಅದನ್ನು ನಾಶಮಾಡುವ ಬ್ರಹ್ಮನಿಗೆ ಲೋಕಸಂಹಾರದಿಂದುಂಟಾಗುವ ಮಹಾಪಾಪವು ಯಾವುದರಿಂದ ನಿವಾರಣೆಯಾಗುವುದು ? ॥ ೮೪ ॥ ಕೃತಕೃತ್ಯನೂ ಶುದ್ಧನೂ ನಿತ್ಯನೂ ಅಮೂರ್ತನೂ ಸರ್ವಜ್ಞನೂ ಆದ ಪರಮಾತ್ಮನಿಗೆ ಲೋಕನಿರ್ಮಾಣದಲ್ಲಿ ಪ್ರಯೋಜನವೇನು ? ॥ ೮೫ ॥ ಸೃಷ್ಟಿಸುವುದಕ್ಕೆ ಯೋಗ್ಯವಾದ ಜಗತ್ತಿನ ನಾಶವನ್ನೇಕೆ ಮಾಡಬೇಕು ? ವಿನಾಶವನ್ನು ಮಾಡುವುದಕ್ಕೆ ಯೋಗ್ಯವಾದ ಜಗತ್ತಿನ ನಾಶವನ್ನು ಮಾಡಿ ಅದನ್ನು ನಿರ್ಮಾಣಮಾಡುವುದರಿಂದೇನು ಪ್ರಯೋಜನ ? ॥ ೮೬ ॥ ಎಲೈ ವಿಪ್ರರೆ ! ಪೂರ್ವಾಪರವಿರುದ್ಧಗಳಾದ ಪುರಾಣಗಳನ್ನೆಲ್ಲ ನ್ಯಾಯಪರರಾದ ಪ್ರಾಜ್ಞರು ಹೇಗೆ ನಂಬುತ್ತಾರೆ ?" ॥ ೮೭ ॥

ಮನೋವೇಗನು ಈ ರೀತಿಯಾಗಿ ಹೇಳಲು ಭೂಸುರರು ಮರುಮಾತನ್ನು ಹೇಳಲಿಲ್ಲ. ಅದನ್ನು ನೋಡಿ ಅವನು ಹೊರಟು ಉಪವನಕ್ಕೆ ಹೋಗಿ ಸ್ನೇಹಿತನಾದ ಪವನವೇಗನನ್ನು ಕುರಿತು " ಮಿತ್ರನೆ ! ಈ ದೇವವಿಶೇಷವನ್ನೂ

ಪುರಾಣಗಳ ಅರ್ಥವನ್ನೂ ನೀನು ಕೇಳಿದೆ. ವಿಚಾರಶೀಲರಿಗೆ ಅವುಗಳಲ್ಲೇನೂ ಸಾರವು ತೋರದು ॥ ೮೮-೮೯ ॥ ನಾರಾಯಣನು ನಾಲ್ಕು ಬಾಹುಗಳುಳ್ಳವನು. ಬ್ರಹ್ಮನು ನಾಲ್ಕು ಮುಖಗಳುಳ್ಳವನು. ಈಶ್ವರನು ಮೂರು ಕಣ್ಣುಗಳುಳ್ಳವನು. ಈ ಮಾತನ್ನು ಯಾವನು ನಂಬುವನು ? ॥ ೯೦ ॥ ಜಗತ್ತಿನಲ್ಲಿ ಒಂದು ಮುಖವುಳ್ಳವನೂ ಎರಡು ಬಾಹುಗಳುಳ್ಳವನೂ ಎರಡು ಕಣ್ಣುಗಳುಳ್ಳವನೂ ಆದ ಮನುಷ್ಯನು ಕಾಣಿಸುತ್ತಾನೆ. ಎಲ್ಲರೂ ಹಾಗೆಯೇ ಇರುತ್ತಾರೆ. ಮಿಥ್ಯಾತ್ವದಿಂದ ಪೀಡಿತರಾಗಿರುವ ಜನರು ಬೇರೆ ವಿಧವಾಗಿ ಕಲ್ಪಿಸುತ್ತಾರೆ ॥ ೯೧ ॥ ಆಕಾಶದ ನಟ್ಟನಡುವಿನಲ್ಲಿರುವ ಲೋಕವು ಅನಾದಿ ನಿಧನವೂ ಅಕೃತ್ರಿಮವೂ ಸ್ಥಿರವೂ ಆಗಿರುತ್ತದೆ. ಹೇಗೆ ಆಕಾಶಕ್ಕೆ ಯಾವನೂ ಕರ್ತನಿಲ್ಲವೋ ಹಾಗೆ ಈ ಜಗತ್ತಿಗೂ ಯಾವನೂ ಕರ್ತನಿಲ್ಲ ॥ ೯೨ ॥ ಗಾಳಿಗಳಿಂದ ಎಲೆಗಳು ಉರುಳಾಡುವಂತೆ, ಲೋಕದಲ್ಲಿ ಪ್ರಾಣಿಗಳು ತಾವು ಮಾಡಿದ ಕರ್ಮಗಳಿಂದ ಪ್ರೇರಿತಗಳಾಗಿ ನರಕ ತಿರ್ಯಙ್ಮನುಷ್ಯ ದೇವಗತಿಗಳಲ್ಲಿ ಸುಖದುಃಖಗಳನ್ನನುಭವಿಸುತ್ತ ತಿರುಗುತ್ತವೆ ॥ ೯೩ ॥ ತಮಗೆ ಬರುವ ವಿಪತ್ತನ್ನು ಕೂಡ ಯಾರು ನಾಶಮಾಡುವುದಿಲ್ಲವೋ ಅಂತಹ ಬ್ರಹ್ಮ ಶಂಕರ ನಾರಾಯಣ ದೇವೇಂದ್ರರು ಬೇರೆಯವರ ಸುಖಕ್ಕೆ ಕಾರಣರಾಗುವುದು ಹೇಗೆ ? ಪ್ರಾಜ್ಞರು ಈ ಮಾತನ್ನು ಹೇಗೆ ನಂಬುವರು ? ॥ ೯೪ ॥ ತನ್ನ ಮನೆಯು ಸುಡುತ್ತಿರುವಾಗ ಆ ಬೆಂಕಿಯನ್ನೂ ಆರಿಸುವುದಕ್ಕೆ ಆಲಸ್ಯವುಳ್ಳ ಮನುಷ್ಯನು ಬೇರೆಯವರ ಮನೆಯು ಸುಡುವಾಗ ಆ ಬೆಂಕಿಯನ್ನು ಆರಿಸುವುದಕ್ಕೆ ತೊಡಗುತ್ತಾನೆಂದರೆ ಆ ಮಾತನ್ನು ಯಾವ ಬುದ್ಧಿಶಾಲಿಯು ನಂಬುತ್ತಾನೆ ? ॥ ೯೫ ॥ ದ್ವೇಷ ರಾಗ ಮದ ಮೋಹಗಳಿಗೆ ಪರವಶರಾಗಿ ಯಾರು ತಮ್ಮ ಸುಖಕಾರಣಗಳನ್ನು ತಿಳಿಯುವುದಿಲ್ಲವೋ ಅಂತಹ ಬುದ್ಧಿಹೀನರು ಬೇರೆಯವರಿಗೆ ಶಾಶ್ವತವಾದ ಮುಕ್ತಿಮಾರ್ಗವನ್ನು ಹೇಗೆ ಹೇಳುತ್ತಾರೆ ? ॥ ೯೬ ॥ ಕಾಮಭೋಗವಶೀಭೂತರೂ ಜ್ಞಾನಶೂನ್ಯರೂ ಆದ

ದುಷ್ಟರು ಬೇರೆ ವಿಧವಾಗಿರುವ ಈ ಮೂರು ಲೋಕವನ್ನು, ವ್ಯತ್ಯಸ್ತವಾಗಿ ಬೋಧಿಸಿದರೆ, ತಮಗೆ ದುಸ್ಸಹವಾದ ನರಕವಾಸವುಂಟಾಗುವುದೆಂದು ತಿಳಿಯದೆ, ಹಾಗೆ ಬೋಧಿಸುತ್ತಾರೆ || ೯೭ || ಭವಸಮುದ್ರವನ್ನು ಹೊಂದಿಸುವ ದುರ್ಮಾರ್ಗಗಳಿಂದ ಮೋಕ್ಷಮಾರ್ಗವು ಮರೆಯಾಗಿರಲು ಬುದ್ಧಿಹೀನನಾದ ಯಾವನು ವಿಚಾರ ಮಾಡುವುದಿಲ್ಲವೋ ಅಂಥವನು ಮುಕ್ತಿಸ್ಥಾನವನ್ನು ಹೇಗೆ ಹೊಂದುವನು ? || ೯೮ || ಭಂಗಾರವನ್ನು ಕತ್ತರಿಸಿ ಕಾಯಿಸಿ ಒರೆದು ಮತ್ತು ಹೊಡೆದು ಪರೀಕ್ಷಿಸಿ ತೆಗೆದುಕೊಳ್ಳುವಂತೆ ವಿಶುದ್ಧವಾದ ಬುದ್ಧಿಯುಳ್ಳವರು ನಿರ್ದುಷ್ಟವಾದ ಧರ್ಮವೆಂಬ ರತ್ನವನ್ನು ಶೀಲ, ಸಂಯಮ, ತಪಸ್ಸು, ದಯಾಗುಣಗಳಿಂದ ಪರೀಕ್ಷಿಸುತ್ತಾರೆ || ೯೯ || ಯಾರು ನಿರ್ಮಲವಾದ ದೇವರು ಗುರು ಶಾಸ್ತ್ರ ಚಾರಿತ್ರಗಳನ್ನು ಪರೀಕ್ಷಿಸಿ ಅವುಗಳನ್ನು ಉಪಾಸನೆಮಾಡುತ್ತಾರೋ ಅವರು ಬಲವಾದ ಕರ್ಮವೆಂಬ ಸರಪಣಿಯನ್ನು ಕತ್ತರಿಸಿ ಪವಿತ್ರವೂ ನಾಶರಹಿತವೂ ಆದ ಸ್ಥಾನವನ್ನು ಹೊಂದುತ್ತಾರೆ || ೧೦೦ || ಪೂಜ್ಯವಾದ ಬುದ್ಧಿಯುಳ್ಳವರು ಆತ್ಮಹಿತವನ್ನು ಹೊಂದಬೇಕೆಂಬ ಬಯಕೆಯುಳ್ಳವರಾಗಿ ಅಹಂಕಾರವನ್ನು ಬಿಟ್ಟು ಒಂದು ದೇವರಿಂದ ಇನ್ನೊಂದು ದೇವರನ್ನೂ ಶಾಸ್ತ್ರದಿಂದ ಶಾಸ್ತ್ರವನ್ನೂ ಧರ್ಮದಿಂದ ಧರ್ಮವನ್ನೂ ಯತಿಯಿಂದ ಯತಿಯನ್ನೂ ಪರೀಕ್ಷಿಸಬೇಕು. ಒಂದುಕ್ಕೊಂದನ್ನು ಹೋಲಿಸಿ ಪಕ್ಷಪಾತವನ್ನು ಬಿಟ್ಟು ಗುಣದೋಷಗಳನ್ನು ವಿಚಾರಮಾಡಬೇಕೆಂದು ಭಾವವು || ೧೦೧ || ಕರ್ಮವನ್ನು ನಾಶಮಾಡಿರುವವನೂ ಲೋಕನಾಯಕರಿಂದ ಸ್ತುತಿಸಲ್ಪಡುವವನೂ ಲೋಕವ್ಯವಸ್ಥೆಯನ್ನು ತಿಳಿದಿರುವವನೂ ಆದ ದೇವರೇ ನಿಜವಾದ ದೇವರು. ರಾಗಾದಿದೋಷಗಳನ್ನು ನಾಶಮಾಡುವುದರಲ್ಲಿ ಸಮರ್ಥವೂ ಪ್ರಾಣಿರಕ್ಷಣೆಯಲ್ಲಿ ಪ್ರಧಾನವೂ ಆದ ಧರ್ಮವೇ ನಿಜವಾದ ಧರ್ಮವು. ಯುಕ್ತಿಯಿಂದ ಹೇಯೋಪಾದೇಯತತ್ತ್ವಗಳನ್ನು ಪ್ರಕಟಿಸುವುದರಲ್ಲಿ ಸಮರ್ಥವಾದ ಶಾಸ್ತ್ರವೇ ನಿಜವಾದ

ಶಾಸ್ತ್ರವು. ವೈರಾಗ್ಯದಿಂದ ಭೂಷಿತವಾದ ದೇಹವುಳ್ಳವನೂ ಅಪರಿಮಿತ್ರವಾದ ಜ್ಞಾನವುಳ್ಳವನೂ ಪರಿಗ್ರಹಗಳನ್ನು ತ್ಯಜಿಸಿದವನಾದರೂ ಶೀಲಚಾರಿತ್ರಚ್ಯುತನಾಗದಿರುವವನೂ ಆದ ಯತಿಯೇ ನಿಜವಾದ ಯತಿಯು ‖ ೧೦೨ ‖

ಇಂತು ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷಾತ್ರಿಯೋದಶಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

—o—

ಆನಂತರದಲ್ಲಿ ಮನೋವೇಗನು ಪವನವೇಗನನ್ನು ಕುರಿತು “ ಎಲೈ ಮಿತ್ರನೆ ! ನಿನಗೆ ಬೇರೆ ಕುತೂಹಲವನ್ನೂ ಹೇಳುತ್ತೇನೆ ” ಎಂದು ಹೇಳಿ ಋಷಿಯ ರೂಪವನ್ನು ಬಿಟ್ಟನು ‖ ೧ ‖ ಬಳಿಕ ತಾಪಸನ ವೇಷವನ್ನು ಸ್ವೀಕರಿಸಿ ಮನೋವೇಗನು ಪವನವೇಗನೊಡನೆ ಉತ್ತರದಿಕ್ಕಿನಿಂದ ಮತ್ತೆ ಪಾಟಲೀಪುರವನ್ನು ಪ್ರವೇಶಮಾಡಿದನು ‖ ೨ ‖ ಅವನು ವಾದಶಾಲೆಯಲ್ಲಿ ಘಂಟೆಯನ್ನೂ ನಗಾರಿಯನ್ನೂ ಬಾರಿಸಿ ಭಂಗಾರದ ಪೀಠದಲ್ಲಿ ಕುಳಿತುಕೊಂಡನು. ಆಗ ವಿಪ್ರರು ಬಂದು “ ಎಲೈ ತಾಪಸನೆ ! ಎಲ್ಲಿಂದ ಬಂದೆ ? ನೀನು ವ್ಯಾಕರಣವನ್ನು ಬಲ್ಲೆಯಾ ? ಅಥವಾ ಸವಿಸ್ತಾರವಾಗಿ ತರ್ಕವನು ಬಲ್ಲೆಯಾ ? ಶಾಸ್ತ್ರಪಾರಂಗತರಾದ ಬ್ರಾಹ್ಮಣರೊಡನೆ ವಾದವನ್ನು ಮಾಡುವೆಯಾ ? ” ಎಂದು ಕೇಳಿದರು ‖ ೩–೪ ‖ ಆಗ ಅವನು “ ಎಲೈ ಭೂಸುರರೆ ! ನಾನು ಈ ಗ್ರಾಮದಿಂದ ಬಂದೆನು. ನಾನು ವ್ಯಾಕರಣವನ್ನಾಗಲಿ ತರ್ಕವನ್ನಾಗಲಿ ವಾದವನ್ನಾಗಲಿ ಸ್ವಲ್ಪವೂ ತಿಳಿಯುದಿಲ್ಲ ” ಎಂದನು ‖ ೫ ‖ ಆ ಮಾತನ್ನು ಕೇಳಿ ವಿಪ್ರರು “ ಅಯ್ಯಾ ! ನೀನು ಆಟವನ್ನು ಬಿಟ್ಟು ಯಥಾರ್ಥವಿಷಯವನ್ನು ಹೇಳು. ಸ್ವರೂಪವನ್ನು ಕೇಳುವವರೊಡನೆ ಆಟಪಾಡುವುದು ಯೋಗ್ಯವಲ್ಲ ” ಎಂದರು ‖ ೬ ‖ ತಾಪಸವೇಷವನ್ನು ಧರಿಸಿರುವ ಖೇಚರ–ಮನೋವೇಗನು ಬಳಿಕ “ ಎಲೈ ವಿಪ್ರರೆ ! ನಾನು ನಿಮ್ಮ

ಗಳಿಗೆ ಯಥಾರ್ಥವಿಷಯವನ್ನು ಹೇಳುತ್ತೇನೆ. ಆದರೆ ಹೇಳುವುದಕ್ಕೆ ಹೆದರುತ್ತೇನೆ. ಏಕೆಂದರೆ, ಯುಕ್ತವಾದ ವಿಷಯವನ್ನು ಹೇಳಿದರೂ ವಿಚಾರವಿಲ್ಲದ ದುಷ್ಟರು ಅಯುಕ್ತತ್ವವನ್ನು ಆರೋಪಿಸಿ ಶೀಘ್ರವಾಗಿ ಬಹಳ ಉಪದ್ರವವನ್ನು ಮಾಡುತ್ತಾರೆ" ಎಂದನು ॥ ೭–೮ ॥ ಅನಂತರದಲ್ಲಿ ಸೂತ್ರಕಂಠರಾದ ವಿಪ್ರರು ಮನೋವೇಗನನ್ನು ಕುರಿತು "ಅಯ್ಯಾ ! ಯಥೋಚಿತವಾದ ವಿಷಯವನ್ನು ಹೇಳು. ಇಲ್ಲಿರುವ ಎಲ್ಲಾ ವಿಪ್ರರೂ ವಿಚಾರವುಳ್ಳವರೂ ಯುಕ್ತವಾದ ಪಕ್ಷವನ್ನು ಪ್ರೀತಿಸುವವರೂ ಆಗಿರುತ್ತಾರೆ" ಎಂದು ಹೇಳಿದರು ॥ ೯ ॥ ಆ ವಿಪ್ರರ ಮಾತನ್ನು ಕೇಳಿ ಮನೋವೇಗನು "ನೀವು ವಿಚಾರಪರರಾದರೆ ಅಭೀಷ್ಟವಾದ ವಿಷಯವನ್ನು ಹೇಳುತ್ತೇನೆ ॥ ೧೦ ॥ ಸಾಕೇತನಗರದಲ್ಲಿ ಬೃಹತ್ಕುಮಾರಿಕೆಯೆಂಬ ನನ್ನ ತಾಯಿಯನ್ನು ತಾತನು ನನ್ನ ತಂದೆಗೆ ಕೊಟ್ಟು ಮದುವೆಮಾಡಿದನು ॥ ೧೧ ॥ ಅವರ ವಿವಾಹ ಸಮಯದಲ್ಲಿ ವಾದ್ಯದ ಶಬ್ದವನ್ನು ಕೇಳಿ ಮದಿಸಿದುದೂ ಯಮನಂತೆ ಭಯಂಕರವೂ ಆದ ಆನೆಯು ಕಂಬವನ್ನು ಮುರಿದು ಬಂದಿತು ॥ ೧೨ ॥ ಬಳಿಕ ಎಲ್ಲಾ ಜನರು ವಿವಾಹದ ಕಾರಣವನ್ನು ಬಿಟ್ಟು ಹತ್ತು ದಿಕ್ಕುಗಳಿಗೆ ಓಡಿಹೋದರು. ಮಹಾಭಯವುಂಟಾದಾಗ ಸ್ಥಿರತ್ವವೆಲ್ಲಿರುವುದು ? ॥ ೧೩ ॥ ವ್ಯಾಕುಲಚಿತ್ತನಾದ ವರನೂ ಓಡಿದನು, ಆಗ ಅವನ ಶರೀರಸ್ಪರ್ಶದಿಂದ ವಧುವು ಮೂರ್ಛಿತಳಾಗಿ ಭೂಮಿಯ ಮೇಲೆ ಬಿದ್ದಳು ॥ ೧೪ ॥ 'ವಧುವನ್ನು ಬೀಳಿಸಿ ಗಂಡನು ತಪ್ಪಿಸಿಕೊಂಡನು. ನೋಡಿರಿ ನೋಡಿರಿ' ಎಂದು ಜನರು ಹೇಳುತ್ತಿರಲು ವರನು ನಾಚಿಕೊಂಡು ಎಲ್ಲಿಗೋ ಹೋದನು ॥ ೧೫ ॥ ಬಳಿಕ ಒಂದುವರೆ ತಿಂಗಳಲ್ಲಿ ನನ್ನ ತಾಯಿಗೆ ಗರ್ಭೋತ್ಪತ್ತಿಯಾಗಿ ಕಾಣಿಸಿಕೊಂಡಿತು. ಅದೂ ಆಕೆಯ ಹೊಟ್ಟೆಯೂ ಒಂಬತ್ತು ತಿಂಗಳವರೆಗೆ ಬೆಳೆದುವು ॥ ೧೬ ॥ ಬಳಿಕ ನನ್ನ ತಾಯಿಯ ತಾಯಿಯು 'ಮಗಳೆ ! ಯಾರು ಬಸುರು ಮಾಡಿದರು' ಎಂದು ಕೇಳಿದಳು. ಅದಕ್ಕೆ ಆಕೆಯು 'ವರನ ಅಂಗಸ್ಪರ್ಶಕ್ಕಿಂತ ಮತ್ತಾರನ್ನೂ ತಿಳಿಯೆನು' ಎಂದಳು ॥ ೧೭ ॥ ಬಳಿಕ

ತಪಸ್ವಿಗಳು ಮನೆಗೆ ಬಂದರು. ಅವರಿಗೆ ನನ್ನ ತಾಯಿಯು ತಂದೆಯು ಊಟಮಾಡಿಸಿ 'ನೀವುಗಳು ಎಲ್ಲಿಗೆ ಹೋಗಲುದ್ಯುಕ್ತರಾಗಿದ್ದೀರಿ ?' ಎಂದು ಕೇಳಿದನು ॥ ೧೮ ॥ ಅವನಿಗೆ ಈ ತಪಸ್ವಿಗಳು 'ಅಯ್ಯಾ ! ಇಲ್ಲಿ ಹನ್ನೆರಡು ವರ್ಷಗಳವರೆಗೆ ದುರ್ಭಿಕ್ಷವುಂಟಾಗುವುದು. ನಾವು ಸುಭಿಕ್ಷವಾಗಿರುವ ಪ್ರದೇಶಕ್ಕೆ ಹೊರಟಿರುತ್ತೇವೆ ನೀನು ನಮ್ಮೊಡನೆ ಬಾ. ವ್ಯರ್ಥವಾಗಿ ಇಲ್ಲಿ ಹಸಿವಿನಿಂದಿರಬೇಡ. ಸ್ವಲ್ಪವಾದರೂ ಉಪಕಾರವನ್ನು ಮಾಡು' ಈ ಪ್ರಕಾರವಾಗಿ ಹೇಳಿ ಅವರು ಹೊರಟುಹೋದರು ॥ ೧೯-೨೦ ॥ ತಾಯಿಯ ಗರ್ಭದಲ್ಲಿ ವಾಸವಾಗಿರುವವನೂ ಹೊಟ್ಟೆಹಸಿವಿನಿಂದ ಕಂಪಿತವಾದ ಮನಸ್ಸುಳ್ಳವನೂ ಆದ ನಾನು ಆ ತಪಸ್ವಿಗಳ ಮಾತನ್ನು ಕೇಳಿ ಮನಸ್ಸಿನಲ್ಲಿ ಇದನ್ನು ಯೋಚಿಸಿದೆನು–ಇಲ್ಲಿ ಹನ್ನೆರಡು ವರ್ಷ ದುರ್ಭಿಕ್ಷವುಂಟಾದರೆ ಹಸಿವಿನಿಂದ ಸಾಯುವ ನಾನು ಹೊಟ್ಟೆಯಿಂದ ಹೊರಟು ಏನು ಮಾಡುವೆನು ? ಎಂದು ಯೋಚಿಸಿ ಆಗ ನಾನು ಹನ್ನೆರಡು ವರ್ಷಗಳವರೆಗೆ ಗರ್ಭದಲ್ಲಿದ್ದೆನು. ಭಯಗ್ರಸ್ತವಾದ ಪ್ರಾಣಿಯು ಭೋಜನಕ್ಕೋಸ್ಕರ ಎಲ್ಲಿ ತಾನೇ ಇರುವುದಿಲ್ಲ ? ॥ ೨೧-೨೩ ॥ ನಾನು ಗರ್ಭದಲ್ಲಿರುವಾಗ ಆ ತಪಸ್ವಿಗಳು ದುರ್ಭಿಕ್ಷವು ಕಳೆದನಂತರ ನನ್ನ ತಾಯಿಯು ತಂದೆಯು ಮನೆಗೆ ಮತ್ತೆ ಬಂದರು ॥ ೨೪ ॥ ಆಗ ಅವನು ಆ ತಪಸ್ವಿಗಳಿಗೆ ನಮಸ್ಕಾರವನ್ನು ಮಾಡಿ ಪ್ರಶ್ನೆಮಾಡಲಾಗಿ 'ಅಯ್ಯಾ ! ಸುಭಿಕ್ಷವುಂಟಾಯಿತು. ನಾವು ನಮ್ಮ ದೇಶಕ್ಕೆ ಹೊರಡುತ್ತೇವೆ' ಎಂದು ಹೇಳಿದರು ॥ ೨೫ ॥ ನಾನು ಅವರುಗಳ ಮಾತನ್ನು ಕೇಳಿ ಗರ್ಭದಿಂದ ಹೊರಟೆನು. ಆಗ ನನ್ನ ತಾಯಿಯು ಪ್ರಸವವೇದನೆಯಿಂದ ವ್ಯಾಪ್ತವಾದ ದೇಹವುಳ್ಳವಳಾಗಿ ಒಲೆಯ ಮುಂದೆ ಚಿಂದಿ ಬಟ್ಟೆಯನ್ನು ಹಾಕಿ ಮೂರ್ಛಿತಳಾಗಿ ಬಿದ್ದಳು. ನಾನು ತಾಯಿಯ ಹೊಟ್ಟೆಯಿಂದ ಹೊರಟು ಬೂದಿಯಲ್ಲಿ ಬಿದ್ದೆನು ॥ ೨೬-೨೭ ॥ ಒಂದು ಪಾತ್ರವನ್ನು ತೆಗೆದುಕೊಂಡು ಎದ್ದು 'ತಾಯಿಯೆ ! ನಾನು ಬಹಳ ಹಸಿದಿದ್ದೇನೆ. ನನಗೆ ಊಟಕ್ಕಿಡು' ಎಂದು ತಾಯಿಯನ್ನು ಕೇಳಿದೆನು ॥ ೨೮ ॥ ಆಗ

ನನ್ನ ತಾತನು ಆ ತಪಸ್ವಿಗಳನ್ನು ಕುರಿತು ‘ ಎಲೈ ತಪೋಧನರೆ ! ಹುಟ್ಟಿದೊಡನೆಯೇ ಭೋಜನವನ್ನು ಕೇಳುವ ಯಾವ ಬಾಲಕನನ್ನಾದರೂ ನೀವುಗಳು ಈ ಲೋಕದಲ್ಲಿ ನೋಡಿದ್ದೀರೋ ? ’ ಎಂದು ಕೇಳಿದನು ‖ ೨೯ ‖ ಅದಕ್ಕೆ ಅವರು ‘ ಅಯ್ಯಾ ಸಾಧುವೆ ! ಇವನು ನಿಜವಾಗಿಯೂ ಉತ್ಪಾತಕನು, ಇವನನ್ನು ಮನೆಯಿಂದ ಹೊರಡಿಸು. ಹಾಗೆ ಮಾಡದಿದ್ದರೆ ನಿನಗೆ ವಿಘ್ನಪರಂಪರೆಯುಂಟಾಗುವುದು ’ ಎಂದು ಹೇಳಿದರು ‖ ೩೦ ‖ ಬಳಿಕ ತಾಯಿಯು ನನ್ನನ್ನು ಕುರಿತು ‘ ಎಲೌ ನನಗೆ ದುಃಖವನ್ನುಂಟುಮಾಡುವ ಕೆಟ್ಟ ಮಗನಾಗಿ ಹುಟ್ಟಿದೆ. ಯಮನ ಮನೆಗೆ ಹೋಗು. ಅವನು ನಿನಗೆ ಊಟಕೊಡುವನು ’ ಎಂದು ಹೇಳಿದಳು ‖ ೩೧ ‖ ಆಗ ನಾನು ‘ ತಾಯಿಯೆ ! ನನಗೆ ಅಪ್ಪಣೆಯನ್ನು ಕೊಡು ’ ಎಂದು ಕೇಳಿದೆನು. ಅವಳು ‘ ನನ್ನ ಮನೆಯಿಂದ ನೀನು ಹೊರಟುಹೋಗು ’ ಎಂದಳು ‖ ೩೨ ‖ ಆಗ ನಾನು ಮೈಗೆ ಬೂದಿಯನ್ನು ಬಳಿದುಕೊಂಡು ಹೊರಟು ಬೋಳು ತಲೆಯವನಾಗಿ ತಪಸ್ವಿಗಳೊಡನೆ ನಾನೂ ತಪಸ್ವಿಯಾಗಿ ತಪಸ್ವಿಗಳ ಸ್ಥಾನದಲ್ಲಿ ದುಷ್ಕರವಾದ ತಪಸ್ಸನ್ನು ಮಾಡಿಕೊಂಡಿದ್ದೆನು. ವಿದ್ವಾಂಸರು ಶ್ರೇಯಸ್ಕರವಾದ ಕಾರ್ಯವನ್ನು ಪ್ರಾರಂಭಿಸಿ ಅಜಾಗರೂಕರಾಗಿರುವುದೇ ಇಲ್ಲ ‖ ೩೩–೩೪ ‖ ಒಂದಾನೊಂದು ಕಾಲದಲ್ಲಿ ನಾನು ಸಾಕೇತನಗರವನ್ನು ಸ್ಮರಿಸಿಕೊಂಡು ಅಲ್ಲಿಗೆ ಹೋದೆನು. ಆಗ ನನ್ನ ತಾಯಿಯು ಇನ್ನೊಬ್ಬನೊಡನೆ ಮದುವೆಮಾಡಿಕೊಳ್ಳುವುದನ್ನು ಕಂಡೆನು ‖ ೩೫ ‖ ಬಳಿಕ ನಾನು ತಪಸ್ವಿಗಳಿಗೆ ನನ್ನ ಸಂಬಂಧವನ್ನು ತಿಳುಹಿ ‘ ಎಲೈ ತಪೋಧನರೆ ! ಇವಳು ಇನ್ನೊಬ್ಬನೊಡನೆ ಮದುವೆ ಮಾಡಿಕೊಳ್ಳುವುದರಲ್ಲಿ ದೋಷವಿಲ್ಲವೋ ? ಹೇಳಿರಿ ’ ಎಂದು ಪ್ರಶ್ನೆಮಾಡಿದೆನು ‖ ೩೬ ‖ ಆಗ ಆ ಋಷಿಗಳು ‘ ದ್ರೌಪದಿಗೆ ಪಾಂಡವರು ಐದು ಮಂದಿಗಳು ಪತಿಗಳಾಗಿದ್ದರೆಂದು ಹೇಳಿರುವಾಗ ನಿನ್ನ ತಾಯಿಗೆ ಇಬ್ಬರು ಗಂಡಂದಿರಾದರೆ ದೋಷವೇನು ? ಒಂದು ಸಲ ವಿವಾಹಿತಳಾದರೂ ದೈವಯೋಗದಿಂದ ಪತಿಯು ಸತ್ತರೆ ಅಕ್ಷತಯೋನಿಯಾದ—ಪತಿಸಂಪರ್ಕ

ವನ್ನು ಮಾಡದಿರುವ ಸ್ತ್ರೀಯು ಪುನಃ ವಿವಾಹಯೋಗ್ಯಳಾಗುತ್ತಾಳೆ. ಮಕ್ಕಳನ್ನು ಹಡೆದಿರುವ ಸ್ತ್ರೀಯ ಗಂಡನು ಪರದೇಶಕ್ಕೆ ಹೋಗಿದ್ದರೆ ಎಂಟು ವರ್ಷಗಳವರೆಗೆ ಆತನ ನಿರೀಕ್ಷಣೆಯಲ್ಲಿದ್ದು ಅವನು ಬಾರದಿದ್ದರೆ ಆ ಸ್ತ್ರೀಯೂ ಮಕ್ಕಳನ್ನು ಹಡೆದಿರುವ ಸ್ತ್ರೀಯು ನಾಲ್ಕು ವರ್ಷಗಳವರೆಗೆ ನಿರೀಕ್ಷಣೆಯಲ್ಲಿದ್ದು ಗಂಡನು ಬಾರದಿದ್ದರೆ ಆ ಸ್ತ್ರೀಯೂ ಬೇರೆ ಗಂಡನನ್ನು ಮಾಡಿಕೊಳ್ಳಬಹುದು. ಕಾರಣವಿದ್ದರೆ ಐದು ಮಂದಿ ಗಂಡರನ್ನು ಪರಿಗ್ರಹಿಸಿದರೆ ಸ್ತ್ರೀಯರಿಗೆ ದೋಷವಿಲ್ಲ. ಇದು ವ್ಯಾಸ ಮೊದಲಾದ ಋಷಿಗಳ ವಚನ ' ಎಂದು ಹೇಳಿದರು ‖ ೩೬–೪೦ ‖ ಋಷಿಗಳ ಈ ಮಾತಿನಿಂದ ತಾಯಿಗೆ ದೋಷವಿಲ್ಲವೆಂದು ತಿಳಿದು ಏಕಾಂತಸ್ಥಾನದಲ್ಲಿದ್ದು ತಾಪಸಾಶ್ರಮದಲ್ಲಿ ಒಂದು ವರ್ಷದವರೆಗೆ ತಪಸ್ಸನ್ನು ಮಾಡಿಕೊಂಡಿದ್ದೆನು ‖ ೪೧ ‖ ದ್ವಿಜರೆ! ಆ ಮೇಲೆ ನಾನು ತೀರ್ಥಯಾತ್ರೆಯನ್ನು ಮಾಡಬೇಕೆಂದು ಭೂಮಿಯಲ್ಲಿ ಸಂಚರಿಸುತ್ತ ನಿಮ್ಮ ಈ ಪಟ್ಟಣಕ್ಕೆ ಬಂದೆನು " ಎಂದು ಹೇಳಿದನು ‖ ೪೨ ‖ ಅನಂತರದಲ್ಲಿ ವಿಪ್ರರು ಕೋಪದಿಂದ ಚಲಿಸುತ್ತಿರುವ ತುಟಿಯುಳ್ಳವರಾಗಿ ಮನೋವೇಗನನ್ನು ಕುರಿತು "ಎಲೈ ದುಷ್ಟನೆ! ನೀನು ಸುಳ್ಳನ್ನು ಹೇಳಿದೆ. ಇದನ್ನು ನೀನು ಎಲ್ಲಿ ಕಲಿತೆ? ‖ ೪೩ ‖ ಬ್ರಹ್ಮನು ಸುಳ್ಳನ್ನೆಲ್ಲ ಒಂದು ಕಡೆಯಲ್ಲಿ ಸೇರಿಸಿ ನಿನ್ನನ್ನು ನಿರ್ಮಾಣಮಾಡಿದನು, ನಿಜ. ಹಾಗಲ್ಲದಿದ್ದರೆ ನೀನು ಅಸಂಭಾವ್ಯವಾದ ಕಾರ್ಯಗಳನ್ನು ಹೇಗೆ ಹೇಳುತ್ತಿದ್ದೆ?'' ಎಂದರು ‖ ೪೪ ‖ ಆ ಮೇಲೆ ಮನೋವೇಗನು ವಿಪ್ರರನ್ನು ಕುರಿತು "ಎಲೈ ವಿಪ್ರರೆ! ನೀವೇಕೆ ಇಂತಹ ಮಾತನ್ನಾಡುತ್ತೀರಿ? ನಿಮ್ಮ ಪುರಾಣಗಳಲ್ಲಿ ಇಂತಹ ಕಾರ್ಯಗಳಿಲ್ಲವೋ?" ಎಂದನು ‖ ೪೫ ‖ ಆಗ ಆ ದ್ವಿಜರು ಮನೋವೇಗನನ್ನು ಕುರಿತು "ಅಯ್ಯಾ! ವೇದದಲ್ಲಾಗಲಿ ಪುರಾಣದಲ್ಲಾಗಲಿ ಎಲ್ಲಿಯಾದರೂ ಇಂತಹ ವಿಷಯವನ್ನು ನೀನು ನೋಡಿದ್ದರೆ ಹೇಳು" ಎಂದರು ‖ ೪೬ ‖ ಆಗ ಮನೋವೇಗನು ದ್ವಿಜರನ್ನು ಕುರಿತು "ಎಲೈ ದ್ವಿಜರೇ! ಹೇಳುತ್ತೇನೆ. ಆದರೆ ವಿಚಾರವಿಲ್ಲದೆ ನೀವು

ಗಳು ನನ್ನ ಮಾತನ್ನು ಗ್ರಹಿಸುವುದಾದರೆ ನಾನು ನಿಮ್ಮಗಳಿಗೆ ಹೆದರುತ್ತೇನೆ ॥ ೪೭ ॥ ಯಾರ ವೇದಪುರಾಣಗಳಲ್ಲಿ ಹೆಜ್ಜೆ ಹೆಜ್ಜೆಗೂ ಬ್ರಹ್ಮಹತ್ಯಾದೋಷ ವಿರುವುದೋ ಅಂತಹ ನೀವುಗಳು ನಾನು ಹೇಳುವ ಒಳ್ಳೆಯ ಮಾತನ್ನು ಹೇಗೆ ಗ್ರಹಿಸುವಿರಿ ? ॥ ೪೮ ॥ ಪುರಾಣ, ಮನುಧರ್ಮ, ಸಾಂಗವೇದ, ಚಿಕಿತ್ಸಿತ ಇವು ನಾಲ್ಕು ಆಜ್ಞಾಸಿದ್ಧಗಳೆಂದೂ ಇವುಗಳನ್ನು ಹೇತುಗಳಿಂದ ಖಂಡಿಸಬಾರದೆಂದೂ ನಿಮ್ಮ ಆಗಮದಲ್ಲಿ ಹೇಳಿದೆ ॥ ೪೯ ॥ ಮನು ವ್ಯಾಸ ವಸಿಷ್ಠರ ವೇದಸಮ್ಮತವಾದ ವಚನವನ್ನು ಅಪ್ರಮಾಣವನ್ನಾಗಿ ಮಾಡುವ ಮನುಷ್ಯನಿಗೆ ದುರ್ನಿವಾರ್ಯವಾದ ಬ್ರಹ್ಮಹತ್ಯಾದೋಷವು ಬರುವುದು ॥ ೫೦ ॥ ಎಲ್ಲಿ ದೂಷಣವಿದೆಯೋ ಅಲ್ಲಿ ಹೇತುವಿನ ಪ್ರಯೋಗಕ್ಕೆ ಅವಕಾಶವನ್ನು ಕೊಡುವುದಿಲ್ಲ, ನಿರ್ದುಷ್ಟವಾದ ಭಂಗಾರವನ್ನು ಕಾಯಿಸಿದರೂ ಯಾವನಾದರೂ ಹೆದರುತ್ತಾನೆಯೇ ?" ಎಂದು ಹೇಳಿದನು ॥ ೫೧ ॥ ಆಗ ವೈದಿಕರು ಮನೋವೇಗನನ್ನು ಕುರಿತು "ಅಯ್ಯಾ ! ಮಾತಿನಿಂದ ಪಾತಕ ವೆಲ್ಲಿಬರುವುದು ? ಹರಿತವಾದ ಕತ್ತಿಯೆಂದು ಹೇಳಿದರೆ ನಾಲಗೆಯು ಕತ್ತರಿಸಲ್ಪಡುವುದಿಲ್ಲವಲ್ಲ ॥ ೫೨ ॥ ವಚನವನ್ನುಚ್ಚರಿಸಿದ ಮಾತ್ರದಿಂದ ಪಾತಕ ವುಂಟಾಗುವುದಾದರೆ ಉಷ್ಣವಾದ ಬೆಂಕಿಯೆಂದು ಹೇಳಿದರೆ ಆ ಮಾತೇಕೆ ಸುಡುವುದಿಲ್ಲ ? ॥ ೫೩ ॥ ನೀನು ಪುರಾಣಾರ್ಥವು ಹೇಗಿದೆಯೋ ಹಾಗೆ ಅದನ್ನು ನಿಸ್ಸಂದೇಹವಾಗಿ ಹೇಳು. ನಾವೆಲ್ಲರೂ ನೈಯಾಯಿಕರು. ನ್ಯಾಯವಾದ ಮಾತನ್ನು ಗ್ರಹಣಮಾಡುವುವೆವು" ಎಂದು ಹೇಳಿದರು ॥ ೫೪ ॥ ಆ ಮೇಲೆ ಸ್ವಮತ ಪರಮತ ಶಾಸ್ತ್ರಜ್ಞನಾದ ಮನೋವೇಗನು ವಿಪ್ರರನ್ನು ಕುರಿತು "ಎಲೈ ವಿಪ್ರರೆ ! ಹಾಗಾದರೆ ಕೇಳಿರಿ. ಮನೋಗತವನ್ನು ವ್ಯಕ್ತ ಮಾಡುತ್ತೇನೆ ॥ ೫೫ ॥

ಭಾಗೀರಥಿಯೆಂದು ಹೆಸರುಳ್ಳ ಇಬ್ಬರು ಹೆಂಗುಸರು ಒಂದು ಕಡೆಯಲ್ಲಿ ಮಲಗಿದ್ದರು. ಪರಸ್ಪರಸ್ಪರ್ಶದಿಂದ ಅವರಲ್ಲಿ ಒಬ್ಬಳಿಗೆ ಗರ್ಭೋತ್ಪತ್ತಿಯಾಗಿ ಪ್ರಸಿದ್ಧನಾದ ಭಗೀರಥನೆಂಬ ಪುತ್ರನು ಜನಿಸಿದನು ॥ ೫೬ ॥ ಸ್ತ್ರೀಯು

ಸ್ಪರ್ಶಮಾತ್ರದಿಂದ ಸ್ತ್ರೀಗೆ ಗರ್ಭವು ಸಂಭವಿಸುವುದಾದರೆ ನನ್ನ ತಾಯಿಗೆ ಪುರುಷನ ಸ್ಪರ್ಶದಿಂದ ಗರ್ಭವೇಕಾಗಬಾರದು ? ॥ ೫೭ ॥ ಧೃತರಾಷ್ಟ್ರನಿಗೆ ಗಾಂಧಾರಿಯನ್ನು ಎರಡು ತಿಂಗಳಲ್ಲಿ ಕೊಡುವುದಂತೆ. ಆ ವಾಗ್ದಾನಕ್ಕೀತ ಪೊದಲು ಅವಳು ರಜಸ್ವಲೆಯಾದಳು ॥ ೫೮ ॥ ನಾಲ್ಕನೆಯ ದಿವಸದಲ್ಲಿ ಸ್ನಾನಮಾಡಿ ಹಲಸಿನ ಮರವನ್ನು ಅಪ್ಪಿಕೊಂಡಳು. ಆಗ ಆಕೆಯ ಹೊಟ್ಟೆಯನ್ನು ಬೆಳೆಯಿಸುವ ಮಹಾಭಾರವುಳ್ಳ ಗರ್ಭವುಂಟಾಯಿತ್ತು ॥ ೫೦ ॥ ಗರ್ಭೋತ್ಪತ್ತಿಯಾದುದನ್ನು ನೋಡಿ ಆಕೆಯ ತಂದೆಯು ಆಕೆಯನ್ನು ಧೃತರಾಷ್ಟ್ರನಿಗೆ ಕೊಟ್ಟನು. ಲೋಕಾಪವಾದವನ್ನು ಹೋಗಲಾಡಿಸುವುದಕ್ಕೋಸ್ಕರ ಎಲ್ಲಾ ಜನರೂ ಪ್ರಯತ್ನಿಸುತ್ತಾರೆ ॥ ೬೦ ॥ ವಿವಾಹಿತಳಾದ ಆ ಗಾಂಧಾರಿಯ ಹೊಟ್ಟೆಯಲ್ಲಿ ಒಂದು ಹಲಸಿನ ಫಲವು ಹುಟ್ಟಿತು, ಆ ಫಲದ ಹೊಟ್ಟೆಯಲ್ಲಿ ಶ್ರೇಷ್ಠರಾದ ನೂರು ಮಂದಿ ಮಕ್ಕಳು ಹುಟ್ಟಿದರು ॥ ೬೧ ॥ ಇಂತಹ ಪುರಾಣಾರ್ಥವು ನಿಮ್ಮಲ್ಲಿದೆಯೋ ? ಇಲ್ಲವೋ ? " ಎಂದು ಕೇಳಿದನು. ಅದಕ್ಕೆ ಆ ವಿಪ್ರರು " ಅಯ್ಯಾ ! ಇದ್ದೇ ಇದೆ. ಇದನ್ನು ಯಾವನು ನಿಷೇಧಿಸುತ್ತಾನೆ ? '' ಎಂದರು ॥ ೬೨ ॥ ಆಗ ಮನೋವೇಗನು " ಹಲಸಿನ ಮರವನ್ನು ಅಪ್ಪಿಕೊಂಡುದದರಿಂದ ಮಕ್ಕಳಾದರೆಂದು ಹೇಳಿರುವಾಗ ಮನುಷ್ಯನ ಸ್ಪರ್ಶದಿಂದ ಪುತ್ರೋತ್ಪತ್ತಿಯಾಗಿರುವುದು ಹೇಗೆ ಸುಳ್ಳು ? ' ಎಂದು ವಿಪ್ರರನ್ನು ಕೇಳಿದನು ॥ ೬೩ ॥ ಮನೋವೇಗನ ಈ ರೀತಿಯಾದ ಮಾತನ್ನು ಕೇಳಿ ವಿಪ್ರೋತ್ತಮರು ಅವನನ್ನು ಕುರಿತು '' ಅಯ್ಯಾ ! ಪತಿಯ ಸ್ಪರ್ಶದಿಂದ ನೀನು ಜನಿಸಿದೆಯೆಂಬೀ ಮಾತು ಸತ್ಯ. ಆದರೆ ತಪಸ್ವಿಯ ಮಾತನ್ನು ಕೇಳಿ ಹನ್ನೆರಡು ವರ್ಷಗಳವರೆಗೆ ತಾಯಿಯ ಹೊಟ್ಟೆಯಲ್ಲಿದ್ದನೆಂಬೀ ಮಾತನ್ನು ನಾವು ನಂಬುವುದೇ ಇಲ್ಲ " ಎಂದು ಹೇಳಿದರು ॥ ೬೪-೬೫ ॥ ಅದಕ್ಕೆ ಮನೋವೇಗನು '' ವಿಪ್ರರೆ ! ಪೂರ್ವದಲ್ಲಿ ಶ್ರೀ ಕೃಷ್ಣನು ಸುಭದ್ರೆಗೆ ಚಕ್ರವ್ಯೂಹದ ಕ್ರಮವನ್ನು ಹೇಳಿದನು. ಅದನ್ನು ತಾಯಿಯ ಗರ್ಭದಲ್ಲಿದ್ದ ಅಭಿಮನ್ಯುವು ಹೇಗೆ ಕೇಳಿದನು ? ನಾನು ತಪಸ್ವಿ

ಗಳ ಮಾತನ್ನೇಕೆ ಕೇಳಬಾರದು ? ॥ ೬೬–೬೭ ॥ ಯಮ (ಮಯ) ಮುನಿಯು ಸರೋವರದಲ್ಲಿ ತನ್ನ ಕೌಪೀನವನ್ನು ತೊಳೆದಾಗ ಅದರಲ್ಲಿದ್ದ ಶುಕ್ರಧಾತು ವನ್ನು ನೀರಿನಲ್ಲಿದ್ದ ಹೆಣ್ಣುಕಪ್ಪೆಯು ಬಂದು ಪಾನಮಾಡಿತು ॥ ೬೮ ॥ ಅದರಿಂದ ಆ ಕಪ್ಪೆಯು ಬಸುರಾಗಿ ಸಮಯವು ಸಂಪೂರ್ಣವಾದ ಮೇಲೆ ಸುಂದರವಾದ ಹೆಣ್ಣುಮಗುವನ್ನು ಹಡೆಯಿತು ॥ ೬೯ ॥ 'ಶುಭಲಕ್ಷಣ ವುಳ್ಳ ಈ ಕನ್ಯೆಯು ನಮ್ಮ ಜಾತಿಗೆ ಯೋಗ್ಯಳಲ್ಲ' ಎಂದು ತಿಳಿದು ಆ ಹೆಣ್ಣು ಕಪ್ಪೆಯು ಮಗುವನ್ನು ತಾವರೆಯೆಲೆಯ ಮೇಲೆ ಚೆಲ್ಲಿತು ॥ ೭೦ ॥ ಒಂದಾನೊಂದು ಕಾಲದಲ್ಲಿ ಸರೋವರಕ್ಕೆ ಹೋದ ಆ ಯತಿಯು ಆ ಮಗು ವನ್ನು ನೋಡಿ ತನ್ನ ವೀರ್ಯದ ಬಲದಿಂದ ಜನಿಸಿದುದೆಂದು ತಿಳಿದು ಪ್ರೀತಿ ಯಿಂದ ಅದನ್ನು ವಿವಿಧೋಪಾಯಗಳಿಂದ ಸಾಕಿ ಬೆಳೆಯಿಸಿದನು, ಮಕ್ಕ ಳನ್ನು ಕಾಪಾಡುವುದರಲ್ಲಿ ಎಲ್ಲರೂ ಸ್ವಭಾವದಿಂದ ಪ್ರವರ್ತಿಸುತ್ತಾರೆ ॥ ೭೧– ೭೨ ॥ ಆ ಹುಡುಗಿಯು ದೊಡ್ಡವಳಾದ ಮೇಲೆ ಒಂದಾನೊಂದು ಕಾಲದಲ್ಲಿ ಆ ಮುನಿಯ ಶುಕ್ರಧಾತುವಿನಿಂದ ಮಲಿನವಾದ ಕೌಪೀನವನ್ನು ಧರಿಸಿ ಕೊಂಡು ಸ್ನಾನಮಾಡಿದಳು ॥ ೭೩ ॥ ಬಳಿಕ ಆಕೆಯು ಬಸುರಾದಳು. ಆ ಗರ್ಭವು ತನ್ನ ವೀರ್ಯದಿಂದಾದುದೆಂದು ತಿಳಿದು ಆ ಮುನಿಯು ಕನ್ಯೆಗೆ ದೂಷಣವು ಪ್ರಾಪ್ತವಾಗುವುದೆಂಬ ಸಂದೇಹವುಳ್ಳವನಾಗಿ ಆ ಗರ್ಭವನ್ನು ಸ್ತಂಭನಮಾಡಿದನು ॥ ೭೪ ॥ ಈ ಗರ್ಭವು ಏಳು ಸಾವಿರ ವರುಷಗಳವರೆಗೆ ಆಕೆಯ ಹೊಟ್ಟೆಯಲ್ಲಿ ಬಹಳ ಬಾಧೆಯನ್ನು ಮಾಡುತ್ತ ನಿಶ್ಚಲವಾಗಿತ್ತು ॥ ೭೫ ॥ ಬಳಿಕ ಮುನಿಯು ಆ ಸುಂದರಿಯಾದ ಹುಡುಗಿಯನ್ನು ಮಹಾತ್ಮ ನಾದ ರಾವಣನಿಗೆ ಕೊಟ್ಟು ಮದುವೆಮಾಡಿದನು. ಆಕೆಯು ಇಂದ್ರಜಿತ ನೆಂಬ ಮಗನನ್ನು ಹಡೆದಳು ॥ ೭೬ ॥ ಏಳು ಸಾವಿರ ವರುಷಗಳ ಮೊದಲು ಇಂದ್ರಜಿತನು ಜನಿಸಿದನು. ಆ ಮೇಲೆ ರಾವಣನು ಮಂಡೋದರಿಯ ಪತಿಯೆಂದು ಪ್ರಸಿದ್ಧನಾದನು ॥ ೭೭ ॥ ಇಂದ್ರಜಿತನು ಏಳು ಸಾವಿರ ವರುಷಗಳವರೆಗೆ ತಾಯಿಯ ಹೊಟ್ಟೆಯಲ್ಲಿ ಹೇಗಿದ್ದನು ? ನಾನು

ಹನ್ನೆರಡು ವರುಷಗಳವರೆಗೇಕಿರಬಾರದು ? " ಎಂದು ಕೇಳಿದನು ॥ ೭೮ ॥ ಆ ಮಾತನ್ನು ಕೇಳಿ ಯಾಜ್ಞಿಕ—ವಿಪ್ರರು "ಅಯ್ಯಾ ಸಾಧುವೆ ! ನಿನ್ನ ಈ ಮಾತು ನಿಜ. ಆದರೆ ನೀನು ಹುಟ್ಟಿದ ಕೂಡಲೆ ತಪಸ್ಸನ್ನು ಹೇಗೆ ಸ್ವೀಕರಿಸಿದೆ ? ॥ ೭೯ ॥ ನಿನ್ನ ತಾಯಿಯು ವಿವಾಹಿತಳಾದರೂ ಮತ್ತೆ ಕನ್ಯೆಯಾಗಿದ್ದುದು ಹೇಗೆ ? ನಮ್ಮ ಸಂದೇಹವೆಂಬ ಕತ್ತಲೆಯನ್ನು ನಾಶಮಾಡುವುದಕ್ಕೋಸ್ಕರ ಈ ಬಹುದುರ್ಘಟವಾದ ವಿಷಯವನ್ನು ನಮಗೆ ಹೇಳು " ಎಂದು ಮಾತನಾಡಿದರು ॥ ೮೦ ॥ ವಾಚಾಳುವಾದ ಮನೋವೇಗನು ವಿಪ್ರರನ್ನು ಕುರಿತು "ಅಯ್ಯಾ ವಿಪ್ರರೆ ! ಲಕ್ಷ್ಯವಿಟ್ಟು ಕೇಳಿರಿ. ಈ ಲೋಕದಲ್ಲಿ ತಪಸ್ವಿಗಳಿಂದ ಪೂಜಿತನಾದ ಪರಾಶರನೆಂಬ ತಪಸ್ವಿಯು ಜನಿಸಿದನು ॥ ೮೧ ॥ ಈತನು ದೋಣಿಯಿಂದ ದಾಂಟುವುದಕ್ಕೋಸ್ಕರ ಗಂಗಾನದಿಯನ್ನು ಪ್ರವೇಶಿಸಿದನು. ಆಗ ನವಯೌವನದೇಹದವಳಾದ ಬೆಸ್ತರವಳು ದೋಣಿಯನ್ನು ನಡೆಯಿಸುತ್ತಿದ್ದಳು ॥ ೮೨ ॥ ಈತನು ತಾರುಣ್ಯಶಾಲಿನಿಯಾದ ಆ ಹುಡುಗಿಯನ್ನು ನೋಡಿ ಆಕೆಯನ್ನು ಭೋಗಿಸುವುದಕ್ಕಾರಂಭಿಸಿದನು. ಕಾಮಬಾಣಗಳಿಂದ ಭೇದಿಸಲ್ಪಟ್ಟವನು ಯೋಗ್ಯಾಯೋಗ್ಯಸ್ಥಾನಗಳನ್ನು ನೋಡುವುದಿಲ್ಲ ॥ ೮೩ ॥ ಶಾಪವನ್ನು ಕೊಡುವನೆಂಬ ಭೀತಿಯುಳ್ಳ ಆ ಹುಡುಗಿಯೂ ಅವನನ್ನು ಬಯಸಿದಳು. ಅಕೃತ್ಯವನ್ನು ಮಾಡಿಯಾದರೂ ಎಲ್ಲರೂ ಜೀವಿತವನ್ನು ಕಾಪಾಡುತ್ತಾರೆ ॥ ೮೪ ॥ ಆಕೆಯನ್ನು ಭೋಗಿಸುವಾಗ ಬೇರೆಯವರು ಕಂಡಾರೆಂದು ಪರಾಶರನು ತನ್ನ ತಪಸ್ಸಿನ ಪ್ರಭಾವದಿಂದ ಅಲ್ಲಿ ಕತ್ತಲೆಯನ್ನು ಮಾಡಿದನು. ಸಹಾಯಸಾಮಗ್ರಿಯಿಲ್ಲದೆ ಸ್ವಲ್ಪಕಾರ್ಯವೂ ಸಿದ್ಧಿಸುವುದಿಲ್ಲ ॥ ೮೫ ॥ ಅವರು ಕಾಮಕ್ರೀಡೆಯನ್ನು ಮುಗಿಸಿದನಂತರದಲ್ಲಿ ಅವರಿಗೆ ಭಕ್ತನಾದ ವ್ಯಾಸನು ಪುತ್ರನಾಗಿ ಜನಿಸಿದನು. ಅವನು 'ತಂದೆಯೇ ! ನನಗೆ ಆಜ್ಞೆಯನ್ನು ಮಾಡು ' ಎಂದು ಪರಾಶರನನ್ನು ಕೇಳಿದನು ॥ ೮೬ ॥ ಆ ಮಾತನ್ನು ಕೇಳಿ ಸಂತುಷ್ಟವಾದ ಚಿತ್ತವುಳ್ಳ ಪರಾಶರನು

ವ್ಯಾಸನನ್ನು ಕುರಿತು 'ಮಗುವೆ! ನೀನು ಪವಿತ್ರವಾದ ತಪಸ್ಸನ್ನು ಮಾಡಿಕೊಂಡು ಇಲ್ಲೇ ಇರು' ಎಂದು ಅವನಿಗೆ ಆಜ್ಞೆಮಾಡಿದನು ॥ ೮೭ ॥ ಅನಂತರದಲ್ಲಿ ಪರಾಶರನು ದುರ್ಗಂಧವುಳ್ಳ ಆ ಬೆಸ್ತರ ಹುಡುಗಿಯನ್ನು ತನ್ನ ತಪಃಪ್ರಭಾವದಿಂದ ದಶದಿಕ್ಕುಗಳಲ್ಲಿ ವ್ಯಾಪ್ತವಾದ ಪರಿಮಳವುಳ್ಳವಳನ್ನಾಗಿ ಮಾಡಿ ಆಕೆಗೆ 'ಯೋಜನಗಂಧೆ' ಎಂದು ಹೆಸರನ್ನಿಟ್ಟು ಯೋಗ್ಯವಾದ ಆಶ್ರಮಕ್ಕೆ ಹೊರಟುಹೋದನು ॥ ೮೮ ॥ ವ್ಯಾಸನು ಹುಟ್ಟಿದೊಡನೆಯೇ ತಂದೆಯ ಆಜ್ಞೆಯಿಂದ ಹೇಗೆ ತಪಸ್ವಿಯಾದನು? ನಾನು ತಾಯಿಯ ಆಜ್ಞೆಯಿಂದ ತಪಸ್ವಿಯಾಗಬಾರದೇಕೆ? ಇದನ್ನು ವಿಚಾರಮಾಡಿರಿ ॥ ೮೯ ॥ ವ್ಯಾಸನು ಮಗನಾಗಿದ್ದರೂ ಬೆಸ್ತರವಳು ಕನ್ಯೆಯಾಗಿರುತ್ತಾಳೆ, ನಾನು ಮಗನಾಗಿದ್ದರೆ ನನ್ನ ತಾಯಿಯು ಮಾತ್ರ ಕನ್ಯೆಯಾಗಿರುವುದಿಲ್ಲ. ಇದು ಪಕ್ಷಪಾತವಲ್ಲದೆ ಮತ್ತೇನು? ॥ ೯೦ ॥ ಸೂರ್ಯನ ಸಂಗದಿಂದ ಮಗನು ಹುಟ್ಟಿದರೂ ಕುಂತಿಯು ಕನ್ಯೆಯಾಗಿದ್ದಳು. ನಾನು ಮಗನಾದರೆ ನನ್ನ ತಾಯಿಯು ಕನ್ಯೆಯಾಗಿರಬಾರದೇಕೆ? ದೊಡ್ಡವರು ಈ ವಿಷಯವನ್ನು ಮನವಿಟ್ಟು ವಿಚಾರಮಾಡಬೇಕು ॥ ೯೧ ॥ ಮಹಾತಪಸ್ವಿಯೂ ಸರ್ವಜನಪ್ರಸಿದ್ಧನೂ ಆದ ಉದ್ದಾಲಕನೆಂಬ ಋಷಿಯು ಸ್ವಪ್ನದಲ್ಲಿ ಸ್ಖಲಿತವಾದ ತನ್ನ ವೀರ್ಯವನ್ನು ತೆಗೆದುಕೊಂಡು ಗಂಗಾನದಿಯಲ್ಲಿ ತಾವರೆಯ ಎಲೆಯಲ್ಲಿರಿಸಿದನು ॥ ೯೨ ॥ ದೇವಸ್ತ್ರೀಯರೊಡನೆ ಶಚೀದೇವಿಯಂತೆ, ಗುಣಗಳಿಗೆ ರಾಜಧಾನಿಯೂ ರಘುರಾಜನ ಪುತ್ರಿಯೂ ಆದ ಕುಮಾರೀ ಚಂದ್ರಮತಿಯು ಮುಟ್ಟಾಗಿದ್ದು ಸ್ನಾನಕ್ಕೋಸ್ಕರ ಸಖಿಯರೊಡನೆ ಗಂಗಾನದಿಗೆ ಹೋದಳು ॥ ೯೩ ॥ ಆ ತಾವರೆಯನ್ನು ಮೂಸಿದಾಗ ಆ ವೀರ್ಯವು ಆ ಕುಮಾರಿಯ ಹೊಟ್ಟೆಯಲ್ಲಿ ಪ್ರವೇಶಿಸಿತು. ಮುತ್ತಿನ ಚಿಪ್ಪಿನಲ್ಲಿ ನೀರು ಮುತ್ತಾಗುವಂತೆ, ಆಕೆಯ ದೇಹವನ್ನೆಲ್ಲ ಸಂತೋಷಗೊಳಿಸುವ ಆ ವೀರ್ಯವು ಆಕೆಯ ಹೊಟ್ಟೆಯಲ್ಲಿ ಗರ್ಭವಾಯ್ತು ॥ ೯೪ ॥ ಬಸುರಾಗಿರುವ ಆ ಚಂದ್ರಮತಿಯನ್ನು ನೋಡಿ ಆಕೆಯ

ತಾಯಿಯು ಶೀಘ್ರವಾಗಿ ರಾಜನಿಗೆ ತಿಳಿಸಿದಳು. ಅವನು ಚಂದ್ರಮತಿಯನ್ನು ಕಾಡಿನ ನಡುವಿನಲ್ಲಿರಿಸಿದನು. ಸತ್ಪುರುಷರು ಮನೆಯ ದೂಷಣಗಳಿಂದ ಹೆದರುತ್ತಾರೆ ‖ ೯೫ ‖ ದುರ್ನೀತಿಯು ಅರ್ಥನಾಶವನ್ನು ಪಡೆಯುವಂತೆ ತೃಣಬಿಂದುವೆಂಬ ಮುನಿಯ ಆಶ್ರಮದಲ್ಲಿ ಆ ಕುಮಾರಿಯು ವಿಶುದ್ಧವಾದ ಕೀರ್ತಿಯನ್ನು ನಾಶಮಾಡುವುದಕ್ಕೆ ಕಾರಣನಾದ ನಾಗಕೇತುವೆಂಬ ಪುತ್ರನನ್ನು ಪಡೆದಳು ‖ ೯೬ ‖ ದುಃಖಿತವಾದ ಮನಸ್ಸುಳ್ಳ ಆ ಬಾಲಿಕೆಯು 'ನೀನು ನಿನ್ನ ತಂದೆಯನ್ನು ಹುಡುಕು' ಎಂದು ಮಗುವನ್ನು ಪೆಟ್ಟಿಗೆಯಲ್ಲಿಟ್ಟು ಗಂಗಾನದಿಯಲ್ಲಿ ಬಿಟ್ಟಳು ‖ ೯೭ ‖ ವಿಶುದ್ಧವಾದ ಜ್ಞಾನವುಳ್ಳ ಆ ಉದ್ದಾಲಕಮುನಿಯು ಗಂಗಾನದಿಯಲ್ಲಿ ತೇಲುತ್ತಿರುವ ಆ ಪೆಟ್ಟಿಗೆಯನ್ನು ನೋಡಿ ಆಗಲೇ ಆ ನದಿಗಿಳಿದು ತನ್ನ ವೀರ್ಯದಿಂದುಂಟಾದ ಪುತ್ರನನ್ನು ಗುರುತಿಸಿ ಆ ನದಿಯ ಮಧ್ಯದಲ್ಲಿ ಪೆಟ್ಟಿಗೆಯನ್ನು ಹಿಡಿದನು ‖ ೯೮ ‖ ಆ ಚಂದ್ರಮತೀ ಕುಮಾರಿಯೂ ಮಗನನ್ನು ಹುಡುಕುತ್ತ ಅಲ್ಲಿಗೆ ಹೋದಳು. ಆ ಬಾಲಿಕೆಯನ್ನು ನೋಡಿ ಸಂತುಷ್ಟನಾದ ಮುನಿಯು ಆ ಬಾಲಕನನ್ನು ಆಕೆಗೆ ತೋರಿಸಿ 'ನಾನು ನಿನಗೆ ಪ್ರಿಯನು. ನೀನು ನನಗೆ ಪ್ರಿಯಳಾಗು' ಎಂದನು ‖ ೯೯ ‖ ಆ ಮಾತನ್ನು ಕೇಳಿ ಚಂದ್ರಮತಿಯು ಮುನಿಯನ್ನು ಕುರಿತು 'ಎಲೈ ಸಾಧುವೆ! ನನ್ನ ತಂದೆಯು ನನ್ನನ್ನು ಕೊಟ್ಟಾಗ ನಾನು ನಿನಗೆ ನಿಶ್ಚಿತಳಾದ ಪತ್ನಿಯಾಗುತ್ತೇನೆ. ನೀನು ಹೋಗು. ಸಂದೇಹವನ್ನು ಬಿಟ್ಟು ಅವನನ್ನು ಪ್ರಾರ್ಥಿಸು. ಕುಲೀನಳಾದ ಸ್ತ್ರೀಯು ತಾನಾಗಿ ಪತಿಯನ್ನು ಪರಿಗ್ರಹಿಸುವುದಿಲ್ಲ' ಎಂದಳು ‖ ೧೦೦ ‖ ಅಪರಿಮಿತವಾದ ಗಮನವುಳ್ಳ ಆ ಉದ್ದಾಲಕ—ತಪೋಧನನು ರಘುರಾಜನಲ್ಲಿಗೆ ಹೋಗಿ ಅವನಲ್ಲಿ ಆ ಮಹಾಗುಣವತಿಯೂ ಯೌವನವತಿಯೂ ಆದ ಚಂದ್ರಮತಿಯನ್ನು ಪ್ರಾರ್ಥಿಸಿ ಪಡೆದು ಮತ್ತೆ ಆಕೆಯನ್ನು ಕನ್ಯೆಯನ್ನಾಗಿ ಮಾಡಿ ಆನಂದದಿಂದ ಮದುವೆಮಾಡಿಕೊಂಡು ತನ್ನ

ಪ್ರಿಯ–ಪತ್ನಿಯನ್ನಾಗಿ ಮಾಡಿದನು. ಐದು ಕಾಮಬಾಣಗಳಿಂದ ಭೇದಿಸಲ್ಪಟ್ಟ ಪ್ರಾಣಿಯು ಏನನ್ನು ತಾನೆ ಮಾಡುವುದಿಲ್ಲ ? ॥ ೧೦೦ ॥

ಇಂತು ಅಮಿತಗತ್ಯಾಚಾರ್ಯವಿರಚಿತ ಧರ್ಮಪರೀಕ್ಷಾಚತುರ್ದಶಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾಯುದು.

—o—

ಮಗನು ಹುಟ್ಟಿದರೂ ಅನಂತರದಲ್ಲಿ ಚಂದ್ರಮತಿಯು ಹೇಗೆ ಕನ್ಯೆಯಾಗಿದ್ದಳು ? ನಾನು ಹುಟ್ಟಿದನಂತರದಲ್ಲಿ ನನ್ನ ತಾಯಿಯೇಕೆ ಕನ್ಯೆಯಾಗಿರುವುದಿಲ್ಲ ? ಹೇಳಿ " ಎಂದು ಈ ಮನೋವೇಗನು ಆ ವಿಪ್ರರನ್ನು ನಿರುತ್ತರರನ್ನಾಗಿ ಮಾಡಿ ತಾಪಸವೇಷವನ್ನು ಬಿಟ್ಟು ಅರಣ್ಯಕ್ಕೆ ಹೋಗಿ ಪವನವೇಗನನ್ನು ಕುರಿತು " ಅಹೋ ಮಿತ್ರನೆ ! ಈ ಜನರ ಪುರಾಣಗಳು ಒಂದಕ್ಕೊಂದು ವಿರುದ್ಧಗಳಾಗಿವೆ. ಮಿಥ್ಯಾತ್ವದಿಂದ ಮೋಹಿತನಾದ ಯಾವನೂ ವಿಚಾರಮಾಡುವುದಿಲ್ಲ ॥ ೧–೩ ॥ ಹಲಸಿನ ಮರವನ್ನು ಅಪ್ಪಿಕೊಂಡರೆ ಹೆಂಗುಸರು ಬಸುರಾಗುವುದು ಹೇಗೆ ? ಮನುಷ್ಯರ ಸ್ಪರ್ಶದಿಂದ ಬಳ್ಳಿಗಳೆಂದೂ ಫಲಿಸುವುದಿಲ್ಲ ॥ ೪ ॥ ಹೆಂಗುಸು ಹೆಂಗುಸಿನ ಸ್ಪರ್ಶದಿಂದ ಬಸುರಾಗುವುದೆಂತು ? ಹಸುವಿನ ಸಂಗದಿಂದ ಬಸುರಾಗಿರುವ ಹಸುವನ್ನು ನಾನೆಲ್ಲಿಯೂ ಕಂಡುದಿಲ್ಲ ॥ ೫ ॥ ಹೆಣ್ಣುಕಪ್ಪೆಯು ಮನುಷ್ಯನನ್ನು ಹೆರುತ್ತದೆಂದು ಯಾವನು ತಾನೆ ಹೇಳುತ್ತಾನೆ ? ಭತ್ತದಿಂದ ಹಾರಕಧಾನ್ಯಗಳು ಹುಟ್ಟುವುದನ್ನು ನಾನು ನೋಡಲೇ ಇಲ್ಲ ॥ ೬ ॥ ಶುಕ್ರ–ವೀರ್ಯದ ಭಕ್ಷಣಮಾತ್ರದಿಂದ ಮಕ್ಕಳಾಗುವುದಾದರೆ ಮಕ್ಕಳಾಗುವುದಕ್ಕೋಸ್ಕರ ಹೆಂಗುಸರು ಪತಿಸಂಗವನ್ನೇಕೆ ಮಾಡಬೇಕು ? ॥ ೭ ॥ ರೇತಸ್ಸಿನ ಸ್ಪರ್ಶಮಾತ್ರದಿಂದ ಮಕ್ಕಳಾಗುವುದಾದರೆ ಭೂಮಿಯು ಬೀಜದ ಸಂಬಂಧಮಾತ್ರದಿಂದ ಬೆಳೆಯನ್ನು ಕೊಡಬೇಕು ॥ ೮ ॥ ಶುಕ್ರಧಾತುವು ಅಂಟಿಕೊಂಡಿರುವ ತಾವ

ರೆಯನ್ನು ಮೂಸಿದರೆ ಹೆಂಗುಸು ಬಸುರಾಗುವುದಾದರೆ ಅನ್ನವಿರುವ ಪಾತ್ರೆಯು ಹತ್ತಿರದಲ್ಲಿದ್ದರೆ ತೃಪ್ತಿಯುಂಟಾಗಬೇಕೆಂಬುದನ್ನು ತಡೆಯುವವನಾರು ? ‖ ೯ ‖ ಹೆಣ್ಣುಕಪ್ಪೆಯು ಹೇಗೆ ಕನ್ಯೆಯನ್ನು ತಿಳಿದು ತಾವರೆಯೆಲೆಯಲ್ಲಿಟ್ಟಿತು ? ಕಪ್ಪೆಗಳಲ್ಲಿ ಇಂತಹ ಜ್ಞಾನವನ್ನು ಯಾವನು ಯಾವಾಗ ಕಂಡಿದ್ದಾನೆ ? ‖ ೧೦ ‖ ಪತಿವ್ರತೆಯಾದ ಕುಂತಿಗೆ ಸೂರ್ಯ ಯಮ ವಾಯು ಇಂದ್ರ ಇವರುಗಳ ಸಂಗದಿಂದ ಯಥಾಕ್ರಮವಾಗಿ ಕರ್ಣ ಯುಧಿಷ್ಠಿರ ಭೀಮ ಅರ್ಜುನರು ಮಕ್ಕಳಾದರು. ಈ ಮಾತು ಯಾವ ಪ್ರಾಜ್ಞನ ಹೃದಯದಲ್ಲಿ ನಿಲ್ಲುತ್ತದೆ ? ‖ ೧೧ ‖ ದೇವರ್ಕಳಿಗೆ ಹೆಂಗುಸರೊಡನೆ ಸಂಗಮವಾಗುವುದಾದರೆ ಮನುಷ್ಯರಿಗೆ ದೇವಿಯರೊಡನೆ ಸಂಗಮವಾಗುವುದೇಕೆ ಕಾಣುವುದಿಲ್ಲ ? ‖ ೧೨ ‖ ಸಮಸ್ತ ಅಶುಚಿಮಯವೂ ಕಶ್ಮಲವೂ ಆದ ಮಾನವದೇಹದಲ್ಲಿ ಧಾತುರಹಿತವಾದ ದೇಹವುಳ್ಳವರೂ ಮಲರಹಿತರೂ ಆದ ದೇವರ್ಕಳು ಹೇಗೆ ರಮಿಸುತ್ತಾರೆ ? ‖ ೧೩ ‖ ವಿಚಾರವನ್ನು ಮಾಡದಿದ್ದಲ್ಲಿ ರಮಣೀಯವಾಗಿರುವ ಇತರ ಶಾಸ್ತ್ರಗಳನ್ನು ಪ್ರಾಜ್ಞರು ಹೇಗೆ ಹೇಗೆ ವಿಚಾರಮಾಡುತ್ತಾರೋ ಹಾಗೆ ಹಾಗೆ ಅವು ಛಿನ್ನ-ಭಿನ್ನವಾಗುತ್ತವೆ ‖ ೧೪ ‖ ಮಹಾಪ್ರಭಾವಸಂಪನ್ನರಾದ ದೇವರ್ಕಳೂ ತಪಸ್ವಿಗಳೂ ಸ್ತ್ರೀಯರನ್ನು ಭೋಗಿಸಿ ಕನ್ಯೆಯರನ್ನಾಗಿ ಮಾಡುತ್ತಾರೆನ್ನುವ ಈ ಮಾತನ್ನು ಪ್ರಾಜ್ಞರು ನಂಬುವುದಿಲ್ಲ ‖ ೧೫ ‖ ಪರಸ್ತ್ರೀಲಂಪಟರಾಗಿ ಪರಸ್ತ್ರೀಯನ್ನು ಭೋಗಿಸುವವರಿಗೂ ಪ್ರಭಾವವುಂಟಾದರೆ ವಿಟಪುರುಷರಿಗೇನು ಹೇಳಬೇಕು ? ‖ ೧೬ ‖ ಮಿತ್ರನೆ ! ಸುಳ್ಳುಮಾತನಾಡುವುದರಿಂದೇನು ಫಲ ? ಜಿನಶಾಸ್ತ್ರದಲ್ಲಿ ಹೇಳಿರುವಂತೆ ಕರ್ಣನ ಉತ್ಪತ್ತಿಯನ್ನು ನಿನಗೆ ಹೇಳುತ್ತೇನೆ ‖ ೧೭ ‖

ಹಸ್ತಿನಾಪುರದ ದೊರೆಯಾದ ವ್ಯಾಸರಾಜನಿಗೆ ಗುಣಗಳಿಗೆ ವಾಸಸ್ಥಾನರೂ ಪ್ರಖ್ಯಾತರೂ ಆದ ಧೃತರಾಷ್ಟ್ರ ಪಾಂಡು ವಿದುರರೆಂಬ ಮೂರು ಮಂದಿ ಮಕ್ಕಳು ಹುಟ್ಟಿದರು ‖ ೧೮ ‖ ಒಂದಾನೊಂದು ಕಾಲದಲ್ಲಿ ಪಾಂಡು

ಕುಮಾರನು ಮನೋಹರವಾದ ತೋಟದಲ್ಲಿ ಆಡುತ್ತಿದ್ದನು. ಅಲ್ಲಿ ಅವನು ಲತಾಮಂಡಪದಲ್ಲಿ ಖೇಚರನ ಕಾಮಮುದ್ರಿಕೆಯನ್ನು ಕಂಡನು ॥ ೧೯ ॥ ಅಲ್ಲಿ ಇವನು ಆ ಉಂಗುರವನ್ನು ಕೈಬೆರಲಿನಲ್ಲಿಟ್ಟುಕೊಂಡಿರುವಷ್ಟರಲ್ಲಿ ಅದನ್ನು ಹುಡುಕುತ್ತ ಚಿತ್ರಾಂಗದನೆಂಬ ಖೇಚರನು ಬಂದನು ॥ ೨೦ ॥ ನಿಸ್ಪೃಹವಾದ ಮನಸ್ಸುಳ್ಳ ಪಾಂಡುಕುಮಾರನು ಆ ಉಂಗುರವನ್ನು ಅವನಿಗೆ ಕೊಟ್ಟನು. ಎಲ್ಲಾ ಕಡೆಗಳಲ್ಲಿಯೂ ದೊಡ್ಡವರು ಪರವಸ್ತುವಿನಲ್ಲಿ ವಿಮುಖರಾಗಿರುತ್ತಾರೆ ॥ ೨೧ ॥ ಆ ಚಿತ್ರಾಂಗದನು ಪಾಂಡುಕುಮಾರನ ನಿರ್ಲೋಭತ್ವವನ್ನು ನೋಡಿ ಅವನನ್ನು ಬಂಧುವನ್ನಾಗಿ ತಿಳಿದನು. ಪರ ದ್ರವ್ಯಕ್ಕೆ ಪರಾಧೀನರಾಗದಿರುವವರು ಲೋಕೋತ್ಕೃಷ್ಟರಾಗುತ್ತಾರೆ ॥ ೨೨ ॥ ಬಳಿಕ ಆ ಖೇಚರನು ಪಾಂಡುವನ್ನು ಕುರಿತು 'ಎಲೈ ಸಾಧುವೆ! ಯಾವಾ ಗಲೂ ಪರದ್ರವ್ಯವನ್ನು ಕಸದಂತೆ ನೋಡುವ ನೀನು ನನಗೆ ನಿಜವಾದ ಬಂಧುವಾಗಿರುತ್ತಿ ॥ ೨೩ ॥ ಬಂಧುವೆ! ನೀನು ಖಿನ್ನನಾಗಿರುವಂತೆ ಕಾಣುತ್ತೆ. ಕಾರಣವನ್ನು ತಿಳಿಸು. ನಿಪುಣನಾಗಿರುವವನು ಮಿತ್ರನಿಗೆ ಯಾವುದನ್ನೂ ಗುಟ್ಟುಮಾಡುವುದಿಲ್ಲ' ಎಂದನು ॥ ೨೪ ॥ ಅನಂತರದಲ್ಲಿ ಪಾಂಡುವು ಚಿತ್ರಾಂಗದನನ್ನು ಕುರಿತು 'ಎಲೈ ಸಾಧುವೆ! ಸ್ವರ್ಗದಲ್ಲಿ ದೇವೇಂದ್ರನಿರು ವಂತೆ, ಸೂರ್ಯಪುರದಲ್ಲಿ ಅಂಧಕವೃಷ್ಟಿಯೆಂಬ ರಾಜನಿದ್ದಾನೆ ॥ ೨೫ ॥ ಅವನಿಗೆ ಸುಂದರಳಾದ ಕುಂತಿಯೆಂಬ ಮಗಳಿದ್ದಾಳೆ. ಆಕೆಯು ತ್ರಿಲೋಕ ವಿಜಯಿಯಾದ ಕಾಮನು ಎತ್ತಿರುವ ಪತಾಕೆಯಂತಿರುತ್ತಾಳೆ ॥ ೨೬ ॥ ಆ ರಾಜನು ಕಾಮೋದ್ದೀಪಕಳಾದ ಆಕೆಯನ್ನು ಮೊದಲು ನನಗೆ ಕೊಡುವವ ನಾಗಿದ್ದನು, ಆದರೆ ಈಗ ನನಗೆ ಪಾಂಡುರೋಗವಿರುವುದನ್ನು ನೋಡಿ ಕೊಡುವುದಿಲ್ಲ ॥ ೨೭ ॥ ಬಂಧುವೆ! ಈ ಕಾರಣದಿಂದ, ಕಟ್ಟಿಗೆಗಳನ್ನು ಕತ್ತರಿಸುವ ಕೊಡಲಿಯಂತೆ, ನನ್ನ ಮನಸ್ಸಿನಲ್ಲಿ ಮರ್ಮಗಳನ್ನು ಕತ್ತರಿ ಸುವ ಖೇದವುಂಟಾಗಿದೆ' ಎಂದನು ॥ ೨೮ ॥ ಬಳಿಕ ಚಿತ್ರಾಂಗದನು ಪಾಂಡು ವನ್ನು ಕುರಿತು 'ಎಲೈ ಸಾಧುವೆ! ವಿಷಾದವನ್ನು ಬಿಡು. ನಿನ್ನ ಖೇದ

ವನ್ನು ದೂರವಮಾಡುತ್ತೇನೆ. ನಾನು ಹೇಳುವಂತೆ ಮಾಡು ॥ ೨೯ ॥ ಮಿತ್ರನೆ! ನೀನು ನನ್ನ ಈ ಕಾಮಮುದ್ರಿಕೆಯನ್ನು ತೆಗೆದುಕೊ. ಇದರಿಂದ ಇಷ್ಟವಾದ ರೂಪವನ್ನು ಧರಿಸಿದವನಾಗಿ ಆ ಮನಃಪ್ರಿಯಳನ್ನು ಭೋಗಿಸು ॥ ೩೦ ॥ ಆ ಮೇಲೆ ಬಸುರಾದ ಆಕೆಯನ್ನು ಅಂಧಕವೃಷ್ಟಿಯು ತಾನೇ ನಿನಗೆ ಕೊಡುವನು. ಸತ್ಪುರುಷರು ದೂಷಿತಳಾದ ಸ್ತ್ರೀಯನ್ನು ತಮ್ಮ ಮನೆಯಲ್ಲಿಟ್ಟುಕೊಳ್ಳುವುದಿಲ್ಲ' ಎಂದು ಹೇಳಿದನು ॥ ೩೧ ॥ ಅನಂತರದಲ್ಲಿ ಪಾಂಡುವು ಆ ಕಾಮಮುದ್ರಿಕೆಯನ್ನು ತೆಗೆದುಕೊಂಡು ಕುಂತಿಯ ಬಳಿಗೆ ಹೋದನು. ತಾನೇ ವಿಷಯಲೋಲುಪನಾದ ಮನುಷ್ಯನಿಗೆ ಉಪಾಯವೂ ದೊರೆತರೆ ಹೇಳುವುದೇನು ? ॥ ೩೨ ॥ ಆ ಪಾಂಡುಕುಮಾರನು ಇಷ್ಟವಾದ ರೂಪವನ್ನು ಧರಿಸಿಕೊಂಡು ಏಕಾಂತದಲ್ಲಿ ಸ್ವೇಚ್ಛೆಯಾಗಿ ಆಕೆಯನ್ನು ಭೋಗಿಸಿದನು. ಮನಸ್ಸಿಗೆ ಪ್ರಿಯಳಾದ ಪ್ರಿಯೆಯನ್ನು ಹೊಂದಿ ಯಾರು ತಾನೆ ಸ್ವೇಚ್ಛಾಪೂರ್ತಿಯನ್ನು ಮಾಡಿಕೊಳ್ಳುವುದಿಲ್ಲ ? ॥ ೩೩ ॥ ಯುವಕನಾದ ಪಾಂಡುಕುಮಾರನು ಏಳು ದಿನಗಳವರೆಗೆ ಆ ಕುಂತೀಕುಮಾರಿಯನ್ನು ಭೋಗಿಸಿ, ಕೋಶವು ನಿರ್ದುಷ್ಟವಾದ ನೀತಿಯನ್ನು ಸ್ಥಾಪಿಸುವಂತೆ, ಗರ್ಭವನ್ನು ಸ್ಥಾಪಿಸಿದನು ॥ ೩೪ ॥ ಈ ಪಾಂಡುಕುಮಾರನು ಸಂತುಷ್ಟನಾಗಿ ಆಕೆಯನ್ನು ಅಲ್ಲೇ ಬಿಟ್ಟು ಹೊರಟುಹೋದನು. ಇಷ್ಟಕಾರ್ಯವು ಸಿದ್ಧಿಸಿದ ಬಳಿಕ ಯಾವನು ತಾನೇ ಸುಖಿಯಾಗುವುದಿಲ್ಲ ? ॥ ೩೫ ॥ ಆಕೆಯು ಬಸುರಾಗಿದ್ದಾಳೆಂದು ತಾಯಿಯು ತಿಳಿದು ಗುಪ್ತವಾಗಿ ಹೆರಿಸಿದಳು. ಮನೆಯ ದೂಷಣೆಗೆ ಹೆದರುವವರೆಲ್ಲರೂ ಗುಪ್ತವಿಷಯವನ್ನು ಮುಚ್ಚುತ್ತಾರೆ ॥ ೩೬ ॥ ಮನೆಯ ದೂಷಣಕ್ಕೆ ಹೆದರಿದ ತಾಯಿಯು ಕುಂತಿಯ ಮಗನನ್ನು ಪೆಟ್ಟಿಗೆಯಲ್ಲಿರಿಸಿ ಗಂಗಾನದಿಯ ಪ್ರವಾಹದಲ್ಲಿ ಬಿಟ್ಟಳು ॥ ೩೭ ॥ ದುರ್ನೀತಿಯು ಸಂಪತ್ತಿಯನ್ನು ಗ್ರಹಣಮಾಡುವಂತೆ, ಚಂಪಾನಗರಾಧಿಪತಿಯಾದ ಆದಿತ್ಯರಾಜನು ಗಂಗಾನದಿಯಲ್ಲಿ ಹರಿದುಹೋಗುತ್ತಿರುವ ಆ ಪೆಟ್ಟಿಗೆಯನ್ನು ನೋಡಿ ಅದನ್ನು ಹಿಡಿದನು ॥ ೩೮ ॥ ವಿದ್ವಜ್ಜನರಿಂದ ಪೂಜಿತವೂ ಅನಿಂ

ದ್ಯವೂ ಆದ ಸರಸ್ವತಿಯ ಅರ್ಥವನ್ನು ನೋಡುವಂತೆ, ಈ ದೊರೆಯು ಆ ಪೆಟ್ಟಿಗೆಯ ಮಧ್ಯದಲ್ಲಿ ಪವಿತ್ರವಾದ ಲಕ್ಷಣಗಳುಳ್ಳ ಬಾಲಕನನ್ನು ನೋಡಿದನು ‖ ೩೯ ‖ ದೊರೆಯು ಬಾಲಕನ ಮುಖವನ್ನು ನೋಡುವಾಗ ಅದು ತನ್ನ ಕಿವಿಗಳನ್ನು ಹಿಡಿದುಕೊಂಡಿದ್ದುದರಿಂದ ಅದನ್ನು ಬಹುಪ್ರೀತಿಯಿಂದ ಕರ್ಣನೆಂದು ಹೆಸರನ್ನಿಟ್ಟು ಕರೆದನು ‖ ೪೦ ‖ ದ್ರವ್ಯವಿಲ್ಲದವನು ದ್ರವ್ಯಲೋಭದಿಂದ ದ್ರವ್ಯರಾಶಿಯನ್ನು ಬೆಳೆಯಿಸುವಂತೆ, ಅಪುತ್ರನಾದ ಈ ಆದಿತ್ಯರಾಜನು ಪುತ್ರಕಾಂಕ್ಷೆಯಿಂದ ಬಾಲಕನನ್ನು ಬೆಳೆಯಿಸಿದನು ‖ ೪೧ ‖ ಮಹಾಭ್ಯುದಯವುಳ್ಳವನಾದ ಆ ಆದಿತ್ಯರಾಜನು ಕಾಲಾಧೀನನಾದ ಬಳಿಕ, ಆಕಾಶದಲ್ಲಿ ಜಗದಾನಂದಕರನಾದ ಚಂದ್ರನಂತೆ, ಚಂಪಾನಗರದಲ್ಲಿ ಆ ಕರ್ಣನು ರಾಜನಾದನು ‖ ೪೨ ‖ ರಾಜನಾದ ಆದಿತ್ಯನು ಕರ್ಣನನ್ನು ಬೆಳೆಯಿಸಿದುದರಿಂದ ಆದಿತ್ಯಪುತ್ರನೆನ್ನಿಸಿಕೊಂಡನಲ್ಲದೆ ಮಹಾಪುರುಷನಾದ ಆ ಕರ್ಣನು ಜ್ಯೋತಿಷದೇವನಾದ ಸೂರ್ಯನ ಮಗನಲ್ಲ ‖ ೪೩ ‖ ಸಪ್ತಧಾತುರಹಿತನಾದ ದೇವನಿಂದ ಮನುಷ್ಯಸ್ತ್ರೀಯಲ್ಲಿ ಮನುಷ್ಯನು ಹುಟ್ಟುವುದಿಲ್ಲ; ಕಲ್ಲಿನಿಂದ ಭೂಮಿಯಲ್ಲಿ ಸಸ್ಯಜಾತಿಗಳು ಯಾವಾಗ ಹುಟ್ಟುತ್ತವೆ ? ‖ ೪೪ ‖ ಬುದ್ಧಿಶಾಲಿಯಾದ ಅಂಧಕವೃಷ್ಟಿಯು ಆ ಗುಟ್ಟನ್ನು ತಿಳಿದು ದೋಷವನ್ನು ಮುಚ್ಚಿಟ್ಟು ಕುಂತಿಯನ್ನು ಪಾಂಡುವಿಗೂ ಗಾಂಧಾರಿಯನ್ನು ಧೃತರಾಷ್ಟ್ರನಿಗೂ ಕೊಟ್ಟು ಮದುವೆಮಾಡಿದನು ‖ ೪೫ ‖ ಹೀಗೆ ಬೇರೆ ರೀತಿಯಾಗಿರುವ ಪುರಾಣಾರ್ಥವನ್ನು ವ್ಯಾಸನು ಮತ್ತೊಂದು ರೀತಿಯಾಗಿ ಹೇಳಿದನು. ರಾಗದ್ವೇಷಗಳೆಂಬ ಗ್ರಹಗಳಿಂದ ಹಿಡಿಯಲ್ಪಟ್ಟಿರುವವರು ಪಾಪಕ್ಕೆ ಹೆದರುವುದೇ ಇಲ್ಲ ‖ ೪೬ ‖ ಧಾರ್ಮಿಕರು ಯುಕ್ತಿಸಂಗತವಾಗದಿರುವ ವಿಷಯವನ್ನು ಹೇಳುವುದಿಲ್ಲ. ಪಾಪಿಗಳು ಯುಕ್ತಿರಹಿತವಾದ ವಾಕ್ಯಗಳನ್ನು ಹೆಚ್ಚಾಗಿ ಹೇಳುತ್ತಾರೆ ‖ ೪೭ ‖ ಭೂಮಿಯಲ್ಲಿ ಎಲ್ಲರಿಗೂ ಎಲ್ಲಾ ಸಂಬಂಧಗಳೂ ವಿಶೇಷವಾಗಿರುತ್ತವೆ. ಆದರೆ ಐದು ಜನ ಪತಿಗಳಿಗೆ ಒಬ್ಬಳು ಹೆಂಡತಿಯಾಗಿರುವುದು ಎಲ್ಲಿಯೂ ಇಲ್ಲ ‖ ೪೮ ‖ ಮಹಾಪ್ರಾಜ್ಞ

ರಾಗಿರುವವರೆಲ್ಲರೂ ಎಲ್ಲಾ ವಸ್ತುಗಳ ವಿಭಾಗವನ್ನು ಮಾಡುತ್ತಾರೆ. ಆದರೆ ಸ್ತ್ರೀಯ ವಿಭಾಗವು ನಿಂದ್ಯರಿಗೂ ನಿಂದ್ಯವಾಗಿದೆ ॥ ೪೯ ॥ ಯೋಜನಗಂಧೆಯೆಂಬ ಬೆಸ್ತರವಳ ಮಗನಾದ ವ್ಯಾಸನು ಬೇರೆ. ಧನ್ಯಳಾದ ಸತ್ಯವತೀರಾಜಕನ್ಯೆಯ ಪುತ್ರನಾದ ವ್ಯಾಸರಾಜನು ಬೇರೆಯೆಂದು ತಿಳಿಯಬೇಕು ॥ ೫೦ ॥ ಪರಾಶರರಾಜನು ಬೇರೆ. ಪರಾಶರತಪಸ್ವಿಯು ಬೇರೆ. ಅವರ ಹೆಸರುಗಳಿಂದ ಭ್ರಮಿಸಿರುವ ಜನರು ಒಬ್ಬನೆಂದು ಹೇಳುತ್ತಾರೆ ॥ ೫೧ ॥ ದುರ್ಯೋಧನನೇ ಮೊದಲಾದ ಪುತ್ರರು ಗಾಂಧಾರಿಗೆ ಧೃತರಾಷ್ಟ್ರನಿಂದ ಜನಿಸಿದವರು. ಭೂಮಿಯಲ್ಲಿ ಪ್ರಸಿದ್ಧರಾದ ಪಂಚಪಾಂಡವರು ಕುಂತೀಮಾದ್ರಿಯರ ಮಕ್ಕಳು ॥ ೫೨ ॥ ಗಾಂಧಾರಿಯ ಎಲ್ಲಾ ಮಕ್ಕಳೂ ಕರ್ಣನೂ ಜರಾಸಂಧರಾಜನ ಸೇವೆಮಾಡುತ್ತಾರೆ. ಪಾಂಡವರಾದರೋ ಕೇಶವ—ಶ್ರೀ ಕೃಷ್ಣನ ಸೇವೆಮಾಡುತ್ತಾರೆ ॥ ೫೩ ॥ ಮಹಾಬಲಿಷ್ಠನಾದ ವಾಸುದೇವನು ಜರಾಸಂಧನನ್ನು ಯುದ್ಧದಲ್ಲಿ ಕೊಂದು ಸಮಸ್ತಭೂಮಂಡಲದಲ್ಲಿ ರಾಜನಾದನು ॥ ೫೪ ॥ ಕುಂತೀಪುತ್ರರಾದ ಯುಧಿಷ್ಠಿರ ಭೀಮಾರ್ಜುನರು ತಪಸ್ಸನ್ನು ಮಾಡಿ ಮುಕ್ತಿಯನ್ನು ಪಡೆದರು. ಮಾದ್ರೀಪುತ್ರರೂ ಭವ್ಯರೂ ಆದ ನಕುಲ ಸಹದೇವರು ಸರ್ವಾರ್ಥಸಿದ್ಧಿಯನ್ನು ಹೊಂದಿದರು ॥ ೫೫ ॥ ದುರ್ಯೋಧನ ಮೊದಲಾದವರೆಲ್ಲರೂ ಜಿನಮತವನ್ನು ಸೇವಿಸಿ ತಂತಮ್ಮ ಕರ್ಮಾನುಸಾರವಾಗಿ ಸ್ವರ್ಗಾದಿಗಳನ್ನು ಹೊಂದಿದರು ॥ ೫೬ ॥ ಈ ರೀತಿಯಾದ ಪುರಾಣಾರ್ಥವನ್ನು ವ್ಯಾಸನು ಬೇರೆ ವಿಧವಾಗಿ ಹೇಳಿದನು. ಮಿಥ್ಯಾತ್ವದಿಂದ ಆಕ್ರಾಂತವಾದ ಮನಸ್ಸುಳ್ಳವರಿಗೆ ಸತ್ಯವಾದ ಭಾಷೆಯು ಎಲ್ಲಿಂದ ಬರುವುದು ? ॥ ೫೭ ॥ ವ್ಯಾಸನು ತಾನು ರಚಿಸಿದ ಭಾರತಗ್ರಂಥದಲ್ಲಿ ಅಪಖ್ಯಾತಿಯನ್ನುಂಟುಮಾಡುವ ಪೂರ್ವಾಪರವಿರುದ್ಧತ್ವವನ್ನು ನೋಡಿ ಮನಸ್ಸಿನಲ್ಲಿ ‘ ಲೋಕದಲ್ಲಿ ನಿರರ್ಥಕವಾಗಿ ಮಾಡಲ್ಪಟ್ಟ ಕಾರ್ಯವು ಪ್ರಸಿದ್ಧಿಯನ್ನು ಪಡೆದರೆ ಅಸಂಬದ್ಧವೂ ವಿರುದ್ಧವಾದ ಅರ್ಥವುಳ್ಳುದೂ ಆದ ಶಾಸ್ತ್ರವೂ ಪ್ರಸಿದ್ಧಿ

ಯನ್ನು ಪಡೆಯುವುದು ನಿಜ ' ಎಂದು ಯೋಚಿಸಿದನು ‖ ೫೮-೫೯ ‖ ತರುವಾಯ ಅವನು ಗಂಗಾನದಿಯ ಮರಳಿನಲ್ಲಿ ತಾಮ್ರಪಾತ್ರವನ್ನಿಟ್ಟು ಅದರ ಮೇಲೆ ಎತ್ತರವಾದ ಮರಳಿನ ರಾಶಿಯನ್ನು ಮಾಡಿದನು ‖ ೬೦ ‖ ಅವನು ಮಾಡಿದ ಮರಳಿನ ರಾಶಿಯನ್ನು ನೋಡಿ ಪರಮಾರ್ಥ ವಿಷಯವನ್ನು ತಿಳಿಯದವರೂ ಧರ್ಮವನ್ನು ಬಯಸುವವರೂ ಆದ ಎಲ್ಲಾ ಜನರೂ ತಾವೂ ಮರಳಿನ ರಾಶಿಯನ್ನು ಮಾಡಿದರು ‖ ೬೧ ‖ ಈ ವ್ಯಾಸನು ಸ್ನಾನವನ್ನು ಮಾಡಿಕೊಂಡು ಬಂದು ತಾಮ್ರಪಾತ್ರವನ್ನು ಹುಡುಕಿದಾಗ ಆ ಮರಳಿನ ರಾಶಿಗಳಲ್ಲಿ ತಾನು ಪಾತ್ರವನ್ನಿರಿಸಿದ ರಾಶಿಯಾವುದೆಂದು ತಿಳಿಯಲಿಲ್ಲ ‖ ೬೨ ‖ ಮರಳಿನಲ್ಲೆಲ್ಲ ವ್ಯಾಪಕವಾಗಿರುವ ಮರಳಿನ ರಾಶಿಗಳ ಸಮೂಹವನ್ನು ನೋಡಿ ಲೋಕಮೂಢತ್ವವನ್ನು ತಿಳಿದು ಅವನು ಈ ಶ್ಲೋಕವನ್ನು ಪಠಿಸಿದನು ‖ ೬೩ ‖ ' ಯಥಾರ್ಥವಿಷಯವನ್ನು ವಿಚಾರ ಮಾಡದಿರುವವರೂ ನೋಡಿದುದನ್ನು ಅನುಸರಿಸುವವರೂ ಆದ ಜನರು, ನಾನು ತಾಮ್ರಪಾತ್ರವನ್ನು ಹಾಳುಮಾಡಿಕೊಂಡಂತೆ, ತಮ್ಮ ಕಾರ್ಯವನ್ನು ಹಾಳುಮಾಡಿಕೊಳ್ಳುತ್ತಾರೆ ‖ ೬೪ ‖ ಮಿಥ್ಯಾಜ್ಞಾನವೆಂಬ ಕತ್ತಲೆಯಿಂದ ವ್ಯಾಪ್ತವೂ ವಿಚಾರವಿಲ್ಲದುದೂ ಆದ ಈ ಲೋಕದಲ್ಲಿ ಲಕ್ಷಜನರ ಮಧ್ಯದಲ್ಲೊಬ್ಬನು ವಿಚಾರಪರನಿದ್ದರೆ ನನ್ನ ಈ ಶಾಸ್ತ್ರವು ವಿರುದ್ಧವಾಗಿದ್ದರೂ ಪ್ರಸಿದ್ಧತ್ವವನ್ನು ಹೊಂದುವುದು ' ಈ ಪ್ರಕಾರವಾಗಿ ಯೋಚಿಸಿ ಈ ವ್ಯಾಸನು ಲೋಕಮೂಢತ್ವವನ್ನು ನೋಡಿ ಸಂತೋಷಪಟ್ಟನು ‖ ೬೫-೬೬ ‖ ಪ್ರಾಜ್ಞರು ಈ ಪ್ರಕಾರವಾದ ಲೌಕಿಕಪುರಾಣಗಳನ್ನು ತಿಳಿದು, ಶತ್ರುಗಳ ವಚನಗಳನ್ನು ನಂಬದಿರುವಂತೆ, ಆ ಪುರಾಣಗಳನ್ನು ನಂಬಬಾರದು ‖ ೬೭ ‖ ಮಿತ್ರನೆ ! ಪುರಾಣದ ಕೊನೆಯಲ್ಲಿರುವ ಬೇರೆ ಕೌತುಕವಿಷಯವನ್ನೂ ತೋರಿಸುತ್ತೇನೆ " ಈ ರೀತಿಯಾಗಿ ಹೇಳಿ ಆ ಮನೋವೇಗನು ಕೆಂಪು ಬಟ್ಟೆಯುವನ ವೇಷವನ್ನು ಧರಿಸಿದನು ‖ ೬೮ ‖ ಬಳಿಕ ಈ ಮನೋವೇಗನು ಐದನೆಯ ಬಾಗಿಲಿನಿಂದ ನಗರವನ್ನು ಪ್ರವೇಶಿಸಿ ಕೈಯಿಂದ ನಗಾರಿ

ಯನ್ನು ಬಾರಿಸಿ ಸುವರ್ಣಪೀಠವನ್ನೇರಿದನು ॥ ೧೯ ॥ ಆಗ ಭೂಸುರರು ಬಂದು ಮನೋವೇಗನನ್ನು ಕುರಿತು "ಅಯ್ಯಾ! ನೀನು ಪ್ರಾಜ್ಞನಾಗಿ ಕಾಣುತ್ತಿರುವೆ. ನಮ್ಮೊಡನೆ ವಾದವನ್ನು ಮಾಡುವೆಯಾ? ಏನಾದರೂ ಬಲ್ಲೆಯಾ?" ಎಂದರು ॥ ೨೦ ॥ ಆಗ ಈ ಮನೋವೇಗನು "ಎಲೈ ದ್ವಿಜರೆ! ನಾನು ಶಾಸ್ತ್ರವನ್ನು ಸ್ವಲ್ಪವೂ ತಿಳಿಯೆನು. ಅಪೂರ್ವವಾದ ನಗಾರಿಯನ್ನು ಬಾರಿಸಿ ಸಿಂಹಾಸನದಲ್ಲಿ ಕುಳಿತುಕೊಂಡೆನು" ಎಂದನು. ॥ ೨೧ ॥ ಆ ಮಾತನ್ನು ಕೇಳಿ ದ್ವಿಜರು "ಅಯ್ಯಾ! ನೀನು ಪರಿಹಾಸ್ಯವನ್ನು ಬಿಡು. ಸರಳವಾಗಿ ಮಾತನಾಡು. ಯಥಾರ್ಥವಿಷಯವನ್ನು ಮಾತನಾಡುವವರೊಡನೆ ಪರಿಹಾಸ್ಯವನ್ನು ಮಾಡುವವನು ನಿಂದಿಸಲ್ಪಡುತ್ತಾನೆ" ಎಂದರು ॥ ೨೨ ॥ ಆಗ ಮನೋವೇಗನು ದ್ವಿಜರನ್ನು ಕುರಿತು "ಅಯ್ಯಾ! ನಾನು ನೋಡಿರುವ ಆಶ್ಚರ್ಯವನ್ನು ಸೂಚಿಸುವೆನು. ಆದರೆ ಹೇಳಲು ಹೆದರುತ್ತೇನೆ. ವಿಚಾರವಿಲ್ಲದೆ ನೀವುಗಳು ಬೇರೆ ವಿಧವಾಗಿ ಗ್ರಹಿಸಲೇಬಾರದು' ಎಂದನು ॥ ೨೩ ॥ ಆ ಮಾತನ್ನು ಕೇಳಿ ವಿಪ್ರರು "ಅಯ್ಯಾ! ನೀನು ಹೇಳು, ಹೆದರಬೇಡ. ನಾವೆಲ್ಲರು ಸಂಪೂರ್ಣವಾಗಿ ನ್ಯಾಯಯುಕ್ತವಾದ ಮನಸ್ಸುಳ್ಳವರೂ ವಿವೇಚನೆಯುಳ್ಳವರೂ ಆಗಿರುತ್ತೇವೆ" ಎಂದರು ॥ ೨೪ ॥ ಬಳಿಕ ರಕ್ತವಸ್ತ್ರಧಾರಿಯಾದ ಮನೋವೇಗನು ವಿಪ್ರರನ್ನು ಕುರಿತು "ಹಾಗಾದರೆ ಕೇಳಿರಿ. ಶ್ರಾವಕರ ಪುತ್ರರಾದ ನಾವುಗಳು ಬೌದ್ಧಗುರುಗಳ ಉಪಾಸಕರಾಗಿದ್ದೇವೆ ॥ ೨೫ ॥ ಒಂದಾನೊಂದು ಕಾಲದಲ್ಲಿ ಭಿಕ್ಷುಕರು ಭೂಮಿಯ ಮೇಲೆ ತಮ್ಮ ಬಟ್ಟೆಗಳನ್ನು ಒಣಗುವುದಕ್ಕೆ ಹಾಕಿ ಅವುಗಳನ್ನು ಕಾಯುವುದಕ್ಕಾಗಿ ನಾವು ಕೈಯಲ್ಲಿ ಕೋಲನ್ನು ಹಿಡಿದುಕೊಂಡು ಕಾಯುವಂತೆ ನೇಮಿಸಿದರು ॥ ೨೬ ॥ ನಾವುಗಳು ಭಿಕ್ಷುಗಳ ಬಟ್ಟೆಗಳನ್ನು ಪ್ರಯತ್ನದಿಂದ ಕಾಪಾಡುತ್ತಿರುವಾಗ ಅಲ್ಲಿಗೆ ಭಯಂಕರಗಳೂ ದಪ್ಪವಾದ ಮೈಯುಳ್ಳವೂ ಆದ ಎರಡು ನರಿಗಳು ಬಂದುವು ॥ ೨೭ ॥ ಅವುಗಳನ್ನು ನೋಡಿ ಹೆದರಿದ ನಾವುಗಳು ಎತ್ತರವಾದ

ಸ್ತೂಪವನ್ನು ಹತ್ತಿದಾಗ ಆ ನರಿಗಳು ಆ ಸ್ತೂಪವನ್ನೆತ್ತಿಕೊಂಡು ಆಕಾಶ ದಲ್ಲಿ ಹಾರಿಹೋದುವು ॥ ೭೮ ॥ ಆಗ ನಾವುಗಳು ಕೂಗಿಕೊಂಡೆವು. ಅದನ್ನು ಕೇಳಿ ಭಿಕ್ಷುಗಳು ಹೊರಟುಬಂದರು. ಅಷ್ಟರಲ್ಲಿ ಬಹುವೇಗವುಳ್ಳ ಈ ನರಿಗಳು ಹನ್ನೆರಡು ಯೋಜನಗಳವರೆಗೆ ಹೋದುವು ॥ ೭೯ ॥ ಈ ನರಿಗಳು ಸ್ತೂಪವನ್ನು ಭೂಮಿಯಲ್ಲಿ ಬಿಟ್ಟು ನಮ್ಮನ್ನು ತಿನ್ನುವುದಕ್ಕೆ ತೊಡಗಿದುವು. ಆಗ ಎರಡು ಹದ್ದುಗಳು ಶಸ್ತ್ರಧಾರಿಗಳಾದ ಅನೇಕ ವ್ಯಾಧರನ್ನು ಕಂಡುವು ॥ ೮೦ ॥ ಆ ನರಿಗಳು ನಮ್ಮ ಭಕ್ಷಣವನ್ನು ಬಿಟ್ಟು ಆ ವ್ಯಾಧರಿಗೆ ಹೆದರಿ ಓಡಿಹೋದುವು. ಪ್ರಾಣಹಾನಿಯಾಗುವ ಸಂದರ್ಭ ದಲ್ಲಿ ಯಾವನೂ ಭೋಜನಾರಂಭವನ್ನು ಮಾಡುವುದಿಲ್ಲ ॥ ೮೧ ॥ ಬಳಿಕ ಬೇಟೆಗಾರರೊಡನೆ ನಾವುಗಳು ಶಿವವೆಂಬ ದೇಶಕ್ಕೆ ಬಂದು ಮನಸ್ಸನ್ನು ದೃಢ ಮಾಡಿ ಯೋಚಿಸಿದೆವು ॥ ೮೨ ॥ ಆಶೆಯಿಂದ ಮೋಹಗೊಂಡಿರುವ ನಾವು ಗಳು ಈ ಪರದೇಶವನ್ನು ಹೊಂದಿರುತ್ತೇವೆ. ದಾರಿಯನ್ನು ತಿಳಿಯದವರೂ ವೆಚ್ಚಕ್ಕಿಲ್ಲದವರೂ ಆದ ನಾವುಗಳು ಮನೆಗೆ ಹೇಗೆ ಹೋಗುವೆವು ? ॥ ೮೩ ॥ ಆದುದರಿಂದ ನಮ್ಮ ಕುಲಪರಂಪರೆಯಿಂದ ಬಂದುದೂ ಬುದ್ಧನಿಂದ ಹೇಳ ಲ್ಪಟ್ಟಿರುವುದೂ ಆದ ತಪಸ್ಸನ್ನು ಮಾಡುವುದೊಳ್ಳೆಯದು. ಅದರಿಂದ ಉಭಯಲೋಕಗಳಲ್ಲಿ ಸಾರವೂ ನಿತ್ಯವೂ ಆದ ಸುಖವನ್ನು ಪಡೆಯು ವೆವು ॥ ೮೪ ॥ ಕೆಂಪುಬಟ್ಟೆಗಳಿರುತ್ತವೆ. ಮುಖ್ಯವಾಗಿ ತಲೆಯನ್ನು ಬೋಳಿಸೋಣ. ಅನರ್ಥಕಾರಿಯಾದ ಮನೆಯಿಂದೇನಾಗಬೇಕು ನಮಗೆ ? ॥ ೮೫ ॥ ನಾವಿಬ್ಬರೂ ಈ ಪ್ರಕಾರವಾಗಿ ಆಲೋಚಿಸಿ ನಮ್ಮ ವ್ರತವನ್ನು ಸ್ವೀಕರಿಸಿದೆವು. ಪ್ರಾಜ್ಞರು ಧರ್ಮಕಾರ್ಯದಲ್ಲಿ ತಾವೇ ಪ್ರವರ್ತಿಸು ತ್ತಾರೆ ॥ ೮೬ ॥ ನಾವುಗಳು ನಗರಗಳಿಂದಲೂ ಗಣಗಳಿಂದಲೂ ಅಲಂಕೃತ ವಾದ ಭೂಮಿಯಲ್ಲಿ ಸಂಚರಿಸುತ್ತ ದ್ವಿಜರಿಂದ ನಿಬಿಡವಾದ ನಿಮ್ಮ ಈ ಸ್ಥಾನಕ್ಕೆ ಬಂದೆವು ॥ ೮೭ ॥ ನರಿಗಳು ಸ್ತೂಪವನ್ನೆತ್ತಿರುವುದನ್ನು ನಾವು ಪ್ರತ್ಯಕ್ಷವಾಗಿ ಕಂಡೆವು. ಕಣ್ಣುಗಳಿಗೆ ಆಶ್ಚರ್ಯಕರವಾದ ಇಂತಹ ವಿಷ

ಯುವನ್ನು ನಿಮ್ಮಗಳಿಗೆ ತಿಳಿಸಿದೆವು" ಎಂದನು ‖ ೮೮ ‖ ಮನೋವೇಗನ ಈ ಮಾತನ್ನು ಕೇಳಿ ಭೂಸುರರು "ಅಯ್ಯಾ! ನೀನು ಪ್ರತಸ್ಥನಾಗಿ ಇಂತಹ ಸುಳ್ಳನ್ನು ಹೇಗೆ ಹೇಳುವೆ? ‖ ೮೯ ‖ ಮೂರು ಲೋಕದಲ್ಲಿ ಸುಳ್ಳು ಹೇಳುವವರನ್ನು ಒಟ್ಟುಗೂಡಿಸಿ ಬ್ರಹ್ಮನು ನಿನ್ನನ್ನು ನಿರ್ಮಿಸಿದನು, ನಿಶ್ಚಯ. ಹಾಗಲ್ಲದಿದ್ದರೆ ಲೋಕದಲ್ಲಿ ಇಂತಹ ಬೇರೆ ಸುಳ್ಳೇಕೆ ಕಾಣುವುದಿಲ್ಲ?'' ಎಂದರು ‖ ೯೦ ‖ ಪ್ರಾಜ್ಞನಾದ ಮನೋವೇಗನು ಅವರ ಮಾತನ್ನು ಕೇಳಿ "ಅಯ್ಯಾ! ವಿಪ್ರರೆ! ನಿಮ್ಮ ಪುರಾಣದಲ್ಲಿ ಇಂತಹ ಸುಳ್ಳುಗಳು ಹೇರಳವಾಗಿಲ್ಲವೇ? ‖ ೯೧ ‖ ಎಲ್ಲಾ ಜನರು ಬೇರೆಯವರ ದೋಷವನ್ನು ನೋಡುತ್ತಾರಲ್ಲದೆ ತಮ್ಮ ದೋಷವನ್ನು ಯಾರೂ ನೋಡುವುದಿಲ್ಲ. ಕಣ್ಣು ಚಂದ್ರನಲ್ಲಿರುವ ಕಲಂಕವನ್ನು ನೋಡುವುದಲ್ಲದೆ ತನ್ನಲ್ಲಿರುವ ಕಪ್ಪು-ಕಾಡಿಗೆಯನ್ನು ನೋಡುವುದಿಲ್ಲ" ಎಂದನು ‖ ೯೨ ‖ ಆಗ ಆ ದ್ವಿಜೋತ್ತಮರು ಮನೋವೇಗನನ್ನು ಕುರಿತು "ಅಯ್ಯಾ! ನಮ್ಮ ಪುರಾಣದಲ್ಲಿ ನೀನು ಇಂತಹ ಸುಳ್ಳನ್ನು ನೋಡಿದ್ದರೆ ನಿಸ್ಸಂದೇಹವಾಗಿ ಹೇಳು. ನಾವು ವಿಚಾರಮಾಡಿ ಸುಳ್ಳನ್ನು ಬಿಟ್ಟುಬಿಡುವೆವು" ಎಂದರು ‖ ೯೩ ‖ ಜಿನೇಶ್ವರನ ವಾಕ್ಯವೆಂಬ ಜಲದಿಂದ ತೊಳೆಯಲ್ಪಟ್ಟ ಬುದ್ಧಿಯುಳ್ಳವನೂ ಜಿತಶತ್ರುವಿನ ಪುತ್ರನೂ ಆದ ಮನೋವೇಗನು ಆ ವಿಪ್ರರ ಮಾತನ್ನು ಕೇಳಿ "ಎಲೈ ದ್ವಿಜರೆ! ನೀವು ನಿಮ್ಮ ಪುರಾಣದಲ್ಲಿರುವ ಸುಳ್ಳನ್ನು ತಿಳಿದು ಬಿಟ್ಟುಬಿಡುವುದಾದರೆ ನಾನು ನಿಮ್ಮ ಪುರಾಣಾರ್ಥವನ್ನು ಹೇಳುತ್ತೇನೆ ‖ ೯೪ ‖ ವೀರರಸಯುಕ್ತನಾದ ರಾಮಚಂದ್ರನು ತ್ರಿಶಿರ ಶಿಖರ ಮೊದಲಾದವರನ್ನು ಕೊಂದು ವನದಲ್ಲಿ ಲಕ್ಷ್ಮಣ ಜಾನಕೀ ಸಮೇತನಾಗಿರುವಾಗ ಲಂಕಾಧಿಪತಿಯಾದ ರಾವಣನು ಅಲ್ಲಿಗೆ ಬಂದನು ‖ ೯೫ ‖ ಅವನು ಮಾಯೆಯಿಂದ ಸ್ವರ್ಣಮಯವಾದ ಜಿಂಕೆಯನ್ನು ರಾಮನಿಗೆ ತೋರಿಸಿ ರಾಮನ ಪಕ್ಷಪಾತಿಯಾದ ಜಟಾಯು-ಪಕ್ಷಿಯನ್ನು ಕೆಡಹಿ ಸೀತೆಯನ್ನು ಹರಣಮಾಡಿದನು. ಕಾಮುಕನು ಯಾವನಿಗೆ ತಾನೆ ಉಪದ್ರವವನ್ನು

ಮಾಡುವುದಿಲ್ಲ ? ‖ ೯೬ ‖ ಬಲಿಷ್ಠನಾದ ಈ ರಾಮಚಂದ್ರನು ಕಪಿಸಮೇತನಾದ ಸುಗ್ರೀವರಾಜನು ಬಂದು ಸೇರಲು ಬಲಶಾಲಿಯಾದ ವಾಲಿಯನ್ನು ಕೊಂದು ಪ್ರಿಯೆಯ ಸಮಾಚಾರವನ್ನು ಪಡೆಯುವುದಕ್ಕಾಗಿ ಹನುಮಂತನನ್ನು ಕಳುಹಿದನು ‖ ೯೭ ‖ ಅಪರಿಮಿತವಾದ ಗಮನವುಳ್ಳ ಹನುಮಂತನು ರಾಕ್ಷಸರ ನಿವಾಸದಲ್ಲಿ ಸೀತೆಯನ್ನು ನೋಡಿ ಹಿಂದಿರುಗಿ ಬಂದ ಬಳಿಕ ರಾಮಚಂದ್ರನು ಶೀಘ್ರವಾಗಿ ಕಪಿಗಳಿಗೆ ಆಜ್ಞೆಯನ್ನು ಮಾಡಿ ಎತ್ತರವಾದ ಬೆಟ್ಟಗಳಿಂದ ಸಮುದ್ರದ ನೀರಿನಲ್ಲಿ ಸೇತುವೆಯನ್ನು ಕಟ್ಟಿಸಿದನು, ಕಾಂತೆಯ ಕಾಂಕ್ಷೆಯುಳ್ಳವನು ಆಶ್ಚರ್ಯಕರವಾದ ಯಾವ ಕಾರ್ಯವನ್ನು ತಾನೇ ಮಾಡುವುದಿಲ್ಲ ? ‖ ೯೮ ‖

ಇಂತು ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷಾಪಂಚದಶಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

—o—

ಅನಂತರದಲ್ಲಿ ಒಂದೊಂದು ಕಪಿಯು ಐದೈದು ಬೆಟ್ಟಗಳನ್ನು ಲೀಲೆಯಿಂದ ಎತ್ತಿಕೊಂಡು ಆಕಾಶದಲ್ಲಿ ಅನೇಕ ಪ್ರಕಾರವಾಗಿ ಆಟವಾಡುತ್ತ ಸಮುದ್ರದ ಬಳಿಗೆ ಹೋಗಿ ಸೇತುವೆಯನ್ನು ಕಟ್ಟಿತು ‖ ೧ ‖ ಏನಯ್ಯಾ ! ವಾಲ್ಮೀಕಿಯು ರಚಿಸಿರುವ ರಾಮಾಯಣವೆಂಬ ಗ್ರಂಥದಲ್ಲಿ ಇಂತಹ ಸಮಾಚಾರವನ್ನು ಹೇಳಿದ್ದಾನೋ ? ಇಲ್ಲವೊ ? ” ಎಂದು ಕೇಳಿದನು ‖ ೨ ‖ ಆಗ ವಿಪ್ರರು “ ಅಯ್ಯಾ ! ಇಂತಹ ಸತ್ಯಸಮಾಚಾರವನ್ನು ಯಾವನು ಇಲ್ಲವೆಂದು ಹೇಳುತ್ತಾನೆ ? ಯಾವನೂ ಕೈಯಿಂದ ಪ್ರಭಾತಕಾಲವನ್ನೆಂದೂ ಮುಚ್ಚುವುದಕ್ಕಾಗುವುದಿಲ್ಲ ” ಎಂದರು ‖ ೩ ‖ ಬಳಿಕ ಆ ಕೆಂಪುಬಟ್ಟೆಯವನು—ಮನೋವೇಗನು “ ಎಲೈ ದ್ವಿಜರೇ ! ಒಂದು ಕಪಿಯು ಐದು ಬೆಟ್ಟಗಳನ್ನು ತೆಗೆದುಕೊಂಡು ಲೀಲೆಯಿಂದ ಆಕಾಶದಲ್ಲಿ ಹೋಗು

ವುದಾದರೆ ಒಂದು ಮಣ್ಣಿನ ದಿಣ್ಣೆಯನ್ನೆತ್ತಿಕೊಂಡು ಆಕಾಶದಲ್ಲಿ ಹೋಗು ತ್ತಿರುವ ಎರಡು ಕೊಬ್ಬಿದ ನರಿಗಳನ್ನು ತಡೆಯುವನಾರು ? ನಿಮ್ಮ ಮಾತು ಸತ್ಯ, ನನ್ನ ಮಾತು ಸತ್ಯವಲ್ಲವೆಂದರೆ ಈ ವಿಷಯದಲ್ಲಿ ವಿಚಾರ ಶೂನ್ಯತೆಯಲ್ಲದೆ ಬೇರೆ ಕಾರಣವು ನನಗೆ ತೋರುವುದಿಲ್ಲ. ನಿಮ್ಮ ಇಂತಹ ಶಾಸ್ತ್ರದಲ್ಲಿ ದೇವರೂ ಧರ್ಮವೂ ಇಂಥವೇ ಆಗಿರುತ್ತವೆ. ಕಾರಣವು ಕಶ್ಮಲ ವಾಗಿದ್ದರೆ ಕಾರ್ಯವು ನಿರ್ಮಲವಾಗಿರುವುದೆಂತು ? ಮಿಥ್ಯಾಜ್ಞಾನದಿಂದ ವ್ಯಾಪ್ತರಾಗಿರುವ ಇಂಥವರ ಮಧ್ಯದಲ್ಲಿ ನಾವಿರುವುದು ಯೋಗ್ಯವಲ್ಲ" ಎಂದು ಹೇಳಿ ಅಲ್ಲಿಂದ ಹೊರಟುಹೋದನು ‖ ೪–೮ ‖ ಮನೋವೇಗನು ಕೆಂಪು ಬಟ್ಟೆಯ ವೇಷವನ್ನು ಬಿಟ್ಟು ತನ್ನ ಮಿತ್ರನನ್ನು ಕುರಿತು " ಯಾರಿಗೂ ಸಂಭ ವವಲ್ಲದಿರುವ ಅರ್ಥವುಳ್ಳ ಬೇರೆಯವರ ಶಾಸ್ತ್ರವನ್ನು ಕೇಳಿದೆಯೋ ? ಈ ಮಾತಿನಂತೆ ನಡೆಯುವವನು ಫಲವನ್ನು ಹೊಂದುವುದಿಲ್ಲ, ಮರಳನ್ನು ಗಾಣ ವಾಡಿ ಯಾವನು ಎಣ್ಣೆಯನ್ನು ದೊರಕಿಸುವನು ? ಹೇಳು. ಕಪಿಗಳು ರಾಕ್ಷ ಸರನ್ನು ಕೊಲ್ಲುವುದಕ್ಕೆಂದೂ ಸಮರ್ಥಗಳಾಗುವುದಿಲ್ಲ. ಅಣಿಮಾದ್ಯಷ್ಟ ಮಹಾಗುಣಗಳುಳ್ಳ ದೇವತೆಗಳೆಲ್ಲಿ ? ಬುದ್ಧಿಯಿಲ್ಲದ ತಿರ್ಯಕ್‌ಪ್ರಾಣಿಗಳೆಲ್ಲಿ ? ಕಪಿಗಳು ದೊಡ್ಡ ಬೆಟ್ಟಗಳನ್ನೆತ್ತುವುದು ಹೇಗೆ ? ವರಪ್ರಸಾದದಿಂದ ದೇವತೆ ಗಳಿಂದಲೂ ಕೊಲ್ಲಲ್ಪಡದಿರುವವನಾಗಿ ಹುಟ್ಟಿದ ಈ ರಾವಣನನ್ನು ಮನುಷ್ಯ ನಾಗಿ ಯಾವನು ಕೊಲ್ಲುವನು ? ದೇವತೆಗಳು ಕಪಿಗಳಾಗಿ ರಾಕ್ಷಸಾಧಿಪತಿ ಯಾದ ರಾವಣನನ್ನು ಕೊಂದರೆಂದು ಹೇಳುವುದಾದರೆ ಈ ಮಾತೂ ಸರಿ ಯಾದುದಲ್ಲ. ಇದರಿಂದ ಇಷ್ಟಾರ್ಥವು ಕೈಗೂಡದು. ಸರ್ವಜ್ಞನಾದ ಶಂಕರನು ದೇವತೆಗಳಿಗೂ ದುಸ್ಸಾಧ್ಯನೂ ಲೋಕಕಂಟಕನೂ ಆದ ರಾವ ಣನಿಗೆ ಇಂತಹ ವರವನ್ನು ಹೇಗೆ ಕೊಡುತ್ತಾನೆ ? ಮಿತ್ರನೆ ! ವಿಚಾರ ಮಾಡಿ ನೋಡಿದರೆ ಬೇರೆಯವರ ಪುರಾಣಗಳಲ್ಲೇನೂ ಸಾರವಿಲ್ಲ. ನೀರನ್ನು ಕಡೆದರೆ ಬೆಣ್ಣೆಯು ದೊರೆಯುವುದೇ ? ಸುಗ್ರೀವನೇ ಮೊದಲಾದ ವರು ಜನರ ಕಲ್ಪನೆಯಂತೆ ಕಪಿಗಳಲ್ಲ. ರಾವಣನೇ ಮೊದಲಾದವರು

ರಾಕ್ಷಸರೂ ಅಲ್ಲ. ವಿದ್ಯಾವಿಭವಸಂಪನ್ನರೂ ಜಿನಧರ್ಮಪರಾಯಣರೂ ಶುಚಿಭೂರ್ತರೂ ಸದಾಚಾರಿಗಳೂ ಮಹಾತೇಜಸ್ವಿಗಳೂ ಆದ ಅವರೆಲ್ಲರೂ ಮನುಷ್ಯರು. ಅವರಲ್ಲಿ ಕಪಿಧ್ವಜರಾಗಿದ್ದವರನ್ನು ಕಪಿಗಳೆಂದು ಹೇಳಿದ್ದಾರೆ. ರಾಕ್ಷಸಧ್ವಜರಾಗಿದ್ದವರನ್ನು ರಾಕ್ಷಸರೆಂದು ಹೇಳಿದ್ದಾರೆ. ಅವರೆಲ್ಲರೂ ಅನೇಕ ಮಹಾವಿದ್ಯೆಗಳನ್ನು ಸಿದ್ಧಿಸಿರುವವರು. ಗೌತಮಗಣಧರರು ಶ್ರೇಣಿಕನಿಗೆ ಹೇಗೆ ಹೇಳಿದ್ದಾರೋ ಹಾಗೆ ಚಂದ್ರನಂತೆ ಪ್ರಕಾಶಮಾನವಾದ ದರ್ಶನವುಳ್ಳ ಭವ್ಯರು ನಂಬಬೇಕು. ಸಾಧುವೆ! ನಿನಗೆ ಬೇರೆಯವರ ಪುರಾಣವನ್ನು ತೋರಿಸುತ್ತೇನೆ" ಎಂದು ಹೇಳಿ ಮನೋವೇಗನು ಮಿತ್ರನೊಡನೆ ಬಿಳೀಬಟ್ಟೆಯನ್ನು ಧರಿಸಿರುವ ಸನ್ಯಾಸಿಯ ವೇಷವನ್ನು ಧಾರಣಮಾಡಿದನು ‖ ೯–೨೧ ‖ ಬಳಿಕ ಈ ಮನೋವೇಗನು ಆರನೆಯ ಬಾಗಿಲಿನಿಂದ ಪಾಟಲೀಪುರವನ್ನು ಪ್ರವೇಶಿಸಿ ಶೀಘ್ರವಾಗಿ ನಗಾರಿಯನ್ನು ಬಾರಿಸಿ ಭಂಗಾರದ ಪೀಠದಲ್ಲಿ ಕುಳಿತುಕೊಂಡನು ‖ ೨೨ ‖ ಆಗ ದ್ವಿಜರು ಬಂದು ಮನೋವೇಗನನ್ನು ನೋಡಿ "ಏನನ್ನು ಬಲ್ಲೆ? ನಿನ್ನ ಗುರುವು ಯಾರು? ವಾದವನ್ನು ಮಾಡಬಲ್ಲೆಯಾ? ನೋಡುವುದಕ್ಕೇನೋ ಚೆನ್ನಾಗಿರುತ್ತಿ" ಎಂದರು ‖ ೨೩ ‖ ಬಳಿಕ ಮನೋವೇಗನು ಆ ದ್ವಿಜರನ್ನು ಕುರಿತು "ನನಗೇನೂ ಗೊತ್ತಿಲ್ಲ. ನನಗೆ ಗುರುವಿಲ್ಲ. ವಾದದ ಹೆಸರನ್ನೂ ತಿಳಿಯೆನು. ನನಗೆ ವಾದಶಕ್ತಿಯೆಲ್ಲಿ ಬಂದಿತು? ಮೊದಲು ನೋಡಲ್ಪಡದಿರುವ ಸಿಂಹಾಸನವನ್ನು ನೋಡಿ ಅದರಲ್ಲಿ ಕುಳಿತುಕೊಂಡೆನು. ಮಹಾಶಬ್ದವನ್ನು ಕೇಳಬೇಕೆಂಬ ಬಯಕೆಯಿಂದ ದೊಡ್ಡ ನಗಾರಿಯನ್ನು ಹೊಡೆದೆನು. ಸರ್ವಶಾಸ್ತ್ರಬಹಿಷ್ಕೃತರೂ ಮೂರ್ಖರೂ ಗೊಲ್ಲರ ಮಕ್ಕಳೂ ಆದ ನಾವು ಭೀತಿಯಿಂದ ಸನ್ಯಾಸವನ್ನು ನಾವೇ ಸ್ವೀಕರಿಸಿ ಭೂಮಿಯಲ್ಲಿ ತಿರುಗಾಡುತ್ತಿದ್ದೇವೆ" ಎಂದು ಉತ್ತರವನ್ನಿತ್ತನು ‖ ೨೪–೨೬ ‖ ಆ ಮಾತನ್ನು ಕೇಳಿ ದ್ವಿಜರು "ನಿಮಗೆ ಯಾವುದರಿಂದ ಭೀತಿಯುಂಟಾಗಿ ತಪಸ್ಸನ್ನು ಸ್ವೀಕರಿಸಿದಿರಿ? ದಯೆಯಿಟ್ಟು ಹೇಳು.

ನಮಗೆ ಕೇಳಬೇಕೆಂಬ ಕುತೂಹಲವಿದೆ " ಎಂದರು ‖ ೨೭ ‖ ಬಳಿಕ ಆ ಬಿಳೀಬಟ್ಟೆಯ ಸನ್ಯಾಸಿಯು ವಿಪ್ರರನ್ನು ಕುರಿತು " ಆಭೀರದೇಶದ ವೃಕ್ಷವೆಂಬ ಗ್ರಾಮದಲ್ಲಿ ಕುರಿಕಾಯುವವನಾದ ಉರಣಶ್ರೀಕನೆಂಬ ನಮ್ಮ ತಂದೆಯು ವಾಸಮಾಡುತ್ತಾನೆ. ಕುರಿಮೇಯಿಸುವ ನಮ್ಮ ತಂದೆಗೆ ಒಂದು ದಿವಸ ಜ್ವರವು ಬಂದಿತು. ಆ ಹೊತ್ತು ಕುರಿಕಾಯುವುದಕ್ಕಾಗಿ ನಮ್ಮನ್ನು ಕಾಡಿಗೆ ಕಳುಹಿಸಿದರು ‖ ೨೮–೨೯ ‖ ಅಲ್ಲಿ ಅನೇಕ ಶಾಖೋಪಶಾಖೆಗಳಿಂದ ಕೂಡಿರುವುದೂ ಫಲಗಳಿಂದ ಬಗ್ಗಿರುವುದೂ ಬಹಳ ಎತ್ತರವೂ ಬಹುಕುಟುಂಬಿಯಂತಿರುವುದೂ ಆದ ಒಂದು ಬೇಲದ ಮರವನ್ನು ನೋಡಿದೆವು ‖ ೩೦ ‖ ಬಳಿಕ ನಾನು ಬೇಲದ ಹಣ್ಣನ್ನು ತಿನ್ನಬೇಕೆಂಬ ಇಚ್ಛೆಯುಳ್ಳವನಾಗಿ ಸಹೋದರನನ್ನು ಕುರಿತು 'ಸಹೋದರ ! ನಾನು ಬೇಲದ ಹಣ್ಣುಗಳನ್ನು ತಿನ್ನುತ್ತೇನೆ. ನೀನು ಈ ಕುರಿಗಳನ್ನು ಮೇಯಿಸು ' ಎಂದು ಹೇಳಿದೆನು ‖ ೩೧ ‖ ಆ ಮೇಲೆ ಈ ಸಹೋದರನು ಕುರಿಗಳ ಮಂದೆಯನ್ನು ಕಾಯುವುದಕ್ಕೆ ಹೋದನು. ನಾನು ಆ ಬೇಲದ ಮರವನ್ನು ಹತ್ತುವುದು ಕಷ್ಟವೆಂದು ಹೀಗೆ ಯೋಚಿಸಿದೆನು— 'ಹತ್ತುವುದಕ್ಕೆ ಕಷ್ಟವಾದ ಈ ಬೇಲದ ಮರವನ್ನು ನಾನು ಹತ್ತಲಾರೆನು. ಹಸಿವಿನಿಂದ ಕೃಶವಾದ ಹೊಟ್ಟೆಯುಳ್ಳ ನಾನು ಈ ಹಣ್ಣುಗಳನ್ನು ಹೇಗೆ ತಿನ್ನಲಿ ? ' ನಾನೇ ಮರದ ಇದಿರಿಗೆ ಹೋಗಿ ಈ ರೀತಿಯಾಗಿ ಬಹಳ ಸಮಯದವರೆಗೆ ಯೋಚಿಸಿ ಬಳಿಕ ನನ್ನ ಶಿರಸ್ಸನ್ನು ಕತ್ತರಿಸಿ ಅದನ್ನೂ ಸರ್ವಪ್ರಾಣಗಳನ್ನೂ ಆ ಮರಕ್ಕೆಸೆದೆನು ‖ ೩೨–೩೪ ‖ ನನ್ನ ಶಿರಸ್ಸು ಆ ಬೇಲದ ಹಣ್ಣುಗಳನ್ನು ಸ್ವೇಚ್ಛೆಯಿಂದ ತಿನ್ನುತ್ತಿದ್ದ ಹಾಗೆಯೇ ಕೆಳಗೆ ನನ್ನ ಶರೀರವು ಮಹಾಸುಖಕರವಾದ ತೃಪ್ತಿಯನ್ನು ಹೊಂದಿತು ‖ ೩೫ ‖ ನನ್ನ ತಲೆಯು ಕೆಳಗೆ ನಿಲುಕಿ ಹೊಟ್ಟೆತುಂಬಿರುವುದನ್ನು ನೋಡಿ ಇಳಿದು ಬಂದು ಎಡೆಬಿಡದೆ ಕಂಠದಲ್ಲಿ ಅಂಟಿಕೊಂಡಿತು. ತರುವಾಯ ನಾನು ಕುರಿಗಳನ್ನು ನೋಡುವುದಕ್ಕೆ ಹೋದೆನು ‖ ೩೬ ‖ ನಾನು ಸಹೋದರನನ್ನು ನೋಡು

ವುದಕ್ಕೋಸ್ಕರ ಹೋಗಿ ಅವನು ವನದ ಮಧ್ಯದಲ್ಲಿ ಮಲಗಿರುವುದನ್ನು ಕಂಡೆನು. ಕುರಿಗಳಿರಲಿಲ್ಲ ॥ ೩೭ ॥ ಅವನನ್ನು ಎಬ್ಬಿಸಿ ನಾನು 'ಎಲಾ ಕುರಿಗಳೆಲ್ಲಿ ಹೋದುವು ?' ಎಂದು ಕೇಳಿದೆನು. ಆಗ ಅವನು 'ಸಹೋದರನೆ ! ನಾನು ಮಲಗಿದ್ದಾಗ ಅವು ಎಲ್ಲಿಯೋ ಓಡಿಹೋದುವು' ಎಂದನು ॥ ೩೮ ॥ ಆಗ ನಾನು ತಮ್ಮನನ್ನು ಕುರಿತು 'ಕುರಿಗಳನ್ನು ಕಳೆದುಕೊಂಡು ಮನೆಗೆ ಹೋಗುವುದು ಹೇಗೆ ? ನಮ್ಮ ತಂದೆಯು ತಿಳಿದು ಕೋಪಿಸಿಕೊಂಡು ನಮಗೆ ಹೊಡೆಯುವನು. ಹಾಗೆಂದು ವೇಷವಿಲ್ಲದೆ ಪರದೇಶಕ್ಕೆ ಹೋದರೆ ಹೊಟ್ಟೆಹಸಿವಿನಿಂದ ಸಾಯುವೆವು. ಆದುದರಿಂದ ನಾವು ಸಾಧುವೇಷವನ್ನು ಧರಿಸೋಣ ॥ ೩೯–೪೦ ॥ ಕೋಲು ಕಂಬಳಿ ತಲೆಯನ್ನು ಬೋಳಿಸಿರುವಿಕೆ ಇವುಗಳು ಲಕ್ಷಣವಾಗಿರುವ ನಮ್ಮಗಳ ಚಿಹ್ನೆಯು ಶ್ವೇತಾಂಬರಸಾಧುಗಳಿಗೆ ಸುಖಭೋಜನದ ಸಾಧನವಾಗಿದೆ ॥ ೪೧ ॥ ನಮ್ಮಗಳ ತಂದೆಯು ಕುಲಪರಂಪರೆಯಿಂದ ಶ್ವೇತಾಂಬರಸಾಧುಗಳ ಭಕ್ತನಾಗಿದ್ದಾನೆ. ಆದುದರಿಂದ ನಾವುಗಳು ಶ್ವೇತಾಂಬರಸಾಧುಗಳಾಗುತ್ತೇವೆ. ಬೇರೆ ವೇಷಗಳಿಂದ ಪ್ರಯೋಜನವಿಲ್ಲ' ॥ ೪೨ ॥ ಈ ರೀತಿಯಾಗಿ ಯೋಚಿಸಿ ನಾವು ಶ್ವೇತಾಂಬರತಪಸ್ವಿಗಳಾಗಿ ಭೂಮಿಯಲ್ಲಿ ಸಂಚರಿಸುತ್ತ ನಿಮ್ಮ ಸ್ಥಾನಕ್ಕೆ ಬಂದಿದ್ದೇವೆ" ಎಂದನು ॥ ೪೩ ॥ ಅವನ ಮಾತನ್ನು ಕೇಳಿ ಆ ವಿಪ್ರರು "ಅಯ್ಯೋ ! ನೀನು ನರಕಕ್ಕೆ ಹೋಗುವುದಕ್ಕೆ ಹೆದರುವುದಿಲ್ಲವಾದರೂ ವ್ರತಸ್ಥನಾಗಿರುವವನು ಇಂತಹ ಸುಳ್ಳನ್ನು ಹೇಳುವುದು ಯೋಗ್ಯವಲ್ಲ" ಎಂದರು ॥ ೪೪ ॥ ಬಳಿಕ ಶ್ವೇತಾಂಬರವೇಷಧಾರಿಯಾದ ಮನೋವೇಗನು ವಿಪ್ರರನ್ನು ಕುರಿತು "ನಿಮ್ಮ ವಾಲ್ಮೀಕಿಪುರಾಣದಲ್ಲಿ ಇಂತಹ ಮಾತಿಲ್ಲವೋ ?" ಎಂದನು ॥ ೪೫ ॥ ಆಗ ಆ ವಿಪ್ರರು ಮನೋವೇಗನನ್ನು ಕುರಿತು "ಆ ಪುರಾಣದಲ್ಲಿ ಇಂತಹ ಮಾತನ್ನು ನೀನೆಲ್ಲಿಯಾದರೂ ನೋಡಿದ್ದರೆ ಸಂಕೋಚವಿಲ್ಲದೆ ಹೇಳು" ಎಂದರು. ಆಗ ಮನೋವೇಗನು ವಿಪ್ರರನ್ನು ಕುರಿತು ಹೇಳುತ್ತಾನೆ.— ॥ ೪೬ ॥

"ಇಪ್ಪತ್ತು ದೊಡ್ಡ ತೋಳುಗಳುಳ್ಳವನೂ ಮಹಾಧೈರ್ಯವುಳ್ಳವನೂ ಆದ ದಶಮುಖನು ಮೂರು ಲೋಕದಲ್ಲಿ ಪ್ರಸಿದ್ಧನಾದ ರಾಕ್ಷಸಾಧಿಪತಿಯಾಗಿದ್ದನು ‖ ೪೭ ‖ ಈಶ್ವರನನ್ನು ಆರಾಧಿಸುವವನೂ ಬಹುಭಕ್ತಿಯುತನೂ ಆದ ಆ ರಾವಣನು ತನ್ನ ಒಂಬತ್ತು ತಲೆಗಳನ್ನು ಖಡ್ಗದಿಂದ ಕತ್ತರಿಸಿಕೊಂಡನು ‖ ೪೮ ‖ ವಿಕಸಿತವಾದ ತುಟಿಗಳೆಂಬ ಎಸಳುಗಳುಳ್ಳ ಮುಖಗಳೆಂಬ ಕಮಲಗಳಿಂದ ಈಶ್ವರನನ್ನು ಭಕ್ತಿಯಿಂದ ಪೂಜಿಸಿದನು. ವರವನ್ನಿಚ್ಛಿಸುವವನು ಯಾವುದನ್ನು ತಾನೆ ಮಾಡುವುದಿಲ್ಲ ? ‖ ೪೯ ‖ ಬಳಿಕ ರಾವಣನು ತನ್ನ ಬಾಹುಗಳಿಂದ ದೇವಗಂಧರ್ವರಿಗೆ ಮೋಹವನ್ನುಂಟುಮಾಡುವುದೂ ಕೇಳುವುದಕ್ಕೆ ಯೋಗ್ಯವೂ ಆದ ಹಸ್ತಕವೆಂಬ ಸಂಗೀತವನ್ನು ಮಾಡಲಾರಂಭಿಸಿದನು ‖ ೫೦ ‖ ಈಶ್ವರನು ಪಾರ್ವತಿಯ ಮುಖದಲ್ಲಿರಿಸಿದ್ದ ದೃಷ್ಟಿಯನ್ನು ಎಳೆದು ಅವನ ಸಾಹಸವನ್ನು ನೋಡಿ ಇಷ್ಟವಾದ ವರವನ್ನು ಕೊಟ್ಟನು ‖ ೫೧ ‖ ಬಿಸಿಯಾದ ರಕ್ತಧಾರೆಗಳಿಂದ ಭೂತಲವನ್ನು ಸೇಚಿಸುವ ತಲೆಗಳ ಮಾಲೆಯನ್ನು ಸಂಧಿಯಿಲ್ಲದಂತೆ ಮತ್ತೆ ಆ ಮುಂಡದಲ್ಲಿ ಜೋಡಿಸಿಕೊಂಡನು ‖ ೫೨ ‖ ಅಯ್ಯಾ ! ಇಂತಹ ವಾಲ್ಮೀಕಿಯ ಪುರಾಣಾರ್ಥವಿದೆಯೋ ? ಇಲ್ಲವೋ ? ನೀವುಗಳು ಸತ್ಯವಾದಿಗಳಾಗಿದ್ದರೆ ಸತ್ಯವನ್ನು ಹೇಳಿರಿ " ‖ ೫೩ ‖

ಮನೋವೇಗನ ಈ ಮಾತನ್ನು ಕೇಳಿ ಆ ವಿಪ್ರರು " ಸಾಧುವೇ ! ಇದು ನಿಜವೇ, ಪ್ರತ್ಯಕ್ಷವಾಗಿ ನೋಡಿರುವುದನ್ನೂ ಪ್ರಸಿದ್ಧವಾಗಿರುವುದನ್ನೂ ಬೇರೆ ರೀತಿಯಾಗಿ ಮಾಡುವುದುಕ್ಕೆ ಯಾವನು ಸಮರ್ಥನಾಗಿರುತ್ತಾನೆ ? " ಎಂದರು ‖ ೫೪ ‖ ಆಗ ಆ ಶ್ವೇತಾಂಬರಸಾಧು—ಮನೋವೇಗನು " ರಾವಣನ ಕತ್ತರಿಸಲ್ಪಟ್ಟ ಒಂಬತ್ತು ತಲೆಗಳು ಅಂಟಿಕೊಂಡುವೆಂದ ಮೇಲೆ ನನ್ನದೊಂದು ತಲೆಯೇಕೆ ಅಂಟಿಕೊಳ್ಳಬಾರದು ? ‖ ೫೫ ‖ ನಿಮ್ಮ ಮಾತು ಸತ್ಯ. ನಮ್ಮ ಮಾತು ಮಾತ್ರ ಸತ್ಯವಲ್ಲ. ಇದಕ್ಕೆ ಅಜ್ಞಾ

ನದ ವಿಜೃಂಭಣೆಯು ಕಾರಣವಲ್ಲದೆ ಬೇರೆ ಕಾರಣವು ನನಗೆ ತೋರುವು ದಿಲ್ಲ ‖ ೫೬ ‖ ಈಶ್ವರನು ಕತ್ತರಿಸಲ್ಪಟ್ಟ ರುಂಡಗಳನ್ನು ಮತ್ತೆ ಜೋಡಿಸು ತ್ತಾನಾದರೆ ಆಗ ತಪಸ್ವಿಗಳು ಕತ್ತರಿಸಿದ ತನ್ನ ಲಿಂಗವನ್ನೇಕೆ ಜೋಡಿಸಿ ಕೊಳ್ಳಲಿಲ್ಲ ? ‖ ೫೭ ‖ ತನಗೆ ಉಪಕಾರವನ್ನು ಮಾಡಿಕೊಳ್ಳಲಾರದ ಶಂಭುವು ಬೇರೆಯವರಿಗೆ ಉಪಕಾರವನ್ನು ಮಾಡಲಾರನು ತಾನು ವೈರಿ ಯಿಂದ ಕೊಲ್ಲಲ್ಪಡುವವನು ಮತ್ತೊಬ್ಬನನ್ನು ಕಾಪಾಡಲಾರನು ‖ ೫೮ ‖ ವಿಪ್ರರೆ ! ಇನ್ನೊಂದು ವಿಷಯವನ್ನು ಕೇಳಿರಿ—ಶ್ರೀಕಂಠೆಯೆಂಬ ಬ್ರಾಹ್ಮಣ ಸ್ತ್ರೀಯು ರುಂಡಮಾತ್ರವುಳ್ಳವನೂ ಪ್ರಖ್ಯಾತನೂ ಆದ ದಧಿಮುಖನೆಂಬ ಮಗನನ್ನು ಹಡೆದಳು ‖ ೫೯ ‖ ಸಮುದ್ರವು ನದಿಗಳನ್ನು ಸ್ವೀಕರಿಸುವಂತೆ, ಆ ದಧಿಮುಖನು ಪ್ರಾಣಿಗಳನ್ನು ನಿರ್ಮಲಗಳನ್ನಾಗಿ ಮಾಡುವುದರಲ್ಲಿ ಸಮರ್ಥಗಳಾದ ಸಮಸ್ತ ಶ್ರುತಿಸ್ಮೃತಿಗಳನ್ನು ಶೀಘ್ರವಾಗಿ ಸ್ವೀಕರಿಸಿದನು— ಕಲಿತನು ‖ ೬೦ ‖ ಒಂದಾನೊಂದು ದಿವಸ ಆ ದಧಿಮುಖನು ಅಗಸ್ತ್ಯಮುನಿ ಯನ್ನು ಕಂಡು ಅವನಿಗೆ ನಮಸ್ಕಾರವನ್ನು ಮಾಡಿ ಭಕ್ತಿಯಿಂದ ಅವನನ್ನು ತನ್ನ ಮನೆಗೆ ಊಟಕ್ಕೆ ಕರೆದನು ‖ ೬೧ ‖ ಆಗ ಅಗಸ್ತ್ಯನು ದಧಿಮುಖನನ್ನು ಕುರಿತು 'ಅಯ್ಯಾ ! ನೀನು ನನ್ನನ್ನು ಬಹುಪ್ರೀತಿಯಿಂದ ಊಟಕ್ಕೆ ಕರೆ ಯುತ್ತಿರುವೆ. ಆದರೆ ನಿನಗೆ ಮನೆಯೆಲ್ಲಿದೆ ?' ಎಂದು ಕೇಳಿದನು ‖ ೬೨ ‖ ಆಗ ದಧಿಮುಖನು ಅಗಸ್ತ್ಯನನ್ನು ಕುರಿತು 'ಎಲೈ ಸಾಧುವೆ ! ನನ್ನ ತಂದೆಯ ಮನೆಯಿಲ್ಲವೇ ?' ಎಂದನು. ಅದಕ್ಕೆ ಅಗಸ್ತ್ಯನು 'ನಿನಗೂ ಈ ಮನೆಗೂ ಏನೂ ಸಂಬಂಧವಿಲ್ಲ. ಗೃಹಸ್ಥನು ದಾನಯೋಗ್ಯನಾಗಿರುತ್ತಾನೆ, ಕುಮಾರನು ಗೃಹಸ್ಥನೆಂದು ಹೇಳಿಲ್ಲ. ದಾನಧರ್ಮಗಳಲ್ಲಿ ಸಮರ್ಥಳೂ ಪತಿವ್ರತೆಯೂ ಆದ ಪತ್ನಿಗೆ ಗೃಹವೆಂದು ಹೆಸರು' ಎಂದನು ‖ ೬೩—೬೪ ‖ ಈ ರೀತಿಯಾಗಿ ಹೇಳಿ ಅಗಸ್ತ್ಯನು ಹೊರಟುಹೋದನು. ಬಳಿಕ ದಧಿ ಮುಖನು ತನ್ನ ತಂದೆತಾಯಿಗಳನ್ನು ಕುರಿತು 'ನೀವುಗಳು ನನ್ನ ಕೌಮಾ ರ್ಯದೋಷವನ್ನು ಹೋಗಲಾಡಿಸಿರಿ' ಎಂದನು ‖ ೬೫ ‖ ಆಗ ಆ ತಂದೆ

ತಾಯಿಗಳು ದಧಿಮುಖನನ್ನು ಕುರಿತು 'ಎಲೈ ಮಗನೆ ! ನಿನಗೆ ಯಾವನು ತನ್ನ ಮಗಳನ್ನು ಕೊಡುವನು ? ಹೆಂಡತಿಯ ನಿನ್ನ ಆಶೆಯನ್ನು ನಾವು ನಿರಾಕರಿಸುತ್ತೇವೆ' ಎಂದರು. ಆದರೂ ಅವರು ಒಬ್ಬ ಬಡವನಿಗೆ ಬಹಳ ದ್ರವ್ಯವನ್ನು ಕೊಟ್ಟು ಅವನ ಮಗಳನ್ನು ತಂದು ಮಹೋತ್ಸವವನ್ನು ಮಾಡಿ ಮಗನಿಗೆ ಮದುವೆ ಮಾಡಿದರು ‖ ೬೬–೬೭ ‖ ಸ್ವಲ್ಪಕಾಲವು ಕಳೆದ ಬಳಿಕ ಅವರು ಈ ಮಗನನ್ನು ಕುರಿತು 'ಮಗುವೆ ! ನಮ್ಮಲ್ಲಿ ಹಣವಿಲ್ಲ. ನೀನು ನಿನ್ನ ಹೆಂಡತಿಯನ್ನು ಕಾಪಾಡು' ಎಂದು ಹೇಳಿದರು ‖ ೬೮ ‖ ಆಗ ದಧಿಮುಖನು ತನ್ನ ಹೆಂಡತಿಯನ್ನು ಕರೆದು "ಪ್ರಿಯಳೆ ! ಬಾ. ತಂದೆ ತಾಯಿಗಳು ನನ್ನನ್ನು ಮನೆಯಿಂದ ಹೊರಡಿಸಿದರು. ನಾವು ಎಲ್ಲಿಯಾದರೂ ಹೋಗಿ ಜೀವಿಸೋಣ" ಎಂದನು ‖ ೬೯ ‖ ಪತಿವ್ರತೆಯಾದ ಆ ಹೆಂಡತಿಯು ತನ್ನ ಗಂಡನನ್ನು (ರುಂಡವನ್ನು) ನೆಲುವಿನಲ್ಲಿಟ್ಟುಕೊಂಡು ಮನೆಮನೆಯಲ್ಲಿ ತೋರಿಸುತ್ತ ಭೂತಲವಲ್ಲಿ ತಿರುಗಿದಳು ‖ ೭೦ ‖ ಹಾಗೆ ಪತಿವ್ರತೆಯಾದ ಆ ಸ್ತ್ರೀಯು ಪ್ರತಿಯೊಂದು ನಗರದಲ್ಲಿ ಪೂಜೆಯನ್ನು ಹೊಂದಿದವಳಾಗಿ ಒಂದಾನೊಂದು ದಿವಸ ಬಹಳ ಮಂದಿ ಜೋಳದ ವ್ಯಾಪಾರಿಗಳಿಂದ ನಿಬಿಡವಾದ ಉಜ್ಜಯಿನಿಗೆ ಹೋದಳು ‖ ೭೧ ‖ ಮುಂಡವಿಲ್ಲದ ಪತಿಯನ್ನು ಕಾಪಾಡುವ ಈ ಸ್ತ್ರೀಯನ್ನು ನೋಡಿ ಪ್ರಜೆಗಳು ಆಕೆಗೆ ಅನ್ನವನ್ನು ಕೊಟ್ಟು ಬಹಳ ಭಕ್ತಿಯನ್ನು ಮಾಡಿದರು ‖ ೭೨ ‖ ಒಂದಾನೊಂದು ಕಾಲದಲ್ಲಿ ಆಕೆಯು ಗಂಡನನ್ನು ಕುಳ್ಳಿರಿಸಿರುವ ನೆಲುವನ್ನು ಗೂಟದಲ್ಲಿ ತೂಗುಹಾಕಿ ಪಟ್ಟಣದಲ್ಲಿ ಆಹಾರವನ್ನು ಕೇಳುವುದಕ್ಕೆ ಹೋದಳು ‖ ೭೩ ‖ ಅಲ್ಲಿ ಇಬ್ಬರು ಜೂಜುಗಾರರು ಬಹಳ ಜಗಳ ಮಾಡಿಕೊಂಡು ಪರಸ್ಪರವಾಗಿ ಕತ್ತಿಯಿಂದ ಶಿರಚ್ಛೇದವನ್ನು ಮಾಡಿಕೊಂಡರು ‖ ೭೪ ‖ ಕತ್ತಿಯನ್ನೆತ್ತಿದಾಗ ಆ ನೆಲುವು ಕತ್ತರಿಸಲ್ಪಟ್ಟಿತು. ಆಗ ದಧಿಮುಖನ ರುಂಡವು ಕೆಳಕ್ಕೆ ಬಂದು ಜಗಳವಾಡುತ್ತಿದ್ದವರಲ್ಲಿ ಒಬ್ಬನ ಮುಂಡಕ್ಕೆ ಅಂಟಿಕೊಂಡಿತು ‖ ೭೫ ‖ ಆ ಮೇಲೆ ದಧಿಮುಖನು ಎಡೆಬಿಡದೆ ಅಂಟಿ

ಕೊಂಡ ಮಸ್ತಕವುಳ್ಳವನೂ ಎಲ್ಲಾ ; ಕೆಲಸಗಳನ್ನು ಮಾಡುವುದಕ್ಕೆ ಸಮರ್ಥನೂ ಸರ್ವಾಂಗಸುಂದರನೂ ಆದ ಮನುಷ್ಯನಾದನು ॥ ೭೬ ॥ ಈ ವಾಲ್ಮೀಕಿವಚನವು ಸತ್ಯವಾಗಿದೆಯೋ ? ಇಲ್ಲವೋ ? ನಿಮ್ಮಗಳ ಮನಸ್ಸಿನಲ್ಲಿ ಪರ್ಯಾಲೋಚಿಸಿ ಶೀಘ್ರವಾಗಿ ನನಗೆ ಹೇಳಿರಿ" ಎಂದನು ॥ ೭೭ ॥ ಅವನ ಮಾತನ್ನು ಕೇಳಿ ದ್ವಿಜರು "ಸತ್ಯವಾದ ವಚನವನ್ನು ಅಸತ್ಯವನ್ನಾಗಿ ಯಾವನು ಮಾಡುವನು ? ಉದಯಿಸಿರುವ ಸೂರ್ಯನು ಉದಯಿಸಿಲ್ಲವೆಂದು ಹೇಳಿದರೆ ಉದಯಿಸಿರುವುದು ಸುಳ್ಳಾಗುವುದೇ ? " ಎಂದು ಉತ್ತರವನ್ನಿತ್ತರು ॥ ೭೮ ॥ ಆ ಮಾತನ್ನು ಕೇಳಿ ಮನೋವೇಗನು "ದಧಿಮುಖನ ಕತ್ತರಿಸಲ್ಪಡದಿರುವ ಈ ರುಂಡವು ಬೇರೊಂದು ಮುಂಡದೊಡನೆ ಎಡೆಬಿಡದೆ ಅಂಟಿಕೊಂಡುದೆಂದ ಮೇಲೆ ನನ್ನ ಕತ್ತರಿಸಲ್ಪಟ್ಟ ರುಂಡವು ಅಂಟಿಕೊಳ್ಳಬಾರದೇಕೆ ? ॥ ೭೯ ॥ ಹಾಗೆಯೇ ರಾವಣನು ಹರಿತವಾದ ಖಡ್ಗದಿಂದ ಅಂಗದನನ್ನು ಎರಡು ಭಾಗ ಮಾಡಿದನು. ಹಾಗೆಯೇ ಅವುಗಳನ್ನು ಹನುಮಂತನು ಸೇರಿಸಲು ಹೇಗೆ ಅಂಗದನು ಅಂಟಿಕೊಂಡನು ? ॥ ೮೦ ॥ ಒಬ್ಬ ದಾನವೇಂದ್ರನು ದೇವತೆಯನ್ನು ಆರಾಧಿಸಿ ಅದರಿಂದ ಇಷ್ಟವಾದೊಂದು ಪಿಂಡವನ್ನು ಪುತ್ರೋತ್ಪತ್ತಿಗೋಸ್ಕರ ಪಡೆದು ಅದನ್ನು ತನ್ನ ಇಬ್ಬರು ಹೆಂಡತಿಯರಿಗೂ ಎರಡು ಭಾಗ ಮಾಡಿ ಕೊಟ್ಟನು ॥ ೮೧–೮೨ ॥ ಸಮಯವು ಪೂರ್ತಿಯಾದ ಬಳಿಕ ಅವರಿಬ್ಬರೂ ಮನುಷ್ಯಾಕೃತಿಯ ಎರಡು ಭಾಗವನ್ನು (ಒಬ್ಬೊಬ್ಬಳು ಒಂದೊಂದು ಭಾಗವನ್ನು) ಹಡೆದರು. ಅವುಗಳಿಂದ ಪ್ರಯೋಜನವಿಲ್ಲವೆಂದು ಅವುಗಳನ್ನು ಹೊರಗೆ ಚೆಲ್ಲಿದರು. ಅಲ್ಲಿ 'ಜರಾ' ಎಂಬ ದೇವತೆಯು ಆ ಎರಡು ಭಾಗಗಳನ್ನು ಜೋಡಿಸಿದಳು. ಅಲ್ಲಿ ಮನುಷ್ಯರನ್ನೂ ದೇವತೆಗಳನ್ನೂ ಜಯಿಸಿರುವವನೂ ಸರ್ವಕಾರ್ಯಸಮರ್ಥನೂ ಪ್ರಸಿದ್ಧನೂ ಪ್ರಶಂಸನೀಯವಾದ ಪರಾಕ್ರಮವುಳ್ಳವನೂ ಆದ ಜರಾಸಂಧನು ಹುಟ್ಟಿದನು ॥ ೮೩–೮೪ ॥ ದ್ವಿಜರೆ ! ಗಾಯವಿಲ್ಲದಿರುವ ಎರಡು ತುಂಡುಗಳು ಸೇರಿಸಲ್ಪಟ್ಟು ಅಂಟಿಕೊಂಡವೆಂದ ಮೇಲೆ ಗಾಯವಿ

ರುವ ನನ್ನ ತಲೆಯೇಕೆ ಅಂಟಿಕೊಳ್ಳುವುದಿಲ್ಲ ? ಹೇಳಿ ‖ ೮೫ ‖ ಎರಡಾಗಿ ಸೀಳಲ್ಪಟ್ಟ ದೇಹವುಳ್ಳ ಅಂಗದನೂ ಜರಾಸಂಧನೂ ಜೀವಿತರಾಗಿ ದೊರೆತ ರೆಂದ ಮೇಲೆ ನನ್ನ ತಲೆಯೂ ದೇಹವೂ ಜೀವಿತಗಳಾಗಿ ದೊರೆಯುವುದಿ ಲ್ಲವೆ ? ‖ ೮೬ ‖ ಆರು ತುಂಡುಗಳನ್ನು ಒಂದು ಗೂಡಿಸಿ ಷಣ್ಮುಖನು ಹೇಗೆ ನಿರ್ಮಿಸಲ್ಪಟ್ಟನು ? ಅದನ್ನು ನಂಬುತ್ತೀರಿ. ಕತ್ತರಿಸಲ್ಪಟ್ಟ ನನ್ನ ತಲೆಯೂ ದೇಹವೂ ಅಂಟಿಕೊಂಡುದನ್ನು ಮಾತ್ರ ನಂಬುವುದಿಲ್ಲ ‖ ೮೭ ‖ ಅಲ್ಲದೆ ಷಣ್ಮುಖನು ಆರು ತುಂಡುಗಳುಳ್ಳವನಾಗಿದ್ದರೂ ಏಕತ್ವವನ್ನು ಹೊಂದಿ ದೇವನಾಗಿರುತ್ತಾನೆಂಬುದು ಯುಕ್ತವಾದುದಲ್ಲ. ಮನುಷ್ಯ ಸ್ತ್ರೀ ಯಲ್ಲಿ ದೇವನು ಯಾವ ಕಾರಣದಿಂದ ಹುಟ್ಟುತ್ತಾನೆ ? ‖ ೮೮ ‖ ಕಲ್ಲಿನಂತೆ ರಕ್ತಾದಿ ಸಕಲಮಲರಹಿತಳಾದ ದೇವಸ್ತ್ರೀಯಲ್ಲಿ ಗರ್ಭವು ಹೇಗೆ ಸಂಭವಿಸು ವುದು ? ಹೇಳಿ " ಎಂದನು ‖ ೮೯ ‖

ಮನೋವೇಗನ ಮಾತನ್ನು ಕೇಳಿ ವಿಪ್ರರು " ಅಯ್ಯಾ ! ಈ ಮಾತೆಲ್ಲ ನಿಜ. ಆದರೆ ರುಂಡವು ತಿಂದ ಫಲಗಳಿಂದ ನಿನ್ನ ಹೊಟ್ಟೆಯು ತುಂಬಿರುವುದು ಹೇಗೆ ? " ಎಂದು ಕೇಳಿದರು ‖ ೯೦ ‖ ಬಳಿಕ ಆ ಶ್ವೇತಾಂ ಬರಧಾರಿಯಾದ ಮನೋವೇಗನು ವಿಪ್ರರನ್ನು ಕುರಿತು " ದ್ವಿಜರು ಭುಂಜಿಸಿ ದರೆ ಕಾಲಾಧೀನರಾಗಿರುವ ತಾತನೇ ಮೊದಲಾದ ಪಿತೃಗಳು ಹೇಗೆ ತೃಪ್ತಿಯನ್ನು ಹೊಂದುತ್ತಾರೆ ? ಸಮೀಪದಲ್ಲಿರುವ ನನ್ನ ರುಂಡವು ಭುಂಜಿ ಸಿದರೆ ದೇಹವೇಕೆ ತೃಪ್ತಿಯನ್ನು ಹೊಂದಬಾರದು ? ‖ ೯೧ ‖ ಬಹು ಕಾಲದ ಹಿಂದೆ ಸುಡಲ್ಪಟ್ಟಿರುವವರೂ ವಿಪತ್ತನ್ನು ಹೊಂದಿರುವವರೂ ಬೇರೆಯವರು ಊಟಮಾಡಿದರೆ ತೃಪ್ತಿಯನ್ನು ಹೊಂದುತ್ತಾರೆಂದ ಮೇಲೆ ಸಮೀಪದಲ್ಲಿರುವ ನನ್ನ ದೇಹವು ತೃಪ್ತಿಯನ್ನು ಹೊಂದುವುದಿಲ್ಲ ವೆಂದರೆ ಇದಕ್ಕಿಂತ ಆಶ್ಚರ್ಯವಾವುದು ? " ಎಂದನು ‖ ೯೨ ‖ ದುರ್ಗತಿ ಯನ್ನು ಹೊಂದಿರುವವರೂ ಭೀತಿಯಿಲ್ಲದವರೂ ಚೆನ್ನಾಗಿ ಬಲಿತಿರುವ

ಮಿಥ್ಯಾತ್ವವೆಂಬ ಕತ್ತಲೆಯಿಂದ ಮುಚ್ಚಲ್ಪಟ್ಟಿರುವವರೂ ಆದ ವ್ಯಾಸನೇ ಮೊದಲಾದವರು ಪುರಾತನರೂ ಧರ್ಮದಲ್ಲಿ ನಿಪುಣರೂ ಆದ ಮಹಾಪುರುಷರನ್ನು ಹೀಗೆ ಬೇರೆ ರೀತಿಯಾಗಿ ವರ್ಣಿಸಿದ್ದಾರೆ ॥ ೯೩ ॥ ಜಿನಪಾದ ಕಮಲದಲ್ಲಿ ದುಂಬಿಯೂ ಅತ್ಯಂತ ಧನ್ಯನೂ ತದ್ಭವಮೋಕ್ಷಗಾಮಿಯೂ ಆದ ದುರ್ಯೋಧನನನ್ನು ಭೀಮನು ಯುದ್ಧದಲ್ಲಿ ಕೊಂದನೆಂದು ಅಜ್ಞನಾದ ವ್ಯಾಸನು ಸುಳ್ಳನ್ನು ಹೇಳಿದನು ॥ ೯೪ ॥ ಮುಕ್ತಿ ಸ್ತ್ರೀಯ ಆಲಿಂಗನದಲ್ಲಿ ಆಸಕ್ತವಾದ ಮನಸ್ಸುಳ್ಳ ಕುಂಭಕರ್ಣ ಇಂದ್ರಜಿತ ಮೊದಲಾದವರು ನಿಂದ್ಯವಾದ ಮಾಂಸಭಕ್ಷಣದೋಷದಿಂದ ದುಷ್ಟರೂ ಜನರನ್ನು ಭಕ್ಷಿಸುವವರೂ ಆದ ರಾಕ್ಷಸರೆಂದು ವರ್ಣಿಸಲ್ಪಟ್ಟಿದ್ದಾರೆ ॥ ೯೫ ॥ ಮಹಾತ್ಮನೂ ಕರ್ಮಬಂಧವನ್ನು ನಾಶಮಾಡಿರುವವನೂ ಸಿದ್ಧಿಯೆಂಬ ವಧುವಿನ ವರನೂ ಆದ ವಾಲಿಯು ರಾಮನಿಂದ ಹತನಾಗಿ ಸತ್ತನೆಂದು ವಾಲ್ಮೀಕಿಯು ಸುಳ್ಳನ್ನು ಹೇಳಿದನು ॥ ೯೬ ॥ ಲಂಕೇಶ್ವರನು ಮೇಲೆ ವಿಮಾನದಲ್ಲಿ ಸಂಚರಿಸುತ್ತಿರುವಾಗ ಕೆಳಗೆ ಕೈಲಾಸಪರ್ವತದಲ್ಲಿ ವಾಲಿಮುನಿಯು ಧ್ಯಾನಾರೂಢನಾಗಿದ್ದನು. ಅದರಿಂದ ರಾವಣನ ಸಂಚಾರಕ್ಕೆ ತಡೆಯಾಯ್ತು. ಆಗ ರಾವಣನು ಕೋಪಗೊಂಡು ವಿದ್ಯಾಪ್ರಭಾವದಿಂದ ದೇಹವನ್ನು ದೊಡ್ಡದನ್ನಾಗಿ ಮಾಡಿಕೊಂಡು ಕೈಲಾಸಪರ್ವತವನ್ನು ಕೀಳಲು ಪ್ರವರ್ತಿಸಿದನು ॥ ೯೭ ॥ ಆಗ ಕೈಲಾಸ ಪರ್ವತದಲ್ಲಿರುವ ಜಿನಾಲಯಗಳು ನಾಶವಾಗುತ್ತವೆಂದೂ ಅವುಗಳನ್ನು ರಕ್ಷಿಸಬೇಕೆಂದೂ ಯೋಚಿಸಿ ವಾಲಿಮುನಿಯು ಆ ಪರ್ವತವನ್ನು ಕಾಲಿನಿಂದ ಅಮುಕಿದನು, ಆಗ ಲಂಕೇಶ್ವರನ ಕೈಗಳು ಸಿಕ್ಕಿಕೊಂಡಿದ್ದುದರಿಂದ ಅವನು ಕಾಲುಗಳನ್ನು ಮುದುರಿಕೊಂಡು ಬಹಳವಾಗಿ ಅತ್ತನು. ಅದರಿಂದ ಅವನಿಗೆ ರಾವಣನೆಂಬ ಹೆಸರಾಯ್ತು ॥ ೯೮ ॥ ವಾಲಿಯಲ್ಲಿ ಪ್ರಸಿದ್ಧವಾಗಿರುವ ಕೈಲಾಸ ಪರ್ವತೋದ್ಧರಣವನ್ನು ವಾಲ್ಮೀಕಿ ಕವಿಯು ರುದ್ರನಲ್ಲಿ ಜೋಡಿಸಿದ್ದಾನೆ. ಮುನಿಸುವ್ರತತೀರ್ಥಂಕರರ ಕಾಲದಲ್ಲಿದ್ದ ರಾವಣನೆಲ್ಲಿ? ಮಹಾವೀರ ತೀರ್ಥಂಕರರ ಕಾಲದಲ್ಲಿದ್ದ ರುದ್ರ

ನೆಲ್ಲಿ ? ‖ ೯೯ ‖ ಲೋಕದಲ್ಲಿ ಅಹಲ್ಯೆಯ ಸಂಬಂಧದಿಂದ ದೂಷಿತವಾದ ದೀನವೃತ್ತಿಯುಳ್ಳವನು ಶಕ್ರನೆಂಬ ಖೇಚರರಾಜನಲ್ಲದೆ ಪರಿಶುದ್ಧಾಚರಣೆಯುಳ್ಳವನಾದ ಸೌಧರ್ಮೇಂದ್ರನಲ್ಲ. ದೇವನಿಗೂ ಮಾನವಸ್ತ್ರೀಗೂ ಶರೀರ ಸಂಬಂಧವಾಗುವುದಿಲ್ಲ ‖ ೧೦೦ ‖ ಎಲ್ಲರಿಗಿಂತಲೂ ಅಧಿಕವಾದ ಸಂಪತ್ತಿಯುಳ್ಳವನೂ ಮಹಾತ್ಮನೂ ಸೌಧರ್ಮಕಲ್ಪವೆಂಬ ಸ್ವರ್ಗದ ಅಧಿಪತಿಯೂ ಆದ ದೇವೇಂದ್ರನನ್ನು ರಾವಣನು ಜಯಿಸುತ್ತಾನೆಂದು ಹೇಳುವ ಬುದ್ಧಿಹೀನರು ಹುಳುವು ಸಿಂಹವನ್ನು ಜಯಿಸುತ್ತದೆಂದು ಹೇಳುವರು ‖ ೧೦೧ ‖ ರಾವಣನು ಇಂದ್ರನೆಂಬ ಖೇಚರರಾಜನನ್ನು ಜಯಿಸಿದನು. ಆ ವಿಷಯವನ್ನು ತಿಳಿಯದ ಮೂರ್ಖರು ಸ್ವರ್ಗಾಧಿಪತಿಯನ್ನು ರಾವಣನು ಜಯಿಸಿದನೆಂದು ಹೇಳುತ್ತಾರೆ. ಸಮಸ್ತ ವಿಚಾರ ಶೂನ್ಯರಾದ ದುರ್ಜನರು ದೊಡ್ಡವರಿಗೆ ಯಾವ ದೋಷವನ್ನು ತಾನೆ ಹೇಳುವುದಿಲ್ಲ ? ‖ ೧೦೨ ‖ ಲೋಕಪೂಜ್ಯನೂ ಪ್ರಸಿದ್ಧನೂ ತ್ರಿಖಂಡಾಧಿಪತಿಯೂ ಬಲಿಷ್ಠನೂ ಆದ ವಿಷ್ಣು-ಕೃಷ್ಣನು ತನ್ನ ಭೃತ್ಯನಾದ ಪಾರ್ಥನಿಗೆ ಸಾರಥಿಯಾಗಿ ಅಥವಾ ದೂತನಾಗಿ ಹೇಗಾದನು ? ಆಶ್ಚರ್ಯ ‖ ೧೦೩ ‖ ಮನಸ್ಸಿಗೆ ಭ್ರಮೆಯನ್ನುಂಟು ಮಾಡುವುದರಲ್ಲಿ ಸಮರ್ಥವಾದ ಲೌಕಿಕವಾಕ್ಯವು ಅಸತ್ಯಾರ್ಥವನ್ನುಂಟು ಮಾಡುವುದೆಂದು ತಿಳಿದು ಅಪರಿಮಿತವಾದ ಜ್ಞಾನದಿಂದ ನಿವಾರಿಸುವುದಕ್ಕೆ ಯೋಗ್ಯವಾದ ವಚನವನ್ನು ಶುದ್ಧವಾದ ಮನಸ್ಸುಳ್ಳವರು ತಮ್ಮ ಮನಸ್ಸಿನಲ್ಲಿ ನೆಲೆಗೊಳಿಸಬಾರದು. ನಂಬಬಾರದೆಂದರ್ಥವು ‖ ೧೦೪ ‖

ಇಂತು ಅಮಿತಗತ್ಯಾಚಾರ್ಯವಿರಚಿತ ಧರ್ಮಪರೀಕ್ಷಾ ಷೋಡಶಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

ಬಳಿಕ ಆ ಖೇಚರಪುತ್ರರು ನಿರುತ್ತರರಾದ ದ್ವಿಜರನ್ನು ನೋಡಿ ಹೊರಟುಹೋಗಿ ಅನೇಕ ವೃಕ್ಷಗಳಿಂದ ಅಲಂಕೃತವಾದ ಅರಣ್ಯವನ್ನು ಹೊಂದಿದರು ‖ ೧ ‖ ಅಲ್ಲಿ ಸಜ್ಜನನಂತೆ ನಮ್ರವೂ ವಿಚಿತ್ರಫಲಗಳಿಂದ ಶೋಭಿಸುವುದೂ ಆದ ಮರದ ಬುಡದಲ್ಲಿ ಕುಳಿತು ಶ್ವೇತಾಂಬರಸಾಧು ವೇಷವನ್ನು ಬಿಟ್ಟರು ‖ ೨ ‖ ಜಿನಶಾಸ್ತ್ರವನ್ನು ಗ್ರಹಣಮಾಡಬೇಕೆಂಬ ಇಚ್ಛೆಯುಳ್ಳ ಪವನವೇಗನು ಮನೋವೇಗನನ್ನು ಕುರಿತು " ಮಿತ್ರನೆ ! ದ್ವಿಜರೇ ಮೊದಲಾದವರ ಶಾಸ್ತ್ರಗಳ ವಿಶೇಷವನ್ನು ನನಗೆ ತಿಳಿಸು " ಎಂದನು ‖ ೩ ‖ ಆಗ ಮನೋವೇಗನು ಪವನವೇಗನನ್ನು ಕುರಿತು " ಮಿತ್ರನೆ ! ಧರ್ಮಾದಿವಿಷಯಗಳಲ್ಲಿ ಅಕೃತ್ರಿಮ—ಅಪೌರುಷೇಯವೂ ನಿರ್ದುಷ್ಟವೂ ಆದ ವೇದಶಾಸ್ತ್ರವು ಬ್ರಾಹ್ಮಣರಿಗೆ ಪ್ರಮಾಣವಾಗಿದೆ ‖ ೪ ‖ ಉತ್ತಮರು, ಠಕ್ಕರ ಶಾಸ್ತ್ರವನ್ನು ನಂಬದಿರುವಂತೆ, ಜನ್ಮವೆಂಬ ವೃಕ್ಷವನ್ನು ಬೆಳೆಯಿಸುವ ಹಿಂಸೆಯನ್ನು ಬೋಧಿಸುವ ಆ ವೇದವನ್ನು ನಂಬುವುದಿಲ್ಲ ‖ ೫ ‖ ವೇದವು ಹೇಳಿರುವ ಹಿಂಸೆಯು ಧರ್ಮಕ್ಕೆ ಕಾರಣವಾಗುವುದಾದರೆ ಠಕ್ಕರ ಶಾಸ್ತ್ರವು ಹೇಳುವ ಹಿಂಸೆಯು ಧರ್ಮಕ್ಕೆ ಕಾರಣವಾಗುವುದಿಲ್ಲ ವೇಕೆ? ಅವುಗಳಲ್ಲಿ ವ್ಯತ್ಯಾಸವು ಕಾಣುವುದಿಲ್ಲ ‖ ೬ ‖ ಧರ್ಮವನ್ನು ಬೋಧಿಸುವ ವೇದವು ಅಪೌರುಷೇಯವೆಂಬ ಮಾತನ್ನು ವಿಚಾರಮಾಡು ವುದಾದರೆ ಅದು ಸರಿಯಾದುದೇ ಅಲ್ಲ ‖ ೭ ‖ ಕಂಠ ತಾಲು ಮೊದಲಾದ ಕಾರಣಗಳಿಂದುಂಟಾಗುವ ವೇದವು ಹೇಗೆ ಅಕೃತ್ರಿಮ-ಅಪೌರುಷೇಯವಾಗಿ ರುವುದು ? ಬಡಗಿಯ ಕೆಲಸದಿಂದ ನಿರ್ಮಿತವಾದ ಮನೆಯು ಅಕೃತ್ರಿಮ ವಾದುದೆಂದು ಯಾವನಾದರೂ ಹೇಳುತ್ತಾನೋ ? ‖ ೮ ‖ ಕಂಠ ತಾಲು ಮೊದಲಾದ ಕಾರಣವು ವೇದವನ್ನು ಪ್ರಕಾಶಪಡಿಸುವುದಲ್ಲದೆ ನಿರ್ಮಾಣ ಮಾಡುವುದಲ್ಲವೆನ್ನುವುದಾದರೆ ಈ ವಿಷಯವನ್ನು ನಿಶ್ಚಯಿಸುವ ಹೇತು ವಾವುದೂ ತೋರುವುದಿಲ್ಲ ‖ ೯ ‖ ಪ್ರಕಾಶಕಗಳಾದ ದೀಪಗಳಿಲ್ಲದಿದ್ದರೂ ಘಟಪಟಾದಿ ವಸ್ತುಗಳು ಪ್ರಕಾಶಿತಗಳಾಗಿರುವಂತೆ ಕಂಠ ತಾಲ್ವಾದಿಗಳಿಲ್ಲದಿ

ದ್ದರೂ ವೇದಶಬ್ದಗಳು ಪ್ರಕಾಶಿತಗಳಾಗುತ್ತವೋ ? ಇಲ್ಲವೆಂದ ಮೇಲೆ ಕಂಠ ತಾಲ್ವಾದಿಗಳಿಂದ ವೇದವುಂಟಾಗುವುದಲ್ಲದೆ ಅದು ಅಪೌರುಷೇಯು ವಲ್ಲವೆಂದು ಭಾವವು ॥ ೧೦ ॥ ಕೃತ್ರಿಮ ಪೌರುಷೇಯುವಾದ ಶಾಸ್ತ್ರಗಳಿ ಗಿಂತ ವೇದದಲ್ಲಿ ವಿಶೇಷವೇನೂ ಕಾಣುವುದಿಲ್ಲ. ಅಂದ ಮೇಲೆ ವೈದಿಕರು ಆ ವೇದಕ್ಕೆ ಅಪೌರುಷೇಯತ್ವವನ್ನು ಹೇಗೆ ಹೇಳುತ್ತಾರೆ ? ॥ ೧೧ ॥ ಪ್ರಕಾಶಕಗಳಾದ ದೀಪಗಳು ಪರಿಮಿತಸ್ಥಾನದಲ್ಲಿರುವ ಘಟಾದಿವಸ್ತುಗಳನ್ನು ಒಟ್ಟಿಗೆ ಒಂದೇ ಸಲ ಪ್ರಕಾಶಪಡಿಸುವಂತೆ ಕಂಠ ತಾಲ್ವಾದಿಗಳು ವ್ಯಾಪಕ ಗಳಾದ ಎಲ್ಲಾ ಅಕ್ಷರಗಳನ್ನು ಒಟ್ಟಿಗೆ ಒಂದೇ ಸಲ ಪ್ರಕಾಶಪಡಿಸುವುದಿಲ್ಲ ವೇಕೆ ? ॥ ೧೨ ॥ ಸರ್ವಜ್ಞನ ಹೊರತು ಆ ವೇದದ ಅರ್ಥವನ್ನು ಯಾವನು ಸ್ಫುಟಮಾಡುತ್ತಾನೆ ? ವೇದವು ತನ್ನ ನಿಜವಾದ ಅರ್ಥವನ್ನು ತಾನೇ ಹೇಳುವುದಾದರೆ ವೇದಾನುಯಾಯಿಗಳಲ್ಲಿಯೂ ಪರಸ್ಪರವಾಗಿ ವಿವಾದವು ಕಂಡುಬರುತ್ತಿರಲಿಲ್ಲ. ವೇದಾನುಯಾಯಿಗಳು ವೇದವಾಕ್ಯಗಳಿಗೆ ಬೇರೆ ಬೇರೆ ಅರ್ಥಮಾಡುತ್ತಾರೆಂದು ಭಾವವು ॥ ೧೩ ॥ ಅನಾದಿನಿಧನವಾದ ವೇದವು ಈ ಯುಗದವರಾದ ಋಷಿಗಳ ವಂಶ ಶಾಖಾದಿಗಳನ್ನು ಸಾವಿರ ಗಟ್ಟಲೆಯಾಗಿ ಸೂಚಿಸುವುದಕ್ಕೆ ಹೇಗೆ ಸಮರ್ಥವಾಗುವುದು ? ॥ ೧೪ ॥ ಅನಾದಿಪರಂಪರೆಯಿಂದ ವೇದವು ತಿಳಿಯಲ್ಪಡತಕ್ಕದಾಗಿದೆಯೆಂದು ಹೇಳು ವುದಾದರೆ ಇಂತಹ ಮಾತು ಚೆನ್ನಾಗಿ ಕಾಣುವುದಿಲ್ಲ. ಪ್ರಾರಂಭದಲ್ಲಿ ಸರ್ವಜ್ಞನಿಲ್ಲದಿದ್ದರೆ ಪರಂಪರಾತ್ವವು ಎಲ್ಲಿಂದ ಬರುವುದು ? ॥ ೧೫ ॥ ಸರ್ವಜ್ಞರಲ್ಲದಿರುವವರೆಲ್ಲರೂ ಮೊತ್ತಮೊದಲು ವೇದದ ನಿಜವಾದ ಅರ್ಥ ವನ್ನು ತಿಳಿಯಲಾರರು. ಕುರುಡರೆಲ್ಲರೂ ತಮಗಿಷ್ಟವಾದ ದಾರಿಯನ್ನು ಹೇಗೆ ಕಾಣುತ್ತಾರೆ ? ॥ ೧೬ ॥ ಎಲ್ಲರೂ ಅಸರ್ವಜ್ಞರಾಗಿರುವಾಗ, ಮೊತ್ತಮೊದಲನೆಯು ಲೋಕವ್ಯವಹಾರವನ್ನು ಪ್ರಕಾಶಪಡಿಸುವಂತೆ, ಅನಾ ದಿಕಾಲದಿಂದ ನಷ್ಟವಾದ ವೇದವನ್ನು ಮತ್ತೆ ಪ್ರಕಾಶಪಡಿಸುವವನಾರು ? ॥ ೧೭ ॥ ಅಪೌರುಷೇಯತ್ವವು ಎಲ್ಲಾ ವಿಷಯಗಳಲ್ಲಿಯೂ ಚೆನ್ನಾಗಿರುತ್ತ

ದೆಂದು ಸತ್ಪುರುಷರು ತಿಳಿಯುವುದಿಲ್ಲ. ಜಾರಚೋರರ ಮಾರ್ಗವೂ ಅನಾದಿಕಾಲದಿಂದ ಬರುತ್ತ ಅಪೌರುಷೇಯವೇ ಆಗಿದೆ. ಆದರೆ ಅದು ಚೆನ್ನಾಗಿರುತ್ತದೆಂದು ಯಾರು ತಿಳಿಯುತ್ತಾರೆ ? ॥ ೧೮ ॥ ಬೇಟೆಗಾರರು ಅರಣ್ಯದಲ್ಲಿ ಪ್ರಾಣಪೀಡಾಕರವಾದ ಹಿಂಸೆಯನ್ನು ಮಾಡುವಂತೆ ಯಾಜ್ಞಿಕರು ಯಜ್ಞದಲ್ಲಿ ಭವಪರಂಪರೆಗೆ ಕಾರಣವಾದ ಹಿಂಸೆಯನ್ನು ಮಾಡುತ್ತಾರೆ ॥ ೧೯ ॥ ಕಟುಕರಿಂದ ಹೇಗೋ ಹಾಗೆ ಯಾಜ್ಞಿಕರಿಂದ ಹಟಾತ್ತಾಗಿ ಕೊಲ್ಲಲ್ಪಡುವುವೂ ವೇದನೆಯಿಂದ ವ್ಯಾಕುಲಗಳೂ ಆದ ಜೀವಗಳು ಸ್ವರ್ಗಕ್ಕೆ ಹೋಗುತ್ತವೆನ್ನುವ ಮಾತು ನನಗೆ ವಿಚಿತ್ರವಾಗಿ ತೋರುತ್ತದೆ ॥ ೨೦ ॥ ಧರ್ಮ ವ್ರತ ನಿಯಮ ಧ್ಯಾನಗಳಲ್ಲಿ ತತ್ಪರರಾದ ಜೀವಗಳಿಗೆ ಸಾಧ್ಯವಾಗುವ ಸ್ವರ್ಗಗತಿಯು ಪ್ರಾಣಹಿಂಸಕರಿಗೆ ಹಟಾತ್ತಾಗಿ ಹೇಗೆ ಸಾಧ್ಯವಾಗುವುದು ? ॥ ೨೧ ॥ ವೈದಿಕರ ಹಿಂಸೆಯನ್ನು ಸಾಧಿಸುವ ಮಾತನ್ನು ಸತ್ಪುರುಷರು ಗ್ರಹಣಮಾಡಬಾರದು. ಧಾರ್ಮಿಕರು ಕಟುಕರ ವಾಕ್ಯವನ್ನು ಹೇಗೆ ತಾನೆ ಹೃದಯದಲ್ಲಿರಿಸುತ್ತಾರೆ ? ॥ ೨೨ ॥ ಸತ್ಯ ಶುಚಿತ್ವ ತಪ: ಶೀಲ ಧ್ಯಾನ ಶಾಸ್ತ್ರಪಠನಗಳಿಲ್ಲದಿರುವ ದೇಹಧಾರಿಗಳಿಗೆ ಜಾತಿಮಾತ್ರದಿಂದ ಧರ್ಮವು ದೊರೆಯುವುದಿಲ್ಲ ॥ ೨೩ ॥ ಬರೇ ಆಚಾರಭೇದದಿಂದ ಜಾತಿಗಳ ಕಲ್ಪನೆಯಲ್ಲದೆ ಗೊತ್ತಾದ ಮತ್ತು ಯಥಾರ್ಥವಾದ ಬ್ರಾಹ್ಮಣಾದಿ ಜಾತಿಯು ಎಲ್ಲಿಯೂ ಇಲ್ಲ ॥ ೨೪ ॥ ಬ್ರಾಹ್ಮಣ ಕ್ಷತ್ರಿಯ ಮೊದಲಾದ ನಾಲ್ವರಿಗೂ ಯಥಾರ್ಥವಾಗಿ ಮನುಷ್ಯಜಾತಿಯೊಂದೇ. ಅದು ಆಚಾರಭೇದದಿಂದ ವಿಭಾಗವಾಗುವದು ॥ ೨೫ ॥ 'ಬ್ರಾಹ್ಮಣಜಾತಿಯಲ್ಲಿ ಕ್ಷತ್ರಿಯನೆಂದೂ ಹುಟ್ಟುವುದಿಲ್ಲ. ಭತ್ತದ ಜಾತಿಯಲ್ಲಿ ಹಾರಕಧಾನ್ಯವು ಹುಟ್ಟುವುದನ್ನು ನಾನು ಕಂಡಿಲ್ಲ ॥ ೨೬ ॥ ಪವಿತ್ರಾಚಾರವನ್ನು ಧರಿಸಿರುವ ವಿಪ್ರನಿಂದ ಶುದ್ಧವಾದ ಶೀಲವುಳ್ಳ ವಿಪ್ರಸ್ತ್ರೀಯಲ್ಲಿ ಬ್ರಾಹ್ಮಣನು ಜನಿಸುತ್ತಾನೆ' ಎಂದು ಕೆಲವರು ಹೇಳುತ್ತಾರೆ. ಇದು ಸರಿಯಾದ ಉತ್ತರವಲ್ಲ ॥ ೨೭ ॥ ವಿಪ್ರಸ್ತ್ರೀಯಲ್ಲಿಯೂ ವಿಪ್ರನಲ್ಲಿಯೂ ಯಾವಾಗಲೂ ಶುದ್ಧವಾದ ಶೀಲತ್ವವಿರು

ವುದಿಲ್ಲ. ಅನಾದಿಕಾಲದಿಂದ ಯಾವ ವಂಶದಲ್ಲಿ ತಾನೆ ಸ್ಖಲನವುಂಟಾಗು ವುದಿಲ್ಲ ? ಅನಾದಿಪರಂಪರೆಯಾಗಿ ಯಾವ ವಂಶವೂ ಶುದ್ಧವಾಗಿರುವುದಿಲ್ಲ ವೆಂದು ಭಾವವು ‖ ೨೮ ‖ ಯಾವ ಜಾತಿಯಲ್ಲಿ ನಿಜವಾದ ಸಂಯಮವೂ ನಿಯಮವೂ ಶೀಲವೂ ತಪಸ್ಸೂ ದಾನವೂ ಇಂದ್ರಿಯನಿಗ್ರಹವೂ ದಯೆಯೂ ಇರುತ್ತವೋ ಆ ಜಾತಿಯು ಸತ್ಪುರುಷರಿಗೆ ದೊಡ್ಡದು ‖ ೨೯ ‖ ಯೋಜನ ಗಂಧಾ ಮೊದಲಾದವರಲ್ಲಿ ಹುಟ್ಟಿದ ವ್ಯಾಸನೇ ಮೊದಲಾದ ತಪಸ್ವಿಗಳಿಗೆ ಲೋಕದಲ್ಲಿ ಮಹಾಪೂಜ್ಯತೆಯುಂಟಾಗಿರುವುದು ಕಾಣುತ್ತದೆ, ಆದುದ ರಿಂದ ತಪಸ್ಸಿನಲ್ಲಿ ಮನವನ್ನಿಡಬೇಕು ‖ ೩೦ ‖ ಶೀಲವಂತರು ನೀಚಜಾತಿ ಯಲ್ಲಿ ಹುಟ್ಟಿದವರಾದರೂ ಸ್ವರ್ಗವನ್ನು ಪಡೆದಿದ್ದಾರೆ. ಶೀಲಸಂಯಮ ಗಳನ್ನು ನಾಶಮಾಡಿಕೊಂಡಿರುವ ಕುಲೀನರು ನರಕವನ್ನು ಹೊಂದಿದ್ದಾರೆ ‖ ೩೧ ‖ ಗುಣಗಳಿಂದ ಜಾತಿಯುಂಟಾಗುತ್ತದೆ. ಗುಣವಿನಾಶಗಳಿಂದ ಜಾತಿಯು ನಾಶವಾಗುತ್ತದೆ. ಆದುದರಿಂದ ಪ್ರಾಜ್ಞರು ಗುಣಗಳಲ್ಲೇ ಬಹು ಪ್ರೀತಿಯನ್ನು ಮಾಡಬೇಕು ‖ ೩೨ ‖ ಸತ್ಪುರುಷರು ನೀಚತ್ವವನ್ನುಂಟು ಮಾಡುವ ಬರೇ ಜಾತಿಯ ಗರ್ವವನ್ನು ಮಾಡದೆ ಶ್ರೇಷ್ಠತ್ವವನ್ನುಂಟುಮಾ ಡುವ ಶೀಲದಲ್ಲಿ ಪ್ರೀತಿಯನ್ನು ಮಾಡಬೇಕು ‖ ೩೩ ‖ ಶುಚಿತ್ವ ಶೀಲ ಸತ್ಯಾದಿಗಳಿಲ್ಲದೆ ಗಂಗಾದಿ ಸ್ನಾನದಿಂದಲೇ ಯಾರು ಪಾಪರಹಿತರಾದೆವೆಂದು ತಿಳಿಯುತ್ತಾರೋ ಅವರಿಗಿಂತ ಪಾಪವೆಂಬ ವೃಕ್ಷವನ್ನು ಬೆಳೆಯಿಸುವ ವರು ಬೇರೆಯವರಿಲ್ಲ ‖ ೩೪ ‖ ಶುಕ್ರಶೋಣಿತಗಳಿಂದುಂಟಾದುದೂ ತಾಯಿಯ ಎಂಜಲಿನಿಂದ ಬೆಳೆದಿರುವುದೂ ಆದ ದೇಹವು ನೀರಿನಿಂದ ಶುದ್ಧಮಾಡಲ್ಪ ಡುವುದಾದರೆ ಇದಕ್ಕಿಂತ ಆಶ್ಚರ್ಯವಾವುದು ? ‖ ೩೫ ‖ ಹೊರಗಿನ ಕೊಳೆಯು ನೀರಿನಿಂದ ತೊಳೆಯಲ್ಪಡುತ್ತದೆಂದು ಹೇಳಿ. ಆದರೆ ಒಳಗಿನ ಪಾಪವನ್ನು ನೀರು ನಾಶಮಾಡುತ್ತದೆಂದರೆ ಈ ಮಾತು ಯಾವನ ಹೃದಯ ದಲ್ಲಿ ನಿಲ್ಲುವುದು ? ‖ ೩೬ ‖ ಪ್ರಾಣಿಯು ಮಿಥ್ಯಾತ್ವದಿಂದಲೂ ಅಸಂಯಮ ದಿಂದಲೂ ಅಜ್ಞಾನದಿಂದಲೂ ಉಪಾರ್ಜಿಸಿದ ಪಾಪವು ಸಮ್ಯಕ್ತ್ವದಿಂದಲೂ

ಸಂಯಮದಿಂದಲೂ ಜ್ಞಾನದಿಂದಲೂ ನಾಶವಾಗುವುದಲ್ಲದೆ ಬೇರೆ ವಿಧವಾಗಿ ನಾಶವಾಗುವುದೇ ಇಲ್ಲ ॥ ೩೭ ॥ ಕ್ರೋಧಾಹಂಕಾರಾದಿ ಕಷಾಯಭಾವಗಳಿಂದ ಉಪಾರ್ಜಿಸಿದ ಪಾಪವು ನೀರಿನಿಂದ ನಿವಾರಣೆಯಾಗುತ್ತದೆಂದು ಮೂರ್ಖರು ಹೇಳುವರಲ್ಲದೆ ವಿಚಾರಶೀಲರು ನಿಶ್ಚಯವಾಗಿಯೂ ಹೇಳಲಿಕ್ಕಿಲ್ಲ ॥ ೩೮ ॥ ನೀರು ಶರೀರವನ್ನೂ ಶುದ್ಧಮಾಡುವುದಕ್ಕೆ ಸಮರ್ಥವಾಗಿಲ್ಲದಿರುವಾಗ ಅದು ಒಳಗಿರುವ ಮನಸ್ಸಿನ ದೋಷವನ್ನು ಹೇಗೆ ಶುದ್ಧಮಾಡುವುದು ? ॥ ೩೯ ॥ ಜೀವನು ಗರ್ಭವೇ ಆದಿಯಾಗಿ ಮೃತ್ಯುವಿನವರೆಗೆ ಪೃಥಿವ್ಯಾದಿ ಭೂತಚತುಷ್ಟಯಗಳಿಂದುಂಟಾದ ಭವವುಳ್ಳವನಲ್ಲದೆ ಬೇರೆ ಆತ್ಮನಿಲ್ಲವೆಂದು ಹೇಳುವ ಚಾರ್ವಾಕರು ನಿಶ್ಚಯವಾಗಿಯೂ ಆತ್ಮವಂಚಕರಾಗಿರುತ್ತಾರೆ ॥ ೪೦ ॥ ಜ್ಞಾನವು ಆತ್ಮನ ಸ್ವಭಾವವಾಗಿರುತ್ತದೆ. ಯಾವಾಗಲೂ ಪ್ರಥಮಜ್ಞಾನದಿಂದ ಮಧ್ಯಮಜ್ಞಾನವೂ ಅದರಿಂದ ಅಂತ್ಯಜ್ಞಾನವೂ ಉಂಟಾಗುತ್ತದೆ. ಹಾಗೆಯೇ ಅಂತ್ಯಜ್ಞಾನದಿಂದ ಉತ್ತರಜನ್ಮದಲ್ಲಿ ಪ್ರಥಮಜ್ಞಾನವುಂಟಾಗುವುದು ॥ ೪೧ ॥ ಪ್ರಥಮಜ್ಞಾನವಿಲ್ಲದೆ ಮಧ್ಯಮಜ್ಞಾನವುಂಟಾಗುವುದಿಲ್ಲ. ಹಾಗೆಯೇ ಪೂರ್ವಭವದ ಜ್ಞಾನವಿಲ್ಲದಿದ್ದರೆ ಉತ್ತರಭವದಲ್ಲಿ ಪ್ರಥಮಜ್ಞಾನವುಂಟಾಗುವುದಿಲ್ಲ ॥ ೪೨ ॥ ಶರೀರವು ಕಾಣುತ್ತಿದ್ದರೂ ಚೈತನ್ಯವು ಕಾಣುವುದಿಲ್ಲ. ಶರೀರವು ಚೈತನ್ಯವಲ್ಲ. ಆದುದರಿಂದ ಅವುಗಳಲ್ಲಿ ಭೇದವಿದೆ ॥ ೪೩ ॥ ಶರೀರವು ಕಣ್ಣಿಗೆ ಕಾಣುತ್ತದೆ. ಚೈತನ್ಯವು ಜ್ಞಾನಕ್ಕೆ ಕಾಣುತ್ತದೆ. ಹೀಗೆ ಬೇರೆ ಬೇರೆ ಜ್ಞಾನಗಳಿಗೆ ವಿಷಯವಾಗುವುದರಿಂದ ಶರೀರಚೈತನ್ಯಗಳಲ್ಲಿ ಭೇದವಿದ್ದೇ ಇರುವುದು ॥ ೪೪ ॥ ಎಲ್ಲಾ ಪ್ರಾಣಿಗಳೂ ಪ್ರತ್ಯಕ್ಷವಾಗಿ ಕಾಣುತ್ತಿದ್ದರೂ ಪರಲೋಕವಿಲ್ಲವೆಂದು ಮೂರ್ಖರು ಹೇಗೆ ಹೇಳುತ್ತಾರೆ ? ॥ ೪೫ ॥ ಹಾಲಿಗೂ ನೀರಿಗೂ ಹೇಗೆ ಭೇದವಿದೆಯೋ ಹಾಗೆ ಆತ್ಮನಿಗೂ ದೇಹಕ್ಕೂ ಭೇದವಿದೆಯೆಂದು ಆತ್ಮತತ್ತ್ವನಿಪುಣರಾದ ಪ್ರಾಜ್ಞರು ಹೇಳುತ್ತಾರೆ ॥ ೪೬ ॥ ಸರ್ವದರ್ಶಿಗಳಲ್ಲದಿರುವ ಕೆಲವರು ಬಂಧಮೋಕ್ಷಾದಿತತ್ತ್ವಗಳನ್ನು ಅಲ್ಲಗಳೆಯು

ತ್ತಾರೆ. ಅಂಥವರಿಗಿಂತಲೂ ಉದ್ಧತರಾಗಿರುವವರಾರು ? ॥ ೪೭ ॥ ಆತ್ಮನು ಯಾವಾಗಲೂ ಕರ್ಮಗಳಿಂದ ಸರ್ವಥಾ ಬಂಧಿಸಲ್ಪಡದಿದ್ದರೆ ಅವನು ಘೋರವಾದ ಸಂಸಾರವೆಂಬ ಸಮುದ್ರದಲ್ಲಿ ಅಲೆದಾಡುವುದು ಹೇಗೆ ॥ ೪೮ ॥ ದುರ್ಗಂಧವಾದ ಅಮೇಧ್ಯದ ಮನೆಯಾದ ದೇಹದಲ್ಲಿ ಯಾವಾಗಲೂ ನಿತ್ಯನೂ ಶುದ್ಧನೂ ಜ್ಞಾನಿಯೂ ಆದ ಪರಮಾತ್ಮನು ವಾಸಮಾಡುವುದು ಯಾವ ಕಾರಣದಿಂದ ? ॥ ೪೯ ॥ ಸುಖದು:ಖ ಮೊದಲಾದುವುಗಳ ಅನುಭವವು ದೇಹಕ್ಕುಂಟಾಗುವುದಾದರೆ ಕಟ್ಟಿಗೆ ಮೊದಲಾದ ಜೀವವಿಲ್ಲದ ವಸ್ತುವಿಗೂ ಸುಖದುಃಖಾದ್ಯನುಭವವುಂಟಾಗಬೇಕಾಗಿ ಬರುವುದನ್ನು ತಡೆಯುವವನಾರು ? ॥ ೫೦ ॥ ತನಗೆ ಕರ್ಮವು ಬಂಧವಾಗುವುದೆಂಬ ಬುದ್ಧಿಯನ್ನು ಹೊಂದದೆ ಅಲ್ಲಲ್ಲಿ ಪ್ರವರ್ತಿಸುವ ಆತ್ಮನು ಕರ್ಮದಿಂದ ಬಂಧಿಸಲ್ಪಡುವುದಿಲ್ಲವೆಂಬೀ ಮಾತು ಯೋಗ್ಯವಾದುದಲ್ಲ ॥ ೫೧ ॥ ಬುದ್ಧಿಯಿಲ್ಲದಿರುವ ಜೀವನು ಅಲ್ಲಲ್ಲಿ ಪ್ರವರ್ತಿಸುವುದು ಹೇಗೆ? ಬುದ್ಧಿಯಿಲ್ಲದಿರುವ ಪರ್ವತಗಳು ಹಾಗೆ ಪ್ರವರ್ತಿಸುವುದನ್ನು ನಾನು ನೋಡಿಯೇ ಇಲ್ಲ ॥ ೫೨ ॥ ವಿಷವನ್ನು ತಿಂದರೆ ಮರಣವಾಗುವುದೆಂಬ ತಿಳಿವಳಿಕೆಯಿಲ್ಲದಿರುವ ಪ್ರಾಣಿಯು ಅದನ್ನು ತಿಂದರೆ ಪ್ರಾಣಗಳನ್ನು ಬಿಡುವುದಿಲ್ಲವೋ ? ॥ ೫೩ ॥ ಆತ್ಮನು ಯಾವಾಗಲೂ ಶುದ್ಧನಾಗಿಯೇ ಇರುವ ಪಕ್ಷದಲ್ಲಿ ಧ್ಯಾನಾಭ್ಯಾಸದಿಂದೇನು ಪ್ರಯೋಜನ? ಶುದ್ಧವಾಗಿರುವ ಭಂಗಾರವನ್ನು ಶುದ್ಧಮಾಡುವುದಕ್ಕೆ ಯಾವನೂ ಪ್ರವರ್ತಿಸುವುದಿಲ್ಲ ॥ ೫೪ ॥ ಜ್ಞಾನದಿಂದಲೇ ಆತ್ಮನಿಗೆಂದೂ ಶುದ್ಧಿಯಾಗುವುದಿಲ್ಲ. ಔಷಧಿಯ ಜ್ಞಾನದಿಂದಲೇ ಎಲ್ಲಿಯೂ ರೋಗನಿವೃತ್ತಿಯಾಗುವುದಿಲ್ಲ ॥ ೫೫ ॥ ಯಾವ ದುರ್ಬುದ್ಧಿಯುಳ್ಳವರು ಶ್ವಾಸವನ್ನು ತಡೆದು ಧ್ಯಾನವನ್ನು ಸಾಧಿಸುತ್ತಾರೋ ಅವರು ಗಗನಕುಸುಮಗಳನ್ನು ಜುಟ್ಟಿನ ಗಂಟಿಗೆ ಮುಡಿದುಕೊಳ್ಳುತ್ತಾರೆಂದು ತಿಳಿಯುತ್ತೇನೆ ॥ ೫೬ ॥ ಕಟ್ಟಿಗೆಯಲ್ಲಿ ಬೆಂಕಿಯಂತೆ ದೇಹದಲ್ಲಿ ಆತ್ಮನಿದ್ದರೂ ಧ್ಯಾನಾದಿಪ್ರಯೋಗವನ್ನು ಮಾಡಿದ ಹೊರತು ಮೂರ್ಖರು ಅತ್ಮನನ್ನು ಹೊಂದುವುದಕ್ಕಾಗುವುದೇ ಇಲ್ಲ ॥ ೫೭ ॥

ಆತ್ಮನ ಕರ್ಮರೂಪವಾದ ಮಲವು ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳಿಂದ ನಾಶವಾಗುತ್ತದೆ. ಆ ಮಲವು, ಹೆಚ್ಚಾದ ವ್ಯಾಧಿಯಂತೆ, ಮಿಥ್ಯಾದರ್ಶನ ಜ್ಞಾನ ಚಾರಿತ್ರಗಳಿಂದ ಆತ್ಮನಿಗೆ ಅನೇಕ ದುಃಖಗಳನ್ನು ಕೊಡುತ್ತದೆ ॥ ೫೮ ॥ ಜೀವಕ್ಕೂ ಕರ್ಮಕ್ಕೂ ಅನಾದಿಕಾಲದಿಂದ ಸಂಸಿದ್ಧವಾದ ಸಂಬಂಧವಿದೆ. ರತ್ನತ್ರಯವಲ್ಲದೆ ಅದನ್ನು ಬೇರೆ ಯಾವುದೂ ನಾಶಮಾಡಲಾರದು ॥ ೫೯ ॥ ದೀಕ್ಷೆಯನ್ನು ತೆಗೆದುಕೊಳ್ಳುವುದರಿಂದಲೇ ಎಲ್ಲಿಯೂ ಕರ್ಮಕ್ಷಯವಾಗುವುದಿಲ್ಲ. ರಾಜನಿಗೆ ರಾಜ್ಯವಿರುವುದರಿಂದಲೇ ಶತ್ರುಗಳು ಓಡಿಹೋಗುವುದಿಲ್ಲ ॥ ೬೦ ॥ ದೀಕ್ಷೆಯನ್ನು ತೆಗೆದುಕೊಂಡ ಮಾತ್ರದಿಂದಲೇ ಪಾಪಧ್ವಂಸವಾಗುವುದೆಂದು ತಿಳಿಯುವ ಮೂರ್ಖರು ಆಕಾಶದಿಂದ ಮಾಡಿದ ಕತ್ತಿಯಿಂದ ಶತ್ರುವಿನ ಶಿರಸ್ಸನ್ನು ಕತ್ತರಿಸುತ್ತಾರೆಂದು ತಿಳಿಯಬೇಕು ॥ ೬೧ ॥ ಪ್ರಾಣಿಗಳು ಮಿಥ್ಯಾತ್ವ ಅವ್ರತ ಕೋಪ ಮೊದಲಾದ ದುರ್ಭಾವಗಳಾದ ಉಪಾರ್ಜಿಸಿದ ಕರ್ಮವನ್ನು ನಾಶಮಾಡಲು ಆ ಮಿಥ್ಯಾತ್ವಾದಿಗಳನ್ನು ದೂರಮಾಡದೆ ಹೇಗೆ ಸಾಧ್ಯವಾಗುವುದು ? ॥ ೬೨ ॥ ವ್ರತಾಚರಣೆಯಿಲ್ಲದೆ ದೀಕ್ಷಾಮಾತ್ರದಿಂದಲೇ ಮೋಕ್ಷವಾಗುವುದೆಂದು ವರ್ಣಿಸುವವರು ಆಕಾಶದ ಬಳ್ಳಿಯ ಹೂವಿನ ಪರಿಮಳವನ್ನು ವರ್ಣಿಸುತ್ತಾರೆಂದು ತಿಳಿಯುತ್ತೇನೆ ॥ ೬೩ ॥ ಋಷಿಗಳ ಆಶೀರ್ವಾದವಾಕ್ಯದಿಂದ ಮನುಷ್ಯರ ಪಾಪವು ಓಡಿಹೋಗುವುದಾದರೆ ಬಂಧುಗಳ ಮಾತಿನಿಂದ ರಾಜರುಗಳ ವೈರಿಗಳು ನಾಶವಾಗಬೇಕು. ॥ ೬೪ ॥ ಪ್ರಾಣಿಗಳಲ್ಲಿರುವ ರಾಗ-ಮೋಹವನ್ನು ನಾಶಮಾಡದಿರುವ ದೀಕ್ಷೆಯು ಪುರಾತನವಾದ ಕರ್ಮಬಂಧವನ್ನು ನಾಶಮಾಡಲಾರದು ॥ ೬೫ ॥ ರತ್ನತ್ರಯವನ್ನು ಆರಾಧಿಸುವ ರೀತಿಯನ್ನು ಗುರುಗಳ ವಚನದಿಂದ ತಿಳಿದು ಅದನ್ನು ಆರಾಧಿಸುವವನ ಪಾಪವು ನಾಶವಾಗುತ್ತದೆಂಬ ವಚನವಾದರೋ ಸತ್ಯವಾದುದು ॥ ೬೬ ॥ ಕ್ರೋಧಾದಿ ಕಷಾಯವಶೀಭೂತನಾದ ಆತ್ಮನು ಮಾಡಿದ ಪಾಪವು ದೀಕ್ಷಾಮಾತ್ರದಿಂದ ನಾಶವಾಗುತ್ತದೆಂಬ ಮಾತನ್ನು ಯಾವನು ನಂಬುತ್ತಾನೆ ? ॥ ೬೭ ॥ ಕ್ರೋಧಾದಿ ಕಷಾಯ ಸಹಿ

ಕವಾದ ಧ್ಯಾನದಿಂದ ಮುಕ್ತಿಪ್ರಾಪ್ತಿಯಾಗುವುದಾದರೆ ಬಂಜೆಯ ಮಗನ ಐಶ್ವರ್ಯವರ್ಣನೆಯಿಂದ ಧನಪ್ರಾಪ್ತಿಯಾಗಬೇಕು ॥ ೬೮ ॥ ಇಂದ್ರಿಯ ನಿಗ್ರಹವನ್ನೂ ಕ್ರೋಧಾದಿ ಕಷಾಯನಿಗ್ರಹವನ್ನೂ ಮಾಡದಿರುವವರ ಮಾತು, ವಿಟಪುರುಷರ ಮಾತಿನಂತೆ, ಸತ್ಯವಾದುದಲ್ಲ ॥ ೬೯ ॥ ಊರ್ಧ್ವಾಧೋದ್ವಾರಗಳಿಂದ (ಬಾಯಿಯಿಂದಲಾಗಲಿ ಯೋನಿಯಿಂದಲಾಗಲಿ) ಹುಟ್ಟಿದವನಾದರೆ ನಿಂದ್ಯನಾಗುತ್ತೇನೆಂದು ತಿಳಿದು ತಾಯಿಯ ದೇಹವನ್ನು ಸೀಳಿಕೊಂಡು ಗರ್ಭದಿಂದ ಹೊರಟವನೂ ಮಾಂಸಭಕ್ಷಣದಲ್ಲಿ ಆಶೆಯುಳ್ಳವನಾಗಿ ಅದರಲ್ಲಿ ದೋಷವಿಲ್ಲವೆಂದು ಹೇಳಿರುವವನೂ ಮೂರ್ಖನೂ ಆದ ಬುದ್ಧನ ಅದೆಂತಹ ದಯೆ ? ॥ ೭೦-೭೧ ॥ ದೇಹವು ಕ್ರಿಮಿಸಮೂಹದಿಂದ ನಿಬಿಡವಾಗಿರುತ್ತದೆಂದು ತಿಳಿದೂ ಅದನ್ನು ಹೆಣ್ಣುಹುಲಿಯ ಬಾಯಿಗೆ ಕೊಟ್ಟು ಆ ಕ್ರಿಮಿಗಳನ್ನು ನಾಶಮಾಡಿಸಿದ ದುರ್ಬುದ್ಧಿಯುಳ್ಳ ಆ ಬುದ್ಧನ ಸಂಯಮವೆಂತಹದು ? ॥ ೭೨ ॥ ಪ್ರತ್ಯಕ್ಷವಿರುದ್ಧವಾಗಿರುವ ಸರ್ವಶೂನ್ಯತ್ವವನ್ನೂ ಆತ್ಮನಿಲ್ಲವೆಂಬುದನ್ನೂ ಕ್ಷಣಿಕತ್ವವನ್ನೂ ಹೇಳುವ ಆ ಬುದ್ಧನಿಗೆ ಜ್ಞಾನವೆಲ್ಲಿ ಬಂದಿತು ? ॥ ೭೩ ॥ ಎಲ್ಲವೂ ಶೂನ್ಯವೆಂದು ಕಲ್ಪಿಸಿದರೆ ಬುದ್ಧನೂ ಶೂನ್ಯ. ಅಂದ ಮೇಲೆ ಲೋಕದಲ್ಲಿ ಬಂಧಮೋಕ್ಷಾದಿತತ್ತ್ವಗಳ ವ್ಯವಸ್ಥೆ ಯಾವುದರಿಂದಾಗುವುದು ? ॥ ೭೪ ॥ ನಿಜವಾಗಿ ಸ್ವರ್ಗಮೋಕ್ಷ ಸುಖಾದಿಗಳಿಗೆ ಭಾಗಿಯಾದ ಆತ್ಮನಿಲ್ಲದಿದ್ದರೆ ವ್ರತಾಚರಣೆಯೆಲ್ಲವೂ ವ್ಯರ್ಥ ॥ ೭೫ ॥ ಆತ್ಮಾದಿ ವಸ್ತುಗಳೆಲ್ಲವೂ ಕ್ಷಣಿಕವಾದರೆ ಕೊಲ್ಲುವವನು, ಕೊಲ್ಲಲ್ಪಡುವವನು, ಕೊಡುವವನು, ಕೊಡಲ್ಪಡುವ ವಸ್ತು ಮೊದಲಾದ ಎಲ್ಲಾ ವಿಷಯಗಳು ವಿರುದ್ಧವಾಗುತ್ತವೆ. ಇಂತಹ ಮಾತನ್ನು ಪ್ರಾಜ್ಞರು ಒಪ್ಪುವುದಿಲ್ಲ ॥ ೭೬ ॥ ಸಂಪೂರ್ಣವಾಗಿ ಪ್ರತ್ಯಕ್ಷಾದಿ ಪ್ರಮಾಣಗಳಿಂದ ಬಾಧಿತವಾಗಿರುವ ಪಕ್ಷವುಳ್ಳವನೂ ದುರಾತ್ಮನೂ ಆದ ಆ ಬುದ್ಧನಿಗೆ ಸರ್ವಜ್ಞತ್ವವಿಲ್ಲ. ಅವನು ಸರ್ವಜ್ಞನಲ್ಲ ॥ ೭೭ ॥ ಬ್ರಹ್ಮನು ಕಾಶಿಯ ನಿವಾಸಿಯಾದ ಪ್ರಜಾಪತಿಯೆಂಬವನ ಮಗ, ಕೃಷ್ಣ-ನಾರಾಯಣನು ವಸುದೇವನ ಮಗ, ರುದ್ರನು ಸಾತ್ಯಕಿ

ಮುನಿಯ ಮಗ ॥ ೭೮ ॥ ಇವರು ಸ್ವಭಾವಸಿದ್ಧವಾದ ಅನಾದಿನಿಧನವಾದ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣರಾಗಿರುತ್ತಾರೆಂದು ಬುದ್ಧಿಯಿಲ್ಲದವರು ಹೇಗೆ ಹೇಳುತ್ತಾರೆ ? ॥ ೭೯ ॥ ಸರ್ವಜ್ಞರಾದ ಈ ಬ್ರಹ್ಮ ವಿಷ್ಣು ಮಹೇಶ್ವರರಿಗೆ ನಿಜವಾಗಿ ಒಂದೇ ಆಕೃತಿಯಿರುವುದಾದರೆ ಬ್ರಹ್ಮನೂ ವಿಷ್ಣುವೂ ರುದ್ರನ ಲಿಂಗದ ಕೊನೆಯನ್ನೇಕೆ ನೋಡಲಿಲ್ಲ? ॥ ೮೦ ॥ ಸರ್ವಜ್ಞನೂ ರಾಗರಹಿತನೂ ಶುದ್ಧನೂ ಆದ ಪರಮೇಶ್ವರನಿಗೆ ಅಲ್ಪಜ್ಞರೂ ರಾಗವುಳ್ಳವರೂ ಅಶುದ್ಧರೂ ಆದ ಬ್ರಹ್ಮ ವಿಷ್ಣು ರುದ್ರರು ಅವಯವಗಳಾಗಿ ಹೇಗಾಗುತ್ತಾರೆ ? ॥ ೮೧ ॥ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವ ಪಾರ್ವತೀಪತಿಗೆ ತಾಪಸರು ಲಿಂಗಚ್ಛೇದದ ಶಾಪವನ್ನು ಕೊಡುವುದು ಹೇಗೆ ॥ ೮೨ ॥ ರುದ್ರನಿಗೂ ಮಹಾಶಾಪವನ್ನು ಕೊಡುವವರಾದ ತಾಪಸರು ಮನ್ಮಥನ ನಿರಂತರವಾದ ಬಾಣಗಳಿಂದ ಭೇದಿಸಲ್ಪಟ್ಟಿರುವುದು ಹೇಗೆ ? ॥ ೮೩ ॥ ಜಗತ್ತನ್ನು ಸೃಷ್ಟಿಸುವವರೂ ದೇವರ್ಕಳಿಂದ ನಮಸ್ಕರಿಸಲ್ಪಟ್ಟವರೂ ಆದ ಬ್ರಹ್ಮ ವಿಷ್ಣು ಮಹೇಶ್ವರರು ಮೂವರು ದೇವರುಗಳು, ಸಾಮಾನ್ಯಮನುಷ್ಯರಂತೆ, ಮನ್ಮಥನಿಂದ ಜಯಿಸಲ್ಪಟ್ಟಿರುವುದೇಕೆ ? ॥ ೮೪ ॥ ಎಲ್ಲಾ ದೇವತೆಗಳನ್ನು ಜಯಿಸಿ ವಿಡಂಬನವುಳ್ಳವರನ್ನಾಗಿ ಮಾಡಿದ ಮನ್ಮಥನು ಶಂಭುವಿನಿಂದ ತೃತೀಯನೇತ್ರೋತ್ಪನ್ನವಾದ ಬೆಂಕಿಯಿಂದ ಸುಡಲ್ಪಟ್ಟುದು ಹೇಗೆ ? ॥ ೮೫ ॥ ರಾಗ ದ್ವೇಷ ಮೋಹ ಮೊದಲಾದ ಮಹಾದೋಷಗಳಿಗೆ ವಶೀಭೂತರಾದ ದೇವರುಗಳು ಧರ್ಮವನ್ನು ಬಯಸುವವರಿಗೆ ಹಿತವಾದ ಧರ್ಮವನ್ನು ಹೇಗೆ ಹೇಳುತ್ತಾರೆ ? ॥ ೮೬ ॥ ಸಂಸಾರಿಜೀವನು ಯಾರನ್ನು ಭಜಿಸಿ ಶಾಶ್ವತವಾದ ಪದವಿಯನ್ನು ಪಡೆಯುವನೋ ಅಂತಹ ನಿರ್ಮಲರಾದ ದೇವರುಗಳೂ ತಪಸ್ವಿಗಳೂ ಧರ್ಮಗಳೂ ಬೇರೆ ಮತಗಳಲ್ಲಿ ಕಾಣುವುದಿಲ್ಲ ॥ ೮೭ ॥ ರಾಗವುಳ್ಳ ದೇವರನ್ನೂ ಪರಿಗ್ರಹವುಳ್ಳ ಗುರುವನ್ನೂ ಹಿಂಸಾಮಯವಾದ ಧರ್ಮವನ್ನೂ ಸೇವಿಸುವ ಜೀವಗಳಿಗೆ ಅಭೀಷ್ಟವಾದ ಸಂಪತ್ತಿಯು ಅತ್ಯಂತ ದುರ್ಲಭವಾಗುವುದು. ಅವರು ಸುಖದ ಸಿದ್ಧಿಗೋ

ಸ್ಥರ ಇಂತಹ ಮಿಥ್ಯಾಬುದ್ಧಿಯನ್ನು ಹೃದಯದಲ್ಲಿ ಧರಿಸುತ್ತಾರೆ, ಬುದ್ಧಿಹೀನರು ಇಂತಹ ಮಿಥ್ಯಾಬುದ್ಧಿಯನ್ನು ಧರಿಸುವುದು ಸ್ವಾಭಾವಿಕವಾಗಿದೆ ॥ ೮೮-೮೯ ॥ ಬಂಜೆಯ ಮಗನು ದೊರೆ, ಕಲ್ಲಿನ ಮಗನು ಮಂತ್ರಿ, ಬಿಸಿಲ್ಗುದುರೆಯ ನೀರಿನಲ್ಲಿ ಸ್ನಾನಮಾಡಿರುವವನು ಈ ಮೂರು ಮಂದಿಗಳು ಲಕ್ಷ್ಮಿಯನ್ನು ಸೇವಿಸುತ್ತಾರೆ. ಬಂಜೆಯ ಮಗನು ದೊರೆಯಾಗುವುದೂ ಕಲ್ಲಿನ ಮಗನು ಮಂತ್ರಿಯೂ ಬಿಸಿಲ್ಗುದುರೆಯ ನೀರಿನಲ್ಲಿ ಸ್ನಾನಮಾಡಿರುವವನೂ ಹೇಗೆ ಅಸಂಭವವೋ ಹಾಗೆ ರಾಗವುಳ್ಳವನು ದೇವನೂ ಪರಿಗ್ರಹವುಳ್ಳವನು ಗುರುವೂ ಹಿಂಸೆಯು ಧರ್ಮವೂ ಆಗಿರುವುದು ಅಸಂಭವವೆಂದು ಭಾವವು ॥ ೯೦ ॥ ಸಮಸ್ತನರೇಂದ್ರರನ್ನೂ ದೇವೇಂದ್ರರನ್ನೂ ಜಯಿಸಿರುವ ದ್ವೇಷ ರಾಗ ಮದ ಮೋಹಗಳೆಂಬ ಶತ್ರುಗಳು, ಸೂರ್ಯನ ದೇಹದಲ್ಲಿ ಅಂಧಕಾರರಾಶಿಗಳು ಅವಕಾಶವನ್ನು ಹೊಂದದಿರುವಂತೆ, ಯಾವನ ದೇಹದಲ್ಲಿ ಅವಕಾಶವನ್ನು ಹೊಂದುವುದಿಲ್ಲವೋ ಸಕಲಕಲುಷದೂರವಾದ ಕೇವಲಜ್ಞಾನದಿಂದ ಯಾವನು ಚರಾಚರಪದಾರ್ಥಗಳ ಸ್ಥಿತಿಯನ್ನು ತಿಳಿಯುತ್ತಾನೋ ಅಂತಹ ತ್ರಿಲೋಕಪೂಜ್ಯನೂ ಮುಕ್ತಿಸಾಧಕನೂ ಆದ ಜಿನದೇವನನ್ನು ಸತ್ಪುರುಷರು ಭಜಿಸುತ್ತಾರೆ ॥ ೯೧-೯೨ ॥ ಸಮಸ್ತಮನುಷ್ಯರನ್ನೂ ವಿದ್ಯಾಧರರನ್ನೂ ಅಮರರನ್ನೂ ಹೊಡೆದಿರುವ ಮನ್ಮಥಬಾಣಗಳಿಂದ ಹೊಡೆಯಲ್ಪಡದಿರುವವರೂ ಜಿತೇಂದ್ರಿಯರೂ ಜನ್ಮವೆಂಬ ವೃಕ್ಷವನ್ನು ಕತ್ತರಿಸಬೇಕೆಂಬ ಅಭಿಪ್ರಾಯವುಳ್ಳವರೂ ಆದ ಯತಿಗಳೇ ನಿಜವಾದ ಗುರುಗಳಾಗಿರುತ್ತಾರೆ ॥ ೯೩ ॥ ಪ್ರಾಣರಕ್ಷಣವೆಂಬ ಬಲವಾದ ಬೇರುಳ್ಳುದೂ ಸತ್ಯ ಶುಚಿತ್ವ ಶಾಂತಿ ಶೀಲಗಳೆಂಬ ತಳಿರುಗಳುಳ್ಳುದೂ ಆದ ಧರ್ಮವೆಂಬ ವೃಕ್ಷವು ಕೋಮಲವಾದ ಮತ್ತು ಹೆಚ್ಚಾದ ಇಷ್ಟಸುಖವೆಂಬ ಫಲಸಮೂಹವನ್ನು ಕೊಡುವುದು ॥ ೯೪ ॥ ಸಮಸ್ತಬಾಧಾರಹಿತಗಳೂ ಕಾರಣಸಹಿತಗಳೂ ಆದ ಬಂಧಮೋಕ್ಷವಿಧಿಗಳು ಯುಕ್ತಿಯಿಂದ ಮೋಕ್ಷಮಾರ್ಗವನ್ನು ತೋರಿಸುತ್ತವೆಂದು ಯಾವುದು ಹೇಳುತ್ತದೋ ಅದೇ ನಿಜ

ವಾದ ಶಾಸ್ತ್ರವೆಂದು ಪ್ರಾಜ್ಞರು ತಿಳಿಯುತ್ತಾರೆ ॥ ೯೫ ॥ ಮದ್ಯ ಮಾಂಸ ಸ್ತ್ರೀಸೇವನವನ್ನು ಮಾಡುವವರೂ ರಾಗವುಳ್ಳವರೂ ಧಾರ್ಮಿಕರಾಗಿರುವು ದಾದರೆ ಈಡಿಗರೂ ಕಟುಕರೂ ವಿಟಪುರುಷರೂ ನಿರಾಕುಲರಾಗಿ ಸ್ವರ್ಗ ವಾಸವನ್ನು ಹೊಂದಲೇಬೇಕು ॥ ೯೬ ॥ ಕ್ರೋಧ ಲೋಭ ಮದ ಮೋಹ ಗಳಿಂದ ಮರ್ದಿಸಲ್ಪಟ್ಟಿರುವವರೂ ಮಕ್ಕಳು ಹೆಂಡತಿ ಹಣ ಮನೆ ಇವುಗ ಳಲ್ಲಿ ಪ್ರೀತಿಯುಳ್ಳವರೂ ಧರ್ಮ ಸಂಯಮ ದಮಗಳಿಲ್ಲದಿರುವವರೂ ಆದ ಯತಿಗಳು ಪ್ರಾಣಿಗಳನ್ನು ಭವಸಾಗರದಲ್ಲಿ ತಳ್ಳುತ್ತಾರೆ ॥ ೯೭ ॥ ನಾನಾ ದೋಷಗಳಿಂದ ದೂಷಿತರಾದ ದೇವತೆಗಳನ್ನೂ ಪರಿಗ್ರಹಯುಕ್ತರಾದ ತಪ ಸ್ವಿಗಳನ್ನೂ ಪ್ರಾಣಿ ಹಿಂಸಾಪರವಾದ ಧರ್ಮವನ್ನೂ ಸೇವಿಸಿದುದಾದರೆ ಅವು ಶೀಘ್ರವಾಗಿ ಭವಪರಂಪರೆಗೆ ಒಯ್ಯುತ್ತವೆ. ॥ ೯೮ ॥ ಮಿತ್ರನೇ ! ಜನನ ಮರಣರೂಪವಾದ ಹಲವು ದಾರಿಗಳಿಂದ ಬಿಕ್ಕಟ್ಟಾಗಿರುವುದೂ ದ್ವೇಷರಾಗ ಮದ ಮತ್ಸರಗಳಿಂದ ವ್ಯಾಕುಲವೂ ಆದ ಜನತೆಯಲ್ಲಿ ಮುಕ್ತಿಮಾರ್ಗವು ದುರ್ಲಭವಾಗಿರುವುದರಿಂದ ನೀನು ಯಾವಾಗಲೂ ತತ್ತ್ವಪರೀಕ್ಷಕನಾಗಿರು ॥ ೯೯ ॥ ಭವ ಮೃತ್ಯು ಜರಾರಹಿತರೂ ದೇವತೆಗಳಿಂದ ವಂದಿಸಲ್ಪಡುವ ವರೂ ಆದ ದೇವರೂ ಪರಿಗ್ರಹವನ್ನೂ ಕಾಮವನ್ನೂ ಇಂದ್ರಿಯಗಳ ವೇಗ ವನ್ನೂ ನಿರಾಕರಿಸುವವನೂ ಅಪರಿಮಿತವಾದ ಜ್ಞಾನವುಳ್ಳವನೂ ಆದ ಯತಿಯೂ ಕಪಟರಹಿತವೂ ಸಕಲಜೀವರಕ್ಷಾಕರವೂ ಆದ ಧರ್ಮವೂ ಮೋಕ್ಷಪ್ರಾಪ್ತಿ ನಿಮಿತ್ತ ವಾಗಿ ಯಾವಾಗಲೂ ನನ್ನ ಮನದಲ್ಲಿ ವಾಸಮಾಡಲಿ ॥ ೧೦೦ ॥

ಇಂತು ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷಾಸಪ್ತದಶಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

ಪವನವೇಗನು ಪರಮತಗಳಲ್ಲಿರುವ ತಪ್ಪುಗಳನ್ನು ಮನೋವೇಗನ ಮಾತುಗಳಿಂದ ಕೇಳಿ ತಿಳಿದ ಬಳಿಕ ಆವನು ಸಂದೇಹವೆಂಬ ಕತ್ತಲೆಯನ್ನು ನಾಶಮಾಡುವುದಕ್ಕೋಸ್ಕರ ಮನೋವೇಗನನ್ನು ಕುರಿತು "ಶ್ರೇಷ್ಠವಾದ ಬುದ್ಧಿಯುಳ್ಳವನೆ ! ಅನ್ಯಮತಗಳು ವಿಶೇಷವಾಗಿ ಪರಸ್ಪರವಿರುದ್ಧಗಳಾಗಿ ಹೇಗಾದುವು ? ನನಗೆ ಹೇಳು'' ಎಂದು ಪ್ರಶ್ನೆ ಮಾಡಿದನು ‖ ೧-೨ ‖ ಮನೋವೇಗನು ಪವನವೇಗನ ಮಾತನ್ನು ಕೇಳಿ "ಮಿತ್ರನೆ ! ನಿನಗೆ ಅನ್ಯ ಮತಗಳ ಉತ್ಪತ್ತಿಯನ್ನು ಹೇಳುತ್ತೇನೆ. ಕೇಳು " ಎಂದು ಈ ಮುಂದೆ ಹೇಳು ವಂತೆ ವಿವರಿಸಿದನು ‖ ೩ ‖

ಭರತಕ್ಷೇತ್ರದಲ್ಲಿ ದುರ್ನಿವಾರವಾದ ಮಹಾವೇಗವುಳ್ಳ ಉತ್ಸರ್ಪಿಣ್ಯ ವಸರ್ಪಿಣ್ಯಗಳೆಂಬ ಎರಡು ಕಾಲಭೇದಗಳು, ದಿವಾರಾತ್ರಿಗಳಂತೆ, ಒಂದರ ಹಿಂದೊಂದು ಯಾವಾಗಲೂ ತಿರುಗುತ್ತಿರುತ್ತವೆ ‖ ೪ ‖ ವರ್ಷದಲ್ಲಿ ಶಿಶಿರಾದಿ ಋತುಗಳಂತೆ, ಅವೆರಡರಲ್ಲಿ ಪ್ರತಿಯೊಂದರಲ್ಲೂ ಪರಸ್ಪರ ಮಹಾಭೇದ ಗಳುಳ್ಳ ಸುಷಮಾಸುಷಮಾ, ಸುಷಮಾ, ಸುಷಮಾದುಃಷಮಾ, ದುಃಷ ಮಾಸುಷಮಾ, ದುಃಷಮಾ, ದುಃಷಮಾದುಃಷಮಾಗಳೆಂಬೀ ಆರು ಭೇದ ಗಳಿರುತ್ತದೆ ‖ ೫ ‖ ಈ ಎರಡು ಕಾಲಗಳಲ್ಲಿ ಪ್ರತಿಯೊಂದರ ಕಾಲಪರಿಮಿ ತಿಯು ಹತ್ತು ಕೋಟೀಕೋಟೀಸಾಗರವರ್ಷಗಳು. ಆ ಎರಡು ಕಾಲ ಗಳಲ್ಲಿ ಈಗ ನಡೆಯುತ್ತಿರುವ ಕಾಲವು ಅವಸರ್ಪಿಣಿಯೆಂದು ಪ್ರಾಜ್ಞರು ತಿಳಿ ಯಬೇಕು ‖ ೬ ‖ ಮೊದಲನೆಯ ಸುಷಮಾಸುಷಮಾ ಕಾಲವು ನಾಲ್ಕು ಕೋಟೀಕೋಟೀ ಸಾಗರವರ್ಷಪರಿಮಿತವಾಗಿರುತ್ತದೆ. ಎರಡನೆಯ ಸುಷ ಮಾಕಾಲವು ಮೂರು ಕೋಟೀಕೋಟೀ ಸಾಗರವರ್ಷಪರಿಮಿತವಾಗಿರು ತ್ತದೆ ‖ ೭ ‖ ಮೂರನೆಯ ಸುಷಮಾದುಃಷಮಾಕಾಲವು ಎರಡು ಕೋಟೀ ಕೋಟೀ ಸಾಗರವರ್ಷಪರಿಮಿತವಾಗಿರುತ್ತದೆ. ಆ ಮೂರು ಕಾಲಭೇದ ಗಳಲ್ಲಿ ಕ್ರಮವಾಗಿ ಮನುಷ್ಯರು ಮೂರು ಎರಡು ಮತ್ತು ಒಂದು

ಪಲ್ಯಕಾಲ ಪರಮಾಯುಷ್ಯವುಳ್ಳವರಾಗಿರುತ್ತಾರೆ ॥ ೮ ॥ ಭೋಗಭೂಮಿಗಳಾದ ಆ ಕಾಲದ ಮನುಷ್ಯರ ಶರೀರೋನ್ನತಿಯು ಯಥಾಕ್ರಮವಾಗಿ ಮೂರು ಎರಡು ಮತ್ತು ಒಂದು ಹರದಾರಿಯಷ್ಟಿರುತ್ತದೆ. ಯಥಾಕ್ರಮವಾಗಿ ಮೂರು ಎರಡು ಮತ್ತು ಒಂದು ದಿವಸಕ್ಕೊಮ್ಮೆ ಅವರ ಆಹಾರ ನಿಯಮವಿರುತ್ತದೆ ॥ ೯ ॥ ಬೇರೆಯವರಿಗೆ ದುರ್ಲಭವೂ ಪುಷ್ಟಿಪ್ರದವೂ ಸರ್ವೇಂದ್ರಿಯಗಳಿಗೆ ಬಲಪ್ರದವೂ ಆದ ಅವರ ಆಹಾರವು ಯಥಾಕ್ರಮವಾಗಿ ಎಲಚಿಯ ಹಣ್ಣಿನಷ್ಟು, ನೆಲ್ಲಿಯ ಕಾಯಿಯಷ್ಟು ಮತ್ತು ಪಗಡೆಯ ಕಾಯಿಯಷ್ಟಿರುತ್ತದೆ ॥ ೧೦ ॥ ಆ ಮೂರು ಕಾಲಗಳಲ್ಲಿ ಸ್ವಾಮಿಭೃತ್ಯಸಂಬಂಧವೂ ಬೇರೆಯವರ ಮನೆಗೆ ಹೋಗಿ ಬರುವ ವ್ಯವಹಾರವೂ ಇರುವುದಿಲ್ಲ. ಒಬ್ಬನು ಕಡಮೆ, ಒಬ್ಬನು ಹೆಚ್ಚೆಂಬ ಭೇದವಿರುವುದಿಲ್ಲ. ವ್ರತಾನುಷ್ಠಾನವೂ ಸಂಯಮಪಾಲನವೂ ಇರುವುದಿಲ್ಲ ॥ ೧೧ ॥ ಆ ಕಾಲಗಳ ಮನುಷ್ಯರ ನವಯೌವನಭೂಷಿತವಾದ ದೇಹವು ನಾಲ್ವತ್ತೊಂಬತ್ತು ದಿನಗಳಲ್ಲಿ ಸಕಲಭೋಗಾನುಭವವನ್ನು ಮಾಡುವುದಕ್ಕೆ ಸಮರ್ಥವಾಗುವುದು ॥ ೧೨ ॥ ಬೆಳದಿಂಗಳಿನಂತೆ ಮತ್ತು ಚಂದ್ರನಂತೆ ತಮ್ಮ ಕಾಂತಿಯಿಂದ ದೇಹವನ್ನೆಲ್ಲ ಪ್ರಕಾಶಪಡಿಸಿಕೊಳ್ಳುವವರಾದ ಸ್ತ್ರೀಪುರುಷರು ಆ ಕಾಲಗಳಲ್ಲಿ ಅವಳಿಯಾಗಿ ಹುಟ್ಟುತ್ತಾರೆ ॥ ೧೩ ॥ ಪ್ರಿಯಭಾಷಿಣಿಯಾದ ಪತ್ನಿಯು ತನ್ನ ಪತಿಯನ್ನು ಆರ್ಯನೆಂದೂ ನಾನಾಪ್ರಕಾರವಾದ ಪ್ರಿಯವಚನಗಳನ್ನು ನುಡಿಯುವುದರಲ್ಲಿ ಉದ್ಯುಕ್ತನಾದ ಪತಿಯು ತನ್ನ ಪತ್ನಿಯನ್ನು ಆರ್ಯೆಯೆಂದೂ ಕರೆಯುತ್ತಾರೆ ॥ ೧೪ ॥ ಆ ಕಾಲಗಳ ಮನುಷ್ಯರಿಗೆ ಮಾದಕಪದಾರ್ಥಗಳನ್ನೂ ವಾದ್ಯವಿಶೇಷಗಳನ್ನೂ ಮನೆಗಳನ್ನೂ ಪ್ರಕಾಶಗಳನ್ನೂ ಆಭರಣಗಳನ್ನೂ ಭೋಜನಗಳನ್ನೂ ಮಾಲಿಕೆಗಳನ್ನೂ ದೀಪಗಳನ್ನೂ ವಸ್ತ್ರಗಳನ್ನೂ ಪಾತ್ರಗಳನ್ನೂ ಕೊಡುವ ಆಯಾ ಜಾತಿಯ ನಿರ್ವಿಕಾರಗಳಾದ ದಶವಿಧ ಕಲ್ಪವೃಕ್ಷಗಳು, ಆಕಾರಸಹಿತಗಳಾದ ಧರ್ಮಗಳೋ ಎಂಬಂತೆ, ಆಯಾ ಭೋಗವಸ್ತುಗಳನ್ನು ಕೊಡುತ್ತವೆ ॥ ೧೫–೧೬ ॥ ಸುಷಮಾದುಃಷಮಾ

ವೆಂಬ ಮೂರನೆಯ ಕಾಲದಲ್ಲಿ ಒಂದು ಪಲ್ಯೋಪಮಕಾಲದ ಎಂಟನೆಯ ಒಂದು ಭಾಗವು ಉಳಿಯುವಾಗ ಹದಿನಾಲ್ಕು ಮಂದಿ ಕುಲಕರ-ಮನುಗಳು ಉತ್ಪನ್ನರಾದರು ‖ ೧೭ ‖ ಅವರಲ್ಲಿ ಮೊದಲನೆಯವನು ಪ್ರತಿಶ್ರುತಿ. ಎರಡನೆಯವನು ಸನ್ಮತಿ. ಮೂರನೆಯವನು ಕ್ಷೇಮಂಕರ, ನಾಲ್ಕನೆಯವನು ಕ್ಷೇಮಂಧರ, ಐದನೆಯವನು ಸೀಮಂಕರ, ಆರನೆಯವನು ಸೀಮಂಧರ, ಏಳನೆಯವನು ವಿಮಲವಾಹ, ಎಂಟನೆಯವನು ಚಕ್ಷುಷ್ಮಾನ್, ಒಂಬತ್ತನೆಯವನು ಯಶಸ್ವಾನ್, ಹತ್ತನೆಯವನು ಅಭಿಚಂದ್ರ, ಹನ್ನೊಂದನೆಯವನು ಚಂದ್ರಾಭ. ಹನ್ನೆರಡನೆಯವನು ಮರುದೇವ, ಹದಿಮೂರನೆಯವನು ಪ್ರಸೇನಜಿತ್, ಕೊನೆಯ ಹದಿನಾಲ್ಕನೆಯವನು ನಾಭಿರಾಜನು ‖ ೧೮–೨೦ ‖ ಭವಸ್ಮರಣೆಯುಳ್ಳವರೂ ದಿವ್ಯಜ್ಞಾನವೆಂಬ ನೇತ್ರವುಳ್ಳವರೂ ಆದ ಈ ಮನುಗಳೆಲ್ಲರೂ ಜನರಿಗೆ ಲೋಕವ್ಯವಹಾರವನ್ನೆಲ್ಲ ತೋರಿಸಿದರು ‖ ೨೧ ‖ ಪ್ರಭಾತ-ಕಾಲವು ಪೂರ್ವದಿಕ್ಕಿನಲ್ಲಿ ಸೂರ್ಯನನ್ನು ಪಡೆಯುವಂತೆ, ನಾಭಿರಾಜಮನುವು ಮಹಾದೇವಿಯಾದ ಮರುದೇವೀ-ಪತ್ನಿಯಲ್ಲಿ ವೃಷಭಜಿನೇಶ್ವರನನ್ನು ಪಡೆದನು ‖ ೨೨ ‖ ಸ್ವಾಮಿಯು ಸ್ವರ್ಗದಿಂದ ಅವತರಿಸುವ ಕಾಲದಲ್ಲಿ ದೇವೇಂದ್ರನು ಭಕ್ತಿಯಿಂದ ರತ್ನಮಯವೂ ದಿವ್ಯವಾದ ಕೋಟೆಗಳೂ ಮನೆಗಳೂ ಉಳ್ಳದೂ ಆದ ಅಯೋಧ್ಯಾನಗರವನ್ನು ನಿರ್ಮಾಣಮಾಡಿದನು ‖ ೨೩ ‖ ದೇವೇಂದ್ರನು ವೃಷಭಜಿನೇಶ್ವರನಲ್ಲಿ ನಿರ್ಮಲವಾದ ನೀತಿಯನ್ನೂ ಕೀರ್ತಿಯನ್ನೂ ಸೇರಿಸುವಂತೆ, ಕಚ್ಛರಾಜನ ಪುತ್ರಿಯರಾದ ನಂದೆಯನ್ನೂ ಸುನಂದೆಯನ್ನೂ ತಂದು ವಿವಾಹಮಾಡಿದನು ‖ ೨೪ ‖ ಆ ವೃಷಭಜಿನನಿಗೆ ಈ ನಂದಾಸುನಂದೆಯರಲ್ಲಿ ಮನಸ್ಸಿಗೆ ಸಂತೋಷವನ್ನುಂಟು ಮಾಡಲು ಸಮರ್ಥರಾದ ನೂರು ಮಂದಿ ಗಂಡುಮಕ್ಕಳೂ ಬ್ರಾಹ್ಮೀ ಸುಂದರಿಯರೆಂಬೀರ್ವರು ಹೆಣ್ಣುಮಕ್ಕಳೂ ಹುಟ್ಟಿದರು ‖ ೨೫ ‖ ಕಲ್ಪವೃಕ್ಷಗಳು ನಾಶವಾದ ಬಳಿಕ ಜನರು ಜೀವನೋಪಾಯವನ್ನು ತಿಳಿಯದೆ ದುಃಖಿತರಾಗಿ ವೃಷಭಜಿನನಲ್ಲಿಗೆ ಹೋಗಿ ಪ್ರಶ್ನೆಮಾಡಿದರು. ಆಗ ಅವನು ಅವರ ಜೀವನಸ್ಥಿತಿಗೆ

ಕಾರಣಗಳಾದ ಅಸಿ, ಮಷೀ. ಕೃಷಿ, ವಾಣಿಜ್ಯ, ವಿದ್ಯಾ, ಶಿಲ್ಪಗಳೆಂಬ ಷಟ್ಕರ್ಮಗಳನ್ನು ತೋರಿಸಿಕೊಟ್ಟನು ॥ ೨೬ ॥ ಬಳಿಕ ಒಂದು ದಿವಸ ವೃಷಭಜಿನದೇವನು ತನ್ನ ಆಸ್ಥಾನದಲ್ಲಿ ನರ್ತನವನ್ನು ಮಾಡುತ್ತಿದ್ದ ನೀಲಂಜಸಾ (ನೀಲಾಂಜನಾ) ಎಂಬ ದೇವಸ್ತ್ರೀಯು ಶೀಘ್ರವಾಗಿ ಅಗೋಚರಳಾದುದನ್ನು ನೋಡಿ ಮನಸ್ಸಿನಲ್ಲಿ ಮುಂದೆ ಹೇಳುವಂತೆ ವಿಚಾರ ಮಾಡಿದನು ॥ ೨೭ ॥

ನೋಡುತ್ತಿರುವಷ್ಟರಲ್ಲೇ ಮಿಂಚಿನಂತೆ ಈ ದೇವಸ್ತ್ರೀಯು ಹೇಗೆ ನಷ್ಟವಾದಳೋ ಹಾಗೆ ಮೋಹವಿಕಾರವಾದ ಈ ಸಂಪತ್ತಿಯೆಲ್ಲವೂ ನಾಶವಾಗುವುದು ॥ ೨೮ ॥ ಒಂದು ವೇಳೆ ಬಿಸಿಲ್ಗುದುರೆಯಲ್ಲಿ ನೀರು ದೊರೆತರೂ ಆಕಾಶನಗರದಲ್ಲಿ ಮಹಾಜನರು ದೊರೆತರೂ ಸಾರವಿಲ್ಲದ ಸಂಸಾರದಲ್ಲಿ ಸೌಖ್ಯವು ದೊರಯಲಾರದು ॥ ೨೯ ॥ ಈ ಸಂಸಾರದಲ್ಲಿ ಯಾವ ವಸ್ತುವಿಲ್ಲದಿದ್ದರೆ ಒಂದು ಕ್ಷಣಕಾಲವೂ ಇರಲಾಗುವುದಿಲ್ಲವೋ ಅಂತಹ ವಸ್ತುವಿನ ಬೆಂಕಿಯಂತೆ ತಾಪವನ್ನುಂಟುಮಾಡುವ ವಿಯೋಗವನ್ನೂ ಸಹಿಸಬೇಕಾಗುವುದು ॥ ೩೦ ॥ ಕ್ಷೀಣನಾದ ಚಂದ್ರನು ಮತ್ತೆ ವೃದ್ಧಿಯನ್ನು ಹೊಂದುತ್ತಾನೆ. ಕಳೆದು ಹೋದ ದಿವಸವು ಮತ್ತೆ ಬರುವುದು. ಆದರೆ ಹೊಳೆಯ ನೀರಿನಂತೆ ಕಳೆದು ಹೋದ ಯೌವನವು ಮತ್ತೆ ಬರುವುದಿಲ್ಲ ॥ ೩೧ ॥ ಈ ಸಂಸಾರದಲ್ಲಿ ಬಂಧುಗಳ ಸಂಯೋಗವು ದಾರಿನಡೆಯುವವರ ಪರಸ್ಪರಸಂಬಂಧದಂತಿರುವುದು. ಗೆಳೆಯರ ಗೆಳೆತನವು ಮಿಂಚಿನ ಪ್ರಕಾಶದಂತೆ ಅಸ್ಥಿರವಾಗಿರುವುದು ॥ ೩೨ ॥ ಪುತ್ರ ಮಿತ್ರ ಗ್ರಹ ದ್ರವ್ಯ ಧನ ಧಾನ್ಯಾದಿಸಂಪತ್ತುಗಳು, ಕನಸಿನಲ್ಲಿ ದೊರೆತಂತೆ, ಅಸ್ಥಿರವಾಗಿರುತ್ತವೆ ॥ ೩೩ ॥ ಯಾವುದಕ್ಕೋಸ್ಕರ ಹೆಚ್ಚು ಪಾಪವನ್ನು ಮಾಡಿ ದ್ರವ್ಯವು ಸಂಪಾದಿಸಲ್ಪಡುವುದೋ ಅಂತಹ ಜೀವಿತವು-ಬದುಕು, ಶರತ್ಕಾಲದ ಮೇಘದಂತೆ, ಶೀಘ್ರವಾಗಿ ಓಡಿಹೋಗುತ್ತದೆ ॥ ೩೪ ॥ ದುಃಖಕ್ಕೆ ಮೂಲಕಾರಣವಾದ

ಸಂಸಾರದಲ್ಲಿ ವಿಶ್ವಸಂಚಾರಿಯಾದ ಮೃತ್ಯುವಿಗೆ ಗೋಚರವಾಗದಿರುವ ಪ್ರಾಣಿಯೇ ಕಾಣುವುದಿಲ್ಲ ‖ ೩೫ ‖ ಈ ಸಂಸಾರದಲ್ಲಿ ಜೀವಗಳಿಗೆ ಒಂದು ರತ್ನತ್ರಯವನ್ನು ಬಿಟ್ಟು ಬೇರೆ ಯಾವುದೂ ನಿಶ್ಚಯವಾಗಿಯೂ ತಮಗೆ ಹಿತ ಕರವಾದ ಕಾರಣವಿಲ್ಲ ‖ ೩೬ ‖

ವೃಷಭಜಿನದೇವನು ಈ ರೀತಿಯಾಗಿ ವಿಚಾರಮಾಡಿ ಮನೆಯಿಂದ ಹೊರಡಲುದ್ಯುಕ್ತನಾದನು. ಸಂಸಾರದ ಅಸಾರತೆಯನ್ನು ತಿಳಿದವನು ಮನೆಯಲ್ಲಿ ಹೇಗಿರುತ್ತಾನೆ ? ‖ ೩೭ ‖ ಸ್ವಾಮಿಯನ್ನು ಒಯ್ಯುವುದಕ್ಕೋ ಸ್ಕರ ತಾನೇ ಬಂದ ನಿರ್ಮಲವಾದ ಮುಕ್ತಿಭೂಮಿಯೋ ಎಂಬಂತಿರುವುದೂ ಮುತ್ತಿನ ಹಾರಗಳಿಂದಲಂಕೃತವೂ ಆದ ಪಲ್ಲಕ್ಕಿಯನ್ನು ಸ್ವಾಮಿಯು ಹತ್ತಿ ದನು. ‖ ೩೮ ‖ ಆ ಪಲ್ಲಕ್ಕಿಯನ್ನು ಮೊದಲು ರಾಜರುಗಳು ಎತ್ತಿದರು. ಬಳಿಕ ಸ್ವರ್ಗದ ದೇವರ್ಕಳು ತೆಗೆದುಕೊಂಡರು. ಮಹಾಬುದ್ಧಿಶಾಲಿಗಳು ಸಮಸ್ತ ಧರ್ಮಕಾರ್ಯಗಳಲ್ಲಿ ಭಾಗವಹಿಸದಿರುವದಿಲ್ಲ ‖ ೩೯ ‖ ಸ್ವಾಮಿಯು ಶಕಟೋದ್ಯಾನಕ್ಕೆ ಬಂದು ಪಲ್ಲಕ್ಕಿಯಿಂದಿಳಿದು ಆಲದ ಮರದ ಬುಡದಲ್ಲಿ ಪರ್ಯಂಕಾಸನದಲ್ಲಿದ್ದು ಆಭರಣಗಳನ್ನು ತ್ಯಜಿಸಿದನು ‖ ೪೦ ‖ ಬಳಿಕ ಈ ಸ್ವಾಮಿಯು ಸಿದ್ಧನಮಸ್ಕಾರವನ್ನು ಮಾಡಿ ದೃಢವಾದ ಮುಷ್ಟಿಯುಳ್ಳ ವನಾಗಿ ಶೀಘ್ರವಾಗಿ ಐದು ಮುಷ್ಟಿಗಳಿಂದ ಕೂದಲುಗಳನ್ನು ಕಿತ್ತುಕೊಂಡ ನು ‖ ೪೧ ‖ ಮಂಗಳಕರವಾದ ದೇಹವುಳ್ಳವನೂ ಮಹಾಸತ್ತ್ವಶಾಲಿಯೂ ಮನುಷ್ಯರಿಂದಲೂ ದೇವರ್ಕಳಿಂದಲೂ ಭಜಿಸಲ್ಪಟ್ಟವನೂ ಆದ ವೃಷಭ ಸ್ವಾಮಿಯು ಬಳಿಕ ಕಾಯೋತ್ಸರ್ಗತಪಸ್ಸಿನಲ್ಲಿ ಮಹಾಮೇರುಪರ್ವತದಂತೆ ನಿಂತನು ‖ ೪೨ ‖ ಸ್ವಾಮಿಯು ಕಿತ್ತೆಸೆದ ತಲೆಗೂದಲುಗಳನ್ನು ದೇವೇಂ ದ್ರನು ತಟ್ಟೆಯೊಳಗಿರಿಸಿ ತನ್ನ ತಲೆಯ ಮೇಲಿಟ್ಟು ತೆಗೆದುಕೊಂಡುಹೋಗಿ ಕ್ಷೀರಸಮುದ್ರದಲ್ಲಿ ಎಸೆದನು. ‖೪೩‖ ಅಲ್ಲಿ ಜಿನೇಶ್ವರನು ತ್ಯಾಗರೂಪವಾದ ಉತ್ಕೃಷ್ಟಯೋಗವನ್ನು ಮಾಡಿದನು. ಬಳಿಕ ಆ ಶಕಟಾಮುಖವೆಂಬ

ಉದ್ಯಾನವು ಪ್ರಯೋಗ (ಪ್ರಯಾಗ) ವೆಂಬ ಹೆಸರನ್ನು ಹೊಂದಿತು ॥ ೪೪ ॥ ಸ್ವಾಮಿಯೊಡನೆ ನಾಲ್ಕುಸಾವಿರ ದೊರೆಗಳು ತಪಸ್ವಿಗಳಾದರು. ಸತ್ಪುರುಷರು ಆಚರಿಸಿದ ಕಾರ್ಯವನ್ನು ಎಲ್ಲಾ ಜನರು ಆಶ್ರಯಿಸುತ್ತಾರೆ ॥ ೪೫ ॥ ಆ ರಾಜಶ್ರೇಷ್ಠರೆಲ್ಲ ಆರು ತಿಂಗಳೊಳಗಾಗಿ ತಪೋಭಗ್ನರಾದರು. ದೀನವಾದ ಮನುಸ್ಸುಳ್ಳವರೂ ತಿಳಿವಳಿಕೆಯಿಲ್ಲದವರೂ ಆದ ಮನಷ್ಯರು ಪರೀಷಹ-ಕ್ಷುಧಾದಿಬಾಧೆಗಳನ್ನು ಸಹಿಸಲಾರರು ॥ ೪೬ ॥ ಆ ದಿಗಂಬರ ಮುನಿಗಳು ವನದಲ್ಲಿ ಫಲಗಳನ್ನು ಕಿತ್ತು ತಿನ್ನುವುದಕ್ಕೂ ನೀರನ್ನು ಕುಡಿಯುವುದಕ್ಕೂ ತೊಡಗಿದರು. ಲೋಕದಲ್ಲಿ ಹಸಿವಿನಿಂದ ಕ್ಷೀಣವಾದ ಹೊಟ್ಟೆಯುಳ್ಳವರು ಮಾಡದಿರುವ ಕಾರ್ಯವಿಲ್ಲ ॥ ೪೭ ॥ ಬಳಿಕ ವನದೇವತೆಯು ಆ ಮುನಿಗಳನ್ನು ಕುರಿತು "ಎಲೈ ರಾಜರೆ! ನೀವುಗಳು ಈ ವೇಷದಿಂದ ಇಂತಹ ನಿಂದ್ಯವಾದ ಕಾರ್ಯವನ್ನು ಮಾಡುವುದು ಯೋಗ್ಯವಲ್ಲ ॥ ೪೮ ॥ ಯಾವ ದಿಗಂಬರಮುನಿಗಳು ತಾವೇ ಆಹಾರವನ್ನು ಗ್ರಹಣ ಮಾಡುತ್ತಾರೋ ಅಂತಹ ನೀಚರಿಗೆ ಭವಸಮುದ್ರದ ಪಾರವು ದೊರೆಯಲಾರದು ॥ ೪೯ ॥ ಬೇರೆಯವರು ಕೊಡುವ ಶುದ್ಧವಾದ ಆಹಾರವನ್ನು ಜೈನಯೋಗಿಗಳು ಧರ್ಮವೃದ್ಧಿಗೋಸ್ಕರ ಪಾಣಿಪಾತ್ರದಲ್ಲಿ ಪರಗೃಹದಲ್ಲಿ ಭುಂಜಿಸುತ್ತಾರೆ" ಎಂದು ಹೇಳಿತು ॥ ೫೦ ॥ ದೇವಿಯ ಈ ಮಾತನ್ನು ಕೇಳಿ ದುಃಖಿತರಾದ ಆ ಮುನಿಗಳು ಕೌಪೀನವನ್ನು ಧರಿಸಿಕೊಂಡು, ಬಹು ತೀವ್ರವಾದ ಕಾಲಕೂಟ-ವಿಷವನ್ನು ಕುಡಿಯುವಂತೆ, ನೀರನ್ನು ಕುಡಿದರು ॥ ೫೧ ॥ ಅವರಲ್ಲಿ ಕೆಲವರು ಹಸಿವಿನಿಂದಲೂ ಬಾಯಾರಿಕೆಯಿಂದಲೂ ಪೀಡಿತರಾಗಿ ಲಜ್ಜೆಯನ್ನು ಬಿಟ್ಟು ತಂತಮ್ಮ ಮನೆಗಳಿಗೆ ಹೋದರು. ಪ್ರಾಣಿಗಳು ಮನಃಖೇದವುಂಟಾಗುವವರೆಗೆ ನಾಚುತ್ತಾರೆ. ಬಳಿಕ ನಾಚುವುದಿಲ್ಲ ॥ ೫೨ ॥ ಆ ತಪಸ್ವಿಗಳಲ್ಲಿ ಮತ್ತೆ ಕೆಲವರು 'ವೃಷಭಸ್ವಾಮಿಯನ್ನು ಈ ವನದ ಮಧ್ಯದಲ್ಲಿ ಬಿಟ್ಟು ನಾವುಗಳು ಮನೆಗೆ ಹೋದರೆ ಭರತೇಶ್ವರನು ಕೋಪಿಸಿಕೊಂಡು ನಮ್ಮ ಜೀವನೋಪಾಯವನ್ನು ನಾಶಮಾಡುವನು ॥ ೫೩ ॥ ನಾವು

ಈ ವನದಲ್ಲಿ ಸ್ವಾಮಿಯ ಸೇವೆಯನ್ನು ಮಾಡಿಕೊಂಡಿರುವುದೊಳ್ಳೆಯದು" ಎಂದು ಯೋಚಿಸಿ ಗೆಡ್ಡೆ ಗೆಣಸುಗಳನ್ನು ತಿಂದುಕೊಂಡು ಆ ವನದಲ್ಲಿದ್ದರು ॥ ೫೪ ॥ ಕಚ್ಛ ಮಹಾಕಚ್ಛರಾಜರು ಮಹಾಪಾಂಡಿತ್ಯಗರ್ವದಿಂದ ಫಲ ಮೂಲಾದಿ ಭಕ್ಷಣವನ್ನು ಮಾಡುತ್ತ ತಪಸ್ವಿಗಳ ವ್ರತವನ್ನಾಚರಿಸಿದರು ॥ ೫೫ ॥ ನಿಪುಣನಾದ ಮರೀಚಿಕುಮಾರನು ಸಾಂಖ್ಯದರ್ಶನವನ್ನು ಸ್ಥಾಪಿಸಿ ತನ್ನ ಶಿಷ್ಯನಾದ ಕಪಿಲನಿಗೆ ಉಪದೇಶಿಸಿದನು ॥ ೫೬ ॥ ಬೇರೆ ದೊರೆಗಳು ತಂತಮ್ಮ ಪಾಂಡಿತ್ಯಗರ್ವದಿಂದ ಗರ್ವಿತರಾಗಿ ತಮತಮಗೆ ಇಷ್ಟವಾದ ಪಾಷಂಡಮತಗಳನ್ನು ಸ್ಥಾಪಿಸಿದರು ॥ ೫೭ ॥ ಮಿಥ್ಯಾತ್ವವನ್ನು ವೃದ್ಧಿಮಾಡುವವೂ ವಿಚಿತ್ರಗಳೂ ಕ್ರಿಯಾವಾದ ಅಕ್ರಿಯಾವಾದ ಮೊದಲಾದ ಮುನ್ನೂರರುವತ್ತುಮೂರು ಭೇದಗಳುಳ್ಳವೂ ಆದ ಪಾಷಂಡಮತಗಳು ಸ್ಥಾಪಿತವಾದುವು ॥ ೫೮ ॥ ಶುಕ್ರ ಬೃಹಸ್ಪತಿರಾಜರಿಬ್ಬರು ಚಾರ್ವಾಕದರ್ಶನವನ್ನು ಸ್ಥಾಪಿಸಿ ಸ್ವೇಚ್ಛೆಯಿಂದ ತಮ್ಮ ಇಂದ್ರಿಯಪೋಷಣವನ್ನು ಮಾಡುವುದಕ್ಕೆ ಪ್ರವರ್ತಿಸಿದರು ॥ ೫೯ ॥ ಈ ರೀತಿಯಾಗಿ ರಾಜರುಗಳು ನಾನಾಪ್ರಕಾರವಾದ ವಿಡಂಬನೆಯನ್ನು ಹೊಂದಿದರು. ಪ್ರಭುವಿನ ಕಾರ್ಯವನ್ನು ತಾನು ಮಾಡಬೇಕೆಂಬ ಇಚ್ಛೆಯುಳ್ಳ ಯಾವನು ತಾನೆ ವಿಡಂಬನೆಯನ್ನು ಮಾಡುವುದಿಲ್ಲ? ॥ ೬೦ ॥ "ಆಹಾರವಿಲ್ಲದೆ ಪರೀಷಹಗಳಿಂದ ದುಃಖಿತರಾದ ಈ ರಾಜರುಗಳು ಹೇಗೆ ತಪೋಭಗ್ನರಾದರೋ ಹಾಗೆ ಬೇರೆಯವರೂ ದುಷ್ಟವಾದ ದರ್ಶನದಲ್ಲಿ ಆಸಕ್ತರಾಗುವರು" ॥ ೬೧ ॥ ಈ ರೀತಿಯಾಗಿ ಯೋಚಿಸಿ ಪರೋಪಕಾರಕನಾದ ವೃಷಭಸ್ವಾಮಿಯು ಧ್ಯಾನವನ್ನು ಉಪಸಂಹರಿಸಿ ಯೋಗಿಗಳಿಗೆ ಶುದ್ಧಾಹಾರಗ್ರಹಣದ ಕ್ರಮವನ್ನು ರಚಿಸುವುದಕ್ಕೋಸ್ಕರ ಪ್ರಾರಂಭಿಸಿದನು ॥ ೬೨ ॥ ಹಸ್ತಿನಾಪುರದ ಶ್ರೇಯಾಂಸರಾಜನು ಶುಭಸ್ವಪ್ನವನ್ನು ಹೊಂದಿ ಭವಸ್ಮರಣವುಳ್ಳವನೂ ಕ್ರಮದಿಂದ ವಿಧಾನವನ್ನು ತಿಳಿದವನೂ ಆಗಿ ಸ್ವಾಮಿಗೆ ಭೋಜನವನ್ನು ಮಾಡಿಸಿದನು. ॥ ೬೩ ॥ ಮೊದಲು ಭರತೇಶ್ವರನು ಭಕ್ತಿಯಿಂದ ಯಾವ ಶ್ರಾವಕರನ್ನು

ಪೂಜಿಸಿದ್ದನೋ ಅವರು ಬ್ರಾಹ್ಮಣರೆನ್ನಿಸಿಕೊಂಡು ಚಕ್ರವರ್ತಿಯ ಪೂಜೆಯಿಂದ ಬಹಳ ಉದ್ಧತರಾದರು ‖ ೬೪ ‖ ರಾಜ್ಯಭಾರವನ್ನು ಮಾಡಿದ ಮೊದಲನೆಯ ತೀರ್ಥಂಕರರು ಪೃಥ್ವಿಯಲ್ಲಿ ಪ್ರಸಿದ್ಧಗಳಾದ ಇಕ್ಷ್ವಾಕು, ನಾಥ, ಭೋಜ, ಉಗ್ರವಂಶಗಳೆಂಬ ನಾಲ್ಕು ವಂಶಗಳನ್ನು ನಿರ್ಮಿಸಿದರು ‖ ೬೫ ‖ ವ್ರತಿಗಳು ಬ್ರಾಹ್ಮಣರೆಂದೂ ದುಃಖಿತಪ್ರಜೆಗಳನ್ನು ಕಾಪಾಡುವವರು ಕ್ಷತ್ರಿಯರೆಂದೂ ವ್ಯಾಪಾರದಲ್ಲಿ ನಿಪುಣರಾಗಿರುವವರು ವೈಶ್ಯರೆಂದೂ ಸೇವೆಯನ್ನು ಮಾಡುವವರು ಶೂದ್ರರೆಂದೂ ಹೇಳಲ್ಪಟ್ಟರು ‖ ೬೬ ‖ ಭರತ ಚಕ್ರವರ್ತಿಯ ಪುತ್ರನಾದ ಅರ್ಕಕೀರ್ತಿಯಿಂದ ಸೂರ್ಯವಂಶವೂ ಬಾಹುಬಲಿಸ್ವಾಮಿಯ ಪುತ್ರನಾದ ಸೋಮನಿಂದ ಚಂದ್ರವಂಶವೂ ಉಂಟಾದುವು ‖ ೬೭ ‖ ಶ್ರೀ ಪಾರ್ಶ್ವನಾಥತೀರ್ಥಂಕರರ ಶಿಷ್ಯನಾದ ಮೌಂಡಿಲಾಯನನೆಂಬ ತಪಸ್ವಿಯು ಶ್ರೀಮಹಾವೀರರಲ್ಲಿ ಕೋಪಿಸಿಕೊಂಡು ಬುದ್ಧಮತವನ್ನು ಸ್ಥಾಪಿಸಿದನು ‖ ೬೮ ‖ ಆ ಮೌಂಡಿಲಾಯನನು ಶುದ್ಧೋದನನ ಮಗನಾದ ಬುದ್ಧನು ಪತಮಾತ್ಮನೆಂದು ಹೇಳಿದನು. ಕೋಪವೆಂಬ ವೈರಿಯಿಂದ ಪರಾಜಿತಗಳಾದ ಪ್ರಾಣಿಗಳು ಏನನ್ನು ತಾನೆ ಮಾಡುವುದಿಲ್ಲ? ‖ ೬೯ ‖ ಬಲರಾಮನು ಸಹೋದರಮೋಹದಿಂದ ಆರು ತಿಂಗಳ ವರೆಗೆ ಕೃಷ್ಣನ ಶವವನ್ನು ಹೊತ್ತುಕೊಂಡು ತಿರುಗಿದನು. ಆದುದರಿಂದ ಲೋಕದಲ್ಲಿ ಕಂಕಾಲವೆಂಬ ವ್ರತವು ಪ್ರಸಿದ್ಧವಾಯ್ತು ‖ ೭೦ ‖ ಮಿಥ್ಯಾದೃಷ್ಟಿಗಳಾದ ಮನುಷ್ಯರು ಲೆಕ್ಕವಿಲ್ಲದಷ್ಟು ಪಾಷಂಡಮತಗಳನ್ನು ಸ್ಥಾಪಿಸಿದ್ದಾರೆ. ಮಿತ್ರನೆ! ನಿನಗೆ ಎಷ್ಟೆಂದು ಹೇಳಲಿ? ‖ ೭೧ ‖ ದುಃಷಮಾಸುಷಮಾವೆಂಬ ಚತುರ್ಥಕಾಲದಲ್ಲಿ ಬೀಜರೂಪದಿಂದಿದ್ದ ಈ ಪಾಷಂಡ ಮತಗಳು ಬೆಳೆದು ಕಲಿಕಾಲದಲ್ಲಿ ಪೃಥ್ವಿಯಲ್ಲಿ ವಿಸ್ತಾರವನ್ನು ಹೊಂದಿದುವು ‖ ೭೨ ‖ ರಾಗರಹಿತವಾದ ಕೇವಲಜ್ಞಾನವೆಂಬ ಬೆಳಕಿನಿಂದ ಮೂರು ಲೋಕವನ್ನು ಕಾಣುತ್ತಿರುವವನೂ ಸಮಸ್ತದೇವರ್ಕಳಿಂದ ವಂದಿಸಲ್ಪಡುವವನೂ ಪರಮೇಷ್ಠಿಯೂ ಆದ ಜಿನೇಶ್ವರನೇ ದೇವರು ‖ ೭೩ ‖ ಕಾರಣ

ಸಹಿತವಾದ ಮುಕ್ತಿಯನ್ನೂ ಸಂಸಾರವನ್ನೂ ಯಾವ ಆಗಮವು ನಿರೂಪಿಸುವುದೋ ಅದೇ ಸಮಸ್ತ ಬಾಧಕಪ್ರಮಾಣಗಳಿಲ್ಲದಿರುವುದೂ ವಿದ್ವನ್ಮಾನ್ಯವೂ ಆದ ಆಗಮವಾಗಿರುತ್ತದೆ ‖ ೭೪ ‖ ಧರ್ಮವು ಆರ್ಜವ, ಮಾರ್ದವ, ಸತ್ಯ, ತ್ಯಾಗ, ಶೌಚ, ಕ್ಷಮಾ, ತಪ, ಬ್ರಹ್ಮಚರ್ಯ, ಅಪರಿಗ್ರಹ, ಸಂಯಮಗಳೆಂದು ಹತ್ತು ಪ್ರಕಾರವಾಗಿರುತ್ತದೆ ‖ ೭೫ ‖ ಬಾಹ್ಯಾಭ್ಯಂತರ ಪರಿಗ್ರಹಗಳನ್ನು ತ್ಯಜಿಸಿದವನೂ ಕ್ರೋಧಾಹಂಕಾರಾದಿ ಕಷಾಯಭಾವಗಳಿಲ್ಲದವನೂ ಜಿತೇಂದ್ರಿಯನೂ ಕ್ಷುಧಾತೃಷಾದಿ ಪರೀಷಹಗಳನ್ನು ಜಯಿಸುವವನೂ ಆದ ಸಾಧುವು ಜಾತರೂಪಧರನೆಂದು ತಿಳಿಯಲ್ಪಡುತ್ತಾನೆ. ಅವನೇ ನಿಜವಾದ ಗುರು ‖ ೭೬ ‖ ಮೋಕ್ಷವೆಂಬ ನಗರಕ್ಕೆ ಬಾಗಿಲಿನಂತಿರುವುದೂ ಸಂಸಾರವೆಂಬ ಅಗ್ನಿಗೆ ನೀರಿನಂತಿರುವುದೂ ಆದ ಈ ಮೇಲೆ ಹೇಳಲ್ಪಟ್ಟ ನಾಲ್ಕು ಯಾವಾಗಲೂ ಆತ್ಮಸಿದ್ಧಿಗೆ ಕಾರಣವಾಗಿರುತ್ತವೆಂದು ತಿಳಿಯಬೇಕು ‖ ೭೭ ‖ ಸಮ್ಯಕ್ತ್ವ, ಜ್ಞಾನ. ಚಾರಿತ್ರ, ತಪಸ್ಸುಗಳೆಂಬ ಮಾಣಿಕ್ಯರತ್ನಗಳನ್ನು ಕೊಡುವ ಈ ದೇವ ಗುರು ಧರ್ಮಾಗಮಗಳಲ್ಲದೆ ಮುಕ್ತಿಗೆ ಬೇರೆ ಸಾಧನವಿಲ್ಲ ‖ ೭೮ ‖ ಎಲೈ ಮಿತ್ರನೆ ! ಸಂಸಾರವೆಂಬ ಸಮುದ್ರದಲ್ಲಿ ತಿರುಗುವ ಪ್ರಾಣಿಯು ಎಲ್ಲಾ ಲಾಭಗಳನ್ನು ಪಡೆದಿದೆ. ಆದರೆ ಪ್ರಾಣಿಗಳಿಗೆ ಮೇಲೆ ಹೇಳಲ್ಪಟ್ಟ ನಿಜವಾದ ದೇವ ಗುರು ಧರ್ಮಾಗಮಗಳಲ್ಲೊಂದೂ ದೊರೆಯಲಿಲ್ಲ ‖ ೭೯ ‖ ಪ್ರಾಣಿಗಳಿಗೆ ಉತ್ತಮವಾದ ದೇಶ, ಜಾತಿ. ಕುಲ, ಸೌಂದರ್ಯ, ಇಂದ್ರಿಯಪೂರ್ಣತೆ, ಆರೋಗ್ಯ, ದೀರ್ಘಾಯುಷ್ಯ, ಉಪದೇಶಶ್ರವಣ, ಉಪದೇಶಗ್ರಹಣ ಇವುಗಳಲ್ಲಿ ಒಂದು ದೊರೆತರೆ ಮತ್ತೊಂದು ಉತ್ತರೋತ್ತರವಾಗಿ ದೊರೆಯುವುದು ದುರ್ಲಭ ‖ ೮೦ ‖ ಈ ಉತ್ತಮ ದೇಶ ಜಾತಿ ಕುಲಾದಿಗಳು ದೊರೆತರೂ ಜನ್ಮವೆಂಬ ವೃಕ್ಷಕ್ಕೆ ಕೊಡಲಿಯಂತಿರುವುದೂ ಮೋಕ್ಷವೆಂಬ ಉಪ್ಪರಿಗೆಗೆ ಪ್ರವೇಶಮಾಡಿಸುವುದೂ ಆದ ಬೋಧಿ_ರತ್ನತ್ರಯವು ಕಷ್ಟದಿಂದ ದೊರೆಯುವುದು ‖ ೮೧ ‖ ಬೇರೆಕಡೆಯಲ್ಲಿ ದೊರೆಯುವ ಮುತ್ತೆಲ್ಲವೂ ಸಮುದ್ರದಲ್ಲುಂಟಾಗಿರುವಂತೆ ಬೇರೆಯವರ ಆಗ

ಮಗಳಲ್ಲಿ ದೊರೆಯುವ ಒಳ್ಳೆಯ ವಾಕ್ಯವೆಲ್ಲವೂ ಜೈನಾಗಮದ್ದಾಗಿರುತ್ತದೆ ॥ ೮೨ ॥ ದುರ್ಭೇದ್ಯವಾದ ರಾತ್ರಿಯ ಕತ್ತಲೆಯನ್ನು ಸೂರ್ಯನೇ ಭೇದಿಸುವಂತೆ ಪಾಪವನ್ನು ಜಿನೇಶ್ವರವಚನವಲ್ಲದೆ ಬೇರೆಯವರ ವಚನವು ನಾಶ ಮಾಡಲಾರದು ॥ ೮೩ ॥ ಹಾತೆ-ಹುಳಗಳು ಪೈರನ್ನು ನಾಶಮಾಡುವಂತೆ ಇತರ ಧರ್ಮಗಳು ಮೊತ್ತಮೊದಲನೆಯದೂ ಪೂಜ್ಯವೂ ಆದ ಜಿನೇಶ್ವರಧರ್ಮವನ್ನು ನಾಶಮಾಡುವುವುಗಳಾಗಿವೆ ॥ ೮೪ ॥ ವಜ್ರಾಯುಧವು ಪರ್ವತವನ್ನು ಭೇದಿಸುವಂತೆ, ಮನೋವೇಗನ ವಚನವು ಪವನವೇಗನ ದುರ್ಭೇದ್ಯವಾದ ಮಿಥ್ಯಾತ್ವವೆಂಬ ಗಂಟನ್ನು ಸಂಪೂರ್ಣವಾಗಿ ಶೀಘ್ರವಾಗಿ ಭೇದಿಸಿತು ॥ ೮೫ ॥ ಪವನವೇಗನು ತನ್ನಲ್ಲಿದ್ದ ಮಿಥ್ಯಾತ್ವವೆಂಬ ಪರ್ವತವು ಭೇದಿಸಲ್ಪಟ್ಟನಂತರ ಹೇಳಿರುವ ಮಾತುಗಳಿವು –

" ಎಲೈ ಮಿತ್ರನೆ ! ದುಷ್ಟಬುದ್ಧಿಯುಳ್ಳ ನಾನು ನನ್ನ ಜನ್ಮವನ್ನು ಹಾಳು ಮಾಡಿಕೊಂಡೆನು. ಹಾ ! ॥ ೮೬ ॥ ಮಂದಬುದ್ಧಿಯುಳ್ಳ ನಾನು ನಿನ್ನ ಮಾತನ್ನು ನಿರಾಕರಿಸಿ ಜಿನವಚನವೆಂಬ ರತ್ನವನ್ನು ತ್ಯಜಿಸಿ ಬೇರೆಯವರ ವಚನವೆಂಬ ಮಣ್ಣಹೆಂಟೆಯನ್ನು ತೆಗೆದುಕೊಂಡೆನು. ಹಾ ! ॥ ೮೭ ॥ ಮಿಥ್ಯಾತ್ವವೆಂಬ ವಿಷವನ್ನು ಪಾನಮಾಡಿದ್ದ ನಾನು ಎಲ್ಲವೂ ಭ್ರಾಂತವಾದುದೆಂದು ತಿಳಿದು ನೀನು ಕೊಟ್ಟಿರುವ ಜಿನೇಶ್ವರವಚನವೆಂಬ ಅಮೃತವನ್ನು ಪಾನಮಾಡಲಿಲ್ಲ ॥ ೮೮ ॥ ನಿರ್ದುಷ್ಟವಾದ ಸಮ್ಯಕ್ತ್ವವೆಂಬ ಅಮೃತವನ್ನು ಬಿಟ್ಟು ಜನ್ಮಜರಾಮರಣಗಳನ್ನು ಕೊಡುವುದೂ ಮಹಾಭ್ರಮೆಯನ್ನುಂಟುಮಾಡುವುದೂ ಆದ ದುರಂತಮಿಥ್ಯಾತ್ವವೆಂಬ ವಿಷವನ್ನು, ನೀನು ಅಡ್ಡಿ ಮಾಡಿದರೂ, ನಾನು ಯಾವಾಗಲೂ ಕುಡಿದೆನು ॥ ೮೯ ॥ ಮಿತ್ರನೆ ! ನೀನು ಭವವೆಂಬ ಕತ್ತಲೆಬಾವಿಯಲ್ಲಿ ಬೀಳುತ್ತಿರುವ ನನ್ನನ್ನು ಉತ್ತಮವಾಕ್ಯಗಳೆಂಬ ಹಗ್ಗಗಳಿಂದ ಕಟ್ಟಿ ಮೇಲಕ್ಕೆತ್ತಿರುವುದರಿಂದ ನನಗೆ ಬಂಧುವೂ ತಂದೆಯೂ ಹಿತವನ್ನು ಮಾಡುವ ಗುರುವೂ ನೀನೆ ॥ ೯೦ ॥ ನೀನು ಜಿನೇಶ್ವರ

ನಿಂದ ಹೇಳಲ್ಪಟ್ಟ ವಾಕ್ಯವನ್ನು ತೋರಿಸಿ ನನ್ನನ್ನು ತಡೆಯದಿದ್ದರೆ ಬಹು ದುಃಖಗಳೆಂಬ ವೃಕ್ಷಗಳುಳ್ಳ ಭವವೆಂಬ ಅರಣ್ಯದಲ್ಲಿ ಬಹುಕಾಲದವರೆಗೆ ತಿರುಗುತ್ತಿದ್ದೆನು. ಅದರ ಪಾರವನ್ನು ಹೊಂದುವುದು ಕಷ್ಟವಾಗಿತ್ತು ॥ ೯೧ ॥ ಮಿಥ್ಯಾತ್ವ ಸಮ್ಯಙ್ಮಿಥ್ಯಾತ್ವ ಸಮ್ಯಕ್ತ್ವಪ್ರಕೃತಿಗಳೆಂಬ ತ್ರಿವಿಧಮಿಥ್ಯಾತ್ವಗಳಿಂದ ವ್ಯಾಪ್ತನೂ ದುರಂತವಾದ ಬೇರೆಯವರ ವಾಕ್ಯವೆಂಬ ರಾತ್ರಿಯನ್ನು ಹೊಂದಿರುವವನೂ ಆದ ನನ್ನನ್ನು ನೀನು ಮೋಹವೆಂಬ ಕತ್ತಲೆಯನ್ನು ನಾಶಮಾಡುವ ಜಿನೇಶ್ವರನೆಂಬ ಸೂರ್ಯನ ವಚನಗಳೆಂಬ ಉಜ್ಜ್ವಲಕಿರಣಗಳಿಂದ ಎಚ್ಚರಗೊಳಿಸಿದೆ ॥ ೯೨ ॥ ನಾನು ಜಿನೇಶ್ವರರಿಂದ ಉಪದೇಶಿಸಲ್ಪಟ್ಟುದೂ ನಿರಾಕುಲವೂ ಮೋಕ್ಷನಗರಕ್ಕೆ ಪ್ರವೇಶಮಾಡಿಸುವುದೂ ಆದ ಮಾರ್ಗವನ್ನು ಬಿಟ್ಟು ದುಷ್ಟರಿಂದ ತೋರಿಲ್ಪಟ್ಟುದೂ ಮಹಾಭಯವುಳ್ಳುದೂ ನರಕಾವಾಸಕ್ಕೊಯ್ಯುವುದೂ ಆದ ಮಾರ್ಗದಲ್ಲಿ ಬಹುಕಾಲದವರೆಗೆ ನಡೆದೆನು ॥ ೯೩ ॥ ಜೀವನಿಗೆ ಮನೆಯೂ ಹೆಂಡತಿಮಕ್ಕಳೂ ಕಾಲಾಳುಗಳೂ ಬಂಧುಗಳೂ ಪಟ್ಟಣವೂ ಗಣಿಗಳೂ ಗ್ರಾಮವೂ ರಾಜಸಂಪತ್ತಿಯೂ ಪದೇ ಪದೇ ದೊರೆಯುವುವು. ಆದರೆ ವಿಧ್ವಸ್ತಾನ್ಯವೂ ನಿರ್ಮಲವೂ ಆದ ತತ್ತ್ವಪ್ರೀತಿಯುಂಟಾಗುವುದಿಲ್ಲ ॥ ೯೪ ॥ ಮಿಥ್ಯಾತ್ವದಿಂದ ದೂಷಿತನಾದ ಬುದ್ಧಿಹೀನನು ಬೇರೆಯವರು ತೋರಿಸುವ ವಿಷಯಗಳನ್ನೆಲ್ಲ ವಿಪರೀತವಾಗಿ ತಿಳಿಯುತ್ತಾನೆ. ನೀನು ನನಗೆ ಅಲಭ್ಯವೂ ಪ್ರಕಾಶಮಾನವೂ ಆದ ಸಮ್ಯಕ್ತ್ವವನ್ನು ಕೊಟ್ಟು ಈ ಮಿಥ್ಯಾತ್ವವನ್ನು ಹೋಗಲಾಡಿಸಿದೆ ॥ ೯೫ ॥ ಮಹಾಮತಿಯೆ ! ನಾನು ಮಿಥ್ಯಾತ್ವವೆಂಬ ವಿಷವನ್ನು ತೊರೆದು ಮನೋವಾಕ್ಕಾಯಗಳಿಂದ ಜಿನಶಾಸನವನ್ನು ಗ್ರಹಣಮಾಡಿದೆನು. ಈಗ ನಾನು ನಿನ್ನ ಅನುಗ್ರಹದಿಂದ ವ್ರತಗಳೆಂಬ ರತ್ನಗಳಿಂದ ಭೂಷಿತನಾಗುವಂತೆ ಮಾಡು" ॥ ೯೬ ॥

ಈ ಮನೋವೇಗನು ಮಿಥ್ಯಾತ್ವವೆಂಬ ವಿಷವನ್ನು ತ್ಯಜಿಸಿದ ಮಿತ್ರನ ಮಾತನ್ನು ಕೇಳಿ ಸಂತೋಷವನ್ನು ಹೊಂದಿದನು. ಜನರ ಇಷ್ಟಾರ್ಥವ

ಸಿದ್ಧಿಯಾದರೆ ಯಾರಿಗೆ ತಾನೆ ಶೀಘ್ರವಾಗಿ ಸಂತೋಷವಾಗುವುದಿಲ್ಲ ? ॥ ೯೭ ॥ ಈ ಮನೋವೇಗನು ಬೇರೆ ಯೋಚನೆಯಿಲ್ಲದಿರುವವನಾಗಿ ಜಿನ ವಾಕ್ಯದಿಂದ ಸಂಸ್ಕೃತನಾದ ಮಿತ್ರನನ್ನು ಕರೆದುಕೊಂಡು ಶೀಘ್ರವಾಗಿ ಉಜ್ಜಯಿನಿಗೆ ಹೋಗುವುದಕ್ಕೆ ಹೊರಟನು. ಮಿತ್ರರ ಪ್ರಯೋಜನವಿಷಯದಲ್ಲಿ ಯಾವನು ತಾನೆ ಉದಾಸೀನನಾಗಿರುತ್ತಾನೆ ? ॥ ೯೮ ॥ ಬಳಿಕ ಆ ಮನೋವೇಗ ಪವನವೇಗರು ಕತ್ತಲೆಯನ್ನು ದೂರಮಾಡುವ ಆಭರಣಗಳಿಂದ ಭೂಷಿತರಾಗಿ ಮನಸ್ಸಿನಂತೆ ವೇಗವುಳ್ಳ ವಿಮಾನವನ್ನೇರಿ ಸಂತೋಷದಿಂದ, ಸ್ವರ್ಗದ ಇಂದ್ರೋಪೇಂದ್ರರು ನಂದನವನಕ್ಕೆ ಹೋಗುವಂತೆ, ಉಜ್ಜಯಿನೀ ನಗರದ ವನಕ್ಕೆ ಹೋದರು ॥ ೯೯ ॥ ಆ ಮನೋವೇಗ ಪವನವೇಗರು ತಡೆಯುವುದಕ್ಕೆ ಕಷ್ಟವೂ ಭಯಂಕರವೂ ಮನವೆಂಬ ಮನೆಯೊಳಗಿರುವುದೂ ಆದ ಮೂಢಜನರ ಮೋಹವೆಂಬ ಕತ್ತಲೆಯನ್ನು ತನ್ನ ವಾಕ್ಯಗಳೆಂಬ ಕಿರಣಗಳಿಂದ ನಾಶಮಾಡಲು ಸಮರ್ಥನೂ ಅಪರಿಮಿತವಾದ ಗಮನವುಳ್ಳ ಬುದ್ಧಿಯುಳ್ಳವನೂ ಆದ ಕೇವಲಿಯೆಂಬ ಸೂರ್ಯನನ್ನು ಭಕ್ತಿಯಿಂದ ಸ್ತುತಿಸಿ ನಮಸ್ಕರಿಸಿ ಬಳಿಕ ಜಿನಮತಿಯೆಂಬ ಯತಿಯ ಪಾದಸಮೀಪದಲ್ಲಿ ಕುಳಿತುಕೊಂಡರು ॥ ೧೦೦ ॥

ಇಂತು ಅಮಿತಗತ್ಯಾಚಾರ್ಯ ವಿರಚಿತ ಧರ್ಮಪರೀಕ್ಷಾಷ್ಟಾದಶಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

ಬಳಿಕ ಜಿನಮತಿಯೋಗಿಯು ಮನೋವೇಗನನ್ನು ಕುರಿತು "ಅಯ್ಯಾ ! ಯಾವನಿಗೆ ಸಂಸಾರವೆಂಬ ಸಮುದ್ರವನ್ನು ದಾಂಟಿಸುವ ಧರ್ಮವನ್ನು ಹೊಂದಿಸುವುದಕ್ಕಾಗಿ ನೀನು ಬಹು ಪ್ರೀತಿಯಿಂದ ಕೇವಲಿಯನ್ನು ಪ್ರಶ್ನೆ ಮಾಡಿದೆಯೋ ನಿನ್ನ ಮನಃಪ್ರಿಯನಾದ ಆ ಪವನವೇಗ—ಮಿತ್ರನು ಇವ

ನೆಯೋ ? " ಎಂದು ಮಾತನಾಡಿದನು ॥ ೧-೨ ॥ ಆ ಮೇಲೆ ಮನೋವೇಗನು ಕೈಗಳನ್ನು ತಲೆಯ ಮೇಲಿಟ್ಟು " ಸಾಧುವೆ! ಇದು ನಿಜ. ಈ ಪವನವೇಗನು ವ್ರತಗಳನ್ನು ಗ್ರಹಣಮಾಡಬೇಕೆಂಬ ಇಚ್ಛೆಯಿಂದ ಬಂದಿದ್ದಾನೆ ॥ ೩ ॥ ಸಾಧುವೆ ! ನಾನು ಇವನನ್ನು ಪಾಟಲೀಪುರಕ್ಕೆ ಕರೆದುಕೊಂಡು ಹೋಗಿ ವಿವಿಧದೃಷ್ಟಾಂತಗಳಿಂದ ಇವನಿಗೆ ಮುಕ್ತಿಯೆಂಬ ಮಂದಿರವನ್ನು ಪ್ರವೇಶಮಾಡಿಸುವ ಸಮ್ಯಕ್ತ್ವವನ್ನು ಗ್ರಹಣಮಾಡಿಸಿದೆನು ॥ ೪ ॥ ಸಾಧುವೆ ! ಈಗ ಇವನು ಮಿಥ್ಯಾತ್ವವನ್ನು ದೂರಮಾಡಿ ವ್ರತಗಳೆಂಬ ಆಭರಣಗಳಿಂದ ಭೂಷಿತನಾದ ಭವ್ಯನಾಗುವಂತೆ ಮಾಡು " ಎಂದು ಹೇಳಿದನು ॥ ೫ ॥ ತರುವಾಯ ಆ ಜಿನಮತಿಯತಿಯು ಪವನವೇಗನನ್ನು ಕುರಿತು " ಅಯ್ಯಾ ! ನೀನು ದೇವಸಾಕ್ಷಿ ಆತ್ಮಸಾಕ್ಷಿ ಗುರುಸಾಕ್ಷಿಯಾಗಿ ಸಮ್ಯಕ್ತ್ವಪೂರ್ವಕವಾದ ಶ್ರಾವಕವ್ರತವನ್ನು ಗ್ರಹಣಮಾಡು. ವ್ಯವಹಾರಿಜನರಂತೆ ಸಾಕ್ಷಿಗಳನ್ನಿಟ್ಟುಕೊಂಡು ವ್ರತಗಳನ್ನು ಗ್ರಹಣಮಾಡುವವನು ವ್ರತಭ್ರಷ್ಟನಾಗುವುದಿಲ್ಲವಾದುದರಿಂದ ಸಾಕ್ಷಿಸಹಿತವಾಗಿ ಶ್ರಾವಕವ್ರತವನ್ನು ಸ್ವೀಕರಿಸು. ನೀರಿಲ್ಲದಿದ್ದರೆ ಗದ್ದೆಗಳಲ್ಲಿ ಪೈರು ಫಲಗಳನ್ನು ಬಿಡದಿರುವಂತೆ ಸಮ್ಯಕ್ತ್ವವಿಲ್ಲದಿದ್ದರೆ ಜೀವಗಳಲ್ಲಿ ವ್ರತವು ಸಫಲವಾಗುವುದಿಲ್ಲ ॥ ೬-೮ ॥ ಪಾಯವನ್ನು ತೆಗೆದು ತುಂಬಿದ ಪ್ರದೇಶದಲ್ಲಿ ದೇವಾಲಯವು ದೃಢವಾಗುವಂತೆ, ಸಮ್ಯಕ್ತ್ವಸಹಿತವಾದ ಜೀವದಲ್ಲಿ ದುರ್ಧರವಾದ ವ್ರತವು ದೃಢವಾಗುವುದು ॥ ೯ ॥ ಜಿನೇಶ್ವರನಿಂದ ಹೇಳಲ್ಪಟ್ಟ ಜೀವಾಜೀವ ಮೊದಲಾದ ತತ್ತ್ವಗಳ ನಂಬಿಕೆಯು ವ್ರತಕ್ಕೆ ಪರಿಪೋಷಕವಾದ ಸಮ್ಯಕ್ತ್ವವೆಂದು ಸತ್ಪುರುಷರು ಹೇಳುತ್ತಾರೆ ॥ ೧೦ ॥ ಶಂಕಾ ಕಾಂಕ್ಷಾ ಮೊದಲಾದ ದೋಷಗಳಿಂದ ರಹಿತವೂ ಸಂವೇಗ ಮೊದಲಾದ ಗುಣಗಳಿಂದ ಸಹಿತವೂ ಪವಿತ್ರವೂ ಆದ ಸಮ್ಯಗ್ದರ್ಶನವನ್ನು ಧರಿಸಿರುವವನ ವ್ರತವು ಸಫಲವಾಗುವುದು ॥ ೧೧ ॥ ಐದು ಪ್ರಕಾರವಾದ ಅಣುವ್ರತಗಳೂ ಮೂರು ಪ್ರಕಾರವಾದ ಗುಣವ್ರತಗಳೂ ನಾಲ್ಕು ಪ್ರಕಾರವಾದ ಶಿಕ್ಷಾವ್ರತಗಳೂ ಸೇರಿ ವ್ರತವು

ಹನ್ನೆರಡು ಪ್ರಕಾರವಾಗಿರುತ್ತದೆ ॥ ೧೨ ॥ ಅಹಿಂಸಾ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹ ಇವುಗಳನ್ನು ಏಕದೇಶವಾಗಿ ಪರಿಪಾಲಿಸುವ ಶ್ರಾವಕನಿಗೆ ಇವು ಐದು ಅಣುವ್ರತಗಳಾಗಿರುತ್ತವೆ ॥ ೧೩ ॥ ಮಗುವೆ ! ವ್ರತವನ್ನು ಗ್ರಹಣಮಾಡುವುದು ಸುಲಭ. ಅದನ್ನು ಪರಿಪಾಲಿಸುವುದು ಕಷ್ಟ. ಬಿದಿರನ್ನು ಕತ್ತರಿಸುವುದು ಸುಲಭ. ಅದನ್ನು ಉಜ್ಜುವುದು ಕಷ್ಟ ॥ ೧೪ ॥ ವ್ರತವನ್ನು ತೆಗೆದುಕೊಂಡು, ಮನೋವಾಂಛಿತಸುಖಕ್ಕೆ ಕಾರಣವಾದ ನಿಧಿ-ನಿಕ್ಷೇಪವನ್ನು ಮನೆಯೊಳಗಿರಿಸುವಂತೆ, ಯಾವಾಗಲೂ ಹೃದಯದಲ್ಲಿರಿಸಿ ಕಾಪಾಡಬೇಕು ॥ ೧೫ ॥ ಸಮುದ್ರದಲ್ಲಿ ಬಿದ್ದುಹೋದ ದಿವ್ಯವಾದ ರತ್ನವು ಮತ್ತೆ ದೊರೆಯದಿರುವಂತೆ, ಭವದಲ್ಲಿ ಅಜಾಗರೂಕತೆಯಿಂದ ವ್ರತವು ನಷ್ಟವಾದರೆ ಮತ್ತೆ ಅದು ದೊರೆಯುವುದಿಲ್ಲ ॥ ೧೬ ॥ ತ್ರಸಜೀವಗಳೆಂದೂ ಸ್ಥಾವರ ಜೀವಗಳೆಂದೂ ಜೀವಗಳು ಎರಡು ಪ್ರಕಾರವಾಗಿರುತ್ತವೆ. ಅವುಗಳಲ್ಲಿ ವ್ರತವನ್ನು ಬಯಸುವ ಗೃಹಸ್ಥನು ತ್ರಸಜೀವಗಳನ್ನು ಕಾಪಾಡಬೇಕು ॥ ೧೭ ॥ ಆತ್ಮಹಿತವನ್ನು ಬಯಸುವವರು ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯಗಳೆಂದು ನಾಲ್ಕು ವಿಧವಾದ ತ್ರಸಜೀವಗಳನ್ನು ತಿಳಿದು ರಕ್ಷಿಸಬೇಕು ॥ ೧೮ ॥ ಆರಂಭಹಿಂಸೆಯೆಂದೂ ಅನಾರಂಭಹಿಂಸೆಯೆಂದೂ ಹಿಂಸೆಯು ಎರಡು ಪ್ರಕಾರವಾಗಿರುತ್ತದೆ, ಗೃಹತ್ಯಾಗಿಯಾದ ಯತಿಯು ಎರಡು ಪ್ರಕಾರವಾದ ಹಿಂಸೆಯನ್ನೂ ಬಿಡುತ್ತಾನೆ, ಗೃಹಸ್ಥನಾದ ಶ್ರಾವಕನಾದರೋ ಅನಾರಂಭಹಿಂಸೆಯನ್ನು ಮಾತ್ರ ಬಿಡುತ್ತಾನೆ. ಆರಂಭಹಿಂಸೆಯನ್ನು ಬಿಡಲಾರನು ॥ ೧೯ ॥ ಕರುಣೆಗೆ ಆಧಾರರೂ ಮೋಕ್ಷವನ್ನು ಬಯಸುವವರೂ ಆದ ಶ್ರಾವಕರು ನಿಷ್ಪ್ರಯೋಜನವಾಗಿ ಸ್ಥಾವರಜೀವಗಳ ಹಿಂಸೆಯನ್ನೂ ಮಾಡಬಾರದು ॥ ೨೦ ॥ ದೇವತಾ ಅತಿಥಿ ಔಷಧಿ ಪಿತೃಯಜ್ಞ ಮಂತ್ರ ಮೊದಲಾದ ಯಾವ ಕಾರಣದಿಂದಲೂ ಯಾವ ಪ್ರಾಣಿಗಳನ್ನೂ ಕೊಲ್ಲಬಾರದು ॥ ೨೧ ॥ ಕಟ್ಟಿಹಾಕುವುದು, ಅವಯವಗಳನ್ನು ಕತ್ತರಿಸುವುದು, ಹೊಡೆಯುವುದು. ಹೆಚ್ಚು ಹೊರೆಯನ್ನು ಹೊರಿಸು

ವುದು, ಆಹಾರವನ್ನು ಕೊಡದಿರುವುದು ಇವು ಐದು ಅಹಿಂಸಾಣುವ್ರತಕ್ಕೆ ಅತಿಚಾರಗಳಾಗಿರುತ್ತವೆ. ಇವುಗಳನ್ನು ತ್ಯಜಿಸುವುದರಿಂದ ಅಹಿಂಸಾಣು ವ್ರತವು ಸ್ಥಿರವಾಗುವುದು ॥ ೨೨ ॥ ಜಿಹ್ವೇಂದ್ರಿಯವಶೀಭೂತನಾಗಿ ಮನುಷ್ಯನು ಮಾಂಸಭಕ್ಷಣದ ಲೋಲುಪತೆಯಿಂದ ಭಯಭೀತಗಳಾದ ಜೀವಗಳ ಪ್ರಾಣಗಳನ್ನು ಘಾತಮಾಡಬಾರದು ॥ ೨೩ ॥ ತನ್ನ ದೇಹಪುಷ್ಟಿಗೋಸ್ಕರ ಮಾಂಸವನ್ನು ಭಕ್ಷಿಸುವ ಕ್ರೂರಮನುಷ್ಯನನ್ನು ಅನಂತದುಃಖಮಯವಾದ ನರಕದಿಂದ ಪಾರಮಾಡುವವನು ಯಾವನೂ ಇಲ್ಲ ॥ ೨೪ ॥ ಮಾಂಸಭಕ್ಷಕನಿಗೆ ದಯೆಯಿಲ್ಲ. ದಯೆಯಿಲ್ಲದವನಲ್ಲಿ ಧರ್ಮವೆಲ್ಲಿರುವುದು ? ಧರ್ಮವಿಲ್ಲದವನು ಬಹುದು:ಖಮಯವಾದ ಏಳನೆಯ ನರಕವನ್ನು ಹೊಂದುವನು ॥ ೨೫ ॥ ಪ್ರಾಣಿಹಿಂಸೆಯನ್ನು ನೋಡುವುದಕ್ಕೂ ಮುಟ್ಟುವುದಕ್ಕೂ ಬಯಸುವವನೂ ನರಕವನ್ನು ಹೊಂದುತ್ತಾನೆಂದ ಮೇಲೆ ಹಿಂಸಕನು ನರಕವನ್ನು ಹೊಂದುವುದಿಲ್ಲವೇ ? ॥ ೨೬ ॥ ಮಾಂಸಭಕ್ಷಣೆಯ ಲೋಲುಪತೆಯಿಂದ ಸಾಯುವವರೆಗೂ ಪ್ರಾಣಿಹಿಂಸೆಯನ್ನು ಮಾಡುವವನು ನರಕಕೂಪದಿಂದ ಎಂದೂ ಹೊರಡುವುದು ಕಾಣುವುದಿಲ್ಲ ॥ ೨೭ ॥ ಪ್ರಾಣಿಹಿಂಸೆಯಲ್ಲಿಯೂ ಮಾಂಸಭಕ್ಷಣದಲ್ಲಿಯೂ ಆಸಕ್ತನಾದ ಮನುಷ್ಯನನ್ನು ನರಕದಲ್ಲಿ ನಾರಕಿಗಳು ಕಬ್ಬಿಣದ ಶಲಾಕೆಗಳಿಂದ ಸೀಳುತ್ತಾರೆ, ಬಲಾತ್ಕಾರದಿಂದ ವಜ್ರದ ಬೆಂಕಿಯಲ್ಲಿ ಎಸೆಯುತ್ತಾರೆ ॥ ೨೮ ॥ ಮಾಂಸಭಕ್ಷಕನಿಗೆ ಪ್ರಾಣಗಳನ್ನು ನೋಡಿ, ಸಿಂಹದಂತೆ, ಅವುಗಳನ್ನು ಕೊಲ್ಲುವುದಕ್ಕೆ ಬುದ್ಧಿಯುಂಟಾಗುತ್ತದೆ. ಆದುದರಿಂದ ಪ್ರಾಜ್ಞರು ಮಾಂಸವನ್ನು ತ್ಯಜಿಸಬೇಕು ॥ ೨೯ ॥ ಉತ್ತಮ ಭೋಗವಸ್ತುಗಳಿದ್ದರೂ ಮಾಂಸವನ್ನು ಭಕ್ಷಿಸುವ ಅಧಮರು ಬಹು ದು:ಖಮಯವಾದ ನರಕಗಳಿಂದ ನಿಜವಾಗಿಯೂ ಹೊರಡುವುದಕ್ಕೆ ಬಯಸುವುದಿಲ್ಲ ॥ ೩೦ ॥ ಮಾಂಸಭಕ್ಷಕನಿಗೂ ನಾಯಿಗಳಿಗೂ ಭೇದವೇನೂ ತೋರುವುದಿಲ್ಲ. ಆದುದರಿಂದ ಆತ್ಮಹಿತಕಾಂಕ್ಷಿಗಳು, ಕಾಲಕೂಟವಿಷವನ್ನು ತ್ಯಜಿಸುವಂತೆ, ಮಾಂಸವನ್ನು ತ್ಯಜಿಸಬೇಕು ॥ ೩೧ ॥

ಕಾಡುಗಿಚ್ಚು ಬಳ್ಳಿಯನ್ನು ನಾಶಮಾಡುವಂತೆ ಮದ್ಯವು ಮಾನ--ಮರ್ಯಾದೆಯನ್ನು ನಾಶಮಾಡುವುದು. ಧರ್ಮಕಾಮಾರ್ಥಗಳನ್ನು ನಾಶಮಾಡುವ ಮದ್ಯವನ್ನು ಮನೋವಾಕ್ಕಾಯಗಳಿಂದ ತ್ಯಜಿಸಬೇಕು ‖ ೩೨ ‖ ಮದ್ಯಪಾನವನ್ನು ಮಾಡಿದ ಮನುಷ್ಯನು ತನ್ನ ತಾಯಿಯನ್ನೂ ಮಗಳನ್ನೂ ಭೋಗಿಸುವುದಕ್ಕೂ ಬಯಸುತ್ತಾನೆ. ಆದುದರಿಂದ ಮದ್ಯಕ್ಕಿಂತಲೂ ನಿಂದ್ಯವೂ ದುಃಖವನ್ನುಂಟುಮಾಡುವುದೂ ಆದ ವಸ್ತುವು ಮತ್ತೊಂದಿಲ್ಲ ‖ ೩೩ ‖ ಮದ್ಯಪಾನವನ್ನು ಮಾಡಿ ಮೂರ್ಛಿತನಾಗಿ ದಾರಿಯಲ್ಲಿ ಬಿದ್ದಿರುವವನ ಬಾಯಿಗೆ ನಾಯಿಗಳು ಮೂತ್ರಿಸುತ್ತವೆ. ಅವನ ವಸ್ತ್ರವನ್ನು ಕಳ್ಳರು ಕದಿಯುತ್ತಾರೆ ‖ ೩೪ ‖ ಬೆಂಕಿಯಿಂದ ಮರಗಳು ನಾಶವಾಗುವಂತೆ. ಮದ್ಯದಿಂದ ವಿವೇಕ, ಸಂಯಮ, ಕ್ಷಮೆ, ಸತ್ಯ. ಶುಚಿತ್ವ, ದಯೆ, ದಮ ಮೊದಲಾದ ಎಲ್ಲಾ ಗುಣಗಳು ನಾಶವಾಗುತ್ತವೆ ‖ ೩೫ ‖ ಮದ್ಯಕ್ಕಿಂತ ಬೇರೆ ಕಷ್ಟವಿಲ್ಲ, ಮದ್ಯಕ್ಕಿಂತ ಬೇರೆ ಅಂಧಕಾರವಿಲ್ಲ. ಮದ್ಯಕ್ಕಿಂತ ಬೇರೆ ನಿಂದ್ಯವಸ್ತುವಿಲ್ಲ. ಮದ್ಯಕ್ಕಿಂತ ಬೇರೆ ವಿಷವಿಲ್ಲ ‖ ೩೬ ‖ ಮದ್ಯಪಾನವನ್ನು ಮಾಡಿದವನು ಇದಿರು ಸಿಕ್ಕಿದವರಿಗೆಲ್ಲ ನಮಸ್ಕಾರ ಮಾಡುತ್ತಾನೆ. ಅಳುತ್ತಾನೆ, ತಿರುಗುತ್ತಾನೆ, ಹೊಗಳುತ್ತಾನೆ, ಕೂಗುತ್ತಾನೆ, ಹಾಡುತ್ತಾನೆ ಮತ್ತು ಕುಣಿಯುತ್ತಾನೆ ‖ ೩೭ ‖ ರೋಗಗಳಿಗೆ ಅಪಥ್ಯವಸ್ತುವಿನಂತೆ ಎಲ್ಲಾ ದೋಷಗಳಿಗೆ ಮದ್ಯವು ಮೂಲಕಾರಣವಾಗಿರುವುದು, ಆದುದರಿಂದ ಮದ್ಯವನ್ನು ಯಾವಾಗಲೂ ತ್ಯಜಿಸಬೇಕು ‖ ೩೮ ‖

ಅನೇಕ ಜೀವಗಳ ವಧೆಯಿಂದುಂಟಾಗುವುದೂ ಮ್ಲೇಚ್ಛಜನರ ಎಂಜಲು- ಜೊಲ್ಲಿನಿಂದ ಬೆರೆದಿರುವುದೂ ಪಾಪವನ್ನುಂಟುಮಾಡುವುದೂ ಆದ ಜೇನುತುಪ್ಪವನ್ನು ದಯಾಳುಗಳು ತಿನ್ನುವುದಿಲ್ಲ-ಮನೋವಾಕ್ಕಾಯಗಳಿಂದ ಅದನ್ನು ತ್ಯಜಿಸುತ್ತಾರೆ ‖ ೩೯ ‖ ವಿಚಿತ್ರಪ್ರಾಣಗಳಿಂದ ನಿಬಿಡವಾದ ಏಳು ಗ್ರಾಮಗಳನ್ನು ಸುಟ್ಟರೆ ಎಷ್ಟು ಪಾಪವುಂಟಾಗುವುದೋ ಒಂದು ತೊಟ್ಟು

ಜೇನುತುಪ್ಪವನ್ನು ತಿಂದರೆ ಅಷ್ಟು ಪಾಪವುಂಟಾಗುವುದು ‖ ೪೦ ‖ ಜೇನು ನೊಣಗಳು ಒಂದೊಂದು ಹೂವಿನಿಂದ ರಸವನ್ನು ಬಾಯಿಯಲ್ಲಿ ತಂದು ಉಗಿದು ಜೇನುಹೊಟ್ಟಿನಲ್ಲಿ ಸೇರಿಸುತ್ತವೆ. ಅಂತಹ ಮಧುವನ್ನು ಧಾರ್ಮಿಕರು ಸೇವಿಸುವುದಿಲ್ಲ ‖ ೪೧ ‖ ನಿರ್ದಯರು ಮದ್ಯಮಾಂಸಮಧುಗಳನ್ನು ಭಕ್ಷಿಸುವಾಗ ಅವುಗಳಲ್ಲಿರುವ ಈ ರಸಕಾಯಿಕಜೀವಗಳನ್ನೂ ಭಕ್ಷಿಸುತ್ತಾರೆ ‖ ೪೨ ‖

ಅನೇಕ ಸೂಕ್ಷ್ಮ ಜಂತುಗಳಿಂದ ನಿಬಿಡವಾಗಿರುವುದನ್ನು ನೋಡಿಯೂ ಅತ್ತಿ ಅರಳಿ ಮೊದಲಾದ ಐದು ಉದುಂಬರಫಲಗಳನ್ನು ಭಕ್ಷಿಸುವ ನೀಚರಿಗೆ ದಯೆಯೆಲ್ಲಿರುವುದು ? ‖ ೪೩ ‖ ಜಿನೇಶ್ವರನ ಆಜ್ಞೆಯನ್ನು ಪಾಲಿಸುವವರೂ ಜೀವಹಿಂಸೆಯನ್ನು ಬಿಡುವವರೂ ಆದ ಸಾತ್ತ್ವಿಕರು ಐದು ಪ್ರಕಾರವಾದ ಉದುಂಬರಫಲಗಳನ್ನು ಮನೋವಾಕ್ಕಾಯಗಳಿಂದ ತ್ಯಜಿಸಬೇಕು. ತಿನ್ನಬಾರದು ‖ ೪೪ ‖ ದಯಾಪರರು ಗೆಡ್ಡೆಗೆಣಸುಗಳನ್ನೂ ಉದುಂಬರಫಲಗಳನ್ನೂ ಹೂವನ್ನೂ ಬೆಣ್ಣೆಯನ್ನೂ ಜೀವೋತ್ಪತ್ತಿಗೆ ಕಾರಣವಾದ ಬೇರೆ ಆಹಾರವನ್ನೂ ತ್ಯಜಿಸಬೇಕು ‖ ೪೫ ‖ ತಮಗೆ ಹಿತವನ್ನು ಬಯಸುವವರು ಕಾಮ ಕ್ರೋಧ ಮದ ದ್ವೇಷ ಲೋಭ ಮೋಹ ಮೊದಲಾದ ವಿಕಾರಭಾವಗಳಿಂದುಂಟಾಗುವ ಪರಪೀಡಾಕರವಾದ ವಾಕ್ಯವನ್ನು ಬಿಟ್ಟುಬಿಡಬೇಕು ‖ ೪೬ ‖ ಧರ್ಮವನ್ನು ಧ್ವಂಸಮಾಡುವುದೂ ಲೋಕವಿರುದ್ಧವೂ ವಿಶ್ವಾಸಘಾತಕವೂ ಆದ ಮಾತನ್ನು ಹೇಗೆ ಆಡುತ್ತಾರೋ ? ತಿಳಿಯದು ‖ ೪೭ ‖ ಲಾಘವವನ್ನುಂಟುಮಾಡುವುದೂ ಮ್ಲೇಚ್ಛರಿಂದಲೂ ನಿಂದಿಸಲ್ಪಡುವುದೂ ಆದ ಸುಳ್ಳು ಮಾತನ್ನು ಶ್ರಾವಕರು ಎಂದೂ ನುಡಿಯಬಾರದು ‖ ೪೮ ‖ ಹೊಲದಲ್ಲಿ ಗ್ರಾಮದಲ್ಲಿ ಕಳದಲ್ಲಿ ಗೊಲ್ಲರ ಹಳ್ಳಿಯಲ್ಲಿ ಪಟ್ಟಣದಲ್ಲಿ ಅರಣ್ಯದಲ್ಲಿ ಮತ್ತು ಮಾರ್ಗದಲ್ಲಿ ಮರೆಯಲ್ಪಟ್ಟಿರುವ, ಬೀಳಲ್ಪಟ್ಟಿರುವ, ಕಳೆದುಕೊಳ್ಳಲ್ಪಟ್ಟಿರುವ, ಇಡಲ್ಪಟ್ಟಿರುವ, ಮತ್ತು ಹುಗಿದಿಡಲ್ಪಟ್ಟಿರುವ ಅದತ್ತವಾದ

ಪರವಸ್ತುವನ್ನು ಬೇರೆಯುವರಿಗೆ ದುಃಖವಾಗುವುದೆಂಬ ಭಯವುಳ್ಳವರೂ ನಿರ್ಮಾಲ್ಯವನ್ನೋಪಾದಿಯಲ್ಲಿ ಕಾಣುವವರೂ ಆದ ಮಹಾಬುದ್ಧಿಶಾಲಿಗಳು ಸ್ವೀಕರಿಸುವುದಿಲ್ಲ ॥ ೪೯–೫೦ ॥ ಸಮಸ್ತ ಬಾಹ್ಯವ್ಯಾಪಾರಗಳನ್ನು ಮಾಡಿಸುವ ಅರ್ಥಗಳು ಬಹಿಃಶ್ಚರಪ್ರಾಣಗಳಾಗಿರುತ್ತವೆ, ಅವು ಕಳೆದುಹೋದರೆ ಮನುಷ್ಯರು ಶೀಘ್ರವಾಗಿ ಸಾಯುವುದುಂಟು ॥ ೫೧ ॥ ದ್ರವ್ಯವನ್ನು ಕದಿಯುವವನು ಸುಖದಾಯಕಗಳಾದ ಧರ್ಮವನ್ನೂ ಬಂಧುವನ್ನೂ ತಂದೆಯನ್ನೂ ಪುತ್ರನನ್ನೂ ಕಾಂತಿಯನ್ನೂ ಕೀರ್ತಿಯನ್ನೂ ಬುದ್ಧಿಯನ್ನೂ ಪತ್ನಿಯನ್ನೂ ಎಲ್ಲಾ ಪದಾರ್ಥಗಳನ್ನೂ ಕಳೆದುಕೊಳ್ಳುತ್ತಾನೆ ॥ ೫೨ ॥ ಒಬ್ಬನು ಸತ್ತರೆ ಒಂದು ಕ್ಷಣಕಾಲ ದು:ಖವುಂಟಾಗುವುದು. ಒಬ್ಬ ಮನುಷ್ಯನ ದ್ರವ್ಯವನ್ನು ಕದ್ದರೆ ಅವನಿಗೂ ಅವನ ಕುಟುಂಬಕ್ಕೂ ಜನ್ಮಪರ್ಯಂತ ದು:ಖವುಂಟಾಗುವುದು ॥ ೫೩ ॥ ತತ್ಕಾಲದಲ್ಲಿ ದು:ಖವನ್ನುಂಟುಮಾಡುವ ಮೀನು ಶಕುನವನ್ನು ನುಡಿಯುವವನು ಹುಲಿ ಬೇಡರವನು ವಂಚಕನು ಮೊದಲಾದವರಿಗಿಂತ ಯಾವಾಗಲೂ ದು:ಖವನ್ನುಂಟುಮಾಡುವ ಕಳ್ಳನು ಹೆಚ್ಚು ಪಾಪಿಯಾಗಿರುತ್ತಾನೆ ॥ ೫೪ ॥ ದ್ರವ್ಯವನ್ನು ಅಪಹರಿಸುವ ಕಳ್ಳನಿಗೆ ಈ ಲೋಕದಲ್ಲಿ ರಾಜರುಗಳಿಂದ ಸರ್ವಸ್ವಹರಣ ಮೊದಲಾದ ದು:ಖವುಂಟಾಗುವುದು. ಪರಲೋಕದಲ್ಲಾದರೋ ನರಕದುಃಖಫಲವುಂಟಾಗುವುದು ॥ ೫೫ ॥

ಸ್ವಸ್ತ್ರೀಸಂತೋಷವ್ರತವನ್ನು ರಕ್ಷಿಸುವವನು ನರಕವೆಂಬ ಬಾವಿಗೆ ದಾರಿಯೂ ಸ್ವರ್ಗವೆಂಬ ಮನೆಗೆ ಅಡ್ಡವಾಗಿರುವ ಕಂದಕವೂ ಆದ ಪರಸ್ತ್ರೀಯರನ್ನು ಯಾವಾಗಲೂ ತ್ಯಜಿಸಬೇಕು ॥ ೫೬ ॥ ಸ್ವರ್ಗಮೋಕ್ಷಸುಖಗಳನ್ನು ಪಡೆಯಬೇಕೆಂಬ ಇಚ್ಛೆಯುಳ್ಳ ಪ್ರಾಜ್ಞನು ಎಲ್ಲಾ ಪರಸ್ತ್ರೀಯರನ್ನು ತಾಯಿಗೂ ಸಹೋದರಿಯರಿಗೂ ಪುತ್ರಿಯರಿಗೂ ಸಮಾನರನ್ನಾಗಿ ಕಾಣಬೇಕು ॥ ೫೭ ॥ ಹೆಚ್ಚಾದ ಸ್ನೇಹವುಳ್ಳವಳಾದರೂ ದು:ಖವನ್ನು ಕೊಡುವವಳೂ ನಿರ್ಮಲಳಾದರೂ ಪಾಪಮಲವನ್ನುಂಟುಮಾಡುವವಳೂ ಶೃಂಗಾರ

ಮಧುರಾದಿ ರಸಗಳಿಗೆ ಆಧಾರಗಳಾಗಿದ್ದರೂ ತೃಷ್ಣೆಯನ್ನುಂಟುಮಾಡುವವಳೂ ಜಡ (ಜಲ) ತೆಯುಳ್ಳವಳಾದರೂ ತಾಪವನ್ನು ಹೆಚ್ಚಿಸುವವಳೂ ತನ್ನ ಸರ್ವಸ್ವವನ್ನು ಕೊಡುವವಳಾದರೂ ಸರ್ವದ್ರವ್ಯವನ್ನು ಅಪಹರಿಸುವವಳೂ ವಿರುದ್ಧಾಚಾರದಲ್ಲಿರುವವಳೂ ಆದ ಪರಸ್ತ್ರೀಯನ್ನು ದೂರದಿಂದಲೇ ತ್ಯಜಿಸಬೇಕು ॥ ೫೮-೫೯ ॥ ಸ್ವಸ್ತ್ರೀಸೇವನೆಯಲ್ಲಿಯೂ ಪರಸ್ತ್ರೀಸೇವನೆಯಲ್ಲಿಯೂ ವಿಶೇಷವಿಲ್ಲವಾದರೂ ಸ್ವಸ್ತ್ರೀಸಂತೋಷವ್ರತದಿಂದ ಸ್ವರ್ಗಗತಿಯೂ ಪರಸ್ತ್ರೀಸೇವನೆಯಿಂದ ನರಕಗತಿಯೂ ಪ್ರಾಪ್ತವಾಗುತ್ತವೆ ॥ ೬೦ ॥ ತನ್ನ ಪತಿಯನ್ನು ಬಿಟ್ಟು ನಾಚಿಕೆಯಿಲ್ಲದೆ ಪರಪುರುಷನನ್ನು ಹೊಂದುವ ಪರಸ್ತ್ರೀಯನ್ನು ನಂಬುವುದು ಹೇಗೆ? ॥ ೬೧ ॥ ಮನುಷ್ಯನು ಸುಂದರಳಾದ ಪರಸ್ತ್ರೀಯನ್ನು ನೋಡಿ ಸ್ವಲ್ಪಸುಖವನ್ನೂ ಪಡೆಯುವುದಿಲ್ಲವಾದರೂ ನರಕವನ್ನುಂಟುಮಾಡುವ ಭಯಂಕರವಾದ ಪಾಪವನ್ನು ಮಾತ್ರ ಹೊಂದುತ್ತಾನೆ ॥ ೬೨ ॥ ಯಾವ ಸ್ತ್ರೀಯ ಸಂಗಮದಿಂದಲೇ ಶೀಘ್ರವಾಗಿ ಇಹಪರಜನ್ಮಗಳಲ್ಲಿ ಹಾನಿಯುಂಟಾಗುವುದೋ ಸ್ವದಾರಸಂತೋಷವನ್ನು ಬಿಟ್ಟು ಅಂತಹ ಪರಸ್ತ್ರೀಯನ್ನು ಮನುಷ್ಯನು ಏತಕ್ಕೆ ಸೇವಿಸುತ್ತಾನೆ ? ॥ ೬೩ ॥ ಕಾಮಾಗ್ನಿಯಿಂದ ಸಂತಪ್ತಳಾದ ಪರಸ್ತ್ರೀಯನ್ನು ಸೇವಿಸುವವನು ನರಕದಲ್ಲಿ ವಜ್ರದ ಬೆಂಕಿಯಿಂದ ಕಾಯಿಸಲ್ಪಟ್ಟ ಲೋಹನಿರ್ಮಿತ ಸ್ತ್ರೀಪ್ರತಿಮೆಯನ್ನು ತಬ್ಬಿಕೊಳ್ಳುವನು ॥ ೬೪ ॥ ಈ ಪ್ರಕಾರವಾಗಿ ತಿಳಿದು ಪ್ರಾಜ್ಞರು ಜೀವಿಕೆಯನ್ನು ನಾಶಮಾಡುವ ಕುಪಿತನಾದ ಯಮನ ದೃಷ್ಟಿಯಂತಿರುವ ಪರಸ್ತ್ರೀಯನ್ನು ತ್ಯಜಿಸಬೇಕು ॥ ೬೫ ॥

ದುಃಸಹವಾದ ತಾಪವನ್ನು ಕೊಡುವ ಬೆಂಕಿಯು ನೀರಿನಿಂದ ಶಾಂತವಾಗುವಂತೆ ವೃದ್ಧಿಯನ್ನು ಹೊಂದುತ್ತಿರುವ ಲೋಭವನ್ನು ಸಂತೋಷದಿಂದ ಶಾಂತಮಾಡಬೇಕು ॥ ೬೬ ॥ ಸಂತೋಷವ್ರತವುಳ್ಳವನು ಧನ ಧಾನ್ಯ ಗೃಹ ಕ್ಷೇತ್ರ ದ್ವಿಪದ ಚತುಷ್ಪದ ಮೊದಲಾದೆಲ್ಲಾ ವಸ್ತುಗಳನ್ನು "ಇಷ್ಟು ಸಾಕು"

ಎಂದು ಪರಿವಿಃತವಮಾಡಿಕೊಳ್ಳಬೇಕು ॥ ೬೭ ॥ ಕಟ್ಟಿಗೆಯನ್ನು ಹಾಕುವುದರಿಂದ ಬೆಂಕಿಯು ವೃದ್ಧಿಯಾಗುವಂತೆ, ಕ್ರೋಧಾಹಂಕಾರಾದಿ ಕಷಾಯಭಾವಗಳನ್ನು ಬಿಡುವುದರಿಂದ ಧರ್ಮವು ವೃದ್ಧಿಯಾಗುತ್ತದೆ. ಸ್ತ್ರೀಸಂಗದಿಂದ ಕಾಮವು ವೃದ್ಧಿಯಾಗುತ್ತದೆ ಲೋಭದಿಂದ ಲೋಭವು ವೃದ್ಧಿಯಾಗುತ್ತದೆ. ॥ ೬೮ ॥ ಲೋಭವನ್ನು ಜಯಿಸದಿದ್ದರೆ ಅದು ಮನುಷ್ಯನನ್ನು ಭಯಂಕರವಾದ ನರಕವನ್ನು ಹೊಂದಿಸುತ್ತದೆ. ಬಲಿಷ್ಠರಾದ ಶತ್ರುಗಳು ಯಾವ ದು:ಖವನ್ನು ತಾನೆ ಕೊಡುವುದಿಲ್ಲ ? ॥ ೬೯ ॥ ಸಂಪಾದಿಸಿದ ಸಂಪತ್ತಿಯನ್ನು ಅನುಭವಿಸುವ ಜನರು ಹಲವರಿದ್ದಾರೆ. ಆದರೆ ನರಕವೇದನೆಯನ್ನು ಸಹಿಸುವವನಿಗೆ ಸಹಾಯಕನಾರೂ ಇರುವುದಿಲ್ಲ ॥ ೭೦ ॥ ಯಾವನಿಗೆ ದೃಢವಾದ ಸಂತೋಷ-ಸಂತೃಪ್ತಿಯಿರುವುದೋ ಅವನಿಗೆ ದೇವತೆಗಳು ಕಿಂಕರರಾಗಿರುತ್ತಾರೆ. ಕಲ್ಪವೃಕ್ಷಗಳು ಅವನ ವಶದಲ್ಲಿರುತ್ತವೆ. ನಿಧಿಗಳು ಅವನ ಮನೆಯಲ್ಲಿರುತ್ತವೆ ॥ ೭೧ ॥ ಯಾವನ ಹೃದಯದಲ್ಲಿ ಮಂಗಳಕರವಾದ ಸಂತೋಷವಿರುವುದಿಲ್ಲವೋ ಅವನು ಎಲ್ಲಾ ನಿಧಿಗಳನ್ನು ಹೊಂದಿದರೂ ದರಿದ್ರನೂ ದು:ಖಿತನೂ ಆಗಿರುತ್ತಾನೆ ॥ ೭೨ ॥

ದಿಗ್ವ್ರತ ದೇಶವ್ರತ ಅನರ್ಥದಂಡವ್ರತಗಳೆಂದು ಗುಣವ್ರತವು ಮೂರು ಪ್ರಕಾರವಾಗಿರುತ್ತದೆ. ಮೋಕ್ಷವನ್ನು ಬಯಸುವ ಶ್ರಾವಕರು ಈ ಮೂರು ಗುಣವ್ರತಗಳನ್ನು ಪಾಲಿಸಬೇಕು ॥ ೭೩ ॥ ಶಾಸ್ತ್ರೋಕ್ತವಿಧಿಯಿಂದ ಹತ್ತು ದಿಕ್ಕುಗಳಲ್ಲಿಯೂ ಎಲ್ಲೆಗಳನ್ನು ಗೊತ್ತುಮಾಡಿಕೊಂಡು ಅಲ್ಲಿಂದಾಚೆಗೆ ಜನವಿರುವ ಪರ್ಯಂತ ಹೋಗದಿರುವ ನಿಯಮಕ್ಕೆ ದಿಗ್ವ್ರತವೆಂದು ಹೆಸರು ॥ ೭೧ ॥ ಎಲ್ಲೆಗಳ ಹೊರಗೆ ತ್ರಸಜೀವಗಳ ಹಿಂಸೆಯೂ ಸ್ಥಾವರಜೀವಗಳ ಹಿಂಸೆಯೂ ಆಗದಿರುವುದರಿಂದ ದಿಗ್ವ್ರತಿಯು ಮನೆಯಲ್ಲಿದ್ದರೂ ಅವನಿಗೆ ಎಲ್ಲೆಗಳ ಹೊರಗೆ ಅಹಿಂಸಾಮಹಾವ್ರತವುಂಟಾಗುವುದು. ದಿಗ್ವ್ರತಿಯು ಎಲ್ಲೆಗಳ ಹೊರಗೆ ಅಹಿಂಸಾಮಹಾವ್ರತವನ್ನು ಪಾಲಿಸಿದಂತಾಗುವುದೆಂದು

ಭಾವವು ॥ ೭೫ ॥ ಮೂರು ಲೋಕವನ್ನು ದಾಂಟುವ ತೀವ್ರಲೋಭವೆಂಬ ಬೆಂಕಿಗೆ ದಿಗ್ವ್ರತದಿಂದ ತಡೆಯುಂಟಾಗುವುದು, ಅದರಿಂದ ಲೋಕಕ್ಕೆ ಎಲ್ಲೆಯನ್ನು ಗೊತ್ತು ಮಾಡಿದಂತಾಗುವುದು ॥ ೭೬ ॥ ದಿಗ್ವ್ರತದಲ್ಲಿ ಸಂಕಲ್ಪಿಸಿಕೊಂಡಿರುವ ದಿಕ್ಕುಗಳೊಳಗೂ ದಿವಸ ಪಕ್ಷ ಮಾಸ ಮೊದಲಾದ ಕಾಲಪರಿಮಿತಿಯಿಂದ ಪ್ರದೇಶಗಳನ್ನು ಗುರುತು ಮಾಡಿಕೊಂಡು ಅವುಗಳಿಂದ ಹೊರಕ್ಕೆ ಹೋಗುವುದಿಲ್ಲವೆಂಬ ಸಂಕಲ್ಪ—ನಿಯಮವು ದೇಶವ್ರತವೆಂಬ ಎರಡನೆಯ ಗುಣವ್ರತವಾಗಿರುವುದೆಂದು ಪ್ರಾಜ್ಞರು ಹೇಳುತ್ತಾರೆ. ದಿಗ್ವ್ರತವು ಯಮವ್ರತವೆಂದೂ ದೇಶವ್ರತವು ನಿಯಮವ್ರತವೆಂದೂ ತಿಳಿಯಬೇಕು ॥ ೭೭ ॥ ದಿಗ್ವ್ರತಕ್ಕೆ ಹೇಳಲ್ಪಟ್ಟ ಅಹಿಂಸಾಮಹಾವ್ರತಫಲವು ಈ ದೇಶವ್ರತದಿಂದಲೂ ವಿಶೇಷವಾಗಿ ಉಂಟಾಗುವುದೆಂದು ತಿಳಿಯಬೇಕು. ವಿಶಿಷ್ಟಕಾರಣದಿಂದುಂಟಾಗುವ ವಿಶಿಷ್ಟಕಾರ್ಯವನ್ನು ತಡೆಯುವವನಾರು ? ॥ ೭೮ ॥ ಅನರ್ಥ-ಪ್ರಯೋಜನವಿಲ್ಲದಿರುವ ವಿಷಯಗಳನ್ನು ತ್ಯಜಿಸಿರುವವರು ಧರ್ಮಕ್ಕೂ ಅರ್ಥಕ್ಕೂ ಉಪಕಾರಿಗಳಲ್ಲದಿರುವುವೂ ಪಾಪಕ್ಕೆ ಉಪಕಾರಿಗಳಾಗಿರುವುವೂ ಆದ ಪಾಪೋಪದೇಶ, ಹಿಂಸೋಪಕರಣದಾನ, ಅಪಧ್ಯಾನ, ದುಃಶ್ರುತಿ, ಪ್ರಮಾದಚರ್ಯೆಗಳೆಂಬ ಐದು ಪ್ರಕಾರವಾದ ಅನರ್ಥದಂಡಗಳನ್ನು ಎಂದರೆ ನಿಷ್ಪ್ರಯೋಜನವಾದ ಕಾರ್ಯಗಳನ್ನು ಬಿಡಬೇಕು ॥ ೭೯ ॥ ಕೃಪಾಳುಗಳಾದ ಶ್ರಾವಕರು ಜೀವಘಾತಕಗಳಾದ ನವಿಲು, ನಾಯಿ, ಬೆಕ್ಕು, ಮೈನಾಹಕ್ಕಿ, ಗಿಳಿ, ಕೋಳಿ ಮೊದಲಾದ ಪ್ರಾಣಿಗಳನ್ನು ಇಟ್ಟುಕೊಳ್ಳಬಾರದು ॥ ೮೦ ॥ ಪ್ರಾಜ್ಞರು ಪಾಶ, ಕೋಲು, ವಿಷ, ಶಸ್ತ್ರ, ನೇಗಿಲು, ಹಗ್ಗ, ಬೆಂಕಿ, ಭೂಮಿ, ಅರಗು, ಕಬ್ಬಿಣ, ನೀಲಿ, ಮೊದಲಾದ ಹಿಂಸಾಸಾಮಗ್ರಿಗಳನ್ನು ಬೇರೆಯವರಿಗೆ ದಾನಮಾಡುವುದಿಲ್ಲ ॥ ೮೧ ॥ ದಯಾಪರವಾದ ಮನಸ್ಸುಳ್ಳವರೂ ಸೂಕ್ಷ್ಮಜಂತುಗಳಿಂದ ನಿಬಿಡವಾಗಿರುವ ಮುರಬ್ಬ ಮುಂತಾದ ಮಿಶ್ರವಸ್ತುವನ್ನೂ ಹುಳಿತ ವಸ್ತುವನ್ನೂ ಕುಟ್ಟಿ ಹಿಡಿದ ವಸ್ತುವನ್ನೂ ಕೊಳೆತ ವಸ್ತುವನ್ನೂ ಯಾವಾಗಲೂ ಭುಂಜಿಸುವುದಿಲ್ಲ ॥ ೮೨ ॥

ಶಿಕ್ಷಾವ್ರತವು ಸಾಮಾಯಿಕ, ಉಪವಾಸ, ಭೋಗೋಪಭೋಗಪರಿಮಾಣ, ಅತಿಥಿಸಂವಿಭಾಗಗಳೆಂದು ನಾಲ್ಕು ಪ್ರಕಾರವಾಗಿರುತ್ತದೆ ॥ ೮೩ ॥ ಜೀವಿತದಲ್ಲಿಯೂ ಮರಣದಲ್ಲಿಯೂ ಸೌಖ್ಯದಲ್ಲಿಯೂ ದುಃಖದಲ್ಲಿಯೂ ಅನಿಷ್ಟವಸ್ತುಸಂಯೋಗದಲ್ಲಿಯೂ ಇಷ್ಟವಸ್ತುವಿಯೋಗದಲ್ಲಿಯೂ ಸಮಾನವಾದ ಮನಸ್ಸುಳ್ಳವರು ಆಲಸ್ಯವಿಲ್ಲದವರಾಗಿ ಸಾಮಾಯಿಕವನ್ನು ಮಾಡಬೇಕು ॥ ೮೪ ॥ ಶ್ರಾವಕರು ತ್ರಿಸಂಧ್ಯಾಕಾಲಗಳಲ್ಲಿ ಇತರ ಕಾರ್ಯಗಳನ್ನು ಬಿಟ್ಟು ಕಾಯೋತ್ಸರ್ಗ ಅಥವಾ ಪರ್ಯಂಕ-ಸುಖಾಸನವುಳ್ಳದೂ ದೇವಾಲಯದ ನಾಲ್ಕು ದಿಕ್ಕುಗಳಲ್ಲಿ ಪ್ರತಿಯೊಂದರಲ್ಲಿ ಕೈಗಳನ್ನು ಜೋಡಿಸಿ ಮೂರು ಮೂರು ಆವರ್ತನೆಗಳುಳ್ಳದೂ ಒಂದೊಂದು ಶಿರೋನತಿ-ನಮಸ್ಕಾರವುಳ್ಳದೂ ಆದ ತ್ರಿಕಾಲಸಂಧ್ಯಾವಂದನೆಯನ್ನು ಮಾಡಬೇಕು. ದೇವಾಲಯದ ಮೂರು ಸುತ್ತು ಬರುವಾಗ ೩೬ ಆವರ್ತನೆಗಳೂ ೧೨ ಶಿರೋನತಿಗಳೂ ಆಗುವುವು ॥ ೮೫ ॥ ಶುಕ್ಲಕೃಷ್ಣಪಕ್ಷಗಳಲ್ಲಿ ಬರುವ ನಾಲ್ಕು ಅಷ್ಟಮಿ ಚತುರ್ದಶೀ-ಪರ್ವತಿಥಿಗಳಲ್ಲಿ ಶ್ರಾವಕನು ಭೋಗೋಪಭೋಗವಸ್ತುಗಳನ್ನೂ ಪಾಪಕಾರ್ಯಗಳನ್ನೂ ತ್ಯಜಿಸಿದವನಾಗಿ ಯಾವಾಗಲೂ ಭಕ್ತಿಯಿಂದ ಉಪವಾಸವನ್ನು ಮಾಡಬೇಕು ॥ ೮೬ ॥ ಯಾವುದರಲ್ಲಿ ಇಂದ್ರಿಯಗಳು ತಂತಮ್ಮ ವಿಷಯಗಳಿಂದ ವಿಮುಖಗಳಾಗಿ ಆತ್ಮನೊಡನೆ ಐಕ್ಯವನ್ನು ಹೊಂದಿ ವಾಸಮಾಡುತ್ತವೋ ಅಂತಹ ನಿಯಮವು ಉಪವಾಸವಾಗಿರುತ್ತದೆಂದು ಪ್ರಾಜ್ಞರು ತಿಳಿಯುತ್ತಾರೆ ॥ ೮೭ ॥ ಜಿತೇಂದ್ರಿಯರಾದ ಶ್ರಾವಕರು ಅನ್ನ ಪಾನ ಖಾದ್ಯ ಲೇಹ್ಯಗಳೆಂಬ ಚತುರ್ವಿಧಾಹಾರಗಳ ತ್ಯಾಗವನ್ನು ಮಾಡಿ ದಿನವೆಲ್ಲ ಧ್ಯಾನಾಧ್ಯಯನಗಳಲ್ಲಿ ಆಸಕ್ತರಾಗಿರುತ್ತಾರೆ ॥ ೮೮ ॥ ಪೂಜ್ಯವಾದ ಭೋಗೋಪಭೋಗಪರಿಮಾಣವ್ರತವನ್ನಾಚರಿಸುವವನು ಶಾಸ್ತ್ರೋಕ್ತವಿಧಿಯಿಂದ ಭೋಗೋಪಭೋಗವಸ್ತುಗಳ ಪರಿಮಿತಿಯನ್ನು ಮಾಡಿಕೊಳ್ಳಬೇಕು. ಒಂದು ಸಲ ಅನುಭವಿಸಲ್ಪಡುವ ಗಂಧ ತಾಂಬೂಲಾದಿ ವಸ್ತುಗಳಿಗೆ ಭೋಗವಸ್ತುಗಳೆಂದೂ ಹಲವು ಸಲ ಅನುಭವಿಸಲ್ಪಡುವ ವಸ್ತ್ರವಾಹನಾದಿವಸ್ತುಗ

ಳಿಗೆ ಉಪಭೋಗವಸ್ತುಗಳೆಂದೂ ಹೆಸರು ॥ ೮೯ ॥ ವ್ರತವನ್ನು ಬಯಸುವವರಾದ ಸತ್ಪುರುಷರು ಪುಷ್ಪಮಾಲೆ, ಗಂಧ, ಅನ್ನ, ತಾಂಬೂಲ, ಭೂಷಣ, ಸ್ತ್ರೀ, ವಸ್ತ್ರ ಮೊದಲಾದ ವಸ್ತುಗಳನ್ನು ಪರಿಮಿತಮಾಡಿಕೊಂಡು ಸೇವಿಸುತ್ತಾರೆ ॥ ೯೦ ॥ ಅತಿಥಿಸಂವಿಭಾಗವ್ರತವನ್ನು ಧರಿಸಿರುವ ಶ್ರಾವಕನು ಮನೆಗೆ ಬಂದ ಜಿತೇಂದ್ರಿಯರಾದ ಅತಿಥಿಗಳಿಗೆ ಭಕ್ತಿಯಿಂದ ಆಹಾರ ಪಾನ ಔಷಧಗಳ ಭಾಗಗಳನ್ನು ವಿಧಿಪ್ರಕಾರವಾಗಿ ಕೊಡಬೇಕು ॥ ೯೧ ॥ ವಿನಯಪರರಾದ ಭಕ್ತಶ್ರಾವಕರು ದುರಂತವಾದ ಸಂಸಾರದ ವಿನಾಶಕ್ಕೋಸ್ಕರ ಋಷಿ ಆರ್ಯಿಕಾ ಶ್ರಾವಕ ಶ್ರಾವಿಕೆಯರ ಚತುಸ್ಸಂಘಕ್ಕೆ ಯಾವಾಗಲೂ ಅನ್ನ ಪಾನ ಖಾದ್ಯ ಲೇಹ್ಯಗಳೆಂಬ ಚತುರ್ವಿಧಾಹಾರವನ್ನು ಕೊಡಬೇಕು ॥ ೯೨ ॥ ಪ್ರೀತಿಯಿಂದ ಯತಿಗಳಿಗೆ ದಾನವನ್ನು ಕೊಡುವವನು ಮನಸ್ಸಿನಲ್ಲಿ ಪ್ರತಿಗ್ರಹ ಮೊದಲಾದ ನವವಿಧಭಕ್ತಿಯನ್ನೂ ಶ್ರದ್ಧಾದಿ ಸಪ್ತವಿಧಗುಣಗಳನ್ನೂ ಧರಿಸಿರಬೇಕು. ಒಡಂಬಡಿಕೆ-ವಿನಯವಿಲ್ಲದೆ ಕೊಡಲ್ಪಡುವ ದಾನವು ಪ್ರಯೋಜನಕಾರಿಯಾಗುವುದಿಲ್ಲ ॥ ೯೩ ॥ ಬುದ್ಧಿಶಾಲಿಯಾದ ಶ್ರಾವಕನು ತಡೆಯಲಾಗದ ಮೃತ್ಯುವು ಪ್ರಾಪ್ತವಾದುದನ್ನು ನೋಡಿ ತನ್ನ ಬಂಧುವರ್ಗವನ್ನು ಕಂಡು ಸಲ್ಲೇಖನಾವ್ರತವನ್ನು ಧರಿಸಬೇಕು, ಸತ್ಪುರುಷರು ಕಾಲಾನುರೂಪವಾದ ಕಾರ್ಯವನ್ನು ಮಾಡುತ್ತಾರೆ ॥ ೯೪ ॥ ಶ್ರಾವಕನು ಪ್ರಾಣಪ್ರಯಾಣಕಾಲದಲ್ಲಿ ಸಕಲದೋಷಗಳನ್ನು ಗುರುಗಳ ಬಳಿಯಲ್ಲಿ ಆಲೋಚಿಸಿ ಸಮ್ಯಗ್ಜ್ಞಾನ ಸಮ್ಯಕ್ತ್ವ ಚಾರಿತ್ರಗಳನ್ನು ಶೋಧಿಸಿ–ಶುದ್ಧಮಾಡಿ ಚತುರ್ವಿಧಾಹಾರವನ್ನೂ ಶರೀರಮಮಕಾರವನ್ನೂ ಬಿಡಬೇಕು. ಇದಕ್ಕೆ ಸಲ್ಲೇಖನಾವ್ರತವೆಂದು ಹೆಸರು ॥ ೯೫ ॥ ಉತ್ತರಭವದಲ್ಲಿ ಭೋಗಕಾಂಕ್ಷೆಯೂ ಮಿಥ್ಯಾತ್ವವೂ ಕ್ರೋಧಾದಿಕಷಾಯಭಾವವೂ ಇಲ್ಲದಿರುವ ಯಾವ ಪ್ರಾಜ್ಞನು ಸನ್ನ್ಯಾಸವಿಧಿಯನ್ನು ಆಚರಿಸುತ್ತಾನೋ ಅವನು ಮಾನವನ ಮತ್ತು ದೇವರ್ಕಳ ಸುಖಗಳನ್ನು ಪಡೆದು ಮೂರು ಭವಗಳಲ್ಲಾಗಲಿ ಏಳು ಭವಗಳಲ್ಲಾಗಲಿ ಮುಕ್ತಿಯನ್ನು ಹೊಂದುತ್ತಾನೆ ॥ ೯೬ ॥ ಸಂಸಾರದಲ್ಲಿ ಬೀಳುವ ಭಯ

ವುಳ್ಳವನಾದ ಯಾವ ಶ್ರಾವಕನು ಜಿನೇಶ್ವರೋಪದಿಷ್ಟವಾದ ಈ ಹನ್ನೆರಡು ಭೇದಗಳುಳ್ಳ ಶ್ರಾವಕವ್ರತವನ್ನು ಪಾಲಿಸುತ್ತಾನೋ ಅವನು ಸಮಸ್ತಮಂಗಳವನ್ನು ಹೊಂದುತ್ತಾನೆ ॥ ೯೭ ॥ (ವ್ರತಗಳನ್ನು ಹೆಚ್ಚಿಸುವವನೂ ಇಂದ್ರಿಯವ್ಯಾಪಾರಗಳನ್ನು ಜಯಿಸಿರುವವನೂ ಆದ ಶ್ರಾವಕನು ಹುಬ್ಬುಗಳಿಂದಲೂ ಕಣ್ಣುಗಳಿಂದಲೂ ಹುಂಕಾರಶಬ್ದದಿಂದಲೂ ಬೆರಲ್ಗಳಿಂದಲೂ ಸಂಜ್ಞೆಯನ್ನು ಮಾಡದೆ ಅಭಿಲಾಷೆಯನ್ನು ತ್ಯಜಿಸಿ ಮೌನವನ್ನು ಮಾಡಿ ಭೋಜನಮಾಡುವನು. ಭೋಜನಕಾಲದಲ್ಲಿ ಮೌನವನ್ನು ಮಾಡಬೇಕೆಂದರ್ಥವು ॥ ೯೮ ॥ ದೇವರ್ಕಳಿಂದಲೂ ಮನುಷ್ಯರಿಂದಲೂ ಪೂಜಿಸಲ್ಪಟ್ಟ ಚರಣಕಮಲಗಳುಳ್ಳವರೂ ದೋಷರಹಿತರೂ ಆದ ಅರ್ಹತ್ಸಿದ್ಧಾಚಾರ್ಯೋಪಾಧ್ಯಾಯಸಾಧುಗಳೆಂಬ ಪಂಚಪರಮೇಷ್ಠಿಗಳನ್ನು ಶ್ರಾವಕರು ನೈವೇದ್ಯ ಗಂಧ ಅಕ್ಷತ ಧೂಪ ದೀಪ ಪುಷ್ಪಮಾಲೆ ಮೊದಲಾದುವುಗಳಿಂದ ಪೂಜಿಸಬೇಕು ॥ ೯೯ ॥ ಪೂಜ್ಯವಾದ ಈ ವ್ರತಗಳನ್ನು ಅತಿಚಾರವಿಲ್ಲದೆ ಯತ್ನದಿಂದ ಪರಿಪಾಲಿಸುವವರು ನರಾಮರಸಂಪತ್ತಿಯನ್ನು ಭೋಗಿಸಿ ಪಾಪರಹಿತರಾಗಿ ಕೈವಲ್ಯವನ್ನು ಪಡೆಯುವರು ॥ ೧೦೦ ॥ ಈ ಪವನವೇಗನು ಸಮಸ್ತಪಾಪಗಳನ್ನು ನಾಶಮಾಡುವುದೂ ಗುಣಗಳನ್ನು ಪ್ರಶಂಸಿಸುವುದೂ ಆದ ಜಿನಮತಿಯತಿಯ ವಚನವನ್ನು ಕೇಳಿ ನರೇಂದ್ರ ದೇವೇಂದ್ರರಿಂದ ಪೂಜಿತವಾದ ಕೇವಲಿಯ ಪಾದಕಮಲಯುಗಲವನ್ನು ನಮಸ್ಕರಿಸಿ ವಿಶುದ್ಧವಾದ ಮನುಸ್ಸುಳ್ಳವನಾಗಿ ತನ್ನನ್ನು ವ್ರತಗಳೆಂಬ ರತ್ನಗಳಿಂದ ಭೂಷಿತನನ್ನಾಗಿ ಮಾಡಿದನು. ಭವ್ಯರು ಅಪಾರವಾದ ಜ್ಞಾನವುಳ್ಳ ಯತಿಯ ವಚನಗಳನ್ನು ಹೊಂದಿ ಅವುಗಳನ್ನು ಹೇಗೆ ವ್ಯರ್ಥಮಾಡುತ್ತಾನೆ ? ॥ ೧೦೧ ॥

ಇಂತು ಅಮಿತಗತ್ಯಾಚಾರ್ಯವಿರಚಿತ ಧರ್ಮಪರೀಕ್ಷೈಕೋನವಿಂಶಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

ಅನಂತರದಲ್ಲಿ ಮತ್ತೆ ಆ ಜಿನಮತಿಯತಿಯು ವಿದ್ಯಾಧರಪುತ್ರನಾದ ಪವನವೇಗನನ್ನು ಕುರಿತು "ಅಯ್ಯಾ ! ಮಂಗಳಾಂಗನೆ !! ಶ್ರಾವಕರು ಭಕ್ತಿಯಿಂದ ಬೇರೆ ನಿಯಮಗಳನ್ನೂ ಪಾಲಿಸಬೇಕು ‖ ೧ ‖ ಯಾವ ಸಮಯದಲ್ಲಿ ಭೂತಗಳ ಸಂಚಾರವಿರುವುದೋ ಯಾವ ಸಮಯದಲ್ಲಿ ಯತಿಗಳ ಆಗಮನವಿಲ್ಲವೋ ಯಾವ ಸಮಯದಲ್ಲಿ ಭಕ್ಷ್ಯ ಅಭಕ್ಷ್ಯವಸ್ತುಗಳ ಭೇದವನ್ನು ತಿಳಿಯಲಾಗುವುದಿಲ್ಲವೋ ಅಂತಹ ರಾತ್ರಿ ಸಮಯದಲ್ಲಿ ದಯಾಳುಗಳು ಎಂದೂ ಊಟ ಮಾಡಬಾರದು ‖ ೨-೩ ‖ ಯಾವ ಮನುಷ್ಯನು ಜಿಹ್ವೇಂದ್ರಿಯವಶೀಭೂತನಾಗಿ ರಾತ್ರಿಯಲ್ಲಿ ಊಟ ಮಾಡುತ್ತಾನೋ ಅಂತಹ ನೀಚನಿಗೆ ಅಹಿಂಸಾಣುವ್ರತವು ಎಲ್ಲಿಯದು ? ‖ ೪ ‖ ಸಕಲಧಾರ್ಮಿಕ ಕ್ರಿಯಾಹೀನನಾದ ಯಾವ ಮನುಷ್ಯನು ದಿವಾರಾತ್ರಿ ಭಕ್ಷಿಸುತ್ತಾನೋ ಅಂಥವನಿಗೆ, ಕೊಂಬು ಹೊರತು, ಪಶುವಿಗಿಂತ ಬೇರೆ ಭೇದವಿಲ್ಲ ‖ ೫ ‖ ಮನುಷ್ಯನು ರಾತ್ರಿಭೋಜನದಿಂದ ಉತ್ತರಭವದಲ್ಲಿ ಹಂದಿ, ಸಾರಗ, ಹದ್ದು, ಬೆಕ್ಕು, ತಿತ್ತಿರಿಯೆಂಬ ಒಂದು ಜಾತಿಯ ಪಕ್ಷಿ, ಬಕಪಕ್ಷಿ, ನಾಯಿ, ಸಾರಸಪಕ್ಷಿ, ಗಿಡಗ, ಕಾಗೆ, ಕಪ್ಪೆ, ಹಾವು, ಕುಳ್ಳ, ಕಜ್ಜಿಯುಳ್ಳವ, ಮೂಗ, ಹೆಚ್ಚು ರೋಗಗಳುಳ್ಳವನು, ಕಠೋರನು, ದುಷ್ಟನು, ದರಿದ್ರನು, ದುರ್ಜನನು, ಅಥವಾ ಕುಷ್ಠರೋಗವುಳ್ಳವನಾಗಿ ಹುಟ್ಟುತ್ತಾನೆ ‖ ೬-೭ ‖ ರಾತ್ರಿಭೋಜನತ್ಯಾಗಿಯಾದ ಮನುಷ್ಯನು ವಿದ್ವಾಂಸನೂ ಪ್ರಿಯವಾದಿಯೂ ರೋಗರಹಿತನೂ ಸಜ್ಜನನೂ ಶಾಂತನೂ ತ್ಯಾಗಿಯೂ ಭೋಗಿಯೂ ಯಶಸ್ವಿಯೂ ಸಮುದ್ರಪರ್ಯಂತವಾದ ಪೃಥ್ವಿಗೆ ಅಧಿಪತಿಯೂ ಆದರಣೀಯನೂ ಭಾಗ್ಯಶಾಲಿಯೂ ವಾಗ್ಮಿಯೂ ಮನ್ಮಥನಂತೆ ಸುಂದರನೂ ಲೋಕಪೂಜಿತನೂ ಆಗುತ್ತಾನೆ ‖ ೮-೯ ‖ ರಾತ್ರಿಭೋಜನದಿಂದ ಸರ್ವತ್ರ ದುಃಖವೂ ದಿವಾಭೋಜನದಿಂದ ಸುಖವೂ ಪ್ರಾಪ್ತವಾಗುವುದರಿಂದ ಹಗಲೂಟವು ಹಿತಕರವಾದುದು ‖ ೧೦ ‖ ಹೊತ್ತು ಮುಳುಗುವುದಕ್ಕಿಂತ ಎರಡು ಗಳಿಗೆಗೆ ಮೊದಲು ಭೋಜನ ಮಾಡುವವನನ್ನು ಮಹಾಭಾಗನೆಂದೂ ಅನಸ್ತಮಿತಭೋಜನ-ರಾತ್ರಿಭೋಜನ ತ್ಯಾಗಿಯೆಂದೂ ಹೇಳುತ್ತಾರೆ. ‖ ೧೧ ‖ ದಿನದ ಆದ್ಯಂತಭಾಗಗಳಲ್ಲಿ ಎರಡೆ

ರಡು ಗಳಿಗೆಗಳನ್ನು ಬಿಟ್ಟು ಭೋಜನ ಮಾಡುವವನಿಗೆ ಒಂದು ತಿಂಗಳಲ್ಲಿ ೧೨೦ ಗಳಿಗೆ–ಎರಡು ದಿವಸ ಉಪವಾಸಗಳಾಗುತ್ತವೆ ‖ ೧೨ ‖ ಶುಕ್ಲಪಕ್ಷದ ಪಂಚಮಿಯಲ್ಲಿ ಉಪವಾಸವನ್ನು ಮಾಡುವ ಪ್ರಾಜ್ಞನು ಮನುಷ್ಯಸುಖವನ್ನೂ ದೇವಸುಖವನ್ನೂ ಅನುಭವಿಸಿ ಕೈವಲ್ಯಪದವನ್ನು ಹೊಂದುವನು ‖ ೧೩ ‖ ಸುಜ್ಞಾನಿಯು ಆಷಾಢಮಾಸದ ಅಥವಾ ಕಾರ್ತಿಕಮಾಸದ ಅಥವಾ ಫಾಲ್ಗುನಮಾಸದ ಶುಕ್ಲಪಕ್ಷದ ಪಂಚಮಿಯಲ್ಲಿ ಗುರುವಿನ ಬಳಿಯಲ್ಲಿ ವಿಧಿಪ್ರಕಾರವಾಗಿ ಉಪವಾಸವನ್ನು ಕೈಕೊಂಡು ಪ್ರತಿಯೊಂದು ತಿಂಗಳಲ್ಲಿ ಐದು ವರ್ಷಗಳ ಮೇಲೆ ಐದು ತಿಂಗಳವರೆಗೆ ಈ ಉಪವಾಸವನ್ನು ಮಾಡಬೇಕು ‖ ೧೪–೧೫ ‖ ಉಪವಾಸವು ಮನುಷ್ಯನ ಅವಯವಗಳನ್ನು ಶೋಷಣಮಾಡುವಂತೆ, ಸಂಚಿತಕರ್ಮಗಳನ್ನೂ ಶೀಘ್ರವಾಗಿ ನಿಸ್ಸಂಶಯವಾಗಿ ಶೋಷಣಮಾಡುತ್ತದೆ ‖ ೧೬ ‖ ಸೂರ್ಯನು ಕೆರೆಗಳ ನೀರುಗಳನ್ನು ಬತ್ತಿಸುವಂತೆ, ಉಪವಾಸವು ಮನುಷ್ಯರ ಸಂಚಿತಪಾಪಗಳನ್ನು ಬತ್ತಿಸುತ್ತದೆ ‖ ೧೭ ‖ ಉಪವಾಸದಿಂದಲ್ಲದೆ ಮತ್ತಾವುದರಿಂದಲೂ ಇಂದ್ರಿಯಗಳನ್ನೂ ಕಾಮನನ್ನೂ ಜಯಿಸಲು ಶಕ್ಯವಿಲ್ಲ. ಸಿಂಹವೇ ಮದಿಸಿದ ಆನೆಗಳನ್ನು ಸೀಳುವುದು ‖ ೧೮ ‖ ರೋಹಿಣೀನಕ್ಷತ್ರಕ್ಕೂ ಚಂದ್ರನಿಗೂ ಸಂಬಂಧವಾಗುವ ದಿವಸದಲ್ಲಿ ಐದು ವರ್ಷಗಳ ಮೇಲೆ ಐದು ತಿಂಗಳ ವರೆಗೆ ಭಕ್ತಿಯಿಂದ ಉಪವಾಸವನ್ನು ಮಾಡುವವನು ಮೂರನೆಯ ಭವದಲ್ಲಿ ಮುಕ್ತಿಯನ್ನು ಹೊಂದುತ್ತಾನೆ. ಈ ಎರಡನೆಯ ಉಪವಾಸವಿಧಾನಕ್ಕೆ ಬೇರೆ ಫಲವನ್ನೇನು ಹೇಳುವುದು? ‖ ೧೯–೨೦ ‖ ಪ್ರಾಜ್ಞರು ಎಲ್ಲಾ ಕಡೆಗಳಲ್ಲಿ ಮುಖ್ಯಫಲವನ್ನು ಹೇಳುತ್ತಾರೆ. ಆನುಷಂಗಿಕವಾದ–ಗೌಣಫಲವನ್ನು ಹೇಳುವದಿಲ್ಲ, ಹೊಲ ಗದ್ದೆಗಳನ್ನು ಉಳುವುದರಲ್ಲಿ ಧಾನ್ಯವು ಮುಖ್ಯಫಲವಲ್ಲದೆ ಹೊಟ್ಟಲ್ಲ, ಉಪವಾಸದಿಂದ ಸ್ವರ್ಗಾದಿಫಲಗಳೂ ಉಂಟಾಗುತ್ತವಾದರೂ ಅವುಗಳನ್ನು ಹೇಳದೆ ಮುಖ್ಯಫಲವಾದ ಮುಕ್ತಿಪ್ರಾಪ್ತಿಯನ್ನು ಮಾತ್ರ ಹೇಳಿದೆಯೆಂದು ಭಾವವು ‖ ೨೧ ‖ ಸಂಪೂರ್ಣಫಲಕಾಂಕ್ಷಿಗಳು ಮೇಲೆ ಹೇಳಲ್ಪಟ್ಟ ಎರಡು ಉಪವಾಸವಿಧಿಗಳೂ ಪೂರ್ತಿಯಾದ ಮೇಲೆ ತಮ್ಮ ಸಂಪತ್ತಿಗನುಸಾರವಾಗಿ ಉದ್ಯೋತನ (ಉದ್ಯಾಪನ) ವನ್ನು

ಮಾಡಬೇಕು ॥ ೨೨ ॥ ಉದ್ಯೋತನವಿಲ್ಲದಿದ್ದರೆ ಪ್ರಾಜ್ಞರು ಆ ಉಪವಾಸ ವಿಧಿಗಳನ್ನು ದ್ವಿಗುಣವಾಗಿ ಮಾಡಬೇಕು. ವಿಧಿಯು ಪೂರ್ತಿಯಾಗದಿರುವಾಗ ಅದನ್ನು ಉದ್ಯೋತನ ಮಾಡುವುದು ಹೇಗೆ? ॥ ೨೩ ॥ ಶ್ರಾವಕನು ಭವಭ್ರಮಣರೂಪವಾದ ಸಂಸಾರವನ್ನು ನಾಶ ಮಾಡುವುದರಲ್ಲಿ ಸಮರ್ಥವಾದ ಆಹಾರ ಅಭಯ ಭೈಷಜ್ಯ ಶಾಸ್ತ್ರಗಳೆಂಬ ನಾಲ್ಕು ಪ್ರಕಾರವಾದ ದಾನವನ್ನು ಮಾಡಬೇಕು ॥ ೨೪ ॥ ಸಕಲಪ್ರಾಣಿಯೂ ಯಾವಾಗಲೂ ತನ್ನ ಪ್ರಾಣಗಳಲ್ಲಿ ಪ್ರೀತಿಯುಳ್ಳದಾಗಿರುವುದು ಕಂಡು ಬರುತ್ತದೆ. ಆದುದರಿಂದ ಎಲ್ಲಾ ದಾನಗಳಿಗಿಂತ ಪ್ರಾಣಿರಕ್ಷಣೆಯು ಶ್ರೇಷ್ಠವಾಗಿದೆ ॥ ೨೫ ॥ ಪ್ರಾಣಿಗಳ ಎಲ್ಲಾ ಕೆಲಸಗಳು ಯಾವಾಗಲೂ ತಮ್ಮ ಪ್ರಾಣರಕ್ಷಣೆಗೋಸ್ಕರವಾಗಿರುವುದರಿಂದ ಪ್ರಾಣಿರಕ್ಷಣೆಗಿಂತ ಶ್ರೇಷ್ಠವಾದ ಬೇರೆ ದಾನವಿಲ್ಲ ॥ ೨೬ ॥ ಜೀವಿತವು ಧರ್ಮ ಅರ್ಥ ಕಾಮ ಮೋಕ್ಷಗಳಿಗೆ ಕಾರಣವಾಗಿದೆ. ಅಂತಹ ಜೀವಿತವನ್ನು ದಾನ ಮಾಡಿದರೆ ಯಾವುದನ್ನು ತಾನೆ ದಾನ ಮಾಡಿದಂತಾಗಲಿಲ್ಲ? ಅದನ್ನು ಹರಣ ಮಾಡಿದರೆ ಯಾವುದನ್ನು ತಾನೆ ಹರಣಮಾಡಿದಂತಾಗಲಿಲ್ಲ? ॥ ೨೭ ॥ ಲೋಕದಲ್ಲಿ ಪ್ರಾಣಿಗಳಿಗೆ ಮರಣಭಯಕ್ಕಿಂತಲೂ ಹೆಚ್ಚಾದ ಭಯವು ಕಾಣುವುದಿಲ್ಲ. ಆದುದರಿಂದ ಪ್ರಾಜ್ಞರು ಯಾವಾಗಲೂ ಪ್ರಾಣಿಗಳ ರಕ್ಷಣೆಯನ್ನು ಮಾಡಬೇಕು ॥ ೨೮ ॥ ಶರೀರವು ಧರ್ಮಕ್ಕೆ ಕಾರಣ, ಶರೀರದ ರಕ್ಷಣೆಯು ಅನ್ನದಿಂದಾಗುವುದು. ಆದುದರಿಂದ ಧರ್ಮಾತ್ಮರಾದ ಪ್ರಾಣಿಗಳಿಗೆ ಅನ್ನದಾನವನ್ನು ಮಾಡಬೇಕು ॥ ೨೯ ॥ ದುರ್ಭಿಕ್ಷವು ಪ್ರಾಪ್ತವಾದಾಗ ಜನರು ತಮ್ಮ ಪ್ರಿಯಪುತ್ರರನ್ನೂ ಮಾರಿ ಆಹಾರವನ್ನು ತೆಗೆದುಕೊಳ್ಳುವುದರಿಂದ ಅವರಿಗೆ ಪುತ್ರರಿಗಿಂತ ಆಹಾರವು ಪ್ರಿಯವಾಗಿದೆ ॥ ೩೦ ॥ ಪ್ರಾಣಿಗಳಿಗೆ ದೇಹವನ್ನೆಲ್ಲ ನಾಶಮಾಡುವ ಕ್ಷುಧೆಯ ದುಃಖಕ್ಕಿಂತ ಹೆಚ್ಚಾದ ಬೇರೆ ದುಃಖವಿಲ್ಲ. ಅಂತಹ ದೇಹಪೋಷಕವಾದ ಆಹಾರವನ್ನು ದಾನಮಾಡುವವನು ಯಾವುದನ್ನು ತಾನೆ ದಾನಮಾಡಲಿಲ್ಲ? ದೇಹವನ್ನು ನಾಶಮಾಡುವುದರಿಂದ ಯಾವುದನ್ನು ತಾನೆ ನಾಶ ಮಾಡಿದಂತಾಗುವುದಿಲ್ಲ? ॥ ೩೧ ॥ ಜಗತ್ತಿನಲ್ಲಿ ಪ್ರಾಣಿಗಳಿಗೆ ಆಹಾರ ದಾನವನ್ನು ಕೊಡುವ ಮನುಷ್ಯನು ಅವು

ಗಳಿಗೆ ಸುಖವನ್ನುಂಟುಮಾಡುವ ಕಾಂತಿ, ಕೀರ್ತಿ, ದೇಹಬಲ, ಆತ್ಮಶಕ್ತಿ, ಯಶಸ್ಸು, ಸಂಪತ್ತಿ, ಸಿದ್ಧಿ, ಬುದ್ಧಿ, ಶಾಂತಿ, ಸಂಯಮ, ಧರ್ಮ ಇವುಗಳನ್ನೂ ಕೊಟ್ಟಂತಾಗುವುದು ॥ ೩೨ ॥ ಶರೀರವನ್ನು ರಕ್ಷಣೆ ಮಾಡುವ ಯಾವ ಶಕ್ತಿಯು ಆಹಾರದಲ್ಲಿದೆಯೋ ಅದು ಸುವರ್ಣ ಮಣಿ ರತ್ನಸಮೂಹಗಳಲ್ಲಿಲ್ಲ. ಆದುದರಿಂದ ಪುಣ್ಯಶಾಲಿಗಳು ಆ ಸುವರ್ಣ ಮಣಿ ರತ್ನ ಸಮೂಹಗಳನ್ನು ಬಿಟ್ಟು ಯತಿಗಳಿಗೆ ಆಹಾರದಾನವನ್ನು ಕೊಡುತ್ತಾರೆ. ॥ ೩೩ ॥ ಭಯಂಕರವಾದ ದೋಷಗಳುಳ್ಳ ವ್ಯಾಧಿಗಳಿಂದ ಪೀಡಿತನಾದ ತಪಸ್ವಿಯು ತಪಸ್ಸನ್ನು ಮಾಡುವುದಕ್ಕೆ ಶಕ್ತನಾಗುವುದಿಲ್ಲ. ಆದುದರಿಂದ ಯಾವಾಗಲೂ ವ್ಯಾಧಿಯನ್ನು ನಾಶಮಾಡುವ ಔಷಧದಾನವನ್ನು ವಿಧಿ ಪ್ರಕಾರವಾಗಿ ಮಾಡಬೇಕು ॥ ೭೪ ॥ ವ್ಯಾಧಿಯಿಂದ ಪೀಡಿತರಾದ ಯೋಗಿಗಳಿಗೆ ವ್ಯಾಧಿಯನ್ನು ನಾಶ ಮಾಡುವ ಭೈಷಜ್ಯವನ್ನು ಭಕ್ತಿಯುಕ್ತನಾಗಿ ದಾನಮಾಡುವವನು, ನೀರಿನಲ್ಲಿ ಮುಳುಗಿರುವ ಮನುಷ್ಯನು ಬೆಂಕಿಗಳಿಂದ ಪೀಡಿತನಾಗದಿರುವಂತೆ, ಶ್ಲೇಷ್ಮ ಪಿತ್ತ ವಾತಗಳಿಂದುಂಟಾಗುವ ವ್ಯಾಧಿಸಮೂಹಗಳಿಂದ ಪೀಡಿತನಾಗುವುದಿಲ್ಲ ॥ ೩೫ ॥ ದ್ವೇಷ, ರಾಗ, ಗರ್ವ, ಮತ್ಸರ, ಪರಿಗ್ರಹಕಾಂಕ್ಷೆ, ಕ್ರೋಧ, ಲೋಭ, ಹೆದರಿಕೆ ಇವುಗಳನ್ನು ನಾಶಮಾಡುವುದರಲ್ಲಿ ಸಮರ್ಥವೂ ಮುಕ್ತಿಯೆಂಬ ಮನೆಗೆ ದಾರಿಯನ್ನು ತೋರಿಸುವುದೂ ಆದ ಶಾಸ್ತ್ರವನ್ನು ಅವ್ಯಯಸುಖನಿಮಿತ್ತವಾಗಿ ಯತಿಗಳಿಗೆ ದಾನಮಾಡಬೇಕು ॥ ೩೬ ॥ ಶಾಸ್ತ್ರದ ತಿಳುವಳಿಕೆಯಿಂದ ವಿವೇಕವುಂಟಾಗುವುದು. ವಿವೇಕದಿಂದ ದುಷ್ಕರ್ಮಹಾನಿಯಾಗುವುದು. ದುಷ್ಕರ್ಮಹಾನಿಯಿಂದ ಯತಿಯು ಪವಿತ್ರವಾದ ಮುಕ್ತಿಸ್ಥಾನವನ್ನು ಹೊಂದುವನು, ಆದುದರಿಂದ ಅನರ್ಥವನ್ನು ನಾಶ ಮಾಡುವ ಶಾಸ್ತ್ರವನ್ನು ದಾನ ಮಾಡಬೇಕು ॥ ೩೭ ॥ ಯಾವ ದಾನದಲ್ಲಿ ಪ್ರಾಣಿಸಮೂಹಕ್ಕೆ ದುಃಖವುಂಟಾಗುವುದಿಲ್ಲವೋ ಯಾವ ದಾನದಿಂದ ಯತಿಯು ವಿಷಯಗಳೆಂಬ ವೈರಿಗಳಿಗೆ ವಶನಾಗುವುದಿಲ್ಲವೋ ಯಾವ ದಾನದಿಂದ ಯತಿಯು ಪಾಪವನ್ನು ನಾಶಮಾಡುವ ತಪಸ್ಸನ್ನು ಮಾಡುತ್ತಾನೋ ಅಂತಹ ದಾನವು ಸುಖಪ್ರದವಾದ ದಾನವೆಂದು

ಹೇಳುತ್ತಾರೆ ॥ ೩೮ ॥ ಪರಿಗ್ರಹಗಳನ್ನು ದೂರಮಾಡಿರುವ ಮತ್ತು ಶೀಲ ಸಂಯಮ ದಯಾ ಇಂದ್ರಿಯದಮನ ಇವುಗಳಿಗೆ ಮಂದಿರವಾದ ಮಾತ್ರವನ್ನು ನೋಡಿ ಅದಕ್ಕೆ ಜ್ಞಾನ ದರ್ಶನ ಚಾರಿತ್ರಗಳನ್ನು ವೃದ್ಧಿ ಮಾಡುವುದೂ ನಿಂದ್ಯವಲ್ಲದುದೂ ಆದ ಬೇರೆ ದಾನವನ್ನೂ ಕೊಡಬೇಕು ॥ ೩೯ ॥ ದಾನವನ್ನು ತೆಗೆದುಕೊಳ್ಳುವವನು ಗೃಹ ಕಲತ್ರಗಳಿಂದ ದೂಷಿತನಾಗಿದ್ದರೆ ಅವನು ಗೃಹ ಕಲತ್ರಗಳುಳ್ಳ ದಾನಕರ್ತನಿಗೆ ಅಭೀಷ್ಟವಾದ ಸುಖವನ್ನು ಕೊಡಲಾರನು. ಸಮುದ್ರದಲ್ಲಿ ಶಿಲೆಯು ಶಿಲೆಯನ್ನು ದಾಂಟಿಸುವುದಿಲ್ಲ ॥ ೪೦ ॥ ವಿವೇಕಿಗಳು ಮನಸ್ಸಿನಲ್ಲಿ ದುಷ್ಟಭಾವವುಳ್ಳವಳೂ ಮಾತಿನಲ್ಲಿ ವಿಶಿಷ್ಟಳೂ ಎಲ್ಲರಿಗಿಂತ ನಿಕೃಷ್ಟಳೂ ಅನೇಕವಿಟಪುರುಷರಿಂದ ಭೋಗಿಸಲ್ಪಟ್ಟವಳೂ ಶುಭಭಾವನೆಯಿಲ್ಲದಿರುವವಳೂ ಆದ ವೇಶ್ಯೆಯನ್ನು ದೂರವಾಗಿ ತ್ಯಜಿಸಬೇಕು. ಎಂದೂ ಸೇವಿಸಬಾರದು ॥ ೪೧ ॥ ವೇಶ್ಯೆಯು ಶರೀರದಿಂದ ಒಬ್ಬ ಪುರುಷನನ್ನು ಸೇವಿಸುತ್ತಾಳೆ. ಮಾತಿನಿಂದ ಬೇರೊಬ್ಬ ಪುರುಷನನ್ನು ಕೋಪವಿಲ್ಲದವನನ್ನಾಗಿ ಮಾಡುತ್ತಾಳೆ. ಮನಸ್ಸಿನಿಂದ ಮತ್ತೊಬ್ಬನನ್ನು ಆಶ್ರಯಿಸುತ್ತಾಳೆ. ಹೀಗೆ ಅನ್ಯಪುರುಷರಲ್ಲಿ ಆಸಕ್ತಿಯುಳ್ಳ ವೇಶ್ಯೆಯು ಶೀಘ್ರವಾಗಿ ಹೇಗೆ ಸುಖವನ್ನುಂಟುಮಾಡುತ್ತಾಳೆ ? ॥ ೪೨ ॥ ಶಾಂತಿ ಸಂಯಮ ಯೋಗಗಳನ್ನು ತ್ಯಜಿಸಿರುವ ಯಾವ ಮನುಷ್ಯನು ರತಿಸುಖದಿಂದ ಮೋಹಿತನಾದ ಮನಸ್ಸುಳ್ಳವನಾಗಿ ಮದ್ಯಮಾಂಸಗಳನ್ನು ಸೇವಿಸುವ ಈ ವೇಶ್ಯೆಯ ಮುಖವನ್ನು ಚುಂಬಿಸುತ್ತಾನೋ ಅಂಥವನಲ್ಲಿ ವ್ರತವೆಂಬ ರತ್ನವು ಹೇಗೆ ನಿಲ್ಲುವುದು ? ॥ ೪೩ ॥ ವೇಶ್ಯೆಗೆ ಪರವಶನಾದ ಯಾವ ಮೂಢಮನುಷ್ಯನು ಯಾವಾಗಲೂ ನೀಚಾಚಾರಗಳುಳ್ಳವನಾಗಿ ಪುತ್ರ ಮಿತ್ರ ಬಂಧುಗಳನ್ನೂ ವಿದ್ವದ್ಗೋಷ್ಠಿಯನ್ನೂ ಪರಿಗಣಿಸುವುದಿಲ್ಲವೋ ಅಂಥವನಲ್ಲಿ ಶಾಂತರಾಗಿರುವ ಮನುಷ್ಯರಿಂದ ಭಜಿಸಲ್ಪಡತಕ್ಕ ಧರ್ಮವು ಎಲ್ಲಿರುವುದು ॥ ೪೪ ॥ ಸುಖವನ್ನುಂಟುಮಾಡುವವಳಾದ ತನ್ನ ಪತ್ನಿಯನ್ನೂ ಹೆಚ್ಚು ಆಸಕ್ತಿಯಿಂದ ಸೇವಿಸಿದರೆ ದುಃಖವನ್ನುಂಟುಮಾಡುವಳು. ಶೀತದಿಂದ ಪೀಡಿತನಾದ ಮನುಷ್ಯನು ಶೀತಬಾಧೆ

ಯನ್ನು ಹೋಗಲಾಡಿಸುವ ಅಗ್ನಿಶಿಖೆಯನ್ನು ಮುಟ್ಟಿದರೆ ಅದು ಸುಡುವುದಿಲ್ಲವೇ ? ಮಿತವಾಗಿ ಸೇವಿಸಿದರೆ ಸುಖವಿರುವುದೆಂದೂ ಮಿತಿಮೀರಿದರೆ ದು:ಖವುಂಟಾಗುವುದೆಂದೂ ಭಾವವು ॥ ೪೫ ॥ ಜಿತೇಂದ್ರಿಯನಾದ ಯಾವ ಮಹಾತ್ಮನು ಯಾವಾಗಲೂ ಪರ್ವತಿಥಿಯಲ್ಲಿ ಮೈಥುನಕ್ರಿಯೆಯನ್ನು ತ್ಯಜಿಸುತ್ತಾನೋ ತೀವ್ರವಾದ ಕಾಮಬಾಣಗಳ ಗರ್ವವನ್ನು ನಾಶಮಾಡಿದವನೂ ಸಮಸ್ತ ದೇವರ್ಕಳಿಂದ ಪೂಜ್ಯನೂ ಆದ ಅವನು ಉತ್ತರಭವದಲ್ಲಿ ದೇವೇಂದ್ರನಾಗುತ್ತಾನೆ ॥ ೪೬ ॥ ಮನೆಯಲ್ಲಿರುವ ಪುರಾತನವಾದ ಅಧಿಕದ್ರವ್ಯವು ಯಾವ ದ್ಯೂತದಿಂದ ನಾಶವಾಗಿ ಕ್ಷಣಕಾಲದಲ್ಲಿ ಅಧಿಕವಾದ ನೂತನದಾರಿದ್ರ್ಯವು ಪ್ರಾಪ್ತವಾಗುವುದೋ ಅಂತಹ ಈ ದ್ಯೂತವನ್ನು ಪ್ರಾಜ್ಞರು ತ್ಯಜಿಸುತ್ತಾರೆ ॥೪೭॥ ಜೂಜುಗಾರನನ್ನು ಬಂಧುಗಳು ತ್ಯಜಿಸುತ್ತಾರೆ, ಪ್ರಾಜ್ಞರು ನಿಂದಿಸುತ್ತಾರೆ, ದುರ್ಜನರು ಹಾಸ್ಯಮಾಡುತ್ತಾರೆ, ಸಜ್ಜನರು ಶೋಕಪಡುತ್ತಾರೆ, ಅವನನ್ನು ಬೇರೆ ಜೂಜುಗಾರರು ಕಟ್ಟಿಹಾಕುತ್ತಾರೆ, ತಡೆಯುತ್ತಾರೆ, ಹೊಡೆಯುತ್ತಾರೆ, ಪೀಡಿಸುತ್ತಾರೆ ॥ ೪೮ ॥ ಧರ್ಮಕಾಮಾರ್ಥಗಳನ್ನು ನಾಶಮಾಡುವುದರಲ್ಲಿ ಸಮರ್ಥವೂ ದುಷ್ಕಾರ್ಯಗಳನ್ನು ಹೆಚ್ಚಿಸುವುದರಲ್ಲಿ ತತ್ಪರವೂ ಶೀಲ ಶೌಚ ಶಮಗಳನ್ನು ಪಾಲಿಸುವವರಿಗೆ ಇಷ್ಟವಲ್ಲದದೂ ಆದ ದ್ಯೂತಕ್ಕಿಂತ ನಿಕೃಷ್ಟವಾದುದು ಮತ್ತೊಂದಿಲ್ಲ ॥ ೪೯ ॥ ಬುದ್ಧಿಯಿಲ್ಲದ ಯಾವ ಧೂರ್ತನು ನಾಚಿಕೆಯಿಲ್ಲದವನಾಗಿ ತನ್ನ ತಾಯಿಯ ವಸ್ತ್ರವನ್ನೂ ಕದಿಯುತ್ತಾನೋ ಅಂಥವನು ಸಕಲಜನರಿಗೂ ನಿಂದ್ಯವಾದ ಮತ್ತಾವ ನಿಕೃಷ್ಟಕಾರ್ಯವನ್ನು ತಾನೆ ಮಾಡುವುದಿಲ್ಲ ? ॥ ೫೦ ॥ ಮದ್ಯ ಮಾಂಸ ದ್ಯೂತ ಚೌರ್ಯ ಮೃಗಯಾ (ಬೇಂಟೆ) ಪರಸ್ತ್ರೀಸೇವನ ವೇಶ್ಯಾಸೇವನ ಇವು ಏಳು ನೀಚಾಚಾರಗಳಾಗಿರುತ್ತವೆ. ಉತ್ತಮರು ಈ ಸಪ್ತವ್ಯಸನಗಳನ್ನು ತ್ಯಜಿಸಬೇಕು ॥ ೫೧ ॥ ದರ್ಶನಿಕ ವ್ರತಿಕ ಮೊದಲಾದ ಹನ್ನೊಂದು ನೆಲೆಗಳನ್ನು ಯಥಾಕ್ರಮವಾಗಿ ಹೊಂದುವ ಈ ಉತ್ಕೃಷ್ಟ ಶ್ರಾವಕನು ಸಂಸಾರವನ್ನು ನಾಶಮಾಡುವ ಶಕ್ತಿಯುಳ್ಳವನೂ ಹದಿನಾಲ್ಕು ಗುಣಸ್ಥಾನಗಳನ್ನು ಹೊಂದುವ ಯೋಗಿಯೂ ಆಗುವನು ॥ ೫೨ ॥ ಸಂಸಾ

ರತಾಪವನ್ನು ನಾಶಮಾಡುವುದೂ ಬೆಳದಿಂಗಳಿನಂತೆ ನಿರ್ಮಲವೂ ಆದ ಸಮ್ಯಗ್ದರ್ಶನವು ಯಾವನ ಹೃದಯದಲ್ಲಿ, ಹಾರದಂತೆ, ಇರುತ್ತದೋ ಅವನು ನಿರ್ದುಷ್ಟವಾದ ಕಾಂತಿಯುಳ್ಳ ದರ್ಶನಿಕನೆಂಬ ಒಂದನೆಯ ನೆಲೆಯ ಶ್ರಾವಕನಾಗಿರುತ್ತಾನೆ ॥ ೫೩ ॥ ಉದಾರಮನಸ್ಸಿನವನಾದ ಯಾವ ಮನುಷ್ಯನು ನಿರ್ಮಲವೂ ದುರ್ಲಭವೂ ಆದ ವ್ರತಗಳನ್ನು ಹೃದಯದಲ್ಲಿ ಯಾವಾಗಲೂ, ಧನಗಳನ್ನು ಧರಿಸುವಂತೆ, ಧರಿಸುತ್ತಾನೋ ಅಂತಹ ಸಮ್ಯಗ್ಜ್ಞಾನಿಯು ವ್ರತಿಕನೆಂದು ವ್ರತಿಗಳು ಹೇಳುತ್ತಾರೆ ॥ ೫೪ ॥ ಇಷ್ಟಾನಿಷ್ಟವಸ್ತುಗಳಲ್ಲಿಯೂ ಶತ್ರುವಿನಲ್ಲಿಯೂ ಬಂಧುಜನರಲ್ಲಿಯೂ ಸಮಾನವಾದ ಭಾವವುಳ್ಳ ಯಾವ ಮನುಷ್ಯನು ಇಂದ್ರಿಯಗಳೆಂಬ ಅಶ್ವಗಳನ್ನು ದಮನಮಾಡುವ ಸಾಮಾಯಿಕವನ್ನು ತ್ರಿಸಂಧ್ಯಾಕಾಲಗಳಲ್ಲಿ ಮಾಡುತ್ತಾನೋ ಅವನು ಸಾಮಾಯಿಕನೆಂಬ ಮೂರನೆಯ ನೆಲೆಯ ಶ್ರಾವಕನಾಗಿರುತ್ತಾನೆ ॥ ೫೫ ॥ ನಿರ್ದುಷ್ಟವಾದ ವ್ಯಾಪಾರವುಳ್ಳವನೂ ಭೋಗೋಪಭೋಗವಸ್ತುಗಳಿಂದ ವಿಮುಖವಾದ ಮನಸ್ಸುಳ್ಳವನೂ ಆದ ಯಾವ ಮನುಷ್ಯನು ನಾಲ್ಕು ಪರ್ವ–ತಿಥಿಗಳಲ್ಲಿ ಯಾವಾಗಲೂ ಉಪವಾಸವನ್ನು ಮಾಡುತ್ತಾನೋ ಅವನು ಪ್ರೋಷಧೋಪವಾಸಿಯೆಂಬ ನಾಲ್ಕನೆಯ ನೆಲೆಯ ಶ್ರಾವಕನಾಗಿರುತ್ತಾನೆ ॥ ೫೬ ॥ ಸಕಲಜೀವಗಳಲ್ಲಿ ದಯಾಪರವಾದ ಮನಸ್ಸುಳ್ಳ ಯಾವ ಮನುಷ್ಯನು ಸಚಿತ್ತವಸ್ತುವನ್ನು ತಿನ್ನುವುದಿಲ್ಲವೋ ಶುದ್ಧವಾದ ಆಹಾರವನ್ನು ಭುಂಜಿಸುವವನಾದ ಅವನನ್ನು ಸಚಿತ್ತವಿರತನೆಂದು ಯತೀಶ್ವರರು ಕರೆಯುತ್ತಾರೆ ॥ ೫೭ ॥ ಧರ್ಮದಲ್ಲಿ ಮನಸ್ಸುಳ್ಳವನೂ ರಾಗರಹಿತನೂ ಆದ ಯಾವ ಮನುಷ್ಯನು ಹಗಲಿನಲ್ಲಿ ಸ್ತ್ರೀಸೇವನೆಯನ್ನು ಮಾಡುವುದಿಲ್ಲವೋ ಬಹು ಧನ್ಯನಾದ ಅವನನ್ನು ದೊಡ್ಡವರು ದಿವಾಮೈಥುನತ್ಯಾಗಿಯೆಂದ ಕರೆಯುತ್ತಾರೆ ॥ ೫೮ ॥ ಮನುಷ್ಯರನ್ನೂ ದೇವರ್ಕಳನ್ನೂ ಜಯಿಸಿರುವ ಸ್ತ್ರೀಜನರ ಕಟಾಕ್ಷಗಳೆಂಬ ಬಾಣಗಳು ಕಾಮನೆಂಬ ಮಹಾವೈರಿಯ ಗರ್ವವನ್ನು ಮರ್ದನಮಾಡಿರುವ ಯಾವ ಮನುಷ್ಯನನ್ನು ಜಯಿಸುವುದಿಲ್ಲವೋ ಅವನನ್ನು ಬ್ರಹ್ಮಚಾರಿಯೆಂದು ಕರೆಯುತ್ತಾರೆ ॥ ೫೯ ॥

ಆರಂಭವು ಸರ್ವಪ್ರಾಣಿಗಳ ನಾಶಕ್ಕೆ ಕಾರಣವಾಗಿರುತ್ತದೆಂದು ತಿಳಿದು ಧರ್ಮದಲ್ಲಿ ಮನಸ್ಸುಳ್ಳ ಯಾವ ಮನುಷ್ಯನು ಆರಂಭವನ್ನು ಮಾಡುವುದಿಲ್ಲವೋ ರಾಗದ್ವೇಷಾದಿವ್ಯಾಪಾರವು ಮಂದವಾಗಿರುವವನಾದ ಅವನನ್ನು ತತ್ತ್ವಜ್ಞಾನಿಗಳು ಆರಂಭವಿರತನೆಂದು ಕರೆಯುತ್ತಾರೆ ॥ ೬೦ ॥ ಬಲಿಷ್ಠವಾದ ಕ್ರೋಧಾದಿ ಕಷಾಯಗಳೆಂಬ ಶತ್ರುಗಳನ್ನು ಮರ್ದನಮಾಡಿರುವ ಯಾವ ಮನುಷ್ಯನು ಪರಿಗ್ರಹವು ಪ್ರಾಣವಿನಾಶದಲ್ಲಿ ಸಮರ್ಥವಾದುದೆಂದು ತಿಳಿದು ಅದನ್ನು ಹುಲ್ಲಿನಂತೆ ತ್ಯಜಿಸುತ್ತಾನೋ ಅವನು ಪರಿಗ್ರಹವಿರತನೆಂದು ಮುನೀಶ್ವರರು ಹೇಳುತ್ತಾರೆ ॥ ೬೧ ॥ ಬೇಕಿಯಂತೆ, ವಿವಿಧಪ್ರಾಣಿಸಮೂಹವನ್ನು ಸಂತಾಪಗೊಳಿಸುವ ಸಕಲಕಾರ್ಯದಲ್ಲಿ ಯಾವನು ಅನುಮತಿಯನ್ನು ತ್ಯಜಿಸಿರುತ್ತಾನೋ ಅವನನ್ನು ಜ್ಞಾನಿಗಳು ಅನುಮತಿವಿರತನೆಂದು ಕರೆಯುತ್ತಾರೆ ॥ ೬೨ ॥ ಜಿತೇಂದ್ರಿಯನಾದ ಯಾವನು ಮನೋವಾಕ್ಕಾಯಗಳಿಂದ ತನ್ನನ್ನು ಉದ್ದೇಶಿಸಿ ಮಾಡಲ್ಪಟ್ಟ ಆಹಾರವನ್ನು ಭುಂಜಿಸುವುದಿಲ್ಲವೋ ಪ್ರಾಸುಕವಾದ-ಶುದ್ಧಭೋಜನದಲ್ಲಿ ಉದ್ಯತನಾದ ಆ ಮಹಾಪುರುಷನನ್ನು ಉದ್ದಿಷ್ಟವಿರತನೆಂದು ಕರೆಯುತ್ತಾರೆ ॥ ೬೩ ॥ ಯಾವನು ಆಲಸ್ಯರಹಿತನಾಗಿ ಹೀಗೆ ಪವಿತ್ರವಾದ ಏಕಾದಶ ಶ್ರಾವಕವ್ರತವನ್ನು ಪಾಲಿಸುತ್ತಾನೋ ಮನುಷ್ಯರ ಮತ್ತು ದೇವರ್ಕಳ ಸಂಪತ್ತಿಯಿಂದಲೂ ಸುಖದಿಂದಲೂ ತೃಪ್ತನಾದ ಆ ಮನುಷ್ಯನು ಕರ್ಮವಿಮುಕ್ತನಾಗಿ ಮುಕ್ತಿಪದವನ್ನು ಹೊಂದುತ್ತಾನೆ ॥ ೬೪ ॥ ನಕ್ಷತ್ರಗಳಲ್ಲಿ ಚಂದ್ರಬಿಂಬವು ಪ್ರಧಾನವಾಗಿರುವಂತೆ, ಎಲ್ಲಾ ವ್ರತಗಳಲ್ಲಿ ಸಮಸ್ತಪಾಪವನ್ನು ನಾಶಮಾಡುವುದರಲ್ಲಿ ಸಮರ್ಥವೂ ಪ್ರಕಾಶಮಾನವೂ ಸಕಲತತ್ತ್ವಗಳನ್ನು ಪ್ರಕಾಶಪಡಿಸುವುದೂ ಆದ ಸಮ್ಯಕ್ತ್ವವು ಪ್ರಧಾನವೆಂದು ತಿಳಿಯಲ್ಪಟ್ಟಿದೆ ॥ ೬೫ ॥ ಭವವೆಂಬ ವೃಕ್ಷಕ್ಕೆ ಶಸ್ತ್ರವಾದ ಸಮ್ಯಕ್ತ್ವವು ನಿಸರ್ಗಜಸಮ್ಯಕ್ತ್ವವೆಂದೂ ಅಧಿಗಮಜಸಮ್ಯಕ್ತ್ವವೆಂದೂ ಎರಡು ಪ್ರಕಾರವಾಗಿದೆ. ಅವುಗಳಲ್ಲಿ ಮೊದಲನೆಯದು ತತ್ತ್ವೋಪದೇಶವಿಲ್ಲದೆ-ತಾನಾಗಿ ಉಂಟಾಗುವುದು. ಎರಡನೆಯದು ಜಿನಾಗಮಾಭ್ಯಾಸದಿಂದುಂಟಾಗುವುದು ॥ ೬೬ ॥ ಪ್ರಾಣಿಗಳ ಜ್ಞಾನ

ವನ್ನೂ ಚಾರಿತ್ರವನ್ನೂ ಶುದ್ಧಮಾಡುವುದೂ ಭವವನ್ನು ನಾಶಮಾಡು ವುದೂ ಚಿಂತಿಸಿದ ಸಕಲಸುಖವನ್ನು ಕೊಡುವುದರಲ್ಲಿ ಸಮರ್ಥವೂ ಆದ ಸಮ್ಯಗ್ದರ್ಶನವು ಕ್ಷಾಯಿಕವೆಂದೂ ಶಾಮಿಕ (ಔಪಶಮಿಕ) ವೆಂದೂ ವೇದಕವೆಂದೂ ಮೂರು ಪ್ರಕಾರವಾಗಿರುತ್ತದೆ ॥ ೬೭ ॥ ಅನಂತಾನು ಬಂಧಿ ಕ್ರೋಧ ಮಾನ ಮಾಯಾ ಲೋಭಗಳೆಂಬ ನಾಲ್ಕು ಪ್ರಥಮ ಕಷಾಯಭಾವಗಳೂ ದರ್ಶನಮೋಹನೀಯಕರ್ಮದ ಭೇದ ಗಳಾದ ಮಿಥ್ಯಾತ್ವ, ಮಿಶ್ರ, ಸಮ್ಯಕ್ತ್ವಪ್ರಕೃತಿಗಳೆಂಬ ಮೂರು ಕರ್ಮ ಗಳೂ ಸಮ್ಯಕ್ತ್ವವೆಂಬ ರತ್ನವನ್ನು ಅಪಹರಿಸುವುದರಲ್ಲಿ ಆಸಕ್ತಗಳೂ ಧರ್ಮವೆಂಬ ವೃಕ್ಷವನ್ನು ಕತ್ತರಿಸುವುದಕ್ಕೆ ಕೊಡಲಿಯಂತಿರುವವೂ ಆಗಿ ರುತ್ತವೆ. ॥ ೬೮ ॥ ಮೇಘಗಳು ದೂರವಾದರೆ ಸಂಪೂರ್ಣ ತಮಸ್ಸಿನ ಪ್ರಚಾ ರವನ್ನು ಭೇದಿಸುವ ಸೂರ್ಯಬಿಂಬವು ಶುದ್ಧವಾಗಿ ಆವಿರ್ಭವಿಸುವಂತೆ, ಸಮ್ಯಕ್ತ್ವಕ್ಕೆ ಪ್ರತಿಬಂಧಕಗಳಾದ ಆ ಸಪ್ತಪ್ರಕೃತಿಗಳು ದೂರವಾದರೆ ಪ್ರಶಸ್ತವಾದ ಸಮ್ಯಗ್ದರ್ಶನವು ಆವಿರ್ಭವಿಸುವುದು ॥ ೬೯ ॥ ಪ್ರಾಣಿಗಳಲ್ಲಿ ಸಪ್ತಪ್ರಕೃತಿಗಳು ನಿಃಶೇಷವಾಗಿ ನಾಶವಾದಾಗ ನಾಶರಹಿತವಾದ ಕ್ಷಾಯಿಕ ಸಮ್ಯಕ್ತ್ವವುಂಟಾಗುವುದು. ಆ ಸಪ್ತಪ್ರಕೃತಿಗಳು ಉಪಶಮವನ್ನು ಹೊಂದಿದಾಗ ಔಪಶಮಿಕಸಮ್ಯಕ್ತ್ವವುಂಟಾಗುವುದು. ಆ ಸಪ್ತಪ್ರಕೃತಿ ಗಳಲ್ಲಿ ಕೆಲವು ಕ್ಷಯವನ್ನೂ ಕೆಲವು ಉಪಶಮವನ್ನೂ ಹೊಂದಿದಾಗ ಮಿಶ್ರ ಸಮ್ಯಕ್ತ್ವವುಂಟಾಗುವುದು. ಇದಕ್ಕೆ ಕ್ಷಾಯೋಪಶಮಿಕಸಮ್ಯಕ್ತ್ವವೆಂದೂ ವೇದಕಸಮ್ಯಕ್ತ್ವವೆಂದೂ ಹೆಸರುಗಳಿರುತ್ತವೆ ॥ ೭೦ ॥ ವಿಶುದ್ಧ ವಾದ ಬುದ್ಧಿಯುಳ್ಳ ಸಮ್ಯಗ್ದೃಷ್ಟಿಯು ಜಿನೋಕ್ತವಾದ ತತ್ತ್ವದಲ್ಲಿ ಸಂದೇ ಹವನ್ನು ತ್ಯಜಿಸುತ್ತಾನೆ. ಸಾಂಸಾರಿಕಸುಖದಲ್ಲಿ ಕಾಂಕ್ಷೆಯನ್ನು ಮಾಡು ವುದಿಲ್ಲ. ಧರ್ಮಾತ್ಮರನ್ನು ನೋಡಿ ಜುಗುಪ್ಸೆ ಪಡುವುದಿಲ್ಲ. ಧೀರನಾಗಿ ಕುದೇವ ಕುಗುರು ಕುಶಾಸ್ತ್ರಗಳಲ್ಲಿ ಮೋಹ—ಭ್ರಮೆಯನ್ನು ಹೊಂದುವುದಿಲ್ಲ ॥ ೭೧ ॥ ವ್ರತಿಗಳ ದೋಷವನ್ನು ಮುಚ್ಚುತ್ತಾನೆ. ಇತರ ಸಮ್ಯಗ್ದೃಷ್ಟಿಗಳ ಪವಿತ್ರವಾದ ಚಿತ್ತವು ಚಂಚಲವಾದರೆ ಬೋಧಿಸಿ ಸ್ಥಿರತ್ವವನ್ನುಂಟು ಮಾಡು

ತ್ತಾನೆ. ಸಧರ್ಮಿಗಳಲ್ಲಿ ಶಲ್ಯರಹಿತವಾದ ವಾತ್ಸಲ್ಯವನ್ನು ಹೆಚ್ಚಿಸುತ್ತಾನೆ. ಅಹಿಂಸಾಧರ್ಮವನ್ನು ಪ್ರಕಾಶಪಡಿಸುತ್ತಾನೆ. ॥ ೭೨ ॥ ಧರ್ಮದಲ್ಲಿಯೂ ಧರ್ಮದ ಫಲದಲ್ಲಿಯೂ ಪ್ರೀತಿರೂಪವಾದ ಸಂವೇಗವುಳ್ಳವನೂ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯವುಳ್ಳವನೂ ಕ್ರೋಧಾದಿಕಷಾಯಭಾವ ವಿಲ್ಲದವನೂ ಆಗಿರುತ್ತಾನೆ. ತನ್ನನ್ನೂ ದೋಷಸಮೂಹವನ್ನೂ ನಿಂದಿಸು ತ್ತಾನೆ. ದಯೆಯೆಂಬ ಸ್ತ್ರೀಯಲ್ಲಿ ಆಲಿಂಗಿತವಾದ ಮನೋವ್ಯಾಪಾರವುಳ್ಳ ವನಾಗಿ ಯಾವಾಗಲೂ ಪಂಚಪರಮೇಷ್ಠಿಗಳಲ್ಲಿ ಭಕ್ತಿಯನ್ನು ಮಾಡುತ್ತಾನೆ. ॥ ೭೩ ॥ ಎಲ್ಲಾ ಪ್ರಾಣಿವರ್ಗದಲ್ಲಿ ಮೈತ್ರಿಯನ್ನೂ ಪವಿತ್ರವಾದ ಚಾರಿತ್ರ ವನ್ನು ಧರಿಸಿರುವವನಲ್ಲಿ ಪ್ರಮೋದವನ್ನೂ ಮಾಡುತ್ತಾನೆ. ವಿಪರೀತ ವ್ಯಾಪಾರವುಳ್ಳ–ದುಷ್ಟನಲ್ಲಿ ಮಧ್ಯಸ್ಥಭಾವವನ್ನು ವಹಿಸುತ್ತಾನೆ. ಭವಪರಂ ಪರೆಗೆ ಕಾರಣವಾದ ಆಚಾರಗಳಲ್ಲಿ ವಿರಕ್ತವಾದ ಚಿತ್ತವೃತ್ತಿಯುಳ್ಳವನಾಗಿ ರುತ್ತಾನೆ ॥ ೭೪ ॥ ಈ ಮೇಲೆ ಹೇಳಲ್ಪಟ್ಟ ಗುಣಗಳುಳ್ಳ ಶ್ಲಾಘ್ಯವಾದ ಜನ್ಮವುಳ್ಳ ಸಮ್ಯಗ್ದೃಷ್ಟಿಯು ದೀನರಿಗೆ ದುರ್ಲಭವೂ ವ್ರತವೆಂಬ ಬೆಳೆಗೆ ಬೀಜವೂ ಇಚ್ಛಿಸಿದ ಸುಖವನ್ನೆಲ್ಲ ಕೊಡುವುದೂ ಪ್ರಾಜ್ಞರಿಂದ ಪೂಜಿಸಲ್ಪ ಡತಕ್ಕದೂ ಆದ ಸಮ್ಯಕ್ತ್ವವೆಂಬ ರತ್ನವನ್ನು ನಿರ್ಮಲವನ್ನಾಗಿ ಮಾಡು ತ್ತಾನೆ ॥ ೭೫ ॥ ಸಮ್ಯಕ್ತ್ವಕ್ಕಿಂತ ಜನರಿಗೆ ಹಿತಕರವಾದ ವಸ್ತುವು ಬೇರೊಂ ದಿಲ್ಲ. ಸಮ್ಯಕ್ತ್ವಕ್ಕಿಂತ ಸ್ವಕೀಯವಾದ ವಸ್ತುವು ಮತ್ತೊಂದಿಲ್ಲ. ಸಮ್ಯಕ್ತ್ವಕ್ಕಿಂತ ಪವಿತ್ರವಾದ ಇತರ ವಸ್ತುವಿಲ್ಲ. ಸಮ್ಯಕ್ತ್ವಕ್ಕಿಂತ ಬೇರೆ ಚಾರಿತ್ರವಿಲ್ಲ, ॥ ೭೭ ॥ ಸಮ್ಯಕ್ತ್ವವಿರುವವನೇ ಪಟುವು. ಸಮ್ಯಕ್ತ್ವವಿ ರುವವನೇ ಶ್ರೇಷ್ಠನು. ಸಮ್ಯಕ್ತ್ವವಿರುವವನೇ ಕುಲೀನನು. ಸಮ್ಯಕ್ತ್ವವಿ ರುವವನೇ ಧನಿಕನು ॥ ೭೭ ॥ ಸಮ್ಯಗ್ದರ್ಶನವನ್ನು ಧರಿಸಿರುವ ಮಹನೀ ಯನು ಅಧಿಕವಾದ ಕಾಂತಿ ಬುದ್ಧಿ ಕೀರ್ತಿ ತೇಜಸ್ಸುಗಳುಳ್ಳ ಕಲ್ಪದೇವರ್ಕ ಳನ್ನು ಬಿಟ್ಟು ಹೀನಸಂಪತ್ತಿಯುಳ್ಳ ಇತರದೇವರ್ಕಳಲ್ಲಿ ಜನ್ಮವನ್ನು ಹೊಂದುವುದಿಲ್ಲ ॥ ೭೮ ॥ ಮೊದಲೇ ತನಗೆ ನರಕಗತಿಕರ್ಮವು ಬಂಧ ವಾಗಿದ್ದು ಆ ಮೇಲೆ ಸಮ್ಯಗ್ದರ್ಶನವನ್ನು ಧರಿಸಿದ ಭವ್ಯನು ಮೊದಲನೆಯ

ನರಕಭೂಮಿಯನ್ನಲ್ಲದೆ ಬೇರೆ ನರಕಭೂಮಿಯನ್ನು ಹೊಂದುವುದಿಲ್ಲ. ಯಾವ ಸ್ತ್ರೀಯಾಗಿಯೂ ಎಂದೂ ಹುಟ್ಟುವುದಿಲ್ಲ: ಪೂಜ್ಯರಲ್ಲಿಯೂ ಪೂಜ್ಯನಾಗಿರುತ್ತಾನೆ ॥ ೭೯ ॥ ಯಾವ ಭವ್ಯನು ಸಮ್ಯಕ್ತ್ವವೆಂಬ ರತ್ನವನ್ನು ಅಂತರ್ಮುಹೂರ್ತಕಾಲದವರೆಗಾದರೂ ಹೊಂದಿ ಬಿಡುತ್ತಾನೋ ಅವನು ಅನಂತವಾದ ಪಾರವುಳ್ಳ ಸಂಸಾರ ಸಮುದ್ರವನ್ನು ಶೀಘ್ರವಾಗಿ ದಾಂಟುತ್ತಾನೆ ॥ ೮೦ ॥ ಖೇಚರಪುತ್ರನಾದ ಪವನವೇಗನು ತ್ರಿಭುವನಬಂಧುವಾದ ಜಿನಮತಿಯಂಶಿಯು ನಿರ್ದುಷ್ಟವೂ ತತ್ತ್ವಗಳನ್ನು ಸೂಚಿಸಿರುವುದೂ ವಿದ್ವನ್ಮಾನ್ಯವೂ ಆದ ಈ ವಚನವನ್ನು ಕೇಳಿ ಸಂತೋಷವನ್ನು ಹೊಂದಿದನು ॥ ೮೧ ॥ ಪುತ್ರನಿಲ್ಲದವನು ಪಡೆದ ಪುತ್ರನಲ್ಲಿಯೂ ವಿರಹಿಯು ಪಡೆದ ಪತ್ನಿಯಲ್ಲಿಯೂ ಕಣ್ಣಿಲ್ಲದವನು ಪಡೆದ ಕಣ್ಣಿನಲ್ಲಿಯೂ ರೋಗಿಯು ಪಡೆದ ಆರೋಗ್ಯದಲ್ಲಿಯೂ ದರಿದ್ರನು ಪಡೆದ ನಿಧಿಯಲ್ಲಿಯೂ ಸಂತೋಷವನ್ನು ಹೊಂದುವಂತೆ ಈ ಪವನವೇಗನು ಪಡೆದ ವ್ರತದಲ್ಲಿ ಸಂತೋಷವನ್ನು ಹೊಂದಿದನು. ॥ ೮೨ ॥ ಆ ಪವನವೇಗನು ಜಿನಮತಿಯನ್ನು ವಂದಿಸಿ ಹೇಳುತ್ತಾನೆ. "ಮುನಿಯೇ ! ಅದೃಷ್ಟದಿಂದ ನನಗೆ ಸಮಾನನಾದ ಧನ್ಯನಿಲ್ಲ. ನರಕವೆಂಬ ಅಂಧಕೂಪದಲ್ಲಿ ಬೀಳುವ ನನಗೆ ಈಗ ನಿನ್ನ ವಚನವು ಆಶ್ರಯವಾಗಿ ದೊರೆಯಿತು ॥ ೮೩ ॥ ಯಾವ ಮನುಷ್ಯನು ನಿನ್ನ ಮಾತನ್ನು ಕೇಳುತ್ತಾನೋ ಅವನೂ ಇಷ್ಟಫಲವನ್ನು ಹೊಂದುತ್ತಾನೆಂದಮೇಲೆ ಆ ವಚನವನ್ನು ಪಾಲಿಸುವವನು ಹೊಂದುವ ಫಲವನ್ನು ವರ್ಣಿಸಲು ಯಾವನು ಸಮರ್ಥನು ? ॥ ೮೪ ॥ ನಿನ್ನ ಮಾತನ್ನು ಕೇಳಿ ಅದನ್ನು ಪಾಲಿಸದಿರುವವರು ನಿಜವಾಗಿಯೂ ಮನುಷ್ಯರಲ್ಲ. ಈ ರತ್ನಭೂಮಿಯನ್ನು ಹೊಂದಿ ಪಶುಗಳಲ್ಲದೆ ಮನುಷ್ಯರು ರತ್ನವನ್ನು ಬಿಡುವುದಿಲ್ಲ ॥ ೮೫ ॥

ಖೇಚರಪುತ್ರನಾದ ಪವನವೇಗನು ಈ ಪ್ರಕಾರವಾದ ಒಳ್ಳೆಯ ಮಾತನ್ನು ಹೇಳಿ ವ್ರತಗಳನ್ನೂ ಸಮಿತಿಗಳನ್ನೂ ಹೊಂದಿರುವ ಆ ಸಾಧುಸಮೂಹಗಳಿಂದ ಸಮೇತನಾದ ಕೇವಲಿಯನ್ನು ಪ್ರೀತಿಯಿಂದ ವಿನಯಪೂರ್ವಕವಾಗಿ ನಮಸ್ಕರಿಸಿ, ತನ್ನ ಮಿತ್ರನಾದ ಮನೋವೇಗನೊಡನೆ ವಿಜಯಾರ್ಧ

ಪರ್ವತಕ್ಕೆ ಹೋದನು ‖ ೮೬ ‖ ಜಿತಶತ್ರುವಿನ ಮಗನಾದ ಮನೋವೇಗನು ಜಿನಧರ್ಮದಿಂದ ಸಂಸ್ಕೃತನಾದ ಪವನವೇಗನನ್ನು ನೋಡಿ ಸಂತೋಷಪಟ್ಟನು. ತನ್ನ ಶ್ರಮವು ಫಲಿಸಿರುವುದನ್ನು ನೋಡಿದರೆ ಯಾವನ ಹೃದಯಲ್ಲಿ ತಾನೆ ಸಂತೋಷವುಂಟಾಗುವುದಿಲ್ಲ ? ‖ ೮೭ ‖ ದೇವ ಗುರು ಶಾಸ್ತ್ರ ಧರ್ಮಗಳೆಂಬ ಪ್ರಕಾಶಮಾನವಾದ ಚತುರ್ವಿಧಶ್ರಾವಕಧರ್ಮವನ್ನು ಧರಿಸಿರುವವರೂ ಮನೋಹರವಾದ ಆಭರಣಗಳುಳ್ಳವರೂ ಆದ ಈ ಮನೋವೇಗ ಪವನವೇಗರು ಪರಸ್ಪರ ಪ್ರೇಮಬದ್ಧವಾದ ಮನಸ್ಸುಳ್ಳವರಾಗಿ ಸುಖದಿಂದ ಕಾಲವನ್ನು ಕಳೆದರು. ‖ ೮೮ ‖ ಅನೇಕ ಭೂಷಣಗಳುಳ್ಳವರಾದ ಆ ಮನೋವೇಗಪವನವೇಗರು ಥಳಥಳಿಸುವ ರತ್ನಸಮೂಹಗಳಿಂದ ಪ್ರಕಾಶಮಾನವಾದ ವಿಮಾನವನ್ನೇರಿ ಭೂಮಿಯಲ್ಲಿ ದೇವೇಂದ್ರನಿಂದಲೂ ಚಕ್ರವರ್ತಿಯಿಂದಲೂ ಪೂಜಿಸಲ್ಪಡತಕ್ಕವೂ ಮನುಷ್ಯ ಕ್ಷೇತ್ರದಲ್ಲಿರುವುವೂ ಪ್ರಸಿದ್ಧಗಳೂ ಆದ ಎಲ್ಲಾ ಜಿನಮಂದಿರಗಳಲ್ಲಿರುವ ಅರ್ಹದ್ಬಿಂಬಗಳನ್ನು ವಂದಿಸುವವರಾಗಿ ಯಾವಾಗಲೂ ಸಂಚರಿಸುತ್ತಿದ್ದರು. ತಮಗೆ ಹಿತವಾದ ಆಚರಣೆಯನ್ನು ಆಚರಿಸುವವರೂ ಶುದ್ಧವಾದ ಜ್ಞಾನವುಳ್ಳವರೂ ಆದ ಸತ್ಪುರುಷರು ಅಜಾಗರೂಕರಾಗಿರುವುದಿಲ್ಲ ‖ ೮೯ ‖ ಪ್ರಸಿದ್ಧವೂ ವಿಶದವೂ ಆದ ಕೀರ್ತಿಯುಳ್ಳ ಅಮಿತಗತಿಯು ದೋಷದೂರವಾದ ಈ ತನ್ನ ಕಾವ್ಯವನ್ನು ಎರಡು ತಿಂಗಳಲ್ಲಿ ರಚಿಸಿದಂತೆ, ಪವನವೇಗನು ದಿವಿಜರಿಂದಲೂ ಮನುಷ್ಯರಿಂದಲೂ ಪೂಜಿಸಲ್ಪಡತಕ್ಕುದಾದ ದರ್ಶನ–ಶ್ರದ್ಧೆಯನ್ನು ಲೀಲೆಯಾಗಿ ಎರಡು ದಿನಗಳಲ್ಲಿ ಚಂದ್ರನಂತೆ ಶುಭ್ರ–ನಿರ್ಮಲವನ್ನಾಗಿ ಮಾಡಿದನು. ಪವನವೇಗನು ಎರಡು ದಿನಗಳಲ್ಲಿ ಶುದ್ಧಸಮ್ಯಗ್ದೃಷ್ಟಿಯಾದನೆಂದು ಭಾವವು ‖ ೯೦ ‖

ಇಂತು ಅಮಿತಗತ್ಯಾಚಾರ್ಯವಿರಚಿತ ಧರ್ಮಪರೀಕ್ಷಾವಿಂಶಪರಿಚ್ಛೇದದ
ಶಾಂತೀಶವಿಪಶ್ಚಿತ್ಕೃತಾನುವಾದವು ಸಮಾಪ್ತವಾದುದು.

‖ ಇತಿ ‖

ಭಗವಾನ್ ಮಹಾವೀರ ನಿರ್ವಾಣೋತ್ಸವದ ಅಂಗವಾಗಿ
ಪ್ರಕಟಿಸಿದ ಗ್ರಂಥಗಳು

೧) ಭಗವಾನ್ ಮಹಾವೀರ	(ಕನ್ನಡ)
೨) ಧರ್ಮಪರೀಕ್ಷೆ	(,,)
೩) ಸೂರ್ಯಪ್ರಕಾಶ	(,,)
೪) ಭದ್ರಬಾಹು ಚರಿತ್ರೆ	(,,)
೫) ಜೈನ ಸಿದ್ಧಾಂತ ಪ್ರವೇಶಿಕಾ	(,,)
೬) ಇಪ್ಪತ್ತುನಾಲ್ಕು ಸ್ಥಾನಗಳು (,,)	ಗೊಮ್ಮಟಸಾರದ ಅನುಸಾರ
೭) ಭಗವಾನ್ ಮಹಾವೀರ	(ಮರಾಠಿ)
೮) ಕವನ ಸಂಕಲನ	(ಮರಾಠಿ)

ಗ್ರಂಥಗಳು ದೊರೆಯುವ ಸ್ಥಳ: —

ಶ್ರೀ ೧೦೦೮ ಭ. ಚಂದ್ರಪ್ರಭ ಜೈನ ಕಮಿಟಿ

ಮು. ಪೊ:- ಶಮನೇವಾಡಿ, ಜಿ:- ಬೆಳಗಾಂವ.